ವೀರಶೈವ ಧರ್ಮ : ಒಂದು ಪುನರವಲೋಕನ

ಸಂಪಾದಕರು

ಡಾ|| ಎಂ. ಶಿವಕುಮಾರ ಸ್ವಾಮಿ

ವೀರಶೈವ ಅನುಸಂಧಾನ ಸಂಸ್ಥಾನ
'ನಾವೀನ್ಯ', ೩೬೫/ಸಿ, ೫ನೇ 'ಎ' ಮುಖ್ಯರಸ್ತೆ, ರೆಂಕೋ ಬಡಾವಣೆ
ವಿಜಯನಗರ ೨ನೇ ಹಂತ, ಬೆಂಗಳೂರು-೫೬೦೦೪೦

ವೀರಶೈವ ಅನುಸಂಧಾನ ಸಂಸ್ಥಾನ ಕಿರಣ-೧೫

ವೀರಶೈವ ಧರ್ಮ :
ಒಂದು ಪುನರವಲೋಕನ

ಸಂಪಾದಕರು

ಡಾ॥ ಎಂ. ಶಿವಕುಮಾರ ಸ್ವಾಮಿ

ವೀರಶೈವ ಅನುಸಂಧಾನ ಸಂಸ್ಥಾನ
'ನಾವೀನ್ಯ', ೩೬೫/ಸಿ, ೫ನೇ 'ಎ' ಮುಖ್ಯರಸ್ತೆ, ರೆಂಕೋ ಬಡಾವಣೆ
ವಿಜಯನಗರ ೨ನೇ ಹಂತ, ಬೆಂಗಳೂರು-೫೬೦೦೪೦

VEERASHAIVA DHARMA : ONDU PUNARAVALOKANA : Edited by: Dr. M. Sivakumara Swamy, Professor of Sanskrit (Retd.), Bangalore University; Res. No. 88, 4th cross Diagonal road, 8th Main Road, Hampinagar (R.P.C Layout), Vijayanagar II stage, Bangalore-40. ✆ : 23386938. Published by : Veerashaiva Anusandhana Samsthana, 'Naavinya' 365/C, 5th 'A' Main Road, Remco Layout, Vijayanagar II stage, Bangalore-40. ✆ : 23302537

Pages : xvi+175

© Veerashaiva Anusandhana Samsthana

First Impression : December 2005

Price : **Rs. 120/-**

DTP by:
Varshini Graphics, Bangalore-40 **✆ : 23402575**

Printed at:
Sneha Printers
No. 114, 4th Cross, B.C.C. Layout, Attiguppe
Vijayanagar 2nd stage, Banglore-40
✆ : 080-30972467, 23392814
E-Mail-snehaprinters@gmail.com
karthikenterprises@gmail.com



ಶ್ರೀಮತ್ಕಾಶ್ರೀ ಜ್ಞಾನಸಿಂಹಾಸನಾಧೀಶ್ವರ
ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು
ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ
ಆಶೀರ್ವಚನ

ವೀರಶೈವಧರ್ಮ : ಒಂದು ಪುನರವಲೋಕನ ಎಂಬ ವಿಷಯದ ಮೇಲೆ, ಶ್ರೀ ಜಗದ್ಗುರು ಪಂಚಾಚಾರ್ಯ ಮಾನವಧರ್ಮ ಸಂಸ್ಥೆ, ಜಿಲ್ಲಾ ಘಟಕ, ಧಾರವಾಡ, ಇವರ ಆಶ್ರಯದಲ್ಲಿ ವೀರಶೈವ ಅನುಸಂಧಾನ ಸಂಸ್ಥಾನ, ಬೆಂಗಳೂರು, ಇವರು ಧಾರವಾಡ

ನಗರದಲ್ಲಿ ಒಂದು ವಿಚಾರ ಸಂಕಿರಣವನ್ನು ೧೦-೭-೨೦೦೪ ಮತ್ತು ೧೧-೭-೨೦೦೪ರಂದು ನಡೆಸಿದರು. ಆ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದು ವರ್ಷ ತಡವಾಗಿ ಈ ಪುಸ್ತಕ ರೂಪದಲ್ಲಿ ಹೊರತರಲಾಗುತ್ತಿದೆ. ಪ್ರಬಂಧಗಳು ಮತ್ತು ಅಧ್ಯಕ್ಷೀಯ ಭಾಷಣಗಳು ಬರುವುದು ತಡವಾದುದು ಈ ವಿಲಂಬಕ್ಕೆ ಕಾರಣವೆಂದು ಸಂಪಾದಕರು ತಿಳಿಸಿದ್ದಾರೆ. ತಡವಾಗಿಯಾದರೂ ಅವು ಪುಸ್ತಕ ರೂಪದಲ್ಲಿ ಹೊರಬರುತ್ತಿರುವುದು ಸನ್ನಿಧಿಗೆ ಆನಂದವನ್ನುಂಟು ಮಾಡಿದೆ.

ಈ ಧಾರವಾಡದಲ್ಲಿ ನಡೆದ ಈ ವಿಚಾರ ಸಂಕಿರಣದ ಸ್ಮರಣೀಯ ಅಂಶಗಳೆಂದರೆ ಎರಡು: ಒಂದು, ಹಿಂದೆಂದೂ ಇಲ್ಲದ ಬಹುದೊಡ್ಡ ಸಂಖ್ಯೆಯ ಜನರು ಶ್ರೋತೃಗಳಾಗಿ ಶಿಸ್ತಿನಿಂದ ವಿಚಾರಸಂಕಿರಣದಲ್ಲಿ ಭಾಗವಹಿಸಿದ್ದು; ಎರಡು, ಬಹು ವೈವಿಧ್ಯಮಯವೂ ಹಾಗೂ ವಿಚಾರ ಪ್ರಚೋದಕವೂ ಆದ ಪ್ರಶ್ನೆಗಳು ಮೂಡಿಬಂದದ್ದು. ವೀರಶೈವ ಧರ್ಮದ ವಿಚಾರದಲ್ಲಿ ಕೆಲವು ಆಯಾಮಗಳನ್ನು ಶೋಧಿಸಿ ವಿಶದಪಡಿಸುವ ಪ್ರಬಂಧಗಳು ಈ ವಿಚಾರ ಸಂಕಿರಣದಲ್ಲಿ ಮಂಡಿಸಲ್ಪಟ್ಟವು. ಅವುಗಳ ಮೇಲೆ ವಿಸ್ತಾರವಾಗಿ ಚರ್ಚೆಯೂ ನಡೆಯಿತು. ಒಟ್ಟಿನಲ್ಲಿ ವಿಚಾರಸಂಕಿರಣವು ಅತ್ಯಂತ ಯಶಸ್ವಿಯಾಯಿತು. ಎಲ್ಲರಿಗೂ ಸಂತೋಷವಾಗಿದೆ. ಕೆಲವು ಜನ ಬೇಕೆಂತಲೇ ಕೆಲವು ಅಸಂಬದ್ಧ ಪ್ರಶ್ನೆಗಳನ್ನು ಕೇಳಿ ವಿಚಾರಸಂಕಿರಣದ ಸುಗಮ ಸಂಚಾಲನೆಗೆ ಭಂಗವುಂಟು ಮಾಡಲು ಪ್ರಯತ್ನಿಸಿದರೂ ವಿದ್ವಾಂಸರು ತಾಳ್ಮೆಯಿಂದ ಅಂತಹ ಪ್ರಶ್ನೆಗಳಿಗೂ ಉತ್ತರಿಸುವ ಮೂಲಕ ಗಲಾಟೆಗೆ ಅವಕಾಶವಾಗದಂತೆ ನೋಡಿಕೊಂಡರು. ಹೆಚ್ಚಿನ ಜನರ ಮನಸ್ಸಿನಲ್ಲಿದ್ದ ಸಂದೇಹಗಳಿಗಂತೂ ವಿಚಾರಸಂಕಿರಣವು ಸಮಾಧಾನವನ್ನು ಒದಗಿಸಿ ಯಶಸ್ವಿಯೆನಿಸಿತು.

ಈ ಗ್ರಂಥದಲ್ಲಿ ಮುದ್ರಿತವಾಗಿರುವ ಪ್ರಬಂಧಗಳನ್ನು ವಿಚಾರಸಂಕಿರಣದಲ್ಲಿ ಮಂಡಿಸುವುದಲ್ಲದೆ ಅವುಗಳನ್ನು ಬರೆದು ಕೊಟ್ಟು ಸಹಕರಿಸಿದ ವಿದ್ವಾಂಸರಿಗೂ, ಇದರ ಸಂಪಾದಕರಾದ ಡಾ॥ ಎಂ. ಶಿವಕುಮಾರಸ್ವಾಮಿಯವರಿಗೂ, ಇದರ ಪ್ರಕಟನೆಗೆ ಆರ್ಥಿಕ ನೆರವಿತ್ತ ಶ್ರೀಮತಿ ಗಾಯತ್ರಿ ಮತ್ತು ಶ್ರೀ ಕೆ.ಜಿ. ಶಶಿಧರ್ (ಲಿಂ. ಶ್ರೀ ಕೆ.ಎನ್. ಗುಬ್ಬಣ್ಣನವರ ಮಗ) ಅವರಿಗೆ, ಪೋಷಕ ಮಂಡಲಿಯ ಪದಾಧಿಕಾರಿಗಳಿಗೂ ಹಾಗೂ ಸಂಪಾದಕ ಮಂಡಲಿಯ ಸದಸ್ಯರುಗಳಿಗೂ ಶ್ರೀ ಜಗದ್ಗುರು ವಿಶ್ವಾರಾಧ್ಯರು ಅನಂತ ಮಂಗಲ ಪರಂಪರೆಯನ್ನುಂಟು ಮಾಡಲೆಂದು ಆಶೀರ್ವದಿಸಲಾಗಿದೆ.

ವಾಚಕರು ಈ ಗ್ರಂಥವನ್ನು ಅಭ್ಯಸಿಸಿ ತಮ್ಮ ಜ್ಞಾನವನ್ನು ಅಭಿವೃದ್ಧಿಗೊಳಿಸಿ-ಕೊಳ್ಳುವವರಾಗಲಿ ಎಂಬುದಾಗಿ ಆಶೀರ್ವದಿಸಿ ಈ ಆಶೀರ್ವಚನಕ್ಕೆ ವಿರಾಮ ಕೊಡುತ್ತಿದ್ದೇವೆ.

ಇತ್ಯಾಶಿಷಃ

ಮುನ್ನುಡಿ

ವೀರಶೈವಧರ್ಮ : ಒಂದು ಪುನರವಲೋಕನ ಎಂಬ ವಿಷಯದ ಮೇಲೆ ಹಿಂದಿನ ವರ್ಷ (೨೦೦೪) ಜುಲೈ ತಿಂಗಳಲ್ಲಿ (೧೦ ಮತ್ತು ೧೧ರಂದು) ಒಂದು ವಿಚಾರಸಂಕಿರಣವು ಧಾರವಾಡದಲ್ಲಿ ನಡೆಯಿತು, ಶ್ರೀ ಜಗದ್ಗುರು ಪಂಚಾಚಾರ್ಯ ಮಾನವ ಧರ್ಮ ಸಂಸ್ಥೆ, ಧಾರವಾಡ ಜಿಲ್ಲಾ ಘಟಕದ ಆಶ್ರಯದಲ್ಲಿ ವೀರಶೈವ ಅನುಸಂಧಾನ ಸಂಸ್ಥಾನದ ಮೂಲಕ. ಅದರ ಮುಖ್ಯ ಉದ್ದೇಶ, ವೀರಶೈವಧರ್ಮದ ಕೆಲವು ವಿಚಾರಗಳನ್ನು ಮರುಪರಿಶೀಲನೆಗೆ ಒಳಪಡಿಸಿ ಸಮಕಾಲೀನ ಸಮಾಜಕ್ಕೆ ಅವುಗಳನ್ನು ತಿಳಿಯಪಡಿಸುವುದೇ ಆಗಿತ್ತು. ನಮ್ಮ ಸಮಾಜದಲ್ಲಿ ಕೆಲವು ಭೇದ ಹುಟ್ಟಿಸುವ ಶಕ್ತಿಗಳು ವೀರಶೈವ ಬೇರೆ, ಲಿಂಗಾಯತ ಬೇರೆ; ಬಸವಪೂರ್ವದ ಶೈವಪ್ರಭೇದವೊಂದು ವೇದಾಗಮೋಪನಿಷತ್ತುಗಳನ್ನು ಆಶ್ರಯಿಸಿ ಬೆಳೆದು ಲಿಂಗಧಾರಣೆಯನ್ನು ಅಳವಡಿಸಿಕೊಂಡು ವೀರಶೈವವೆನ್ನಿಸಿತು; ಆದರೆ ಬಸವಣ್ಣನವರು ನೆಟ್ಟು ಬೆಳೆಸಿದ ವಚನ ಸಾಹಿತ್ಯವನ್ನು ಆಶ್ರಯಿಸಿದ ಧರ್ಮ ಲಿಂಗಾಯತ ಧರ್ಮ, ಎಂದು ಪ್ರಚಾರ ಮಾಡಿ ಜನರನ್ನು ತಪ್ಪು ದಾರಿಗೆ ಎಳೆಯುತ್ತಿವೆ. ಬಸವಪೂರ್ವ ಯುಗದಲ್ಲಿದ್ದ ಶರಣರ ಬಗ್ಗೆ ಅನೇಕರಿಗೆ ಗೊತ್ತೇ ಇಲ್ಲ. ಬಸವಣ್ಣನವರಿಂದಲೇ ಶರಣರ ಯುಗ ಆರಂಭವಾಯಿತು. ಅವರೇ ಮೊದಲ ವಚನಕಾರರು ಎಂಬ ತಪ್ಪು ಕಲ್ಪನೆಯೂ ಜನರಲ್ಲಿ ಇರುವ ಸುಳಿವು ಸಿಕ್ಕಿದೆ. ವಚನಗಳ ಅಂಕಿತಗಳ ಬಗ್ಗೆ ಕೆಲವು ಪ್ರಶ್ನೆಗಳಿವೆ. ಸಿದ್ಧಾಂತ ಶಿಖಾಮಣಿಯು ವೀರಶೈವರ ಧಾರ್ಮಿಕ ಗ್ರಂಥ ಎಂಬ ವಿಷಯದಲ್ಲಿ, ಅದರ ಕಾಲ ಮತ್ತು ಬೋಧನೆಗಳ ವಿಷಯದಲ್ಲಿ ಜನರಲ್ಲಿ ವಿವಾದವನ್ನು ಹುಟ್ಟಿಸುವ ಪ್ರವೃತ್ತಿಯೂ ಕೆಲವರಲ್ಲಿದೆ. ರೇಣುಕಾದಿ ಪಂಚಾಚಾರ್ಯರ ಬಗ್ಗೆ, ಅವರು ಯಾರು? ಯಾವಾಗ ಇದ್ದರು? ಅವರ ಪೀಠಗಳ ಇತಿಹಾಸ ಎಲ್ಲಿದೆ? ಅದಕ್ಕೆ ಐತಿಹಾಸಿಕ ಪುರಾವೆಗಳಿವೆಯೇ? ಎಂದು ಮುಂತಾಗಿ ಪ್ರಶ್ನಿಸುತ್ತಾ ಇರುವ ಪ್ರಾಚೀನ ಪರಂಪರೆಯ ಬಗ್ಗೆನೇ ಸಂಶಯದ ವಿಷಬೀಜವನ್ನು ಬಿತ್ತುತ್ತಿದ್ದಾರೆ ಕೆಲವು ಕುತ್ಸಿಕ ಕುಹಕಿಗಳು. ವೀರಶೈವ ಒಳಪಂಗಡಗಳು ತಾವೇ ಬೇರೆ ಬೇರೆ ಎಂದು ಹೇಳಿಕೊಂಡು ಸರಕಾರಿ ಸೌಲಭ್ಯಗಳನ್ನು ಪಡೆದುಕೊಳ್ಳುವ ಹುಮ್ಮಸ್ಸಿನಲ್ಲಿ ವೀರಶೈವರು ನಾವು ಎಂಬ ಐಕಮತ್ಯವನ್ನು ಮುರಿಯುವ ಪ್ರಯತ್ನಗಳು ಅಲ್ಲಲ್ಲೇ ಕಂಡು ಬರುತ್ತಿವೆ. ವೀರಶೈವ ಗೋತ್ರ-ಸೂತ್ರಗಳ ಬಗ್ಗೆ ಮಾಹಿತಿ ಬಹು ಜನರಿಗೆ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಾರ್ವಕಾಲಿಕವೂ ಸಮಕಾಲೀನವೂ ಆಗಿರುವ ವಿಚಾರಗಳ ಬಗ್ಗೆ ವಿಮರ್ಶೆ, ವಿಶದವಾದ ವಿವರಣೆಗಳು ಅಗತ್ಯವೆನ್ನಿಸಿವೆ. ಆ ಅಗತ್ಯವನ್ನು

ಪೂರೈಸಲು ಪ್ರಸ್ತುತ ವಿಚಾರಸಂಕಿರಣವು ಯೋಗದಾನವನ್ನು ನೀಡಿದೆಯೆಂದು ಎನ್ನಿಸುತ್ತದೆ. ಈ ಪುಸ್ತಕದಲ್ಲಿ ಬಂದಿರುವ ಪ್ರಬಂಧಗಳು ಎಷ್ಟರ ಮಟ್ಟಿಗೆ ವಿಚಾರಸಂಕಿರಣದ ಉದ್ದೇಶವನ್ನು ಈಡೇರಿಸಿವೆ ಎಂಬುದಕ್ಕೆ ವಿದ್ವಾಂಸರು ಮತ್ತು ಸಮಾಜದ ಬಾಂಧವರು ಪ್ರಮಾಣ.

ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಈ ವಿಚಾರಸಂಕಿರಣದಲ್ಲಿ ಉದ್ಘಾಟಕರಾಗಿ ಶ್ರೀ ವಿ.ಎಸ್. ಮಳಿಮಠ್, ಕರ್ನಾಟಕ ಮತ್ತು ಕೇರಳ ರಾಜ್ಯ ಹೈಕೋರ್ಟ್‌ಗಳ ಮಾಜಿ ಮುಖ್ಯ ನ್ಯಾಯಾಧೀಶರು, ಭಾಗವಹಿಸಿದ್ದರು. ಶ್ರೀ ಮ.ನಿ.ಪ್ರ.ಸ್ವ. ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು, ಸಂಸ್ಥಾನ ಮಠ, ಮುಂಡರಗಿ, ಶ್ರೀ ಮ.ನಿ.ಪ್ರ.ಸ್ವ ಹೇಮಕೂಟ ಸಿಂಹಾಸನಾಧೀಶ್ವರ ಸಂಗನ ಬಸವ ಮಹಾಸ್ವಾಮಿಗಳು, ಕೊಟ್ಟೂರು ಸಂಸ್ಥಾನ ಮಠ, ಗಂಗಾವತಿ, ಇವರು ನೇತೃತ್ವವನ್ನು ವಹಿಸಿದ್ದರು. ಅವರೊಂದಿಗೆ ಶಿವಾಚಾರ್ಯರೂ ಭಾಗವಹಿಸಿ ವಿಚಾರಸಂಕಿರಣವನ್ನು ಗುರು-ವಿರಕ್ತ ಸದ್ಭಾವನಾ ಸಮಾವೇಶವನ್ನಾಗಿಯೂ ಪರಿವರ್ತಿಸಿದರು. ಆ ಸವಿ ಅನುಭವವು ಎಲ್ಲರನ್ನು ಸಂತೋಷಗೊಳಿಸಿದೆ. ವಿರಕ್ತ ಪೀಠಾಧೀಶರೂ ವಿಚಾರಸಂಕಿರಣದ ವಿಚಾರಗಳಿಗೆ ಸಕಾರಾತ್ಮಕವಾದ ಸ್ಪಂದನೆಯನ್ನು ವ್ಯಕ್ತಗೊಳಿಸಿದ್ದು ಅವರ ಆಶೀರ್ವಚನಗಳಿಂದ ಸ್ಪಷ್ಟವಾಗುತ್ತದೆ. ಸಮಾರೋಪಕ್ಕೆ ಕಾರ್ಯಕ್ರಮದಲ್ಲಿ ಶ್ರೀ ಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ಶ್ರೀಮದ್ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದ್ದು ವಿಚಾರಸಂಕಿರಣದ ವಿಷಯಕ್ಕೂ ಉದ್ದೇಶಕ್ಕೂ ಶೋಭೆಯನ್ನು ತಂದಿತು.

ಈ ಗ್ರಂಥದಲ್ಲಿ ವಿಚಾರಸಂಕಿರಣದ ಗೋಷ್ಠಿಗಳಲ್ಲಿ ಮಂಡಿಸಿದ ಪ್ರಬಂಧಗಳಲ್ಲದೆ, ಗೋಷ್ಠಿಗಳಲ್ಲಿ ಅಧ್ಯಕ್ಷತೆ ವಹಿಸಿದ ವಿದ್ವಾಂಸರ ಅಧ್ಯಕ್ಷೀಯ ಭಾಷಣಗಳನ್ನು, ಒಂದು ವಿಶೇಷ ಉಪನ್ಯಾಸವನ್ನು, ನೇತೃತ್ವ ವಹಿಸಿದ್ದ ಸ್ವಾಮೀಜಿಗಳ ಆಶೀರ್ವಚನಗಳನ್ನು ಮತ್ತು ಕಾಶೀಜಗದ್ಗುರುಗಳ ವಿಚಾರಪೂರ್ಣ ಮಾರ್ಗದರ್ಶನದ ಸಾರವನ್ನು ಪ್ರಕಟಿಸಿದ್ದೇವೆ. ಅವುಗಳನ್ನು ಓದಿದ ವಿದ್ವಾಂಸರು ಮತ್ತು ಸಮಾಜಬಾಂಧವರು ಅವುಗಳು ಎಷ್ಟು ಮಹತ್ವಪೂರ್ಣವಾದ ವಿಚಾರಗಳನ್ನು ವ್ಯಕ್ತಗೊಳಿಸುತ್ತವೆ ಎಂದು ತಿಳಿದು ಪ್ರಶಂಶಿಸುತ್ತಾರೆ, ಮಾರ್ಗದರ್ಶನ ಪಡೆಯುತ್ತಾರೆ ಎಂಬ ವಿಶ್ವಾಸ ದಟ್ಟವಾಗಿದೆ. ಇವುಗಳನ್ನು ಗ್ರಂಥದ ಮೊದಲ ಭಾಗದಲ್ಲಿಯೂ (ಸದಾಶಯಗುಚ್ಛಕ : ಸತ್ ಆಶಯ-ಒಳ್ಳೆಯ ಅಭಿಪ್ರಾಯ) ಮತ್ತು ಗೋಷ್ಠಿಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಎರಡನೆಯ ಭಾಗ (ಪ್ರಬಂಧಗುಚ್ಛಕ)ದಲ್ಲಿಯೂ ಪ್ರಕಟಿಸಲಾಗಿದೆ.

ಎರಡನೆಯ ಭಾಗದಲ್ಲಿ, ವೀರಶೈವ-ಲಿಂಗಾಯತ ಎಂಬುದು ವಿದ್ವಾನ್ ಕೋ.ರಂ. ಬಸವರಾಜು ಅವರು ಮಂಡಿಸಿದ ಪ್ರಬಂಧ. ಅದರಲ್ಲಿ ವೀರಶೈವ ಮತ್ತು ಲಿಂಗಾಯತ ಶಬ್ದಗಳೆರಡೂ ನಮ್ಮ ಧರ್ಮವಾಚಕ ಪದಗಳಾದರೂ ವೀರಶೈವ ಪದಪ್ರಯೋಗವೇ ವಚನ ಸಾಹಿತ್ಯದಲ್ಲಿ ಹೆಚ್ಚು ಬಳಕೆಯಲ್ಲಿದೆ. ಲಿಂಗಾಯತ ಪದವು ಕೇವಲ ಒಂದೆರಡು ಕಡೆ ಬಂದಿದೆ ಎಂಬುದನ್ನು ವಿಶದಪಡಿಸಿದ್ದಾರೆ. ಬಸವಪೂರ್ವಯುಗದ ಶಿವಶರಣರು ಎಂಬ ಪ್ರಬಂಧವು ಡಾ|| ಬಸವಲಿಂಗ ಸೊಪ್ಪಿಮಠ ಅವರು ಮಂಡಿಸಿದುದು. ಬಸವಣ್ಣನವರಿಗಿಂತ ಪೂರ್ವದಲ್ಲಿ ಇದ್ದ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ದೇವರ ದಾಸಿಮಯ್ಯ, ಕೊಂಡಗುಳಿ ಕೇಶಿರಾಜ, ತೆಲುಗು ಬೊಮ್ಮಯ್ಯ, ಜೇಡರ ದಾಸಿಮಯ್ಯ, ಢಕ್ಕೆಯ ಮಾರಯ್ಯ ಮೊದಲಾದ ಶಿವಶರಣರ ವಚನಗಳಲ್ಲಿ ಬರುವ ವೀರಶೈವ ಪರಿಕಲ್ಪನೆಗಳನ್ನು ನಿರೂಪಿಸಿ, ಬಸವಪೂರ್ವ ಯುಗದಲ್ಲಿಯೇ ಸಮಗ್ರವಾಗಿ ವೀರಶೈವ ಪರಿಕಲ್ಪನೆಗಳು ರೂಪಿತವಾಗಿದ್ದವು ಎಂಬುದನ್ನು ವಿದ್ವಾಂಸರು ಸಮರ್ಥಿಸಿದ್ದಾರೆ. ಶರಣರ ವಚನಗಳಲ್ಲಿ ಬರುವ ಮುದ್ರಿಕೆಗಳ ಮರ್ಮವನ್ನು ತಿಳಿಸುವ ಮಾದರಿಯಾಗಿ 'ಕೂಡಲ ಸಂಗಮ' ಮುದ್ರಿಕೆಯ ಔಚಿತ್ಯ ಎಂಬ ಚಿಕ್ಕ ಪ್ರಬಂಧದಲ್ಲಿ ಅದರ ರಚಯಿತೃಗಳಾದ ಶ್ರೀ ಗೌ.ಮ. ಉಮಾಪತಿ ಶಾಸ್ತ್ರಿಗಳು ಭಾಷಾಶಾಸ್ತ್ರದ ದೃಷ್ಟಿಯಿಂದ ಆ ಮುದ್ರಿಕೆಯನ್ನು ವಿಶ್ಲೇಷಿಸಿದ್ದಾರೆ. ವೀರಶೈವ ಪರಂಪರೆ ಮತ್ತು ದೇವಾಲಯ ಸಂಸ್ಕೃತಿ ಎಂಬ ಡಾ|| ಡಿ.ವಿ. ಪರಶಿವಮೂರ್ತಿಯವರ ಪ್ರಬಂಧವು ದಕ್ಷಿಣ ಭಾರತದ ಬೇರೆ ಬೇರೆ ದೇವಸ್ಥಾನಗಳ ಪರಿಚಯ ಮೂಡಿಸುವ ಮೂಲಕ ದೇವಾಲಯ ಸಂಸ್ಕೃತಿಯ ಬಗ್ಗೆ ವೀರಶೈವರ ನಿಲುವೇನೆಂಬುದನ್ನು ತಿಳಿಸಿದ್ದಾರೆ. ಶ್ರೀ ಸಿದ್ಧಾಂತ ಶಿಖಾಮಣಿ-ವೀರಶೈವದ ಆಧಾರ ಗ್ರಂಥ ಎಂಬ ಡಾ|| ಸಿ. ಶಿವಕುಮಾರಸ್ವಾಮಿಯವರ ಪ್ರಬಂಧವು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಹೇಗೆ ಶೈವಾಗಮಗಳು, ಶೈವ ಪುರಾಣಗಳು ಮತ್ತು ವೇದ (ಸಂಹಿತೆ-ಉಪನಿಷತ್ತು) ಗ್ರಂಥಗಳಲ್ಲಿ ಹಂಚಿ ಹೋಗಿರುವ ವೀರಶೈವ ಪರವಾದ ಭಾಗಗಳನ್ನು ಅಧ್ಯಯನ ಮಾಡಿ ವೀರಶೈವರ ಒಂದು ವ್ಯವಸ್ಥಿತವಾದ ಸಿದ್ಧಾಂತವನ್ನು ೧೦೧ ಸ್ಥಲಗಳ ಸಿದ್ಧಾಂತದ ರೂಪದಲ್ಲಿ ನಿರೂಪಿಸಲ್ಪಟ್ಟಿದೆ ಎಂಬುದನ್ನು ತಿಳಿಸುತ್ತದೆ. ಭಕ್ತಾದಿ ಷಟ್‌ಸ್ಥಲಗಳಲ್ಲಿ ಹೇಳಿದ ಅನುಭವದ ವಿವಿಧ ಹಂತಗಳನ್ನು ೧೦೧ ಸ್ಥಲಗಳ ರೂಪದಲ್ಲಿ ವಿಸ್ತರಿಸಿ ವೀರಶೈವರ ಅಷ್ಟಾವರಣ-ಪಂಚಾಚಾರಗಳ ವಿಷಯವನ್ನು, ಸಾಧಕನು ಭಕ್ತಿಯ ವಿಕಾಸದಿಂದ ಶಿವನಲ್ಲಿ ಒಂದಾಗಿ, ಇಂಬಿಲ್ಲದಂತೆ ಬೆರೆಯುವ ಸಾಧನೆಯನ್ನು ಹೇಗೆ ಮಾಡುತ್ತಾನೆ ಎಂಬುದನ್ನೂ ಆ ಪ್ರಬಂಧವು ವಿಸ್ತರಿಸುತ್ತದೆ. ಡಾ|| ರಾಜಶೇಖರಸ್ವಾಮಿ ಗೋರಟಾ ಅವರು ಪಂಚಾಚಾರ್ಯರ ಉಲ್ಲೇಖಗಳು -ಒಂದು ವಿವೇಚನೆ ಎಂಬ ಪ್ರಬಂಧದಲ್ಲಿ ಆಗಮಗಳು, ಶ್ರೀ ಸಿದ್ಧಾಂತ ಶಿಖಾಮಣಿ ಮುಂತಾದ ಗ್ರಂಥಗಳ ಆಧಾರದ ಮೇಲೆ ಪಂಚಾಚಾರ್ಯರ ಇತಿಹಾಸದ ಮೇಲೆ ಬೆಳಕು ಚೆಲ್ಲಿದ್ದಾರೆ. ವೀರಶೈವರ ಧಾರ್ಮಿಕ ಸಂಸ್ಕಾರಗಳು ಎಂಬ ಪ್ರಬಂಧದಲ್ಲಿ ಡಾ|| ವ್ಹಿ.ಜಿ. ಪೂಜಾರ ಅವರು ಗರ್ಭಾಧಾನದಿಂದ ಹಿಡಿದು ಅಂತ್ಯಸಂಸ್ಕಾರದವರೆಗಿನ ಹತ್ತು ಸಂಸ್ಕಾರಗಳನ್ನು ವೀರಶೈವ ಆಚಾರ-ವಿಚಾರಗಳ ದೃಷ್ಟಿಯಿಂದ ನಿರೂಪಿಸಿದ್ದಾರೆ. ವೀರಶೈವ ಗೋತ್ರ ಸೂತ್ರಗಳ ಪರಿಕಲ್ಪನೆ ಎಂಬ ಶ್ರೀ ಷಣ್ಮುಖಯ್ಯ ಅಕ್ಕೂರಮಠ ಅವರ ಪ್ರಬಂಧವು ಗೋತ್ರ-ಸೂತ್ರಗಳ ಪರಿಕಲ್ಪನೆಯನ್ನು

ವಿವರಿಸಿ ವೀರಶೈವರಲ್ಲಿ ಪಂಚಪೀಠಗಳ ಪರಂಪರೆಯನ್ನು ಅನುಸರಿಸಿ ಪ್ರಾಚೀನ ಕಾಲದಿಂದಲೂ ರೂಢಮೂಲವಾಗಿರುವ ವೀರ-ನಂದಿ-ಭೃಂಗಿ-ವೃಷಭ-ಸ್ಕಂಧ ಎಂಬ ಪಂಚಗೋತ್ರಗಳ ಮತ್ತು ಪಡ್ವಿಡಿ, ವೃಷ್ಟಿ, ಲಂಬನ, ಮುಕ್ತಾಗುಚ್ಛ, ಪಂಚವರ್ಣ ಎಂಬ ಪಂಚಸೂತ್ರಗಳ ಪರಿಚಯವಲ್ಲದೆ, ಒಂದೊಂದು ಪೀಠದ ಅಧೀನದಲ್ಲಿ ಬರುವ ಉಪಸೂತ್ರಗಳನ್ನು (೬೦) ಪರಿಚಯಿಸುತ್ತದೆ. ಪ್ರತಿಯೊಬ್ಬ ವೀರಶೈವನೂ ಈ ಐದೈದರಲ್ಲಿ ಒಂದಲ್ಲ ಒಂದು ಗೋತ್ರ ಮತ್ತು ಸೂತ್ರಗಳಿಗೆ ಹಾಗೂ ಉಪಸೂತ್ರಗಳಿಗೆ ಸೇರಿದವರೇ ಆಗಿರಬೇಕು. ಇದೊಂದು ಸಾಮಾಜಿಕ ವ್ಯವಸ್ಥೆಯ ಆಯಾಮ. ಎಲ್ಲರೂ ಇದನ್ನರಿತು ತಮ್ಮ ಗೋತ್ರಸೂತ್ರ (ಉಪಸೂತ್ರ)ಗಳನ್ನು ತಿಳಿದುಕೊಳ್ಳಬೇಕು.

ಈ ಗ್ರಂಥದ ಸಂಪಾದನ ಕಾರ್ಯವನ್ನು ವಹಿಸಿಕೊಟ್ಟು ಅನುಗ್ರಹಿಸಿದ, ಗೋಷ್ಠಿಯಲ್ಲಿ ಮಾರ್ಗದರ್ಶನ ಮಾಡಿ ಆಶೀರ್ವಚನವನ್ನು ದಯಪಾಲಿಸಿದ ಶ್ರೀಮತ್ ಕಾಶೀ ಜಗದ್ಗುರುಗಳ ಪವಿತ್ರ ಚರಣಾರವಿಂದಗಳಿಗೆ ಶಿರಸಾಷ್ಟಾಂಗ ನಮಸ್ಕಾರಗಳನ್ನು ಸಲ್ಲಿಸುತ್ತೇವೆ. ಪ್ರಬಂಧಗಳನ್ನು ಬರೆದು ಮಂಡಿಸಿ ಮುದ್ರಣಕ್ಕೆ ಅವಕಾಶ ಮಾಡಿಕೊಟ್ಟ ಎಲ್ಲಾ ವಿದ್ವಾಂಸರಿಗೆ ಮತ್ತು ಚರ್ಚೆಯಲ್ಲಿ ಪಾಲ್ಗೊಂಡ ಎಲ್ಲಾ ವಿದ್ವಾಂಸರಿಗೆ ನನ್ನ ಕೃತಜ್ಞತೆಗಳು. ಕರಡು ಪ್ರತಿ ತಿದ್ದುವ ಕಾರ್ಯದಲ್ಲಿ ಸಹಕರಿಸಿ ಉಪಕರಿಸಿದ ಡಾ|| ಸಿ. ಶಿವಕುಮಾರಸ್ವಾಮಿ ಅವರಿಗೆ ನನ್ನ ಕೃತಜ್ಞತೆಗಳು. ಈ ಗ್ರಂಥ ಮುದ್ರಣಕ್ಕೆ ಆರ್ಥಿಕ ನೆರವನ್ನು ನೀಡಿದ ಶ್ರೀಮತಿ ಗಾಯತ್ರಿ ಮತ್ತು ಶ್ರೀ ಕೆ.ಜಿ. ಶಶಧರ್ (ಲಿಂ. ಶ್ರೀ ಕೆ.ಎನ್. ಗುಬ್ಬಣ್ಣನವರ ಮಗ) ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಪ್ರಕಟನೆಯ ಕಾರ್ಯದಲ್ಲಿ ಸಹಕಾರ ನೀಡಿದ ವೀರಶೈವ ಅನುಸಂಧಾನ ಸಂಸ್ಥಾನದ ಕಾರ್ಯದರ್ಶಿಗಳಾದ ಡಾ|| ಸಿ.ಯು. ಉಮಾದೇವಿ ಮತ್ತು ಶ್ರೀ ಸಿ. ಉಮಾಶಂಕರ ಅವರಿಗೆ ಮತ್ತು ಧ್ವನಿಮುದ್ರಿಕೆಗಳನ್ನು ಆಲಿಸಿ ಶುದ್ಧವಾಗಿ ಲಿಪಿಬದ್ಧ ಮಾಡಿಕೊಟ್ಟ ಶ್ರೀಮತಿ ವಿಶಾಲಾಕ್ಷಿ ಸದಾಶಿವಯ್ಯ ಅವರಿಗೂ ಹಾಗೂ ಡಾ|| ಸಿ.ಯು. ಉಮಾದೇವಿ ಅವರಿಗೂ ಆಭಾರವನ್ನು ವ್ಯಕ್ತಪಡಿಸುತ್ತೇನೆ. ಛಾಯಾಕ್ಷರ ಜೋಡಣೆ ಮಾಡಿದ ವರ್ಷಿಣಿ ಗ್ರಾಫಿಕ್ಸ್ ಮತ್ತು ಅಂದವಾಗಿ ಮುದ್ರಿಸಿಕೊಟ್ಟ ಸ್ನೇಹಾ ಪ್ರಿಂಟರ್ಸ್ ಅವರಿಗೆ ನನ್ನ ಕೃತಜ್ಞತೆಗಳು.

ಬೆಂಗಳೂರು
ಶಾ.ಶ. ೧೯೨೨ ಪಾರ್ಥಿವ ಸಂ||
ಮಾರ್ಗಶಿರ ಶುಕ್ಲ ೨

ಇತಿ ಸಜ್ಜನ ವಿಧೇಯ
ಡಾ|| ಎಂ. ಶಿವಕುಮಾರಸ್ವಾಮಿ
ಸಂಪಾದಕ

ಅರ್ಪಣೆ

ಲಿ॥ ಶ್ರೀ ಕೆ.ಎನ್. ಗುಬ್ಬಣ್ಣ ಮತ್ತು ಲಿಂ॥ ಶ್ರೀಮತಿ ಗಂಗಮ್ಮ

೯.೮.೧೯೦೯ - ೧೮-೬-೧೯೭೮ ೧೪-೨-೧೯೧೪ - ೨೪-೨-೧೯೭೫

ಗ್ರಂಥದಾನಿಗಳಾದ ಶ್ರೀ ಕೆ.ಜಿ. ಶಶಿಧರ್ ಅವರು ಗ್ರಂಥವನ್ನು ತಮ್ಮ ತಂದೆ-ತಾಯಿಗೆ ಅರ್ಪಿಸಿದ್ದಾರೆ.



ಶ್ರೀ ಕೆ.ಜಿ. ಶಶಿಧರ್, ಶ್ರೀಮತಿ ಕೆ.ಎಸ್. ಗಾಯತ್ರಿ

ಮಕ್ಕಳಾದ ಚಿ॥ ಕೆ.ಎಸ್. ಆಲೋಕ್, ಚಿ॥ ಕೆ.ಎಸ್. ಅತೀತ್



ಬಾಳೆಹೊನ್ನೂರಿನ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ವೀರಗಂಗಾಧರ
ಶಿವಾಚಾರ್ಯ ಮಹಾಸ್ವಾಮಿಗಳಿಂದ ೧೯೭೫ರಲ್ಲಿ ಆಶೀರ್ವಾದ ಪಡೆಯುತ್ತಿದ್ದಾರೆ.
ಶ್ರೀ ಕೆ.ಜಿ. ಶಶಿಧರ್ ದಂಪತಿಗಳು



ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ
ಮಹಾಸ್ವಾಮಿಗಳು ಶ್ರೀ ಕೆ.ಜಿ. ಶಶಿಧರ್ ಅವರ ನೂತನ ಮನೆಯಲ್ಲಿ
ಶಶಿಧರ್ ಕುಟುಂಬವನ್ನು ಆಶೀರ್ವದಿಸುತ್ತಿರುವುದು

ಗ್ರಂಥ ದಾನಿಗಳ ಪರಿಚಯ

ಬೆಂಗಳೂರಿನ ಹೆಸರಾಂತ ಸಿವಿಲ್ ಕಂಟ್ರಾಕ್ಟರ್ ಆಗಿದ್ದ ಲಿಂ॥ ಶ್ರೀ ಕೆ.ಎನ್. ಗುಬ್ಬಣ್ಣನವರು ೯.೮.೧೯೦೯ರಲ್ಲಿ ಜನಿಸಿದರು. ಇವರ ತಂದೆ ಕೆ. ನಂಜಯ್ಯಪ್ಪನವರು ಮೂಲತಃ ತುಮಕೂರು ಜಿಲ್ಲೆಯಲ್ಲಿರುವ ಕಾಳೀಹಳ್ಳಿಯವರು.

ಇಂಟರ್ ಮೀಡಿಯಟ್ ಓದಿದ ನಂತರ ೧೯೩೭ರಲ್ಲಿ ಮಾಗಡಿ ರಸ್ತೆಯಲ್ಲಿ ಬೆಂಗಳೂರು ಫೈರ್ ಬ್ರಿಕ್ ಎಂಡ್ ಟೈಲ್ಸ್ ಫ್ಯಾಕ್ಟರಿ ಆರಂಭಿಸಿದರು. ಮುಂದೆ ತಮ್ಮದೇ ಆದ 'ಗುಬ್ಬಣ್ಣ ಎಂಡ್ ಸನ್ಸ್' ಎಂಬ ಕನ್‌ಸ್ಟ್ರಕ್ಷನ್ ಕಂಪನಿ ಆರಂಭಿಸಿದರು. ಆ ಕಂಪನಿ ಮೂಲಕ ಬಿನ್ನಿ ಮಿಲ್ ಬಡಾವಣೆಯಲ್ಲಿ ಬಿನ್ನಿಪೇಟೆ ಟೌನ್‌ಷಿಪ್, ಬಿನ್ನಿ ಕ್ಯಾಂಟೀನ್, ಬಿನ್ನಿ ಸನ್ಸ್ ಗ್ರಾರ್ಡನ್ಸ್, ನಂತರದ ದಿನಗಳಲ್ಲಿ ಹೆಚ್.ಎ.ಎಲ್., ಎನ್.ಎ.ಎಲ್., ಫುಟ್‌ಬಾಲ್ ಸ್ಟೇಡಿಯಂ -ಹೀಗೆ ಅನೇಕ ಪ್ರಮುಖ ಕಟ್ಟಡಗಳನ್ನು ನಿರ್ಮಿಸಿದ್ದಾರೆ.

೧೯೬೭-೬೮ರಲ್ಲಿ ತನ್ನಿಬ್ಬರು ಮಕ್ಕಳಾದ ದಿ। ಕೆ.ಜಿ. ವಿಶ್ವನಾಥ ಮತ್ತು ಕೆ.ಜಿ. ಶಶಿಧರ್ ಜೊತೆಗೂಡಿ ರಾಜಾಜಿನಗರದ ೬ನೇ ಬ್ಲಾಕ್‌ನಲ್ಲಿ ಸುಮಾರು ೪೦ ಎಕರೆ ಜಮೀನಿನಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ಅನ್ನು ಆರಂಭಿಸಿದ್ದರಿಂದ ಅಂದಿನ ಸಣ್ಣ ಕೈಗಾರಿಕೆಗಳಿಗೆ ಬಹಳ ಪ್ರೋತ್ಸಾಹ ಸಿಕ್ಕಿದಂತಾಯ್ತು. ಅದನ್ನು ಇಂದು ಗುಬ್ಬಣ್ಣ ಇಂಡಸ್ಟ್ರಿಯಲ್ ಎಸ್ಟೇಟ್ ಎಂದು ಹೆಸರಿಸಲಾಗಿದೆ.

ಶ್ರೀ ಕೆ.ಎನ್. ಗುಬ್ಬಣ್ಣನವರ ಧರ್ಮಪತ್ನಿ ಶ್ರೀಮತಿ ಗಂಗಮ್ಮನವರು ಮಲೆನಾಡಿನವರು. ಪತಿ-ಪತ್ನಿ ಇಬ್ಬರೂ ಪಂಚಪೀಠದ ಪರಮಭಕ್ತರು. ಅಂದಿನ ಬಾಳೆಹೊನ್ನೂರು ಪೀಠ ಜಗದ್ಗುರುಗಳಾಗಿದ್ದ ಲಿಂ॥ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ವೀರಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳವರ ಆಪ್ತ ಶಿಷ್ಯರಾಗಿ ಸೇವೆ ಸಲ್ಲಿಸಿದರು. ಶ್ರೀ ಗುಬ್ಬಣ್ಣನವರ ಧರ್ಮಾಭಿಮಾನವನ್ನು ಹಾಗೂ ವೀರಶೈವ ಸಮಾಜದ ಬಗ್ಗೆ ಅವರಿಗಿದ್ದ ಅಪಾರ ಅಭಿಮಾನವನ್ನು ಕಂಡು ಅಂದಿನ ಜಗದ್ಗುರುಗಳು ಅವರನ್ನು ಶ್ರೀ ಮಹಂತರ ಮಠದ ಮತ್ತು ಶ್ರೀ ರೇಣುಕಾಚಾರ್ಯ ಕಾಲೇಜಿನ ಟ್ರಸ್ಟಿಗಳನ್ನಾಗಿ ನೇಮಕ ಮಾಡಿದರು. ಶ್ರೀ ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆಯಲ್ಲಿ ಉಪಾಧ್ಯಕ್ಷರಾಗಿ ಕೊನೆಯವರೆಗೆ ಸೇವೆ ಸಲ್ಲಿಸಿದರು.

೧೯೫೦ರಲ್ಲಿ ಚಿಕ್ಕಪೇಟೆಯಲ್ಲಿಯ ಶ್ರೀ ಮಹಂತರ ಮಠದಲ್ಲಿ ೬೦x೩೦ ಸೈಜಿನ ದೊಡ್ಡದಾದ ಉಪನ್ಯಾಸ ಮಂದಿರವನ್ನು ತಮ್ಮ ತಂದೆ ಕೆ. ನಂಜುಂಡಪ್ಪನವರ ಹೆಸರಿನಲ್ಲಿ ಕಟ್ಟಿಸಿದರು. ಇಂದಿಗೂ ಈ ಉಪನ್ಯಾಸ ಮಂದಿರವನ್ನು ನೋಡಬಹುದಾಗಿದೆ.

ಬಾಳೆಹೊನ್ನೂರಿನ ಜಗದ್ಗುರುಗಳಾದ ವೀರಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು ಬೆಂಗಳೂರಿಗೆ ಭೇಟಿ ನೀಡಿದಾಗ ಗುಬ್ಬಣ್ಣನವರ ಮನೆಯಲ್ಲಿ ೧೫

ದಿನಗಳಿಗೂ ಹೆಚ್ಚಾಗಿ ಇರುತ್ತಿದ್ದರು. ಆಗ ಶ್ರೀ ಕೆ.ಜಿ. ಶಶಿಧರ್, ಶ್ರೀಮತಿ ಶಾಂತಾ ಗೌಡ್ ಇವರೆಲ್ಲಾ ಚಿಕ್ಕಮಕ್ಕಳಾಗಿದ್ದರೂ ಗಂಗಾಧರ ಶಿವಾಚಾರ್ಯ ಸ್ವಾಮಿಗಳ ಶಿಷ್ಯರಾಗಿ ಬಿಟ್ಟಿದ್ದರು.

ಶ್ರೀಮತಿ ಗಂಗಮ್ಮನವರೂ ಶ್ರೀ ಕೆ.ಎನ್. ಗುಬ್ಬಣ್ಣನವರೂ ಸುಮಾರು ೧೮ ವರ್ಷಗಳ ಕಾಲ ಪ್ರತಿ ದಿನ ಮನೆಯಲ್ಲಿ ರುದ್ರಾಭಿಷೇಕ ಮಾಡಿದ ಪುಣ್ಯಾತ್ಮ ದಂಪತಿಗಳು.

ಇಂದು ಚಾಮರಾಜಪೇಟೆಯಲ್ಲಿರುವ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್‌ನ ಸದಸ್ಯರಾಗಿ ಗುಬ್ಬಣ್ಣನವರು ಅಲ್ಲಿ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಆ ಸಂಸ್ಥೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಅವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ವಜ್ರಮಹೋತ್ಸವ ಕಟ್ಟಡವನ್ನು ಕಟ್ಟಿಸಿದ್ದರು.

ಗುಬ್ಬಣ್ಣನವರು ಚಾಮರಾಜಪೇಟೆಯಲ್ಲಿರುವ ಗ್ರೈನ್ ಮರ್ಚೆಂಟ್ ಕೋ. ಆಪ್ ಬ್ಯಾಂಕ್ ಡೈರೆಕ್ಟರ್ ಆಗಿಯೂ ಸೇವೆ ಸಲ್ಲಿಸಿದ್ದಾರೆ.

ಗುಬ್ಬಣ್ಣನವರು ೧೭-೧೮ ವರ್ಷದವರಿದ್ದಾಗ ಅವರ ತಂದೆ ಲಿಂಗೈಕ್ಯರಾಗಿದ್ದರಿಂದ ತುಂಬು ಸಂಸಾರದ ಪೂರ್ಣ ಜವಾಬ್ದಾರಿ ಇವರ ಹೆಗಲಿಗೆ ಬಂತು. ೪ ಜನ ತಮ್ಮಂದಿರು, ಇಬ್ಬರು ತಂಗಿಯರ, ಜವಾಬ್ದಾರಿ ಹೊತ್ತು ಅವರ ಉನ್ನತ ವಿದ್ಯಾಭ್ಯಾಸಕ್ಕೆ ಸಂಪೂರ್ಣ ನೆರವು ನೀಡಿ ಮೊದಲನೆಯ ತಮ್ಮನಾದ ಲಿಂ|| ಶ್ರೀ ಕೆ.ಎನ್. ಚನ್ನಬಸಪ್ಪನವರು, ಸದರನ್ ರೈಲ್ವೆ ಜನರಲ್ ಮ್ಯಾನೇಜರ್ ಆಗಿ ನಿವೃತ್ತಿ ಹೊಂದಿದ್ದರು. ಎರಡನೆಯವರು ಲಿಂ|| ಶ್ರೀ ವೀರಣ್ಣನವರು ಆಕಸ್ಮಿಕವಾಗಿ ಕುರುಡರಾಗಿದ್ದರು. ಮೂರನೆಯವರು ಲಿಂ|| ಕೆ.ಎನ್. ಮಲ್ಲಣ್ಣನವರು, ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿ ರಾಗಿ ಬೆಳೆಯುವ ಬಗ್ಗೆ ವಿಶೇಷ ತಜ್ಞರಾಗಿದ್ದರು. ನಾಲ್ಕನೆಯವರು ಶ್ರೀ ಕೆ.ಎನ್. ನಾಗಣ್ಣನವರು ರೈಲ್ವೆ ಚೀಫ್ ಇಂಜಿನಿಯರ್ ಆಗಿ ನಿವೃತ್ತಿ ಹೊಂದಿದ್ದಾರೆ. ಎಲ್ಲಾ ತಮ್ಮಂದಿರೂ ಪಂಚಪೀಠದ ಭಕ್ತರಾಗಿದ್ದರು. ಹೀಗೆ ಪಂಚ ಪಾಂಡವರಂತೆ ಹಿರಿಯರಾದ ಶ್ರೀ ಕೆ.ಎನ್. ಗುಬ್ಬಣ್ಣನವರು ಧರ್ಮರಾಯನ ಪ್ರತಿರೂಪವಾಗಿ ಇಡೀ ಕುಟುಂಬದ ಸರ್ವ ಸದಸ್ಯರ ಪ್ರೀತಿ, ಗೌರವಾದರಗಳಿಗೆ ಪಾತ್ರರಾಗಿದ್ದರು. ಕುರುಡ ತಮ್ಮನಾಗಿದ್ದ ಶ್ರೀ ವೀರಣ್ಣನವರು ಲಿಂಗೈಕ್ಯರಾದ ನಂತರ ಅವರ ಹೆಸರಿನಲ್ಲಿ 'ವೀರಣ್ಣ ಟ್ರಸ್ಟ್' ಆರಂಭಿಸಿ, ತಾವು ಮತ್ತು ತಮ್ಮ ಉಳಿದ ತಮ್ಮಂದಿರು ಅದರ ಟ್ರಸ್ಟಿಗಳಾಗಿ ಬಡಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡುವಂತೆ ಏರ್ಪಾಡು ಮಾಡಿದ್ದರು.

ಶ್ರೀಮಂತಿಕೆ ತುಂಬಿ ತುಳುಕುತ್ತಿದ್ದರೂ ಸರಳ ಸ್ವಭಾವದವರೂ, ಸಜ್ಜನರೂ, ಮಿತಭಾಷಿಗಳಾಗಿದ್ದ ಶ್ರೀ ಕೆ.ಎನ್. ಗುಬ್ಬಣ್ಣನವರು ಬೆಂಗಳೂರಿನ ವೀರಶೈವ ಸಮಾಜವೇ ಹೆಮ್ಮೆ ಪಡುವಂತಹ ವ್ಯಕ್ತಿತ್ವವುಳ್ಳವರಾಗಿದ್ದರು.

ಇಂದು ವೀರಶೈವ ಧರ್ಮ : ಒಂದು ಪುನರವಲೋಕನ ಎಂಬ ಸಂಶೋಧನಾ ಗ್ರಂಥಕ್ಕೆ ದಾನಿಗಳಾಗಿ ಮುಂದೆ ಬಂದಿರುವ ಶ್ರೀ ಕೆ.ಎನ್. ಗುಬ್ಬಣ್ಣನವರ ಮಗನಾದ

ಶ್ರೀ ಕೆ.ಜಿ. ಶಶಿಧರ್ ಅವರು ಪಂಚಪೀಠಗಳ ಭಕ್ತರಾಗಿ ತಂದೆಯವರ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಕಾಶೀ ಜಗದ್ಗುರುಗಳು ಮೊಟ್ಟಮೊದಲ ಬಾರಿಗೆ ಬೆಂಗಳೂರಿಗೆ ದಯಮಾಡಿಸಿದಾಗ ಶಶಿಧರ್ ಅವರ ಮನೆಯಲ್ಲೇ ಮೊಕ್ಕಾಂ ಮಾಡಿದ್ದರು. ಶ್ರೀ ಶಶಿಧರ್ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಗಾಯತ್ರಿ ಹಾಗೂ ಅವರ ಮಕ್ಕಳಾದ ಚಿ|| ಕೆ.ಎಸ್. ಅಲೋಕ್, ಕೆ.ಎಸ್. ಅತೀತ ಬಹಳ ಭಕ್ತಿಯಿಂದ ಜಗದ್ಗುರುಗಳ ಸೇವೆ ಮಾಡಿಕೊಂಡು ಬಂದಿದ್ದಾರೆ.

ಶ್ರೀ ಕೆ.ಜಿ. ಶಶಿಧರ್ ಅವರೂ ಅವರ ತಂದೆಯಂತೆ, ಶ್ರೀ ಮಹಂತರ ಮಠದ ಟ್ರಸ್ಟಿಯಾಗಿ, ಶ್ರೀ ರೇಣುಕಾಚಾರ್ಯ ಕಾಲೇಜಿನ ಸದಸ್ಯರಾಗಿ, ಶ್ರೀ ವೀರಣ್ಣ ಟ್ರಸ್ಟ್‌ನ ಸದಸ್ಯರಾಗಿ, ವೀರಶೈವ ಅನುಸಂಧಾನ ಸಂಸ್ಥಾನದ ಸದಸ್ಯರಾಗಿ ಸಮಾಜಕ್ಕೆ ಸೇವೆ ಸಲ್ಲಿಸುತ್ತಾ ಇದ್ದಾರೆ.

ಈ ಗ್ರಂಥವನ್ನು ಶ್ರೀ ಶಶಿಧರ್ ಅವರು ಅವರ ತಂದೆ-ತಾಯಿಗಳಿಗೆ ಪ್ರೀತಿಯಿಂದ ಸಮರ್ಪಿಸಿದ್ದಾರೆ.

ಡಾ|| ಸಿ.ಯು. ಉಮಾದೇವಿ ಉಮಾಶಂಕರ್

ವಿಷಯಾನುಕ್ರಮಣಿಕೆ

ಪ್ರಥಮಭಾಗ : ಸದಾಶಯಗುಚ್ಛಕ

ಪುಟ

೧. ಶ್ರೀಮತ್ಕಾಶೀ ಜಗದ್ಗುರುಗಳ ವಿಚಾರಪೂರ್ಣ ಮಾರ್ಗದರ್ಶನ ೧

೨. ಶ್ರೀಮದುಜ್ಜಯಿನೀ ಜಗದ್ಗುರುಗಳ ಆಶೀರ್ವಚನ ೨೦

೩. ಶ್ರೀಮತ್ ಶ್ರೀಶೈಲ ಜಗದ್ಗುರುಗಳ ಆಶೀರ್ವಚನ ೨೩

೪. ಶ್ರೀ ಮ.ನಿ.ಪ್ರ.ಸ್ವ. ಸಂಗನ ಬಸವ ಮಹಾಸ್ವಾಮಿಗಳ ಆಶೀರ್ವಚನ ೨೫

೫. ಶ್ರೀ ವಿ.ಎಸ್. ಮಳಿಮಠ್ ಅವರ ಉದ್ಘಾಟನಾ ಭಾಷಣ ೨೯

೬. ಗೋಷ್ಠಿ ಅಧ್ಯಕ್ಷರುಗಳ ಭಾಷಣಗಳು:

೬.೧. ಪ್ರೊ॥ ಎನ್.ಬಸವರಾಧ್ಯರ ಭಾಷಣ ೩೬

೬.೨. ಡಾ॥ ಮಲ್ಲಿಕಾರ್ಜುನ ಪರಡ್ಡಿ ಅವರ ಭಾಷಣ ೩೯

೭. ವಿಚಾರ ಸಂಕಿರಣದಲ್ಲಿ ತೆಗೆದುಕೊಂಡ ಮಹತ್ವದ ನಿರ್ಣಯಗಳು ೪೫

೮. ವಿಶೇಷ ಉಪನ್ಯಾಸ :

ವೀರಶೈವಕ್ಕೆ ಪರ್ಯಾಯದ ಪ್ರಸ್ತುತತೆ ೪೭

-ಡಾ॥ ಎಸ್. ವಿದ್ಯಾಶಂಕರ

ದ್ವಿತೀಯಭಾಗ : ಪ್ರಬಂಧಗುಚ್ಛಕ

೧. ವೀರಶೈವ-ಲಿಂಗಾಯತ ೫೯

-ವಿದ್ವಾನ್ ಕೋ.ರಂ. ಬಸವರಾಜ

೨. ಬಸವಪೂರ್ವಯುಗದ ಶಿವಶರಣರು ೮೨

-ಡಾ॥ ಬಸವಲಿಂಗ ಸೊಪ್ಪಿಮಠ

೩. 'ಕೂಡಲಸಂಗಮ' ಮುದ್ರಿಕೆಯ ಔಚಿತ್ಯ ೯೫

-ಶ್ರೀ ಗೌ.ಮ. ಉಮಾಪತಿ ಶಾಸ್ತ್ರಿ

ಪುಟ

೪. ವೀರಶೈವ ಪರಂಪರೆ ಮತ್ತು ದೇವಾಲಯ ಸಂಸ್ಕೃತಿ ೯೯

-ಡಾ|| ಡಿ.ವಿ. ಪರಶಿವಮೂರ್ತಿ

೫. ಶ್ರೀ ಸಿದ್ಧಾಂತಶಿಖಾಮಣಿ -ವೀರಶೈವದ ಆಧಾರ ಗ್ರಂಥ ೧೦೫

-ಡಾ|| ಸಿ. ಶಿವಕುಮಾರಸ್ವಾಮಿ

೬. ಪಂಚಾಚಾರ್ಯರ ಉಲ್ಲೇಖಗಳು ೧೩೮

-ಡಾ|| ರಾಜಶೇಖರಸ್ವಾಮಿ ಗೋರಟಾ

೭. ವೀರಶೈವ ಧಾರ್ಮಿಕ ಸಂಸ್ಕಾರಗಳು ೧೫೬

-ಡಾ|| ವ್ಹಿ.ಜಿ. ಪೂಜಾರ

೮. ವೀರಶೈವ ಗೋತ್ರ-ಸೂತ್ರಗಳ ಪರಿಕಲ್ಪನೆ ೧೬೪

-ಶ್ರೀ ಷಣ್ಮುಖಯ್ಯ ಅಕ್ಕೂರಮಠ

ಸದಾಶಯ ಪ್ರದಾಯಕರ-ಪ್ರಬಂಧಕಾರರ ವಿಳಾಸಗಳು ೧೭೫

ಪ್ರಥಮ ಭಾಗ : ಸದಾಶಯಗುಚ್ಛಕ

೧. ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ವಿಚಾರಪೂರ್ಣ ಮಾರ್ಗದರ್ಶನ

ವಿಶ್ವೇಶಲಿಂಗಸಂಭೂತಂ ವಿಶ್ವವಿದ್ಯಾವಿಬೋಧಕಮ್।
ವಿಶ್ವವಂದ್ಯಂ ಸದಾ ವಂದೇ ವಿಶ್ವಾರಾಧ್ಯಂ ಜಗದ್ಗುರುಮ್॥

ಕಾಶೀಜ್ಞಾನಸಿಂಹಾಸನದ ಆದಿ ಜಗದ್ಗುರು ವಿಶ್ವಾರಾಧ್ಯರನ್ನೇ ಮೊದಲು ಮಾಡಿಕೊಂಡು ವಿಶ್ವೇಶ್ವರ ಶಿವಾಚಾರ್ಯ ಪರ್ಯಂತವಾದ ಗುರುಪರಂಪರೆಗೆ ಅನಂತ ಭಕ್ತಿಯ ಪ್ರಣಾಮಗಳನ್ನು ಸಮರ್ಪಿಸಿ, ಧಾರವಾಡ ಮಹಾನಗರದಲ್ಲಿ "ವೀರಶೈವಧರ್ಮ -ಒಂದು ಪುನರವಲೋಕನ" ಎನ್ನುವ ಶೀರ್ಷಿಕೆಯ ಮೇಲೆ ವಿಚಾರ ಮಾಡಲೇಬೇಕಾದ ಅನೇಕ ವಿಷಯಗಳನ್ನು ಸಂಗ್ರಹಿಸಿ ಸಮಾರಂಭಗೊಂಡಂತಹ ಗೋಷ್ಠಿಗೆ ನೇತೃತ್ವಸ್ಥಾನವನ್ನು ಅಲಂಕರಿಸಿ, ಸಮನ್ವಯ ದೃಷ್ಟಿಯನ್ನಿರಿಸಿಕೊಂಡು ಸಮಸ್ತ ಸದ್ಭಕ್ತರಿಗೆ ವಿದ್ವತ್ಪೂರ್ಣವಾದ ಹಾಗೂ ಭಾವಪೂರ್ಣವಾದ ತಮ್ಮ ಆಶೀರ್ವಚನವನ್ನು ಕೊಡಮಾಡಿರುವ ಮೃಡಗಿರಿಯ ಜಗದ್ಗುರು ಅನ್ನದಾನ ಮಹಾಸ್ವಾಮಿಗಳಿಗೆ ಅಭಿನಂದಿಸಿ, ತಿಳಿಸಬಯಸುವುದೇನೆಂದರೆ–

ಧಾರವಾಡ ನಗರದಲ್ಲಿ ಇಂದು ಪ್ರಾತಃಕಾಲದಿಂದ ಒಂದು ಧರ್ಮಸಂಸತ್ ಕಾರ್ಯಕ್ರಮ ಆರಂಭವಾಗಿದೆ. ನಾವು ಒಮ್ಮೊಮ್ಮೆ ಟಿ.ವಿ.ಯೊಳಗೆ ಲೋಕಸಭೆಯಲ್ಲಿ ವಿಧಾನಸಭೆಯಲ್ಲಿ ಆಗುವಂಥ ಚರ್ಚೆಗಳನ್ನು ನೋಡ್ತಾ ಇದ್ದೆವು. ಲೋಕಸಭೆಯಲ್ಲಿ ಒಬ್ಬ ಅಧ್ಯಕ್ಷ ಕುಳಿತಿರುತ್ತಾರೆ. ಅವರು ಏನು ಹೇಳಿದರೂ ಯಾರೂ ಕೇಳ್ತಾ ಇರಲಿಲ್ಲ. ಅವನು ಹೇಳ್ತಾನೆ, ಇವನು ಹೇಳ್ತಾನೆ; ಯಾರು ಏನು ಹೇಳ್ತಾರೆ ಎನ್ನುವುದು ಯಾರಿಗೂ ತಿಳೀತಾನೇ ಇರಲಿಲ್ಲ. ಇವತ್ತು ಅದೇ ಅನುಭವವನ್ನು ಅನುಭವಿಸುವ ಪ್ರಸಂಗ ಬಂದಿತ್ತು. ಆಗಲಿ, ಬಹಳ ಒಳ್ಳೆಯ ಕಾರ್ಯಕ್ರಮ ನಡೆಯುತ್ತಾ ಇದೆ. ಸಾಮಾನ್ಯವಾಗಿ ಇಂತಹ ಸಂಕಿರಣಗಳಲ್ಲಿ ಬಹಳ ಕಡಿಮೆ ಜನ ಪಾಲ್ಗೊಳ್ಳುತ್ತಾರೆ. ಆದರೆ ರಾಮನಗೌಡರು ಮತ್ತು ಎಲ್ಲಾ ಸಹೋದ್ಯೋಗಿಗಳು ಈ ವಿಚಾರ ಸಂಕಿರಣಗಳನ್ನು ಕೆಲವೇ ಜನರಿಗೆ ಸೀಮಿತವಾಗಿಡದೆ ಹೆಚ್ಚು ಹೆಚ್ಚು ಜನರಿಗೆ ಪ್ರಯೋಜನ ಆಗಬೇಕು ಎನ್ನುವ ದೃಷ್ಟಿಯಿಂದ ಬಹಳ ದೊಡ್ಡ ಸಮಾರಂಭವನ್ನೇ ಮಾಡಿದ್ದಾರೆ. ಇಲ್ಲಿ ಯಾರದಾದರೂ ಲಗ್ನ ಇರಬಹುದು ಎಂದು

ಭಾಸವಾಗುತ್ತದೆ. ಅಷ್ಟು ಸುಂದರವಾಗಿ ವ್ಯವಸ್ಥೆ ಮಾಡಿದ್ದಾರೆ. ಇದು ಸಮಜದಲ್ಲಾಗುವ ಗೊಂದಲವನ್ನು ದೂರ ಮಾಡುವ ಸಲುವಾಗಿ ಒಂದು ಸಮನ್ವಯ ವೇದಿಕೆಯೇ. ಒಂದು ಕಡೆಗೆ ಪಂಚ ಪೀಠಾಧೀಶ್ವರರ ಪ್ರತಿನಿಧಿಗಳಾಗಿರುವ ರೇಣುಕರ ಲಿಂಗೋದ್ಭವ ಮೂರ್ತಿಯನ್ನು ನೋಡ್ತಾ ಇದ್ದೀರಿ. ಇನ್ನೊಂದು ಕಡೆ ಮಹಾನುಭಾವಿಯಾದ ಬಸವಣ್ಣನವರ ಭಾವಚಿತ್ರವನ್ನು ಕೂಡಾ ಕಾಣ್ತಾ ಇದ್ದೀರಿ. ಅವರಿಬ್ಬರನ್ನು ಸಾಕ್ಷಿಯಾಗಿಟ್ಟುಕೊಂಡು ಮಾಡುವ ಉದ್ದೇಶವೇನೆಂದರೆ, ಇವರ ಅಭಿಮಾನಿಗಳು ಅವರ ಅಭಿಮಾನಿಗಳು ಜಗಳ ಆಡುವುದು ಬೇಡ, ಎಲ್ಲರೂ ಸಮನ್ವಯದಿಂದ ಹೋಗೋಣ ಎನ್ನುವುದು. ಅದನ್ನು ನೋಡ್ತಾ ಇದ್ದಾರೋ ಇಲ್ಲವೋ ಎಂದು ನಮಗೆ ಅನ್ನಿಸ್ತಾ ಇದೆ. ಏಕೆಂದರೆ, ಪ್ರಶ್ನೆ ಕೇಳುವುದಕ್ಕೆ ಯಾರಿಗೂ ಪ್ರತಿಬಂಧಕ ಮಾಡುವುದಿಲ್ಲ, ನಾವು ಚರ್ಚಾಗೋಷ್ಠಿಯನ್ನು ಮಾಡ್ತಾ ಇರೋದೂ ಕೂಡ ಯಾರ ಮನಸ್ಸಿನಲ್ಲಿ ಏನು ಸಂಶಯ ಇದೆಯೋ ಅದು ಹೊರಗೆ ಬರಲಿ ಎಂದೇ. ಹೇಗೆ ಮಂತ್ರವಾದಿಯ ಕಡೆ ಹೋದಾಗ ಅವನು ಧೂಪ-ದೀಪ ಹಾಕಿದ ಕೂಡಲೇ ಭೂತಗಳು ಏಳುತ್ತಿರುತ್ತವೆಯಲ್ಲಾ ಹಾಗೆ ಸಂಶಯ ಭೂತಗಳೆಲ್ಲಾ ಎದ್ದು ಬರಲಿ. ಆ ಭೂತಗಳನ್ನು ನಾಶಮಾಡುವ ಸಲುವಾಗಿ ವಿದ್ವಾಂಸರಿದ್ದಾರೆ, ಶಿವಾಚಾರ್ಯರಿದ್ದಾರೆ, ಜಗದ್ಗುರುಗಳಿದ್ದಾರೆ. ಯಾರಿಗೂ ತಿಳಿಯದೇ ಹೋದರೆ ನೀವು ನೀವೆ ಕುಳಿತುಕೊಂಡು ಚರ್ಚೆಮಾಡಿ ಮುಗಿಸಿಕೊಳ್ಳಬಹುದು.

ಹೀಗೆ ಒಂದು ಒಳ್ಳೆಯ ವಿಚಾರಕ್ಕಾಗಿ ಈ ಗೋಷ್ಠಿಯನ್ನು ಆಯೋಜನ ಮಾಡಿದ್ದಾರೆ. ಪ್ರಶ್ನೆಗಳ ಸುರಿಮಳೆಯಾಗಿದೆ. ಎಲ್ಲಾ ಪ್ರಶ್ನೆಗಳೂ ಕೂಡ ಸ್ವಾಗತಾರ್ಹವಾದವುಗಳೇ. ಯಾರೂ ಯಾರ ಪ್ರಶ್ನೆಯನ್ನೂ ತಿರಸ್ಕಾರ ಮಾಡಬಾರದು. ಯಾವುದೇ ಮನುಷ್ಯನ ಮನಸ್ಸಿನಲ್ಲಿ ಪ್ರಶ್ನೆ ಏಳುತ್ತದೆಯೆಂದರೆ ಅವನು ಅದರ ಬಗ್ಗೆ ತಿಳಿದುಕೊಂಡಿದ್ದಾನೆ, ಓದಿದ್ದಾನೆ, ಚಿಂತನೆ ಮಾಡಿದ್ದಾನೆ ಎನ್ನುವುದರ ಸಂಕೇತ. ಯಾರ ಮನಸ್ಸಿನಲ್ಲಿ ಪ್ರಶ್ನೆ ಬರಲಿಲ್ಲಾಂದರೆ, ಒಂದು, ಅವನಿಗೆ ಏನೂ ತಿಳಿಯುವುದಿಲ್ಲ ಎಂದೋ, ಎರಡು, ಅವನು ಎಲ್ಲವನ್ನೂ ತಿಳಿದುಕೊಂಡಿದ್ದಾನೆ ಎಂದೋ ಅರ್ಥ. ಸ್ವಲ್ಪ ಸ್ವಲ್ಪ ತಿಳಿದಿದ್ದರೆ ಇನ್ನೂ ತಿಳಿದುಕೊಳ್ಳಬೇಕಾದುದು ಇದೆ ಎಂದಾಗ ಅವರಿಗೆ ಪ್ರಶ್ನೆ ಬರುತ್ತದೆ.

ವೀರಶೈವ-ಲಿಂಗಾಯತ

ಮುಖ್ಯವಾಗಿ ಒಂದು ನಿಬಂಧವನ್ನು ತುಮಕೂರಿನ ಕೋ.ರಂ. ಬಸವರಾಜು ಅವರು ಸಶಾಸ್ತ್ರವಾಗಿ ಮಂಡನೆ ಮಾಡಿದ್ದಾರೆ. ಶಾಸ್ತ್ರ ಹೇಗಿರುತ್ತೆ, ಹಾಗೆ ಅದನ್ನು ಹೇಳಿದ್ದಾರೆ. ಇನ್ನು ನಮ್ಮ ರೂಢಿ ಹೇಗಿರುತ್ತೋ ಅದರ ಬಗ್ಗೆ ವಿಚಾರ ಮಾಡಿ, ಆ ಶಾಸ್ತ್ರ ಮತ್ತು ರೂಢಿ ಎರಡನ್ನೂ ಸಮನ್ವಯ ಮಾಡಿಕೊಳ್ಳುವುದು ಆಗ ಆವಶ್ಯಕವಾಗಿದೆ. ಒಂದು ವೇಳೆ ಇಷ್ಟೆಲ್ಲಾ ದೊಡ್ಡ ಸೆಮಿನಾರ್ ಮಾಡಿ, ಲಕ್ಷಾಂತರ ರೂಪಾಯಿ ಖರ್ಚು ಮಾಡಿ, ವೀರಶೈವರೇ ಬೇರೆ, ಲಿಂಗಾಯತರೇ ಬೇರೆ ಎನ್ನುವ ಭಾವನೆ ಉಳಿದುಕೊಂಡು ಹೋದರೆ, ಇದನ್ನು ಯಾಕಾದರೂ ಮಾಡಬೇಕಿತ್ತು? ಬಿಟ್ಟಿದ್ದರೆ ದುಡ್ಡಾದರೂ ಉಳಿಯುತ್ತಿತ್ತು, ನಮ್ಮ ಸಮಯವಾದರೂ ಉಳಿಯುತಿತ್ತು. ಅದಕ್ಕಾಗಿ ಶಾಸ್ತ್ರದ ದೃಷ್ಟಿಯಿಂದ ವಿಚಾರ ಮಾಡಿದರೆ "ವೀರಶೈವ" ಎನ್ನುವ ಪದ ಅತ್ಯಂತ ಶುದ್ಧವಾಗಿರುವಂತಹುದು, ಧರ್ಮಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿರುವಂತಹದು. ಬಹಳಷ್ಟು ಅಭ್ಯಾಸ ಮಾಡಿ ಸುಮಾರು ಎಷ್ಟು ವಚನಗಳಲ್ಲಿ

"ವೀರಶೈವ" ಎನ್ನುವ ಪದ ಬಳಕೆಯಾಗಿದೆ ಎಂದು ಸಾಧಾರವಾಗಿ ಹೇಳಿದ್ದಾರೆ. ಸುಮಾರು ನೂರಕ್ಕೆ ತೊಂಬತ್ತೊಂಬತ್ತರಷ್ಟು ಎಲ್ಲಾ ಗ್ರಂಥಗಳ ಆಧಾರವನ್ನು ವಿಚಾರ ಮಾಡಿದರೆ "ವೀರಶೈವ" ಎನ್ನುವ ಪದ ಸೂಕ್ತ ಎನ್ನುವಂತಹದು ಶಾಸ್ತ್ರಗ್ರಂಥಗಳ ಆಧಾರದ ಮೇಲೆ ನಮಗೆ ತಿಳುವಳಿಕೆಯಾಗುತ್ತದೆ. ಒಂದೆರಡು ವಚನಕಾರರು ಕೂಡ "ಲಿಂಗಾಯತ" ಪದವನ್ನು ಬಳಸಿದ್ದಾರೆ ಎನ್ನುವಂಥ ಮಾತನ್ನು ಹೇಳಿದ್ದಾರೆ. "ಇಷ್ಟು ವಚನರಾಶಿಯಲ್ಲಿ ಒಂದೆರಡು ವಚನದಲ್ಲಿ ಲಿಂಗಾಯತ ಎನ್ನುವ ಶಬ್ದ ಬಂದಿದೆ ಅಂದಿರಿ; ಯಾವ ವಚನ?" ಎಂದೊಬ್ಬರು ಕೇಳಿದರು. ಅದು ಚನ್ನಬಸವಣ್ಣನವರ ವಚನ ಮತ್ತೊಂದು ಮಹಿಳಾವಚನಕಾರ್ತಿಯ ವಚನ.

ಶ್ರೀ ಕೋ.ರಂ. ಬಸವರಾಜ ಅವರು ಸಂಸ್ಕೃತ ವಿದ್ವಾಂಸರಾದ್ದರಿಂದ, "ಲಿಂಗಾಯತ" ಎನ್ನುವ ಪದ ವ್ಯಾಕರಣ ಶುದ್ಧವಾಗಿರುವುದಲ್ಲ, ಅದು "ಆಯತ್ತ" ಎಂದಾದರೂ ಇರಬೇಕಾಗಿತ್ತು "ಆಯಾತ" ಎಂದಾದರೂ ಇರಬೇಕಾಗಿತ್ತು ಎಂದು ಹೇಳಿದರು. ಅಂದರೆ "ಲಿಂಗಾಯಾತ" ಎಂದಾದರೂ ಇರಬೇಕು ಅಥವಾ "ಲಿಂಗಾಯತ್ತ" ಎಂದಾದರೂ ಇರಬೇಕು. ಅದು ಶುದ್ಧವಾದ ಶಬ್ದ ಎಂದು ಹೇಳಿದರು. "ಆಯತ್ತ" ಎನ್ನುವುದರ ಬಗ್ಗೆ ಹೇಳಬೇಕು ಎಂದರೆ, "ಅಧೀನವಾಗಿರುವುದು" ಎಂದರ್ಥ. "ಲಿಂಗಾಯತ್ತ" ಎಂದರೆ ಯಾರು ತನ್ನ ಜೀವನವನ್ನು ಲಿಂಗದ ಜೊತೆ ಅಧೀನವಾಗಿಯೇ ಕಳೆಯುತ್ತಾನೆ ಅವನು; ಯಾರು ದೇಹದ ಮೇಲೆ ಇಷ್ಟಲಿಂಗವನ್ನು ಧರಿಸಿಕೊಂಡಿರುತ್ತಾನೆ, ಯಾವುದೇ ಖಾದ್ಯ ಪದಾರ್ಥವನ್ನು ಸ್ವೀಕಾರ ಮಾಡಬೇಕಾದರೆ ಲಿಂಗಕ್ಕೆ ಅರ್ಪಣ ಮಾಡಿಯೇ ಸ್ವೀಕಾರ ಮಾಡುತ್ತಾನೆ, ತನ್ನ ಆರಾಧ್ಯವನ್ನೇ ಲಿಂಗವನ್ನಾಗಿ ಮಾಡಿಕೊಂಡಿರುತ್ತಾನೆ, ಅಂಥವನು ಲಿಂಗಾಯತ್ತ. ಅಂದರೆ ಲಿಂಗಕ್ಕೆ ಅಧೀನವಾಗಿ ತನ್ನ ಬದುಕನ್ನು ಬಾಳುವಂಥ ಒಬ್ಬ ಶ್ರೇಷ್ಠ ಶಿವಭಕ್ತನಿಗೆ ನಾವು "ಲಿಂಗಾಯತ್ತ" ಎಂದು ಕರೆಯುತ್ತಾ ಬಂದಿದ್ದೇವೆ. ಆದರೂ ನಾವೆಲ್ಲಾ ರೂಢಿಯಲ್ಲಿ "ಲಿಂಗಾಯತ" ಎಂದು ಬಳಸಿಕೊಂಡು ಬಂದಿದ್ದೇವೆ. ಅನೇಕ ಸಂಘಸಂಸ್ಥೆಗಳನ್ನು ಆ ಹೆಸರಿನಲ್ಲಿ ಕಟ್ಟಿಕೊಂಡಿದ್ದೇವೆ. ಮತ್ತೆ ಅದರ ಗತಿಯೇನು? ಎಂಬ ವಿಚಾರ ಬಂದಾಗ, ತಿಳಿದುಕೊಳ್ಳಬೇಕಾಗಿದೆ. ಅಂದರೆ ಈಗೇನು ಅದನ್ನು ಬದಲಿಮಾಡಿಕೊಳ್ಳುವುದು ಬೇಕಾಗಿಲ್ಲ. ಆ ಸಂಘ ಸಂಸ್ಥೆಗಳ ಹೆಸರು ಹಾಗೆಯೇ ಇರಲಿ. ಏಕೆಂದರೆ ಶಾಸ್ತ್ರಕ್ಕಿಂತಲೂ ರೂಢಿ ಮಹತ್ವದ್ದು. "ಯೋಗಾದ್ ರೂಢಿರ್ಬಲೀಯಸೀ" (ಶಾಸ್ತ್ರ ನಿಷ್ಪತ್ತಿಯ ಅರ್ಥಕ್ಕಿಂದ ರೂಢಿಯ ಅರ್ಥ ಹೆಚ್ಚು ಪ್ರಬಲ) ಎಂಬ ದೃಷ್ಟಿಯಲ್ಲಿ, ಕಳೆದ ಅನೇಕ ವರ್ಷಗಳಿಂದ "ಲಿಂಗಾಯತ" ಪದವು ರೂಢಿಯೊಳಗೆ ಬಂದಿರುವುದರಿಂದ, "ವೀರಶೈವ" ಪದಕ್ಕಿರುವ ಅರ್ಥ "ಲಿಂಗಾಯತ" ಪದಕ್ಕೆ ಇಲ್ಲದಿದ್ದರೂ ಕೂಡ, ವ್ಯಾವಹಾರಿಕವಾಗಿ ಸಮನ್ವಯವನ್ನು ಮಾಡುವಂಥ ವಿಚಾರದಿಂದ, ವೀರಶೈವನೇ ಲಿಂಗಾಯತ, ಲಿಂಗಾಯತನೇ ವೀರಶೈವ, ಅವೆರಡು ಬೇರೆ ಅಲ್ಲ ಎನ್ನುವ ಸ್ಪಷ್ಟ ನಿಲುವನ್ನು ತಾಳಿಕೊಂಡಾಗ ಮಾತ್ರ ಲೋಕದೊಳಗೆ ಪುನಾನ್ನಾದರೂ ಅಭ್ಯುದಯವನ್ನು ಸಾಧಿಸಲು ಸಾಧ್ಯವಾಗುತ್ತದೆ.

ಡಾ|| ಬಿ.ವಿ. ಮಲ್ಲಾಪುರ್ ಅವರು ಒಂದಿಷ್ಟು ಪ್ರಶ್ನೆಗಳನ್ನು ಕೇಳಿದರು. "ಆಯತ" ಶಬ್ದಕ್ಕೆ "ಬಂದದ್ದು" ಎಂದು ಅರ್ಥ ಎಂದು ಅವರ ಅಭಿಪ್ರಾಯ. "ಆಯತ" ಎಂದರೆ

"ಬಂದದ್ದು" ಎಂದು ಅರ್ಥ ಅಲ್ಲ; "ಪ್ರಯತ್ನ" ಎನ್ನುವ ಅರ್ಥ ತೆಗೆದುಕೊಂಡು, ಲಿಂಗದಲ್ಲಿ ಆದವನು, ಒಳಗಾದವನು, ಎಂಬ ಅಭಿಪ್ರಾಯದಲ್ಲಿ "ಲಿಂಗಾಯತ" ಶಬ್ದವನ್ನು ಬಳಸಿದ್ದಾರೆ, ಎಂದು ಹೇಳಿದರು. ಅದರಿಂದ "ಆಯತ" ಎನ್ನುವ ಶಬ್ದಕ್ಕೆ ಬಳಕೆಯಲ್ಲಿ ಬಂದಿರತಕ್ಕಂಥ ಅರ್ಥ ಹಾಗೆ ಬಂದು ಸ್ವಲ್ಪ ಮಟ್ಟಿಗೆ ಮನಸ್ಸಿಗೆ ಭ್ರಮೆಯುಂಟಾಗಿದೆ. ಆದ್ದರಿಂದ "ಆಯತ" ಶಬ್ದಕ್ಕೆ "ಬಂದದ್ದು" ಎಂಬರ್ಥವಲ್ಲ. ಹಿಂದೆ ಹಾನಗಲ್ಲ ಕುಮಾರಸ್ವಾಮಿಗಳು ನಮ್ಮ ಸಮಾಜದ ಸಂಘಟನೆ ಮಾಡಲು ಹೊರಟಾಗ, ಅವರು ಅನೇಕ ಮಂದಿ ವಿದ್ವಾಂಸರನ್ನು, ವಚನ ಶಾಸ್ತ್ರದಲ್ಲಿ ಮತ್ತು ಆಗಮ ಶಾಸ್ತ್ರದಲ್ಲಿ ಪರಿಣತರಾದವರನ್ನು ಒಂದೆಡೆ ಕೂಡಿಸಿ, ಕೊನೆಗೆ ಸಿದ್ಧಾಂತ ರೂಪವಾಗಿ ಒಪ್ಪಿಗೆ ಪಡೆದು "ವೀರಶೈವ ಮಹಾಸಭಾ" ಎಂದು ಹೆಸರಿಡಬೇಕೆಂಬ ತೀರ್ಮಾನಕ್ಕೆ ಬಂದರು. ಆ "ವೀರಶೈವ ಮಹಾಸಭೆ" ಇಂದಿಗೂ ನಡೆದುಕೊಂಡು ಬಂದಿದೆ. ಹಾಗೆ ವೀರಶೈವ-ಲಿಂಗಾಯತ ಎಂಬುದನ್ನು ಸಮಾಜ ಒಪ್ಪಿಕೊಂಡರೆ ಎರಡನ್ನೂ ಬಳಸಬಹುದು. ಆದರೆ ಎರಡೂ ಬಳಸುವುದರಲ್ಲಿ ದ್ವಿರುಕ್ತಿಯಾಗಲಿ, ಭ್ರಮೆಯಾಗಲಿ ಉಂಟಾಗಬಹುದಾದರೂ, ಅನಿರ್ದಿಷ್ಟತೆಯ ಶಂಕೆ ಹೋಗುತ್ತದೆ. ನಮ್ಮ ಮತ, ನಮ್ಮ ಧರ್ಮಕ್ಕೆ ಒಂದು ನಿರ್ದಿಷ್ಟವಾದ ಹೆಸರು ಯಾವುದು ಎನ್ನುವುದರ ಪರಿಕಲ್ಪನೆ ನಮ್ಮ ಪೀಳಿಗೆಗೆ ಬಾರದೆ ಹೋಗುವುದರಿಂದ, ದೊಡ್ಡವರು ತೀರ್ಮಾನ ಮಾಡಿ ಯಾವುದಾದರೂ ಒಂದು ನಿರ್ದಿಷ್ಟ ಪದವನ್ನು ಸರ್ವತ್ರ ಬಳಸುವ ಪ್ರಯತ್ನ ಮಾಡಬೇಕಾಗುತ್ತದೆ. ನಾವು ಆಳವಾಗಿ ಇಳಿದು ವಿಚಾರ ಮಾಡಿದರೆ, ವೀರಶೈವ ಎನ್ನುವುದು ಶಿವಾಗಮಗಳಲ್ಲಿ ಬರುವ ನಮ್ಮ ಧರ್ಮ (ಮತ)ದ ವಾಚಕ.

ಶರಣರು ವೇದಾಗಮ ವಿರೋಧಿಗಳಲ್ಲ

ಇಲ್ಲಿ ಒಂದು ಪ್ರಶ್ನೆ ಬಂತು. "ವೀರಶೈವ" ಅಥವಾ "ಲಿಂಗಾಯತ", ಈ ಶಬ್ದಗಳ ಬಗ್ಗೆ ವಾದ-ವಿವಾದ ಬೇಕಿಲ್ಲ; ನಮಗೆ ಬೇಕಾಗಿರುವುದು ಲಿಂಗಾಯತರಲ್ಲಿ ಐಕ್ಯತೆ. ಬಸವಣ್ಣನವರು ವೀರಶೈವ ಧರ್ಮವನ್ನೇ ಒಪ್ಪಿದ್ದಿದ್ದರೆ ತಮ್ಮ ವಚನಗಳಲ್ಲಿ ವೇದಗಳನ್ನೇಕೆ ಕಟುವಾಗಿ ಟೀಕಿಸುತ್ತಿದ್ದರು? ಶರಣರು ವೇದ, ಉಪನಿಷತ್ತು, ಶಾಸ್ತ್ರಗಳನ್ನು ತಿರಸ್ಕರಿಸಿ, ಸ್ವಾನುಭಾವ ಪ್ರಮಾಣದ ಸ್ವತಂತ್ರ ಧರ್ಮ ಲಿಂಗಾಯತ ಧರ್ಮ ಎಂದು ಹೇಳಿದರು, ಎಂದು ಒಬ್ಬರು ಆಕ್ಷೇಪಿಸಿರು. ಅದನ್ನೀಗ ವಿಚಾರ ಮಾಡೋಣ. ನಮ್ಮ ಸಾನ್ನಿಧ್ಯದಲ್ಲಿಯೇ "ವೇದಾಗಮಗಳು ಮತ್ತು ಶಿವಶರಣರು" ಎಂಬ ವಿಷಯದ ಮೇಲೆ ಎರಡು ಸಾರಿ ವಿಚಾರಸಂಕಿರಣಗಳು ನಡೆದು, ಕನ್ನಡ ಮತ್ತು ಸಂಸ್ಕೃತ ವಿದ್ವಾಂಸರುಗಳಿಂದ ಚರ್ಚೆ ಆಗಿದೆ. ಎಲ್ಲಿಯೂ ಕೂಡ ಶರಣರು ವೇದವನ್ನಾಗಲಿ, ಆಗಮವನ್ನಾಗಲಿ, ಉಪನಿಷತ್ತನ್ನಾಗಲಿ, ಶಾಸ್ತ್ರವನ್ನಾಗಲಿ ತಿರಸ್ಕರಿಸಿಲ್ಲ. ಆ ಎಲ್ಲಾ ಶರಣರ ವಚನಗಳೇ ಸಾಕ್ಷಿ. ವಚನಗಳನ್ನು ಬರೆಯುವಾಗ ಆ ವಚನಗಳ ವಿಷಯವನ್ನು ಸ್ಥಿರಗೊಳಿಸುವುದಕ್ಕಾಗಿ "ಸಾಕ್ಷಿ" ಎಂದು ಮೇಲೆ ಬರೆದು, ಆಗಮದ ಅಥವಾ ಉಪನಿಷತ್ತಿನ ವಾಕ್ಯಗಳನ್ನು ಉಲ್ಲೇಖಿಸಿದ್ದಾರೆ ಎಂಬುದಕ್ಕೆ ವಿಚಾರ ಸಂಕಿರಣಗಳಲ್ಲಿ ಸಾಕಷ್ಟು ವಿಚಾರ ಮಂಡನೆಯಾಗಿದೆ. ಆ ವಿಚಾರ ಮಂಡನೆಯು ಎರಡು ಪುಸ್ತಕಗಳ ರೂಪದಲ್ಲಿಯೂ ಪ್ರಕಟವಾಗಿದೆ.

ಬಸವಣ್ಣ ಮುಂತಾದ ಶರಣರು ವೇದಾಗಮಾದಿಗಳನ್ನು ತಿರಸ್ಕರಿಸಿದ್ದಾರೆ ಎಂದು ಹೇಳುವವರಿಗೆ ಈ ಬಗ್ಗೆ ಅರಿವಿಲ್ಲ. ಒಂದು ವಚನವನ್ನು ಅರ್ಥೈಸಬೇಕಾದರೆ, ಅನೇಕ ನಿಯಾಮಕಗಳು ಉಂಟು. ಯಾವ ಪ್ರಕರಣದಲ್ಲಿ (ಹಿನ್ನೆಲೆಯಲ್ಲಿ), ಯಾವ ಸಂದರ್ಭದಲ್ಲಿ ಆ ವಚನವನ್ನು ಬಳಸಿದ್ದಾರೆ ಎಂಬುದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಉದಾಹರಣೆಗೆ ನಮಗೆ ಆಗದವನು ನಮ್ಮ ಕಪಾಳಕ್ಕೆ ಎರಡು ಕೊಡುತ್ತಾನೆ. ಏಕೆ? ಅವನ ಹಿನ್ನೆಲೆ ಏನು? ದ್ವೇಷ, ಅಸೂಯೆ ತಾನೆ? ನಾವು ನಮ್ಮ ಮಕ್ಕಳಿಗೆ ಎರಡು ಕೊಡುತ್ತೇವೆ. ಅಲ್ಲಿ ಯಾವ ಭಾವ ಇದೆ? ಕ್ರಿಯೆಯ ಹಿಂದೆ, ಮಾತಿನ ಹಿಂದೆ ಯಾವ ಭಾವ ಇದೆಯೋ ಅದು ಬಹಳ ಮುಖ್ಯ. ಹಾಗೆಯೇ ಸಂದರ್ಭ ಇದೆಯಲ್ಲಾ ಅದು ಮುಖ್ಯ. ಯಾವ ಸಂದರ್ಭದಲ್ಲಿ ಬಸವಣ್ಣನವರು ಆ ವಚನ ಹೇಳಿದರು ಎಂದು ವಿಚಾರ ಮಾಡಬೇಕಾಗುತ್ತದೆ. ಬಸವಣ್ಣನವರು ವೇದದಲ್ಲಿರುವ ಯಾವ ಯಜ್ಞಯಾಗಾದಿಗಳ ಕರ್ಮ ಭಾಗ ಬರುತ್ತವೆಯೋ, ಅದರ ಬಗ್ಗೆ ಮೀಮಾಂಸೆ ಬರುತ್ತದೋ, ಅದರ ಬಗ್ಗೆ ಟೀಕೆ ಮಾಡಿದ್ದಾರೆಯೇ ಹೊರತು ವೇದದಲ್ಲಿನ ಜ್ಞಾನಕಾಂಡ ಏನಿದೆ, ವೇದದಲ್ಲಿ ಉಪಕಾರವಾದಂತಹ ಉಪನಿಷತ್ತುಗಳ ವಿಷಯ ಏನಿದೆ, ಸಮಾಜ ಚಿಂತನೆಯ ವಿಷಯಗಳು ಯಾವುವು ಬರುತ್ತವೆಯೋ, ಅವುಗಳ ಬಗ್ಗೆ ಎಲ್ಲಿಯೂ ಟೀಕೆ ಮಾಡಿಲ್ಲ. ಮತ್ತೆ ಶಬ್ದಾರ್ಥದಲ್ಲಿ ವ್ಯತ್ಯಾಸವಿದೆ. "ವೇದಕ್ಕೆ ಒರೆಯ ಕಟ್ಟುವೆ" ಅಂದರೆ ಚಿನ್ನವನ್ನು ಹೇಗೆ ಒರೆಗೆ ಉಜ್ಜಿ ನೋಡುತ್ತೇವೋ ಹಾಗೆ ವೇದವನ್ನು ಉಜ್ಜಿ ನೋಡ್ತೀನಿ, ವೇದದಲ್ಲಿ ಸಮಾಜಕ್ಕೆ ಅನುಪಯುಕ್ತವಾದ ಯಜ್ಞ-ಯಾಗಾದಿ ಹಿಂಸಾ ಪ್ರಧಾನ ಕರ್ಮಗಳು ಏನುಂಟು ಅದನ್ನು ಒರೆಹಚ್ಚಿ ತಿರಸ್ಕರಿಸುವೆ, ಜ್ಞಾನದ ಬೆಳಕನ್ನು ಒರೆಹಚ್ಚಿ ಪುಟಗೊಳಿಸಿ ಆ ವೇದದ ಜ್ಞಾನಾಂಶಗಳನ್ನು ನಾನು ವಚನಗಳ ಮೂಲಕ ಸಾಕ್ಷಿ ಕೊಟ್ಟು ನುಡಿಯುತ್ತೇನೆ, ಎಂದು ಬಸವಣ್ಣನವರು ಹೇಳಿದರೇ ಹೊರತು ಸಾರಾಸಗಟಾಗಿ ವೇದಾಗಮಗಳನ್ನು ಟೀಕಿಸಿಲ್ಲ. ಆದ್ದರಿಂದ ವಚನಗಳನ್ನು ಅರ್ಥ ಮಾಡಿಕೊಳ್ಳುವಾಗ ಅವುಗಳ ಹಿನ್ನೆಲೆ, ಮುನ್ನೆಲೆ, ಪ್ರಕರಣ (ಸಂದರ್ಭ)ಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ವಿಚಾರ ಮಾಡಿದರೆ ಅವುಗಳ ಅಂತರಂಗದ ದರ್ಶನವಾಗುತ್ತದೆ. ಅವುಗಳ ಹೂರಣ ನಮಗೆ ದಕ್ಕುತ್ತದೆ.

ವೇದಾಗಮಗಳು ಮತ್ತು ಶಿವಶರಣರು ಅನ್ನುವ ವಿಚಾರ ಸಂಕಿರಣ ಎರಡು ಕಡೆ ನಡೆಯಿತು. ಅದರ ಮುಖ್ಯ ಉದ್ದೇಶ ಏನಾಗಿತ್ತೂಂದ್ರೆ, ಸಾಮಾನ್ಯವಾಗಿ ಶಿವಶರಣರು ವೇದಾದಿಗಳ ವಿರೋಧಿಗಳು ಎಂಬ ವಿಚಾರ ಬಹಳ ವಿದ್ವಾಂಸರ ಮನಸ್ಸಿನಲ್ಲಿ ಇದ್ದದ್ದನ್ನು ನಾವು ಕಾಣುತ್ತೇವೆ. ಆದರೆ ಶಿವಶರಣರೇ ತಮ್ಮ ವಚನಗಳಲ್ಲಿ ಅಲ್ಲಲ್ಲಿ ಪ್ರಮಾಣರೂಪವಾಗಿ ವೇದ, ಆಗಮ, ಉಪನಿಷತ್ತು ಮುಂತಾದ ಸಂಸ್ಕೃತ ಸಾಹಿತ್ಯದ ಉಲ್ಲೇಖಗಳನ್ನು ಬಳಸಿರುವುದನ್ನೇ ಆಧಾರವಾಗಿಟ್ಟುಕೊಂಡು ವಿದ್ವಾಂಸರು ಪ್ರಬಂಧಗಳನ್ನು ಮಂಡಿಸಿದರು. ವಚನಗಳಿಂದ ಆರಂಭಿಸಿ ವೇದಗಳವರೆಗೆ ಹೋಗಿ ಮುಟ್ಟುವಂಥ ಕಾರ್ಯ ಎಂಥ ಕಾರ್ಯಾಂತ ಕೇಳಿದರೆ ಗಂಗಾನದಿ ಸಮುದ್ರ ಸೇರುವೆಡೆಯಿಂದ ಹಿಡಿದು ಗಂಗೋತ್ರಿಯ ಕಡೆಗೆ ಹೋಗುವಂಥಾದ್ದು. ಸಾಮಾನ್ಯವಾಗಿ ಗಂಗೋತ್ರಿಯಿಂದ ಗಂಗಾನದಿ ಹರಿತಾ ಹರಿತಾ ಸಾಗರವನ್ನ ಸೇರ್ತಾ ಇರುತ್ತೆ. ಇದೊಂದು ಸರಳವಾಗಿರುವಂಥ ಪ್ರವಾಹ. ಯಾರಾದರೂ ಗಂಗಾ ನದಿಯಲ್ಲಿ ಬಿದ್ರೆ ಅವರು ಏನು ಮಾಡದಿದ್ರೂನು ಕೂಡ ಅವರನ್ನು ಅದು ತಾನೆ ಸಾಗರದವರೆಗೆ ತೆಗೆದುಕೊಂಡು ಹೋಗ್ತದೆ. ಆದರೆ ವಚನಗಳಿಂದ ಹಿಡಿದು

ವೇದಾಗಮಗಳವರೆಗೆ ಹೋಗುವಂಥ ಪ್ರಯಾಣ ಅಂದ್ರೆ ಈ ಗಂಗಾನದಿಯು ಸಾಗರವನ್ನು ಸೇರುವಲ್ಲಿಂದ ಗಂಗೋತ್ರಿವರೆಗೆ ಹೋಗುವಂಥ ಉಲ್ಟಾ ಪ್ರಯಾಣದ ಹಾಗೆ. ಅಂದ್ರೆ ವಚನಗಳಿಂದ ಹಿಡಿದು ವಚನಗಳಲ್ಲಿ ಬಂದಿರುವಂಥ ಸಂಸ್ಕೃತೋಕ್ತಿಗಳ ಮೂಲ ಎಲ್ಲಿ ಅನ್ನುವುದನ್ನು ಹುಡುಕಿಕೊಂಡು ಹೋದಾಗ ವೇದಾಗಮಗಳಿಗೂ ವಚನಗಳಿಗೂ ಯಾವುದೇ ವಿರೋಧ ಇಲ್ಲ ಎನ್ನುವುದು ಗೊತ್ತಾಗುತ್ತದೆ. ನಾವು ಮಾಡವಂಥ ಕಾರ್ಯ ಯಾವಾಗಲೂ ಕೂಡ ಜೋಡಿಸುವಂಥ ಕಾರ್ಯವಾಗಿರಬೇಕೇ ಹೊರತಾಗಿ ಒಡಕುಂಟು ಮಾಡುವಂಥ ಕಾರ್ಯವಾಗಿರಬಾರದು. ಅದಕ್ಕೆ ಒಂದು ಉದಾಹರಣೆಗೆ. ಒಬ್ಬ ಬಟ್ಟೆ ಹೊಲಿಯುವಂಥ ವ್ಯಕ್ತಿ ಬಳಿ ಒಂದು ಸಣ್ಣ ಸೂಜಿ ಇರುತ್ತದೆ. ಅವನಲ್ಲಿ ಒಂದು ಕತ್ತರಿ ಕೂಡ ಇರ್ತದೆ. ನೋಡ್ಲಿಕ್ಕೆ ಕತ್ತರಿ ಬಹಳ ದೊಡ್ಡದು ಸೂಜಿ ಬಹಳ ಚಿಕ್ಕದಾಗಿರ್ತದೆ. ಹಿಂದಿನ ಕಾಲದಲ್ಲಿ ಬಟ್ಟೆ ಹೊಲಿಯಂತವರು ರಟ್ಟಿನ ಟೊಪ್ಪಿಗೆ ಹಾಕಿಕೊಳ್ಳುತ್ತಿದ್ದರು. (ಈಗ ಟೊಪ್ಪಿಗೇನೆ ಹೋಯ್ತು). ಅವರು ಹೊಲೀತಾ ಹೊಲೀತಾ ಕೆಲಸ ಮುಗೀತು ಅಂದ್ರೆ ಸೂಜಿಯನ್ನ ಟೊಪ್ಪಿಗೆಯಲ್ಲಿ ಸಿಕ್ಕಿಸುತ್ತಾರೆ. ಆದರೆ ಕತ್ತರಿಯನ್ನು ಟೇಬಲ್ ಮೇಲೋ ಡ್ರಾದೊಳಗೋ ಇಟ್ಟು ಬಿಡ್ತಿದ್ರು. ಇದಕ್ಕೇನು ಕಾರಣ ಅಂದೆ ಕತ್ತರಿ ಎರಡು ಮೂರು ತುಕಡಿ ಮಾಡ್ತದೆ. ಅದಕ್ಕೆ ಅದನ್ನು ಟೇಬಲ್ ಮೇಲೆ ಒಗೆದು ಬಿಡ್ತಾನೆ. ಸೂಜಿ ತುಕಡಿಗಳನ್ನ ಜೋಡಿಸ್ತದೇಂತ ತಿಳ್ಕೊಂಡು ಅದನ್ನ ತಲೆಮೇಲೆ ಇಟ್ಟುಕೊಂತಾನೆ. ಹೀಗೆ ಯಾರು ಜೋಡಿಸುವಂಥ ಕೆಲಸ ಮಾಡ್ತಾರೋ ಅವರು ಲೋಕ ಪೂಜ್ಯರಾಗ್ತಾರೆ. ಯಾರು ಒಡೆಯುವಂಥ ಕೆಲಸ ಮಾಡ್ತಾರೊ ಅವರು ಲೋಕದಲ್ಲಿ ತಿರಸ್ಕೃತರಾಗ್ತಾರೆ.

ವೀರಶೈವ ಬತ್ತವಲ್ಲ, ಅಕ್ಕಿಯೇ

ಈ ಸಂದರ್ಭದಲ್ಲಿ ಎಚ್.ಎನ್. ಸ್ವಾಮಿ ಅವರು ಒಂದು ಪ್ರಶ್ನೆ ಕೇಳಿದರು. ವೀರಶೈವಧರ್ಮ ಭತ್ತದ ಕಾಳು, ಲಿಂಗಾಯತಧರ್ಮ ಅಕ್ಕಿಕಾಳು ಇದ್ದ ಹಾಗೆ. ಆದ್ದರಿಂದ ಸುಸಂಸ್ಕಾರಗೊಂಡ ಧರ್ಮ ಲಿಂಗಾಯತ ಧರ್ಮ ಎಂದು ಅವರು ಹೇಳಿದರು. ಇದು ಸ್ವಾಮಿಯವರ ಅಭಿಪ್ರಾಯ. ನಮ್ಮ ಅಭಿಪ್ರಾಯವಂತೂ ಅಲ್ಲ. ಆಗಮಗಳಲ್ಲಿಯೇನೇ ವೀರಶೈವದ ನಿಷ್ಕೃಷ್ಟವಾದ ಸ್ವರೂಪವನ್ನು ಕಾಣುತ್ತೇವೆ. ಅಲ್ಲಿ ಬರುವ ಅಷ್ಟಾವರಣಗಳಾಗಲಿ, ಪಂಚಾಚಾರಗಳಾಗಲಿ, ಷಟ್‌ಸ್ಥಲಗಳಾಗಲಿ, ಎಲ್ಲಾ ವಿಷಯಗಳು ಅಕ್ಕಿ ಕಾಳು ಇದ್ದ ಹಾಗೆ, ಭತ್ತ ಇದ್ದ ಹಾಗೆ ಅಲ್ಲ, ಸ್ವಾಮಿಯವರು ಹೇಳಿದ್ದು ಅತಿ ಜಾಣತನದ ಮಾತು. ಅದು ಸತ್ಯವಲ್ಲ, ಆಗ ಶಿವಾಗಮಗಳ ಉತ್ತರಭಾಗದಲ್ಲಿ ಆಗಲೇ ವೀರಶೈವ ಧರ್ಮ ಸಾಕಷ್ಟು ಸಂಸ್ಕರಿಸಲ್ಪಟ್ಟಿತ್ತು ಸಾಕಷ್ಟು ಪರಿಷ್ಕಾರ ಮಾಡಲ್ಪಟ್ಟಿತ್ತು. ಶಿವಾಗಮಯುಗ ವಚನಯುಗದಲ್ಲಿ ಆವರ್ತನಗೊಂಡಿದೆ. ಶರಣರು ಅನುಭವ ಪೂರ್ವಕವಾಗಿ ಜನಸಾಮಾನ್ಯರಿಗೆ ಮುಟ್ಟುವ ಹಾಗೆ ಹೇಳಿದ್ದಾರೆ. ಆದರ ಮೇಲೆ ಸಾಧನೆ ಮಾಡಿ ಒಳ ಬೆಳಕನ್ನು ಕಂಡು ಅದನ್ನು ಸಮಾಜಕ್ಕೆ ಕೊಟ್ಟಂಥ ಶರಣರ ಮಹಾನ್ ಕೊಡುಗೆಯ ಬಗ್ಗೆ ಎಳ್ಳಷ್ಟು ಅನುಮಾನ ಯಾರಿಗೂ ಇಲ್ಲ. ಆದರೆ ವಚನಕಾರರು ವೀರಶೈವನನ್ನು ಪರಿಷ್ಕಾರ ಮಾಡಿದರು ಅನ್ನುವ ಹಿರಿಯ ಮಿತ್ರರ ಅಭಿಪ್ರಾಯ ಸರಿಯಲ್ಲ. ಆಗಮ ಮತ್ತು ವಚನ ಇವೆರಡನ್ನು ಶಾಸ್ತ್ರದ ಸೃಷ್ಟಿಯಿಂದ ಅಧ್ಯಯನ ಮಾಡಿದ ಪ್ರತಿಯೊಬ್ಬರು ಈ ಭೇದವನ್ನಲ್ಲಿ ಸರ್ವಥಾ ಕಾಣಲಾರರು.

ವೀರಶೈವರು ಗುಡಿಗಳಿಗೆ ಹೋಗಬಹುದೇ?

ಮತ್ತೊಂದು ಪ್ರಶ್ನೆ: ಲಿಂಗವಂತನು ತನ್ನ ಲಿಂಗ ಪೂಜೆ ಮಾಡಿದ ನಂತರ ಊರಲ್ಲಿಯ ಗುಡಿಗಳಿಗೆ ಪೂಜಿಸಲ್ಲಿಸುವುದು ಸರಿಯೆ? ಮತ್ತು ಊರ ತುಂಬ ಗುಡಿಗಳಿದ್ದರ (ಇವೆ) ಯಾವುದೋ ಕಾರ್ಯ ನಿಮಿತ್ತ ಊರಿಲ್ಲಿ ಹೋಗುತ್ತಿರುವಾಗ ಆ ಗುಡಿಗಳು ಕಂಡಲ್ಲಿ ನಿಂತು ಕಣ್ಮುಚ್ಚಿ ನಮಸ್ಕರಿಸುತ್ತಾ ಮತ್ತೊಬ್ಬರಿಗೆ ತೊಂದರೆ ಪಡಿಸುವುದು ಸರಿಯೇ? ಮತ್ತೊಬ್ಬರಿಗೆ ತೊಂದರೆಯಾಗಲ್ಲ. ಪೂಜೆಯಲ್ಲಿ ಪರಾರ್ಥ ಪೂಜೆ, ಸ್ವಾರ್ಥ ಪೂಜೆ ಅಂತ ಎರಡಿವೆ. ಸ್ವಾರ್ಥಪೂಜೆ ಎಂದರೆ ತನ್ನ ಇಷ್ಟಲಿಂಗವನ್ನು ತಾನು ಪೂಜಿಸಿಕೊಳ್ಳುವುದು. ಪರಾರ್ಥ ಪೂಜೆಗಾಗಿಯೇನೆ ದೇವಾಲಯಗಳ ನಿರ್ಮಾಣವಾಯಿತು. ಅಲ್ಲಿ ಲಿಂಗವಂತನು ಹೋಗಿ ಔಪಚಾರಿಕ ಪೂಜೆಯನ್ನು ಮಾಡಬಹುದು. ಇದು ಆಗಮಗಳಲ್ಲಿ ವಿಹಿತವಾಗಿದೆ. ಶೈವ ಕ್ಷೇತ್ರಗಳಿಗೆ ಶಿವಾಲಯಗಳಿಗೆ ಲಿಂಗವಂತನು ಹೋಗಿ ಜಾಗೃತ ಭೂಮಿಯಲ್ಲಿ ಬೇಕಾದರೆ ತನ್ನ ಇಷ್ಟಲಿಂಗವನ್ನು ಪೂಜಿಸಿಕೊಂಡು ಆ ಶಿವಲಿಂಗಕ್ಕೆ ಔಪಾಚಾರಿಕ ಪೂಜೆಯನ್ನು ಮಾಡಬಹುದು. ಅದು ಸರ್ವ ಶಾಸ್ತ್ರಸಮ್ಮತ ಅಂತ ಹೇಳಿ ಆಗಮಗಳಲ್ಲಿ ಸ್ಪಷ್ಟವಾಗಿ ಹೇಳಿದೆ. ಅದ್ದರಿಂದ ತನ್ನ ಇಷ್ಟಲಿಂಗವನ್ನು ಪೂಜೆಮಾಡಿಕೊಂಡು ಊರ ಶಿವಾಲಯಗಳಿಗೆ, ಅನ್ಯದೇವಾಲಯಗಳಿಗೆ ಹೋಗಿ ಅಲ್ಲಿ ಆ ಶಿವಲಿಂಗಾದಿಗಳಿಗೆ ಔಪಾಚಾರಿಕ ಪೂಜೆಯನ್ನು ಮಾಡಬಹುದು. ಆದರಿಂದ ಅವನ ಧಾರ್ಮಿಕ ಪ್ರಖರತೆಗೆ ಕುಂದೇನೂ ಬರುವುದಿಲ್ಲ.

ವೀರಶೈವರಲ್ಲಿ ನಿರಾಭಾರಿ ವೀರಶೈವ, ನಿರ್ವಾಣ ವೀರಶೈವ ಅಂತ ಇರ್ತಾರೆ. ಅವರು ಮಾತ್ರ ಗುಡಿ ಗುಂಡಾರಗಳಿಗೆ ಹೋಗುವಂತಿಲ್ಲ. ಇದು ಆಗಮಗಳಲ್ಲಿಯೂ ಇದೆ. ನಿರ್ವಾಣ ವೀರಶೈವರಾಗಲಿ, ನಿರಾಭಾರ ವೀರಶೈವನಾಗಲಿ, ವಿಶೇಷ ವೀರಶೈವರಾಗಲಿ ಖಂಡಿತ ತಾವು ಹೇಳಿದ ಹಾಗೆ ಯಾವ ಗುಡಿಗುಂಡಾರಗಳಿಗೂ ಹೋಗ ಕೂಡದು. ಆದರೆ ಶ್ರದ್ಧಾ ಭಕ್ತಿಯುಕ್ತ ಭಕ್ತ ಸ್ಥಲದಲ್ಲಿರುವ ಸಾಮಾನ್ಯ ವೀರಶೈವನು ಶಿವಾಲಯಗಳಿಗೆ ಹೋಗಿ ಔಪಚಾರಿಕ ಪೂಜೆ ಮಾಡುವುದು ಏನೂ ತಪ್ಪಿಲ್ಲ. ನಾವೆಲ್ಲರೂ ಆತ್ಮಲಿಂಗಿಗಳಾಗಿ ಅವಧೂತಾವಸ್ಥೆಯನ್ನು ಏರಿದ ಜಂಗಮ ಸ್ಥಲದಲ್ಲಿರುವವರಾದಾಗ ಗುಡಿಗಳೂ ಬೇಡ ಗುಂಡಾರಗಳೂ ಬೇಡ. ಅಲ್ಲಿಯ ತನಕ ಸಾಮಾನ್ಯ ವೀರಶೈವನಿಗೆ ಅವೆಲ್ಲಾ ಬೇಕೇ ಬೇಕು.

ದೇವಾಲಯಗಳಿಗೆ ಹೋಗುವುದು ತಪ್ಪು ಅನ್ನುವುದಾದರೆ ಬಸವಣ್ಣನವರು ಕೂಡಲಸಂಗಮ ದೇವಾಲಯಕ್ಕೆ ಯಾಕೆ ಹೋದರು? ಅಕ್ಕಮಹಾದೇವಿ ಶ್ರೀ ಶೈಲ ದೇವಸ್ಥಾನಕ್ಕಾಗಲಿ, ಅಲ್ಲಮ ಪ್ರಭುದೇವರು ಮಧುಕೇಶ್ವರ ದೇವಸ್ಥಾನಕ್ಕಾಗಲಿ ಯಾಕೆ ಹೋದರು?

ಬಸವಾದಿ ಶರಣರು ಹೇಳಿರುವಂತಹ ಏಕದೇವೋಪಾಸನೆ ಅದು ವೀರಶೈವರಿಗೆ ಎಲ್ಲರಿಗೂ ಮಾನ್ಯವೆ. ಅದರಲ್ಲಿ ಎರಡು ಮಾತೇ ಇಲ್ಲ. ಏಕದೇವೋಪಾಸನೆ ಎಂಬುದರ ಅರ್ಥ ಇನ್ನೊಂದು ದೇವರ ಅವಹೇಳನೆ ಎಂದು ಯಾರೂ ಭಾವಿಸಿಕೊಳ್ಳಬಾರದು. ಪರಿವಾರದೊಳಗೆ ಒಬ್ಬ ಹೆಣ್ಣು ಮಗಳ ಬದುಕಿರ್ತಾಳೆ. ಅನೇಕ ರೀತಿಯಾದಂಥ ಸಂಬಂಧಗಳು ಆಕೆಗೆ ಇರ್ತವೆ. ಪತಿ ಜೊತೆಗೂ ಬದುಕುತ್ತಾಳೆ. ಪತಿಯ ತಂದೆ (ಮಾವ) ಜೊತೆಗೂ ಬದುಕುತ್ತಾಳೆ. ಆದರೆ ಸಾಮರಸದ ಪ್ರಶ್ನೆ ಬಂದಾಗ ಪತಿಯ ಜೊತೆ ಮಾತ್ರ

ಸಾಮರಸ್ಯವೇ ಹೊರತು ಬೇರೆ ಯಾವ ವ್ಯಕ್ತಿಯ ಜೊತೆಗೆ ಆಗಲಿ ಅಲ್ಲ. ಹಾಗೆ ಏಕದೇವೋಪಾಸನೆ ಅಂದರೆ ಸಾಮರಸ್ಯದ ಪ್ರಶ್ನೆ ಬಂದಾಗ ಇಷ್ಟಲಿಂಗದ ಜೊತೆಗೆ ಮಾತ್ರ ಸಾಮರಸ್ಯ ಉಳಿದ ಹಿಂದೂ ಸಂಸ್ಕೃತಿಯ ದೇವತೆಗಳನ್ನು ಗೌರವ ಭಾವನೆಯಿಂದ ಕಾಣಬೇಕೇ ಹೊರತು ಅವಹೇಳನೆಯಿಂದಲ್ಲ. ಶ್ರೀ ಸಿದ್ಧಾಂತ ಶಿಖಾಮಣಿಯ ಭಕ್ತಸ್ಥಲದಲ್ಲಿ ಭಕ್ತಮಾರ್ಗ ಕ್ರಿಯಾಸ್ಥಲ ಒಂದುಸ್ಥಲ. ಆ ಭಕ್ತ ಮಾರ್ಗಕ್ರಿಯಾಸ್ಥಲದಲ್ಲಿ ಇಷ್ಟಲಿಂಗವನ್ನು, ಅಂದರೆ ದೀಕ್ಷಾ ಸಂಸ್ಕಾರವನ್ನು ಪಡೆದಿರುವಂತ ವ್ಯಕ್ತಿ ಕೆಲವೊಂದು ಆಚಾರ ಸಂಹಿತೆಯನ್ನು ಅನುಸರಿಸಬೇಕು ಎಂದು ಹೇಳಿದೆ.

ಚುನಾವಣೆ ಬಂದ ಕೂಡಲೆ ಆಚಾರ ಸಂಹಿತಾಂತ ಇರುತ್ತೆ. ಅದನ್ನು ಪ್ರತಿಯೊಬ್ಬರು ಪರಿಪಾಲನೆ ಮಾಡಬೇಕಲ್ಲ. ದೀಕ್ಷೆಗಿಂತ ಪೂರ್ವದಲ್ಲಿ ಹೇಗಾದರೂ ಇರಬಹುದು. ಆದರೆ ಗುರುಗಳಿಂದ ವಿಧಿವತ್ತಾಗಿ ದೀಕ್ಷಾ ಸಂಸ್ಕಾರವನ್ನು ಪಡೆದುಕೊಂಡ ಭಕ್ತನು ಆಚಾರ ಸಂಹಿತೆಯನ್ನು ಅನುಸರಿಸಬೇಕು. ಆಚಾರ ವಿಚಾರ ಯಾವ ರೀತಿ ಇರಬೇಕು ಎಂಬುದರ ಸ್ಪಷ್ಟವಾದ ನಿರ್ದೇಶನವನ್ನು ನಾವು ಶ್ರೀ ಸಿದ್ಧಾಂತ ಶಿಖಾಮಣಿಯ ಭಕ್ತಮಾರ್ಗ ಕ್ರಿಯಾಸ್ಥಲದಲ್ಲಿ ಕಾಣ್ತೇವೆ. ಅದರಲ್ಲಿ ಏನು ಹೇಳ್ತಾರೆ ಎಂದು ತಿಳಿದುಕೊಳ್ಳಿ. ಇಷ್ಟಲಿಂಗವನ್ನ ಪೂಜೆಮಾಡುವಂಥ ವೀರಶೈವಭಕ್ತ ಬೇರೆ ಯಾವ ದೇವರ ಪೂಜೆಯನ್ನು ಕೂಡ ಮಾಡಬಾರದು. ಇಷ್ಟೆ ಅಲ್ಲ ಬೇರೆ ದೇವರಿಗೆ ತೋರಿಸುವಂತ ನೈವೇದ್ಯಾದಿಗಳನ್ನು ಕೂಡ ಭಕ್ಷಣ ಮಾಡಬಾರದು ಅನ್ನುವ ಸ್ಪಷ್ಟವಾದ ನಿರ್ದೇಶನ ಅಲ್ಲಿದೆ. ಆದರೆ ನಿಷ್ಠೆ ಅನ್ನುವಂಥದ್ದು ಪ್ರತಿಯೊಬ್ಬರಿಗೂ ಬರಲೇಬೇಕು ಅವಾಗ ನಾವು ನಿಜವಾದ ವೀರಶೈವರಂತ ಕರೆಸಿಕೊಳ್ಳಲು ಅರ್ಹರಾಗುತ್ತೇವೆ. ಆದರೆ ಇವತ್ತು ಸಮಾಜದಲ್ಲಿ ಬದುಕುವಂಥ ಪ್ರಸಂಗ ಬಂದಾಗ ವೀರಶೈವನಿಗೆ ಇಷ್ಟಲಿಂಗಪೂಜೆ ಅಂದರೆ ವ್ಯಕ್ತಿಗತ; ಇಷ್ಟಲಿಂಗ ವ್ಯಕ್ತಿಗತ ಸಾಧನೆ ಮಾಡಲಿಕ್ಕೆ ಕೊಟ್ಟಿರುವಂಥ ಆತ್ಮದ ಕುರುಹು. ನಮ್ಮದೇ ಆದಂಥ ಆತ್ಮದ ಕುರುಹನ್ನೇ ಗುರು ಇಷ್ಟಲಿಂಗಾಂತ ನಮ್ಮ ಕೈಯಲ್ಲಿ ಕೊಟ್ಟಿದ್ದಾರೆ. ಆ ಇಷ್ಟಲಿಂಗ ಪೂಜೆ ಮಾಡುವ ಸಂದರ್ಭದಲ್ಲಿ ಮತ್ತೊಬ್ಬರು ಭವಿಗಳು ಯಾರೂ ನೋಡಬಾರದು. ಆ ರೀತಿಯಾಗಿ ಏಕಾಂತದಲ್ಲಿ ಕುಳಿತುಕೊಂಡು ಅದನ್ನ ಪೂಜೆ ಮಾಡಬೇಕು ಅನ್ನುವಂಥ ಮಾತು ಹೇಳ್ತಾರೆ.

ಹೀಗೆ ವ್ಯಕ್ತಿಗತವಾಗಿರುವಂಥ ವ್ಯಷ್ಟಿ ಸಾಧನೆ ಮಾಡುವಂಥ ವ್ಯಕ್ತಿ ಸಮಾಜದಲ್ಲಿ ಬದುಕ ಬೇಕಾಗುತ್ತೆ. ನಮ್ಮ ಬದುಕಿಗೆ ಧರ್ಮ, ತತ್ವಜ್ಞಾನಗಳು ಎಷ್ಟು ಮುಖ್ಯವೋ ಬಾಹ್ಯವಾಗಿರುವಂತ ವ್ಯವಹಾರಿಕ ಬದುಕು ಅಷ್ಟೇ ಮುಖ್ಯವಾಗಿರುವಂತಹದು. ಒಂದು ವೇಳೆ ನಾವು ಈ ಒಂದು ನಿಷ್ಠೆಯನ್ನು ಇಟ್ಟುಕೊಂಡು ನಾವು ಬಹಿರಂಗದಲ್ಲಿ ಯಾವುದೇ ದೇವಸ್ಥಾನಕ್ಕೆ ಹೋಗಲಿಲ್ಲವೆಂದರೆ ನಮಗೆ ಸಂಘ ಜೀವನ ಸಂಘಟನಾ ಮಾಡಲಿಕ್ಕೆ ಆಗಲ್ಲ. ಮನುಷ್ಯ ಸಾಮಾಜಿಕ ಜೀವಿಯಾಗಬೇಕಾದರೆ ಎಲ್ಲರೂ ಒತ್ತಟ್ಟೆಯಾಗಿ ಕೂಡಲಿಕ್ಕೆ ಸ್ಥಾನ ಅನ್ನೋದು ಬೇಕಾಗುತ್ತದೆ. ಅದಕ್ಕೆ ಗ್ರಾಮ ದೇವರು ಅಂತ ಮಾಡುತ್ತಾರೆ. ಒಂದು ಮನೆಯ ದೇವರು ಅಂತ ಮಾಡ್ಕೊಂಡಿರ್ತಾರೆ. ಈಗ ಎಷ್ಟೋ ಜನರಿಗೆ ಉಳವಿ ಚೆನ್ನಬಸವೇಶ್ವರ ಮನೆ ದೇವರು ಅಂತ ತಿಳ್ಕೊಂಡು ಜಾತ್ರೆಗೆ ಹೋಗ್ತಾರೆ. ಶ್ರೀ ಶೈಲ ಮನೆ ದೇವರು ಅಂತ ತಿಳ್ಕೊಂಡು ಅಲ್ಲಿ ದೇವಸ್ಥಾನಕ್ಕೆ ಹೋಗ್ತಾರೆ. ಕೂಡಲಸಂಗಮಕ್ಕೆ ಹೋಗ್ತಾರೆ. ಒಂದು ವೇಳೆ ಸಾಮೂಹಿಕವಾಗಿ ಒಂದು ಜಾಗದಲ್ಲಿ ಕೂಡದೇ ಇದ್ದರೆ ಪರಸ್ಪರ ಸುಖ ದುಃಖಗಳನ್ನು ವಿಚಾರಗಳನ್ನು ಹಂಚಿಕೊಳ್ಳಲಾಗದ ದೊಡ್ಡ ಸಮಸ್ಯೆ ಬರುತ್ತದೆ.

ಒಂದು ಧರ್ಮ ಅನ್ನುವಂಥಾದ್ದು ಸಮಾಜೀಕರಣವಾಗಬೇಕೆನ್ನುವ ದೃಷ್ಟಿಯಿಂದ ಲಿಂಗಪೂಜೆ ಮಾಡುವಂತಹವನಾಗಿದ್ರು ಕೂಡ ಶಿವ ದೇವಾಲಯಗಳಿಗೆ ಹೋದರೆ ತಪ್ಪಿಲ್ಲ ಅನ್ನೊ ಮಾತನ್ನು ಅದೇ ಭಕ್ತಿಮಾರ್ಗಕ್ರಿಯಾಸ್ಥಲದಲ್ಲಿ ಹೇಳ್ತಾರೆ. ಶಿವದೇವಾಲಯದೊಳಗೆ ಹೋಗ್ತಾ ಇದ್ದರೆ ಅಥವಾ ಶಿವದೇವಾಲಯಗಳಿಗೆ ಯಾರಾದರೂ ಯಾತ್ರೆಯನ್ನ ಮಾಡ್ತಾ ಇದ್ದರೆ, ಅವರಿಗೆ ಅರವಟ್ಟಿಗೆ ಇಡಬೇಕು, ಅವರಿಗೆ ಅನ್ನ ನೀರನ್ನು ಕೊಡಬೇಕು ಅನ್ನುವ ವಿಚಾರವನ್ನು ಹೇಳಿದ್ದಾರೆ. ಎಷ್ಟೊ ಜನ ಹುಬ್ಬಳ್ಳಿ ಧಾರವಾಡದಿಂದ ಉಳವಿ ಚೆನ್ನಬಸವೇಶ್ವರ ಜಾತ್ರೆಗೆ ಹೋಗ್ತಾ ಇರೋ ಸಂದರ್ಭದಲ್ಲಿ ಅನೇಕ ವೀರಶೈವರು ಆ ಜಾತ್ರೆಗೆ ಹೋಗ್ತಾ ಇದ್ದವರಿಗೆ ಅನ್ನ ಛತ್ರ ಇಟ್ಟು ಅರವಟ್ಟಿಗೆ ಇಟ್ಟು ಉಪಚಾರ ಮಾಡುವಂಥದ್ದನ್ನು ನಾವು ಇವತ್ತು ನೋಡ್ತಾ ಇದ್ದೇವೆ. ಆದರೆ ಇದನ್ನು ಮಾಡುವಂಥದ್ದು ಸರಿಯೋ ತಪ್ಪೋ ಅನ್ನೋ ವಿಚಾರ ಮಾಡಿದಾಗ ಶಾಸ್ತ್ರ ದ ದೃಷ್ಟಿಯಿಂದ ತಪ್ಪು ಅನ್ನುವ ಮಾತನ್ನು ಮೊದಲು ಗಂಟು ಹಾಕ್ಕೋಬೇಕು. ಇನ್ನು ರೂಢಿ ವ್ಯವಹಾರ ದೃಷ್ಟಿಯಿಂದ ನಾವು ಮಾಡುವಂಥದ್ದು ಔಪಚಾರಿಕವಾಗಿ ಮಾಡಬೇಕೇ ಹೊರತಾಗಿ ಅದು ಸಮರಸದ ದೃಷ್ಟಿಯಿಂದಲ್ಲ ಅನ್ನುವ ವಿಚಾರ.

ದೇವರುಗಳು ಶಿವಲಿಂಗಧಾರಿಗಳು

ಈಗ ಎಷ್ಟು ಜನ ದೇವತೆಗಳಿದ್ದಾರಲ್ಲ ಆ ಎಲ್ಲಾ ದೇವರುಗಳು ಕೂಡ ಶಿವಲಿಂಗವನ್ನು ಧರಿಸಿದ್ದಾರೆ. ಶಿವಲಿಂಗವನ್ನು ಅವರು ಪೂಜೆ ಮಾಡಿರುವಂಥ ವಿಚಾರ ಶಾಸ್ತ್ರದಲ್ಲಿ ಕೂಡ ಹೇಳ್ತಾರೆ. ಇವತ್ತು ಅನೇಕ ದೇವಾಲಯಗಳಿಗೆ ಹೋಗಿ ನೋಡಿ. ಪಂಡರಪುರದ ಪಾಂಡುರಂಗನ ದೇವಸ್ಥಾನಕ್ಕೆ ಹೋದರೆ, ಆ ವಿಠಲ ತನ್ನ ಮಸ್ತಕದ ಮೇಲೆ ಕಿರೀಟಾಕಾರದ ಲಿಂಗವನ್ನು ಧರಿಸಿಕೊಂಡಿದ್ದಾನೆ. ಅದಕ್ಕೆ ಶಂಕರಾಚಾರ್ಯರು ಪಾಂಡುರಂಗನ ಸ್ತುತಿ ಮಾಡ್ಬೇಕಾದಾಗ "ಪರಬ್ರಹ್ಮಲಿಂಗಂ ಭಜೇ ಪಾಂಡುರಂಗಂ" ಅನ್ನೋ ಮಾತನ್ನು ಕೂಡ ಹೇಳಿದ್ದಾರೆ.

ಕೊಲ್ಲಾಪುರದ ಮಹಾಲಕ್ಷ್ಮಿ ದೇವಸ್ಥಾನಕ್ಕೆ ಹೋದರೆ ಮಹಾಲಕ್ಷ್ಮಿಯ ಮಸ್ತಕದಲ್ಲಿ ಕೂಡ ಲಿಂಗವನ್ನು ಕಾಣಲಿಕ್ಕೆ ಸಾಧ್ಯವಾಗುತ್ತದೆ. ಬಾರ್ಶಿಯೊಳಗೆ ಭಗವಂತ ವಿಷ್ಣು ದೇವಾಲಯ ಇದೆ. ಆ ಭಗವಂತನ ಮಸ್ತಕದಲ್ಲಿ ಕೂಡ ಲಿಂಗವನ್ನು ಕಾಣಬಹುದು. ಸೊಲ್ಲಾಪುರದ ಸಮೀಪದಲ್ಲಿ ತುಳಜಾಭವಾನಿ ದೇವಸ್ಥಾನವಿದೆ. ಆ ದೇವಿಯ ಮಸ್ತಕದಲ್ಲಿ ಕೂಡ ಲಿಂಗವನ್ನು ಕಾಣಬಹುದು. ಅದಕ್ಕೆ ಸಿದ್ಧಾಂತ ಶಿಖಾಮಣಿಯಲ್ಲಿ ಒಂದು ಮಾತು ಬರ್ತದೆ- "ಬ್ರಹ್ಮವಿಷ್ಣ್ವಾದಯೋ ದೇವಾ ಮುನಯಾ ಗೌತಮಾದಯಃ। ಧಾರಯಂತಿ ಸದಾ ಲಿಂಗಂ ಉತ್ತಮಾಂಗೇ ವಿಶೇಷತಃ।।" ಪ್ರತಿಯೊಬ್ಬ ದೇವಾನು ದೇವತೆಗಳು ಕೂಡ ಶಿವನ ಭಕ್ತರ. ಶಿವ ಸರ್ವಾರಾಧ್ಯನಾಗಿದ್ದಾನೆ. ಎಲ್ಲರೂ ಶಿವಲಿಂಗವನ್ನು ಪೂಜೆಮಾಡಿದರಷ್ಟೆ ಅಲ್ಲ ಅವರೆಲ್ಲ ಮಸ್ತಕದ ಮೇಲೆ ಲಿಂಗವನ್ನು ಧರಿಸಿಕೊಂಡಿದ್ದಾರೆ. ಈಗ ಲಿಂಗಧಾರಿಯಾದಂತ ಒಬ್ಬ ಭಕ್ತ ನಿಮಗೆ ಎದುರಾಗಿ ಬೆಳಗಿನ ಜಾವ ಭೆಟ್ಟಿಯಾದಾಂತ ತಿಳೀರಿ. ಆಗ ನೀವು ಸೆಟಗೊಂಡು ಹಾಗೇ ಹೋಗ್ತಿರೋ ಅಥವಾ ಕೈಮುಗಿದು ನಮಸ್ಕಾರಾಂತ ಹೇಳ್ತೀರೋ. ಪರಸ್ಪರವಾಗಿ ಯಾರೇ ಭೆಟ್ಟಿಯಾದರು ಕೂಡ ಕಂಡ ಭಕ್ತರಿಗೆ ಕೈ ಮುಗಿವಾತನೆ ಭಕ್ತಾಂತ ಬಸವಣ್ಣನವರು ಹೇಳಿದ್ದಾರೆ. ಮತ್ತೆ ಇಷ್ಟಲಿಂಗಕ್ಕಷ್ಟೆ ನಮಸ್ಕಾರ ಮಾಡೋದು ನಿಮಗ್ಯಾಕೆ ನಮಸ್ಕಾರ ಮಾಡ್ಬೇಕು ಅನ್ನು ವಿಚಾರ ನಿಮ್ಮಲ್ಲಿ

ಬಂತೂಂದ್ರೆ ಈ ಶಿಷ್ಟಾಚಾರ ಅನ್ನುವಂಥಾದ್ದು ಎಲ್ಲಿಗೆ ಹೋಗಬೇಕು? ಶಾಸ್ತ್ರ ಸರಿ ಇದೆ. ಲಿಂಗಪೂಜೆ ಬಿಟ್ಟು ಯಾರಿಗೂ ನಮಸ್ಕಾರ ಮಾಡಬಾರದು ಅಂದ್ರೂನು ಕೂಡ ಒಬ್ಬ ಲಿಂಗಭಕ್ತ ಇನ್ನೊಬ್ಬ ಲಿಂಗಭಕ್ತನಿಗೆ ಅಥವಾ ಲಿಂಗಭಕ್ತನಾಗದೇ ಕೂಡ ಬೇರೆ ಜಾತಿಯವನು ಇದ್ದರೂ ಕೂಡ ಯಾವುದಾದ್ರು ಮಿತ್ರತ್ವ ಇತ್ತೂಂದ್ರು ಕೂಡ ಕೈಮುಗಿದು ನಮಸ್ಕಾರ ಮಾಡ್ತಿನೀಂದ್ರೆ ಅದಕ್ಕೆ ಅರ್ಥ ಏನಿದೆ? ಯಾಕೆ ಕೈಮುಗೀಬೇಕು ಅನ್ನೋದರ ಬಗ್ಗೆ ನಾವೆಲ್ಲ ವಿಚಾರ ಮಾಡಬೇಕಾಗಿದೆ. ದ್ಯಾಮವ್ವ, ದುರ್ಗವ್ವ ಇವಕ್ಕೆಲ್ಲ ಯಾಕೆ ನಾವು ಪೂಜೆ ಮಾಡಬೇಕಂದ್ರೆ. ಅವರೆಲ್ಲರೂ ಲಿಂಗಪೂಜೆ ಮಾಡುವವರು. ಅವರೆಲ್ಲ ಲಿಂಗಭಕ್ತರು. ಅವರೂ ಕೂಡ ಲಿಂಗಾಯತರೆ. ಅಂದ ಬಳಿಕ ಒಬ್ಬ ಲಿಂಗಾಯತ ಒಬ್ಬ ಲಿಂಗಾಯಿತ ದೇವರಿಗೆ ನಮಸ್ಕಾರ ಮಾಡಿದರೆ ಏನು ತಪ್ಪಾಗುತ್ತದೆ ಅನ್ನುವಂತದನ್ನು ಕೂಡ ಸ್ವಲ್ಪ ಸೂಕ್ಷ್ಮವಾಗಿ ವಿಚಾರ ಮಾಡಬೇಕಾಗುತ್ತದೆ. ಆದರೆ ಮಾಡಲೇಬೇಕಾದ ವಿಚಾರ ಅಲ್ಲ. ಮಾಡಿದರೆ ತಪ್ಪೇನಲ್ಲ ಕಾಲಕ್ರಮದಲ್ಲಿ ಇಷ್ಟಲಿಂಗ ಪೂಜೆಯನ್ನು ಬೆಳೆಸಿಕೊಂಡು ಹೋಗಬೇಕು. ಆದರೆ ಇಷ್ಟಲಿಂಗ ಪೂಜೇನೆ ಕೊನೇದಲ್ಲ. ಅದನ್ನು ಸ್ವಲ್ಪ ಅರ್ಥ ಮಾಡ್ಕೋಬೇಕು. ಒಬ್ಬ ವಚನಕಾರ ಹೇಳ್ತಾನೆ. ಹೊಟ್ಟೆಯ ಮೇಲೆ "ಕಟ್ಟೋಗರವ ಕಟ್ಟಿದರೆ ತೃಪ್ತಿಯಾಗಬಲ್ಲದೆ" ಎಂದು ಪ್ರಶ್ನೆ ಕೇಳ್ತಾನೆ. ಲಿಂಗ ನಾವು ಕಟ್ಟಿಕೊಂಡವರು ಅಂತ ತಿಳ್ಕೊಂಡು ಅದರ ಮೇಲೆ ಅಭಿಮಾನ ಪಡ್ತಾ ಕೇವಲ ಅದೊಂದೇ ಪೂಜೆ ಮಾಡ್ತಾ ಕೂತ್ಕೊಂಡ್ರೆ ನಾವು ಪೂರ್ಣನಾದ ವೀರಶೈವ ಆಗಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಇಷ್ಟಲಿಂಗದಿಂದ ಪ್ರಾಣಲಿಂಗದವರೆಗೂ ಹೋಗಬೇಕು. ಪ್ರಾಣಲಿಂಗದಿಂದ ಭಾವಲಿಂಗದವರೆಗೂ ಹೋಗಬೇಕು. ಯಾವಾಗ "ಶಿವೋಹಂ" ಅನ್ನುವ ಭಾವನಾ ಬಂದು ಭಾವಲಿಂಗ ಅನುಸಂಧಾನವನ್ನು ಮಾಡ್ತಾನಲ್ಲ ಆವಾಗ ಭಕ್ತ ಪರಿಪೂರ್ಣನಾಗ್ತಾನೆ. ವೀರಶೈವ ಅಂದರೇನು? ಶಿವ ಮತ್ತು ಜೀವರ ಅಭೇದ ಬೋಧಕವಾಗಿರತಕ್ಕಂಥ ವಿದ್ಯೆಯಲ್ಲಿ ರಮಿಸುವಂಥ ಶೈವ ವೀರಶೈವಾಂತ ಕರೆಸಿಕೊಳ್ತಾನೆ. ಅದಕ್ಕೆ ಯಾರು ಸಾಧನೆ ಮಾಡ್ಬೇಕಂತಾರೆ ಅಂತಹವರು ಆ ಗುಡಿಗೆ ಈ ಗುಡಿಗೆ ಹೋಗುವಂತ ಅವಶ್ಯಕತೆ ಇಲ್ಲ.

ಅಂತರಂಗದಲ್ಲಿ ಇಷ್ಟ ಲಿಂಗಪೂಜೆಯನ್ನು ಮಾಡ್ರಿ ಅದರ ಜೊತೆ ಪ್ರಾಣಲಿಂಗ ಭಾವಲಿಂಗಗಳನ್ನು ಬೆರೆಸ್ತ ಹೋಗ್ರಿ. ಆಗ ನೀವೇ ದೇವರಾಗುವಂತಹ ಸ್ಥಿತಿ ಬಂದಾಗ ಬೇರೆ ಬೇರೆ ದೇವರಿಗೆ ಹೋಗುವ ಅವಶ್ಯಕತೇನೆ ಇರೋದಿಲ್ಲ. ಅದಕ್ಕೆ ವೀರಶೈವಧರ್ಮ ಅಂದರೆ ದೇವರನ್ನ ಅಲ್ಲಿ ಇಲ್ಲಿ ತೋರಿಸುವ ಧರ್ಮ ಅಲ್ಲ. ನಮ್ಮೊಳಗೆ ನಮಗೆ ಅತ್ಯಂತ ಸಮೀಪದಲ್ಲಿ ದೇವರನ್ನು ತೋರಿಸುವಂಥ ಧರ್ಮ. ಅದು ವೀರಶೈವ ಧರ್ಮದ ವೈಶಿಷ್ಟ್ಯ. ಅದಕ್ಕೆ ಮೊಟ್ಟ ಮೊದಲು ಹೊರಗೆ ಲಿಂಗ ಕೊಟ್ಟಿದ್ದಾರೆ. ಹೊರಗಿನ ಲಿಂಗ ಅದೇ ಲಿಂಗ ಅಲ್ಲ. ಅದು ಒಂದು ದರ್ಪಣ ಅನ್ನುವ ಮಾತನ್ನು ಕೂಡ ಅನುಭವಿಗಳು ಹೇಳ್ತಾರೆ. ಹ್ಯಾಗೆ ಒಂದು ಕನ್ನಡಿಯನ್ನ ಹಿಡಿದು ಕೊಂಡಿರುವಂತಹ ವ್ಯಕ್ತಿ ಕನ್ನಡಿಯನ್ನು ನೋಡುವುದರ ಮುಖಾಂತರವಾಗಿ ತನ್ನ ಮುಖವನ್ನು ಹ್ಯಾಗೆ ನೋಡ್ಕೊಂತಾನೆಯೋ ಹಾಗ ಇಷ್ಟಲಿಂಗದಲ್ಲಿ ಶಿವಯೋಗವನ್ನು ಮಾಡುವುದರ ಮುಖಾಂತರವಾಗಿ ನಮ್ಮ ಬಹಿರ್‌ಮುಖವಾಗುವ ಮನಸ್ಸಿನ ವೃತ್ತಿಯನ್ನು ಅಂತರ್ಮುಖವಾಗಿ ಮಾಡಿಕೊಂಡು ಅಂತರ್ಮುಖಿಗಳಾಗುತ್ತೇವೆ. ಆ ಸಲುವಾಗಿ ಲಿಂಗ ಇರುವ ವಿಚಾರ ಇಟ್ಟುಕೊಂಡ ವೀರಶೈವರಿಗೆ ಬೇರೆ ಬೇರೆ ದೇವತೆಗಳ ಪೂಜೆ ವಿಧಾನ ಇಲ್ಲಾ ಅನ್ನುವಂಥ ಬೇರೆ ಸ್ಪಷ್ಟ ವಿಚಾರ ಇದ್ರೂನು ಕೂಡ ಶಿಷ್ಟಾಚಾರಕ್ಕಾಗಿ

ಯಾವುದೇ ದೇವರಿಗೆ ಕೈಮುಗಿದರೆ ತಪ್ಪೇನು? ಆ ದೇವರು ಯಾರೂ ಅಲ್ಲ ಅವರು ನಿಮ್ಮ ಹಾಗೇ ಲಿಂಗ ಕಟ್ಟಿಕೊಂಡ ದೇವರಾಗಿದ್ದಾರೆ. ಕೈಮುಗಿದರೆ ತಪ್ಪೇನು ಆಗಲಾರದು ಎನ್ನುವ ವಿಚಾರವನ್ನು ತಿಳಿಪಡಿಸುತ್ತೇವೆ.

ಇನ್ನು ದೇವಾಲಯ ಸಂಸ್ಕೃತಿ ಬಗ್ಗೆ ಬಹಳಷ್ಟು ವಿಚಾರವನ್ನು ಮಾಡಿದೆವು. ಅದಕ್ಕೆ ಎಲ್ಲಾ ಚರ್ಚೆಯೊಳಗೆ ಒಂದು ನಿರ್ಣಯ ಏನಾಯ್ತೂಂದರೆ ಗ್ರಾಮದಲ್ಲಿರುವಂತೆ ದೇವಾಲಯಗಳೆಂದರೆ ಇಡೀ ಗ್ರಾಮಸ್ತರಿಗೆ ಒಂದು ಧರ್ಮದ ಕೇಂದ್ರ. ಒಂದು ಗ್ರಾಮದಲ್ಲಿ ಕೇವಲ ಲಿಂಗಾಯತರೇ ಅಂತ ಅರ್ಥ ಅಲ್ಲ. ಅಲ್ಲಿ ಎಲ್ಲಾ ಜಾತಿ ಜನರು ಇರ್ತಾರೆ. ಆ ಎಲ್ಲಾ ಜಾತಿ ಜನರಿಗೆ ಒಂದು ಶ್ರದ್ಧೆಯ ಸ್ಥಾನ ಬೇಕೂಂತ ತಿಳ್ಕೊಂಡು, ಗ್ರಾಮ ದೇವತೆಯೆಂದು ತಿಳ್ಕೊಂಡು ದೇವಸ್ಥಾನ ಕಟ್ಟಿಸ್ತಾ ಬಂದಿದ್ದಾರೆ. ಅದೂ ಅಲ್ಲದೆ ಹಿಂದಿನ ಕಾಲದಲ್ಲಿ ಶಾಲೆ ಕಾಲೇಜುಗಳೇ ಇರಲಿಲ್ಲ. ನಾವೆಲ್ಲ ಕೂಡಿ ಗುಡಿಯೊಳಗೆ ಶಾಲೆ ಕಲಿತು ಬಂದಿದ್ದೇವೆ. ಹಿಂದೆ ಹನುಮಂತ ದೇವರ ಗುಡಿಯೊಳಗೆ, ಬಸವಣ್ಣ ಈಶ್ವರ ದೇವರ ಗುಡಿಯೊಳಗೆ ಶಾಲೆ ನಡೀತಾ ಇತ್ತು. ಒಂದಾನೊಂದು ಕಾಲಕ್ಕೆ ಇಷ್ಟೊಂದು ವ್ಯಾಪಕವಾಗಿ ಶೈಕ್ಷಣಿಕ ಕೇಂದ್ರಗಳು ಬೆಳೆಯದೇ ಇದ್ದಾಗ ನಮಗೆ ಬೇಕಾದ ಅಲ್ಪ ಸ್ವಲ್ಪ ಅಕ್ಷರ ಶಿಕ್ಷಣ ಪಡಕೊಳ್ಳಲಿಕ್ಕೆ ಕೂಡ ಒಂದು ಸ್ಥಾನ ಬೇಕಾಗಿತ್ತು. ಆ ಸ್ಥಾನ ಯಾರ ಮನೆಯೂ ಆಗಲಿಕ್ಕೆ ಸಾಧ್ಯವಿಲ್ಲಾಂತ ತಿಳ್ಕೊಂಡು ಆ ಗ್ರಾಮದ ಒಂದು ಗುಡಿಯೊಳಗೆ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸತಕ್ಕಂಥ ಪ್ರವೃತ್ತಿ ಇತ್ತು. ನಾನು ಲಿಂಗಾಯತ ಇದೇನೆ ಅಲ್ಲಿ ಗುಡಿಯೊಳಗೆ ನಾನ್ಯಾಕೆ ಶಾಲೆ ಕಲಿಯೋಕ ಹೋಗ್ಬೇಕು ಅಂತ ತಿಳ್ಕೊಂಡು ಬಿಟ್ರೆ ನಮ್ಮ ಮಕ್ಕಳು ಅಕ್ಷರ ಹೀನರಾಗಿ ಹಾಗೇ ಕೂಡಬೇಕಾಗುತ್ತದೆ. ಅದಕ್ಕಾಗಿ ಯಾವ ಉದ್ದೇಶಕ್ಕಾಗಿ ಯಾವುದಕ್ಕೆ ಬಳಸಿಕೊಳ್ಳಬೇಕು ಅನ್ನೋದನ್ನ ಸ್ವಲ್ಪ ಅರ್ಥ ಮಾಡಿಕೊಂಡು ಸ್ವಲ್ಪ ಸೌಜನ್ಯದಿಂದ ವರ್ತನೆ ಮಾಡಿದಾಗ ದೇವಾಲಯಗಳು ಕೂಡ ಆ ಗ್ರಾಮದ ಪ್ರತಿಯೊಬ್ಬರಿಗೆ ಧರ್ಮದ ಶಿಕ್ಷಣವನ್ನು ಹಾಗೂ ನಮ್ಮ ದೈನಂದಿನ ವಿದ್ಯೆಯನ್ನು ಕೂಡ ಬೋಧಿಸತಕ್ಕಂಥ ಕೇಂದ್ರವಾಗಿದ್ದು ಅದನ್ನ ಯಥಾವತ್ತಾಗಿ ನಡೆಸಿಕೊಂಡು ಬರಬೇಕು ಅನ್ನುವ ವಿಚಾರವನ್ನು ಹೇಳಬೇಕಾಗಿದೆ.

ಇನ್ನು ಒಂದು ಮಾತು ಬಹಳ ಜನ ಆವೇಶದಿಂದ ಎಂದು ನಿಂತು ಕೆಲವು ವಚನಗಳನ್ನು ಹೇಳಿದರು. ಇಷ್ಟಲಿಂಗವನ್ನು ಕಟ್ಟಿಕೊಂಡ ಮೇಲೆ ಬೇರೆ ದೇವಸ್ಥಾನಕ್ಕೆ ಹೋಗಬಾರದು ಅನ್ನುವಂತ ಶರಣರ ವಚನಗಳನ್ನು ಹೇಳಿದ್ದಾರೆ. ಅದರ ಈ ನಿಷ್ಠೆ ಬಹಳ ಶ್ರೇಷ್ಠ ಅನ್ನುವ ಮಾತನ್ನ ಮೊದಲೇ ಹೇಳಿದ್ದೇವೆ. ಇಂಥಾ ನಿಷ್ಠೆಯ ಭಕ್ತರು ಒಬ್ಬಿಬ್ಬರು ಕಂಡರೂ ನಮಗೆ ಆ ಸಂಖ್ಯೆ ಇನ್ನೂ ಹೆಚ್ಚಾಗಲಿ ಅನ್ನುವ ಉತ್ತಮವಾದ ಹಾರೈಕೆಯನ್ನು ಈ ಸಂದರ್ಭದಲ್ಲಿ ಮಾಡ್ತೇವೆ. ಅದರೆ ಒಂದು ವಿಚಾರ ಅಂದ್ರೆ ಈ ಸಭೆಯೊಳಗೆ ಇಷ್ಟು ಜೋರಾಗಿ ಏನು ಮಾತಾಡಿದರಲ್ಲ ಅವರ ಮನೆಗೆ ಹೋಗಿ ಪರೀಕ್ಷೆ ಮಾಡಬೇಕು. ಅವರ ಮನೇಲಿ ಬರೇ ದೇವರದಾವೂ ಫೋಟೋ ಅದಾವೂ ನೋಡ್ರಿ; ಮತ್ತೆ ಇದ್ರೂ ಅಂದ್ರೆ ಮತ್ತೆ ಅವರಿಗೆ ಏನು ಶಿಕ್ಷೆ ಕೊಡಬೇಕೋ ಅದನ್ನ ಕೊಡಬೇಕಾಗುತ್ತದೆ. ಸಭೆಯೊಳಗೆ ಮಾತಾಡೋದು ಬೇರೆ, ವಾಸ್ತವಿಕವಾಗಿ ವರ್ತನೆ ಮಾಡುವುದು ಬೇರೆಯಾಗಿರುತ್ತದೆ. ಒಂದು ವೇಳೆ ಹಾಗೆ ಇಲ್ಲಾಂದ್ರೆ ಅವರಿಗೆ ಬಹಳಷ್ಟು ಬಹುಮಾನ ಕೊಡೋಣ ಸತ್ಕಾರ ಮಾಡೋಣ ಅಂತ ವಿಚಾರವನ್ನು ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಗರ್ಭಾಷ್ಟಮಮಾಸದಲ್ಲಿ ದೀಕ್ಷೆ

ಇನ್ನೊಂದು ಪ್ರಶ್ನೆ ಲಿಂಗಧಾರಣ ಸಂಸ್ಕಾರ ಹುಟ್ಟಿದ ಮೇಲೆ ಲಿಂಗ ಕಟ್ಟಿಕೊಳ್ಳುವುದಷ್ಟೇ ಅಲ್ಲ. ತಾಯಿ ಗರ್ಭದಲ್ಲಿ ೮ ತಿಂಗಳ ಶಿಶುವಿದ್ದಾಗಲೇ ಅದಕ್ಕೆ ಲಿಂಗಧಾರಣ ಮಾಡಬೇಕೆನ್ನುವ ವಿಚಾರವನ್ನು ಧರ್ಮ ಶಾಸ್ತ್ರದಲ್ಲಿ ಹೇಳಿದ್ದಾರೆ. ವೈಜ್ಞಾನಿಕ ವಿಚಾರ ಮಾಡಿದಾಗ ತಾಯಿಯ ಗರ್ಭದೊಳಗೆ ಮಗುವಿಗೆ ಏಳು ತಿಂಗಳು ಆದಾಗ ಎಲ್ಲಾ ಅವಯವಗಳು ಬೆಳೆದಿರುತ್ತವೆ. ಹೊರಗಿನ ಶಬ್ದವನ್ನ ಕೇಳಿ ತಿಳಿದುಕೊಳ್ಳುವಂಥ ಸಾಮರ್ಥ್ಯ ಮಗುವಿಗೆ ಬಂದಿರುತ್ತೆ ಅಂತ ಹೇಳ್ತಾರೆ. ಅಷ್ಟು ವೈಜ್ಞಾನಿಕವಾಗಿ ವಿಚಾರ ಮಾಡಿರುವ ಆಚಾರ್ಯರು ಗರ್ಭಕ್ಕೆ ಲಿಂಗಧಾರಣೆ ಮಾಡುವ ಸಂಸ್ಕೃತಿಯನ್ನು ರೂಢಿಸಿಕೊಂಡು ಬಂದರು. ಯಾಕೆಂದರೆ ಹುಟ್ಟುವಂತ ಮಗು ಭವಿಯಾಗಿ ಹುಟ್ಟಬಾರದು, ಅದು ಭಕ್ತನಾಗೇ ಜನ್ಮತಾಳಬೇಕು. ಬೇರೆ ಧರ್ಮಗಳಲ್ಲಿ ೮ವರ್ಷದವರೆಗೆ ಅತ ಶೂದ್ರ ಅಂತ ಕರಿತಾರೆ "ಜನ್ಮನಾ ಜಾಯತೇ ಶೂದ್ರಃ ಸಂಸ್ಕಾರಾದ್ ದ್ವಿಜ ಉಚ್ಯತೇ। ವೇದಾಧ್ಯಯನಾದ್ಭವೇದ್ವಿಪ್ರಃ ಬ್ರಹ್ಮ ಜಾನಾತೀತಿ ಬ್ರಾಹ್ಮಣಃ॥" ಅನ್ನುವ ವ್ಯಾಖ್ಯಾದೊಳಗೆ ೮ನೇ ವರ್ಷಕ್ಕೆ ಉಪನಯನ ದೀಕ್ಷೆ ಅನ್ನುವ ಕಾರ್ಯಕ್ರಮಗಳನ್ನು ಬೇರೆ ಸಮಾಜದಲ್ಲಿ ಮಾಡಿಕೊಂಡು ಬಂದರೆ, ನಾವಿನ್ನೂ ತಾಯಿಯ ಗರ್ಭದಲ್ಲಿ ೮ ತಿಂಗಳ ಶಿಶುವಿದ್ದಾಗ ಲಿಂಗಧಾರಿಗಳಾಗ್ತೇವೆ. ಮಗು ಭಕ್ತನಾಗಿ, ಲಿಂಗಧಾರಿಯಾಗೇ ಜನ್ಮ ತಾಳಬೇಕು, ಅನ್ನುವ ವಿಧಾನ ಇದು.

ಒಂದು ವಿಚಿತ್ರವಾದ ಪ್ರಶ್ನೆ ಎಂದರೆ ತಾಯಿ ಗರ್ಭದಲ್ಲಿರುವಂಥ ಮಗುವಿಗೆ ಲಿಂಗಧಾರಣ ಮಾಡಬೇಕೆಂದರೆ ಒಳಗೆ ಎಷ್ಟು ಮಕ್ಕಳಿದಾವೆ ಅನ್ನೋದು ಯಾರಿಗೂ ಗೊತ್ತಿರೋಲ್ಲ. ಈಗಂತೂ ಗೊತ್ತಾಗುತ್ತೆ. ಹೆಣ್ಣದೆಯೋ? ಗಂಡಿದೆಯೋ ಅನ್ನೋದು ಡಾಕ್ಟರ್ ಹತ್ತಿರ ಹೋದರೆ ಗೊತ್ತಾಗುತ್ತದೆ. ಎರಡು ಇದೇ ಅಂದರೆ ಅಗ ಎರಡು ಇದಾವೇಂತ ಎರಡು ಲಿಂಗ ಕಟ್ಟುವುದಕ್ಕೆ ಶುರು ಮಾಡಿದ್ದೇವೆ. ಆದರೆ ಒಳಗೆ ಇರುವಂತಾದ್ದು ಬಹುತೇಕ ಒಂದೇ ಇರುತ್ತದೆ. ಸಾಮಾನ್ಯವಾಗಿ ಯಾವಾಗಲೂ ಎರಡು ಮೂರು ಇರುವುದಿಲ್ಲ. ಏನೋ ಅಪವಾದಕ್ಕೊಮ್ಮೆ ಅವಳಿ-ಜವಳಿ ಮಕ್ಕಳು ಆಗುತ್ತವೆ ಮತ್ತೊಮ್ಮೆ ತ್ರಿವಳಿ ಕೂಡ ಆಗಬಹುದು. ಅದರೆ ಸರ್ವೇಸಾಮಾನ್ಯವಾದ ನಿಯಮ ಅನ್ನುವುದಕ್ಕೆ ಬರೋದಿಲ್ಲ. ಅದಕ್ಕೆ ಆಪದ್ಧರ್ಮ ಅಂತ ಕರೀತಾರೆ. ಅದರೆ ಗರ್ಭದಲ್ಲಿರುವಂತೆ ಶಿಶುವನ್ನು ಉದ್ದೇಶಿಸಿ ಆ ಗರ್ಭಕ್ಕೆ ಲಿಂಗ ಕಟ್ಟಿರೋದ್ರಿಂದ ಆ ಗರ್ಭದಲ್ಲಿರುವ ಎಲ್ಲಾ ಮಕ್ಕಳಿಗೂ ಕೂಡ ಸಂಬಂಧ ಪಡುವಂತಹದು. ಯಾವಾಗ ಹೆರಿಗೆಯಾಗುತ್ತದೋ ಆಗ ಅವು ಎಷ್ಟು ಮಕ್ಕಳಿರುತ್ತವೊ ಅಷ್ಟು ಮಕ್ಕಳಿಗೂ ಒಂದೊಂದು ಲಿಂಗವನ್ನು ಸಂಸ್ಕಾರ ಮಾಡಿ ಐದನೇ ದಿವಸಕ್ಕೋ ಹನ್ನೊಂದನೇ ದಿವಸಕ್ಕೋ ಕಟ್ಟುವಂಥ ಪರಂಪರೆಯನ್ನು ಬೆಳಿಸ್ಕೊಬೇಕು. ಇದು ದೊಡ್ಡ ಸಮಸ್ಯಾತ್ಮಕ ಪ್ರಶ್ನೆ ಅಲ್ಲಾಂತ ಅನ್ನಿಸುತ್ತದೆ.

ವಾರದ ಮಲ್ಲಪ್ಪನವರ ಸೇವೆ

ಒಂದು ವಿಚಾರ ಇದೆ. ಅದು ನಾವು ಸೊಲ್ಲಾಪುರದೊಳಗೆ ಅಭ್ಯಾಸ ಮಾಡೋ ಕಾಲಕ್ಕೆ ಸೇರಿದ ವಿಚಾರ. ಅಲ್ಲಿ ವಾರದ ಮಲ್ಲಪ್ಪನವರು ನಿಮಗೆಲ್ಲ ಗೊತ್ತು. ಬಹಳ ದೊಡ್ಡ ವ್ಯಕ್ತಿ. ವೀರಶೈವ ಧರ್ಮಕ್ಕೆ ಅವರು ಮಾಡಿರುವಂತ ಉಪಕಾರ ಬಹುತೇಕ ಯಾರು ಮಾಡುವುದಕ್ಕೆ ಸಾಧ್ಯವಿಲ್ಲಾಂತ ನಮಗೆ ಅನ್ನಿಸುತ್ತದೆ. ಸುಮಾರು ೧೯೦೮-೦೯ನೇ ಇಸವಿಯೊಳಗೆ ಅನೇಕ ಧರ್ಮ ಗ್ರಂಥಗಳನ್ನು ಹುಡುಕಾಡಿ (ಎಷ್ಟೊ ಗ್ರಂಥಗಳು ಜಗಲಿ

ಮೇಲೆ ಇಟ್ಟು ಪೂಜೆಯಾಗಿ ಹಳ ಹತ್ತಿ ಹೋಗ್ತಾ ಇದ್ದು) ಅಂಥವುಗಳನ್ನು ಸಂಸ್ಕೃತ ವಿದ್ವಾಂಸರ ಮನೆ ಮನೆಗೆಲ್ಲ ಕಳಿಸಿ ಆ ಗ್ರಂಥಗಳನ್ನು ಸಂಗ್ರಹ ಮಾಡಿ, ಎಲ್ಲಾ ಸಂಸ್ಕೃತ ಗ್ರಂಥಗಳಿಗೆ ಮರಾಠಿ ಭಾಷಾಂತರ ಮಾಡಿಸಿ ಪ್ರಿಂಟ್ ಮಾಡಿಸಿ ತಮ್ಮ ಅಡತಿ ಅಂಗಡಿಯೊಳಗೆ ಇಟ್ಕೊಂಡು ಮಾರಾಟ ಮಾಡಿದರು. ಅಷ್ಟೆ ಅಲ್ಲ ಇವತ್ತು ಯಾರಾದರೂ ಒಂದು ಪುಸ್ತಕ ಬರೆದ ಕೂಡಲೆ ನಾವು ಕಾಪಿರೈಟ್ ಹಾಕ್ಕೊಂಡು ಬಿಡಿತೀವಿ. ಅದಕ್ಕೆ ನಾವು ಮರೆತು ಯಾರೂ ಪ್ರಿಂಟ್ ಮಾಡೋಕೆ ಸಾಧ್ಯವಿಲ್ಲ. ಸಿಕ್ಕರೆ ಲಾಭ ನಮಗೇ ಸಿಗಲಿ ಅಂತ ಸ್ವಾರ್ಥ ನಾವೆಲ್ಲ ಕಾಣ್ತಾ ಇದೀವಿ. ಆದರೆ ವಾರದ ಮಲ್ಲಪ್ಪನವರು ಆಗಿನ ಕಾಲದೊಳಗೆ ಸುಮಾರು ಲಕ್ಷಾಂತರ ರೂಪಾಯಿಗಳನ್ನು ಸ್ವಂತ ಖರ್ಚು ಮಾಡಿ ಆ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿ ತಮ್ಮ ಅಡತಿ ಅಂಗಡಿಯೊಳಗೆ ಮಾರಾಟ ಮಾಡೋದರ ಜೊತೆಗೆ, ಎಲ್ಲಿ ಕಾಪಿರೈಟ್ ಬರೀತರೂ ಅಲ್ಲಿ ಈ ಗ್ರಂಥವನ್ನು ಯಾರ ಬೇಕಾವರೂ ಯಾವಾಗ ಬೇಕಾದರೂ ಪ್ರಕಾಶನ ಮಾಡಿ ಪ್ರಚಾರ ಮಾಡಬಹುದು. ನಮಗೆ ಯಾವ ಅಭ್ಯಂತರಾನೂ ಇಲ್ಲಾ ಅನ್ನುವ ಮಾತನ್ನ ಅವತ್ತು ಪ್ರಿಂಟ್ ಮಾಡಿದ್ದಾರೆ.

ಅವರ ಒಂದು ವೈಶಿಷ್ಟ್ಯ ಏನೂಂದ್ರೆ-ನಾವು ಪಾಠ ಶಾಲೆಯಲ್ಲಿ ಓದೋ ಕಾಲಕ್ಕೆ, ಅವರು ಮನೆಯಲ್ಲೇ ಸ್ನಾನ ಪೂಜೆ ಮಾಡ್ಕೋಬೇಕಾಗಿತ್ತು. ಯಾವ ಪಾಠಶಾಲೆಯಲ್ಲೂ ಸ್ನಾನದ ವ್ಯವಸ್ಥೆ ಇಲ್ಲಾಂತ ತಿಳ್ಕೊಂಡು ತಮ್ಮ ಮನೆಯಲ್ಲೆ ವ್ಯವಸ್ಥೆ ಮಾಡ್ತಾ ಇದ್ರು. ಅಲ್ಲಿ ಮಡಿ ಸ್ನಾನಕ್ಕೆ ಬಾವಿ ಎಲ್ಲ ವ್ಯವಸ್ಥೆ ಇತ್ತು. ಆದರೆ ಒಂದು ಆಶ್ಚರ್ಯ ಅಂದ್ರೆ ಅವರ ಅಷ್ಟು ದೊಡ್ಡ ಮನೆಯೊಳಗೆ ಜಗಲಿ ಅನ್ನೋದೆ ಇರಲಿಲ್ಲ.

ಪಾಠಶಾಲೆಯಲ್ಲಿ ವಿದ್ಯಾರ್ಥಿಗಳು ಪೂಜೆ ಮಾಡಿಕೊಳ್ಳಲಿಕ್ಕೆ ಎರಡು ಮೂರು ಸ್ಥಾನಗಳನ್ನು ಮಾಡಿದ್ರು. ಇಲ್ಲೊಬ್ಬರು ಮಾಡಿಕೊಳ್ಳಬೇಕು, ಅಲ್ಲೊಬ್ರು ಮಾಡಿಕೊಳ್ಳಬೇಕು, ಹೀಗೆ ಜಂಗಮ ಗುರುಗಳ ಪೂಜೆಗೆ ಸ್ಥಾನ ಇತ್ತೆ ಹೊರತಾಗಿ, ಅಲ್ಲಿ ಬೇರೆ ದೇವರಿಟ್ಟು ಪೂಜೆ ಮಾಡುವಂತದ್ದನ್ನೇ ನೋಡಲಿಲ್ಲ, ಅಷ್ಟು ಅತ್ಯಂತ ನಿಷ್ಠೆಯಿಂದ ಲಿಂಗ ಭಕ್ತರಾಗಿ, ಜಂಗಮಭಕ್ತರಾಗಿ, ಗುರುಭಕ್ತರಾಗಿ ಹೇಗೆ ಹೇಳಿದರೂ ಹಾಗೆ ನಡೆಕೊಂಡಿರತಕ್ಕಂಥ ಒಂದು ಮನೆತನವನ್ನು ನಾವು ಕಣ್ಣಾರೆ ಕಂಡಿದ್ದೇವೆ. ಅಂತ ಮನೆತನ ಏನಾದರೂ ಬೆಳೆದರೆ ಅದು ವೀರಶೈವ ನಿಷ್ಠೆ ಅನ್ನುವಂಥಾದ್ದು ಬೆಳೀಲಿಕ್ಕೆ ಸಾಧ್ಯವಾಗುತ್ತೆ. ಅದಕ್ಕಾಗಿ ಯಾವುದೇ ದೇವರ ಬಗ್ಗೆ ದ್ವೇಷ ಭಾವನೆ ಮಾಡಿಕೊಂಡು ಏನಾದರು ನೀವು ಲಿಂಗಪೂಜೆ ಮಾಡಿಕೊಂಡು ಕೂತುಕೊಂಡರೆ, ಆ ಲಿಂಗ ಪೂಜೆಯು ಸರಿಯಾಗೋದಿಲ್ಲ. ಅದಕ್ಕೆ ಬಸವಣ್ಣನವರು ಒಂದು ವಚನ ಹೇಳಿದಾರೆ: ಎತ್ತ ನೋಡಿದರತ್ತ ನೀನೇ ದೇವ. ಸಕಲ ವಿಸ್ತಾರದ ರೂಪು ನೀನೇ ದೇವ ವಿಶ್ವತೋ ಬಾಹು ನೀನೇ ದೇವ ವಿಶ್ವತೋಚಕ್ಷು ನೀನೇ ದೇವ ಕೂಡಲಸಂಗಮದೇವ. ನಾವು ಏನು ನೋಡುತ್ತೇವೆ ಎಲ್ಲಾ ಕಡೆ ನಿನ್ನನ್ನೇ ನೋಡ್ತೀನಿ ಅಂತ ಮಾತ್ರ ಹೇಳ್ತಾರೆ. "ಯತ್ರ ಯತ್ರ ಮನೋಯಾತಿ ತತ್ರ ತತ್ರ ಬಹ್ಮದರ್ಶನಂ" ಅಂತ ಅಂದರೆ ನೀವು ಲಿಂಗದರ್ಶನಂ ಅಂತ ತಿಳ್ಕೊಂಡು ಯಾವುದೇ ದೇವರನ್ನು ನೋಡಿದ್ರು ಕೂಡ ಆ ಲಿಂಗರೂಪದಲ್ಲೇ ನೋಡಿ ನಮಸ್ಕಾರ ಮಾಡಿದರೆ ಇನ್ನು ಒಂದು ಒಳ್ಳೆ ಭಾವ ಬೆಳೆಸಲಿಕ್ಕೆ ಆಗ್ತದೆ. ಇನ್ನು ಒಂದು ಅರ್ಥದೊಳಗೆ ನಿಮಗೆಲ್ಲಾ ದೇವರಿಗೆ ನಮಸ್ಕಾರ ಮಾಡುವಂಥದ್ದೇ ಪ್ರಸಂಗ ಒಂದು ಬಂದರೆ ನಿಮಗೆ ಸೀದಾ ಸೀದಾ ದೇವರಿಗೆ ನಮಸ್ಕಾರ ಮಾಡುವ ವಿಚಾರ ಇಲ್ಲದೇ ಇದ್ರೆ, ನಿಮ್ಮ ಇಷ್ಟ ಲಿಂಗವನ್ನು ಕೈಯಲ್ಲಿ ಹಿಡಕೊಂಡು

ಇದಕ್ಕೆ ನಮಸ್ಕಾರ ಮಾಡೋದರ ಮೂಲಕ ನಮಸ್ಕಾರ ಅದಕ್ಕೆ ಸಲ್ಲಿಸದರೂ ಕೂಡ ನಿಮ್ಮ ಲಿಂಗಕ್ಕೆ ನಮಸ್ಕಾರ ಮಾಡಿದ ಹಾಗೂ ಆಗುತ್ತೆ ವ್ಯಕ್ತಿನಿಷ್ಠೆಯನ್ನು ಬೆಳೆಸಿದ ಹಾಗೂ ಆಗುತ್ತೆ, ಸಾಮಾಜಿಕರಲ್ಲಿ ನಾವು ಕೂಡಿಕೊಂಡು ಹೋಗುವುದಕ್ಕೂ ಸಾಧ್ಯವಾಗುತ್ತೆ ಅನ್ನುವ ವಿಚಾರವನ್ನು ತಿಳಿಪಡಿಸುತ್ತೇವೆ.

ಶ್ರೀ ಸಿದ್ಧಾಂತ ಶಿಖಾಮಣಿಯ ಬಗ್ಗೆ

ಮುಖ್ಯವಾಗಿ ಸಿದ್ಧಾಂತ ಶಿಖಾಮಣಿಯ ಬಗೆ ಕೆಲವೊಂದು ವಿಚಾರ ಬಂದ್ವು. ಈ ಗ್ರಂಥ ಯಾವ ಕಾಲದ್ದು? ಅದನ್ನು ಯಾರು ಬರದ್ರು? ಅನ್ನುವ ವಿಚಾರಗಳನ್ನು ಕೇಳ್ತಾ ಇದ್ದಾರೆ. ಅದರ ಬಗ್ಗೆ ಇತ್ತೀಚೆಗೆ ಮೈಸೂರಿನ ವಿದ್ವಾಂಸರು, ಶಿವ ಬಸವ ಸ್ವಾಮಿಗಳು, ಒಂದು ಗ್ರಂಥವನ್ನ ಬರ್ದಿದ್ದಾರೆ. ಬಹಳಷ್ಟು ಜನರ ಕೈಯಲ್ಲಿ ಆ ಪುಸ್ತಕ ನೋಡ್ತಾ ಇದ್ದೇವೆ. ಆ ಗ್ರಂಥವನ್ನು ನೋಡಿ ನೋಡಿ ಪ್ರಶ್ನೆಯನ್ನು ಬರೀತ್ತಾ ಇದ್ರು. ಇದು ಒಳ್ಳೆ ವಿಚಾರ ಇವತ್ತು. ಒಂದಾನೊಂದು ಕಾಲದೊಳಗೆ ಸಿದ್ಧಾಂತ ಶಿಖಾಮಣಿಯೆನ್ನುವ ಗ್ರಂಥ ಯಾರೂ ನೋಡ್ತಾ ಇದ್ದಿಲ್ಲ. ಆದರೆ ಇವತ್ತು ಒಳ್ಳೆ ಬೆಳವಣಿಗೆ ಏನೂಂದ್ರೆ ಅದನ್ನು ತಿಳ್ಕೋಬೇಕೂ ಅನ್ನೊ ದೃಷ್ಟಿಯಿಂದಲಾದರೂ ಕೈಯಲ್ಲಿ ಹಿಡೀತೀರಿ, ಇಲ್ಲಾಂದ್ರೆ ಅದರಾಗೆ ಏನು ದೋಷ ಅದಾವೆ ಅನ್ನುವ ದೃಷ್ಟಿಯಿಂದಲಾದ್ರೂ ಕೈಯಲ್ಲಿ ಹಿಡೀತೀರಲ್ಲ, ಅದೇ ಒಂದು ಖುಷಿಯನ್ನು, ಸಂತೋಷವನ್ನು ತರ್ತದೆ. ಅದಕ್ಕಾಗಿ ಆ ಗ್ರಂಥವನ್ನು ಓದಬೇಕು. ಒಂದು ಮಾತನ್ನ ಒಬ್ಬರು ಬಹಳ ಜಗಳ ಅಡಿ ಹೊರಗೆ ಹೋಗಿ ಹುಡುಕ್ಕೊಂಡು ಒಂದಿಷ್ಟು ಶ್ಲೋಕಗಳನ್ನು ತಂದಿದ್ದಾರೆ. ಏನೂಂದ್ರೆ ಸಿದ್ಧಾಂತ ಶಿಖಾಮಣಿ ವರ್ಣಾಶ್ರಮವನ್ನು ಹೇಳ್ತಿದೆ, ಅದು ಜಾತಿಯನ್ನ ಪ್ರಸ್ತಾಪ ಮಾಡ್ತದೆ ಅನ್ನುವ ವಿಚಾರವನ್ನು ಹೇಳಿದರು.

ಮೇಲೆ ಎತ್ತಿರುವ ಆರೋಪಕ್ಕೆ ಶ್ರೀ ಸಿದ್ಧಾಂತಶಿಖಾಮಣಿಯ ಈ ಶ್ಲೋಕವನ್ನು ಉಲ್ಲೇಖಿಸುತ್ತಾರೆ:

ಸ್ವಮಾರ್ಗಾಚಾರನಿರತಾಃ ಸಜಾತೀಯಾ ದ್ವಿಜಾಸ್ತು ಯೇ।
ತೇಷಾಂ ಗೃಹೇಷು ಭುಂಜೀತ ನೇತರೇಷಾಂ ಕದಾಚನ॥ (೯.೨೯)

ವೀರಶೈವ ಮತವನ್ನು ಸ್ವೀಕರಿಸಿದ ದ್ವಿಜರು (ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು) ವೀರಶೈವರೇ ಆದ ದ್ವಿಜರಲ್ಲಿಯೇ ಭೋಜನಾದಿಗಳನ್ನು ಮಾಡಬೇಕು. ಇತರ ದ್ವಿಜರಲ್ಲಿ ಅಂದರೆ ವೀರಶೈವರಾಗದ ದ್ವಿಜರಲ್ಲಿ ಭೋಜನಾದಿಗಳನ್ನು ಮಾಡಬಾರದು ಎಂದು ಈ ಶ್ಲೋಕದಲ್ಲಿ ಹೇಳಿದೆ. ಇದು ವರ್ಣಾಶ್ರಮಧರ್ಮದ ಉಪದೇಶವಲ್ಲ. ಅದನ್ನು ತಿರಸ್ಕರಿಸುವ ಉಪದೇಶ. ವೀರಶೈವ ಆಚಾರ ವಿಚಾರಗಳನ್ನು ಒಪ್ಪದವರೊಂದಿಗೆ ಬೋಜನಾದಿಗಳನ್ನು ಮಾಡಬಾರದು ಎಂಬ ನಿಷೇಧವಿದು. ಇಂತಹ ಕಟ್ಟಳೆ ಪರಂಪರೆಯ ಬಗ್ಗೆ ಶ್ರದ್ಧೆ ಮತ್ತು ಗೌರವಗಳನ್ನು ಕಾಪಾಡಿಕೊಳ್ಳಲು ಬೇಕಾದದ್ದು ಎಂಬುದರ ಹಿನ್ನೆಲೆಯಲ್ಲಿ ಇದನ್ನು ನೋಡಬೇಕು.

ಶ್ರೀ ಸಿದ್ಧಾಂತ ಶಿಖಾಮಣಿ ಕಾಲಮಾನದ ಬಗ್ಗೆ ನಾವು ನಿರ್ದಿಷ್ಟವಾದ ವಿಚಾರ ಮಾಡಬೇಕು. ಈಗಾಗಲೆ ಅದರ ವಿಚಾರ ಮಾಡಿದಾಗ ಅದಕ್ಕೆ ಮಾನದಂಡ ಅಂದ್ರೆ ಈ ಗ್ರಂಥದ ಉಲ್ಲೇಖ ಯಾವುದಾದ್ರು ಗ್ರಂಥದಲ್ಲಿ ಬಂದಿದೆಯೋ ಹೇಗೆ ಅನ್ನೋದು.

ಭಾರತೀಯ ತತ್ವ ಜ್ಞಾನದೊಳಗೆ ಒಬ್ಬ ಶ್ರೇಷ್ಠರಾದ ವಿದ್ವಾಂಸರು ದಾಸಗುಪ್ತಾಂತ. ನೀವು ಯಾರಾದರೂ ಹಿಸ್ಟರೀ ಆಫ್ ಇಂಡಿಯನ್ ಫಿಲಾಸಫಿ ಎಂಬ ಐದು ಭಾಗದ ಗ್ರಂಥವನ್ನು ಓದಿದರೆ, ಐದನೆ ಭಾಗದೊಳಗೆ ವೀರಶೈವ ಧರ್ಮದ ಬಗ್ಗೆ ಅವರು ಒಂದಿಷ್ಟು ವಿಷಯದ ಬಗ್ಗೆ ಬರೆದಿದ್ದಾರೆ. ಅವರು ಶ್ರೀ ಸಿದ್ಧಾಂತ ಶಿಖಾಮಣಿ ಬಗ್ಗೆ ಒಂದು ಮಾತನ್ನ ಬರೀತಾರೆ. ಏನೂಂತ ಅಂದ್ರೆ ಶ್ರೀ ಸಿದ್ಧಾಂತ ಶಿಖಾಮಣಿ ಒಳಗೆ ಬಸವಣ್ಣನವರ ಉಲ್ಲೇಖ ಬರ್ತದೆ. ಆದ್ದರಿಂದ ಇದು ಬಸವಣ್ಣನವರ ಅನಂತರದ ಗ್ರಂಥಾಂತ ಅವರ ವಾದ. ಎರಡನೆ ವಾದವೆಂದರೆ ಶ್ರೀಕರ ಭಾಷ್ಯದಲ್ಲಿ ಈ ಸಿದ್ಧಾಂತ ಶಿಖಾಮಣಿಯ ಉಲ್ಲೇಖ ಬರೋದ್ರಿಂದ ಇದು ಶ್ರೀಕರ ಭಾಷ್ಯಕ್ಕಿಂತಲೂ ಪೂರ್ವದ್ದು ಎನ್ನುವುದು. ಶ್ರೀಕರ ಭಾಷ್ಯದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿಯ ಶ್ಲೋಕವನ್ನು ಗ್ರಂಥದ ನಾಮ ಉಲ್ಲೇಖ ಮೂಲಕವಾಗಿ ಕೊಟ್ಟಿರೋದ್ರಿಂದ ಸಿದ್ಧಾಂತ ಶಿಖಾಮಣಿ ಶ್ರೀಕರ ಭಾಷ್ಯಗಿಂತಲೂ ಪೂರ್ವದ್ದು ಅನ್ನುವ ವಿಚಾರ ಎಲ್ಲರೂ ಒಪ್ಪುವಂತಹದೆ. ಅವರ ಇನ್ನೊಂದು ವಿಚಾರ ಏನಿದೇಂದ್ರೆ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಬಸವಣ್ಣನವರ ಉಲ್ಲೇಖ ಬರೋದ್ರಿಂದ ಅದು ಬಸವಣ್ಣನವರ ಅನಂತರದ ಗ್ರಂಥ ಎನ್ನುವುದು. ಒಬ್ಬರು ಯಾರಾದರೂ ಒಂದು ಮಾತು ಹೇಳಿದ್ರೆ ಅದಕ್ಕೆ ಆಧಾರ ಕೊಡಬೇಕಾಗುತ್ತೆ. ಟಿಪ್ಪಣಿಯೊಳಗೆ ಅದರ ರೆಫೆರೆನ್ಸ್ ಕೊಡಬೇಕಾಗುತ್ತೆ. ಆದರೆ ನಾವು ಶ್ರೀ ಸಿದ್ಧಾಂತ ಶಿಖಾಮಣಿ ಎಲ್ಲಾ ಬೇಕಾದಷ್ಟು ಸಾರಿ ಪಾರಾಯಣ ಮಾಡಿದ್ದೀವಿ. ಅಲ್ಲೆಲ್ಲೂ ಬಸವಣ್ಣನವರ ಹೆಸರೇ ನಮಗೆ ಕಂಡಿಲ್ಲ ಮತ್ತು ಇವರೆಲ್ಲಿ ಹುಡುಕಿ ತೆಗೆದರೂಂತ ನೋಡಿದೆವು. ಅವರು ಏನು ಮಾಡಿದ್ದಾರೆ ಅಂದರೆ, ಆ ಗ್ರಂಥಕ್ಕೆ ಮರಿ ತೋಂಟದಾರ್ಯರು ಸಂಸ್ಕೃತದಲ್ಲಿ ಒಂದು ಭಾಷ್ಯವನ್ನು ಬರೆದಿದ್ದಾರೆ. ಅದರಲ್ಲಿ ಬಸವಣ್ಣನವರ ಹೆಸರು ಬಂದಿದೆಯೇ ಹೊರತು ಮೂಲಗ್ರಂಥದಲ್ಲಿಲ್ಲ. ಆದ್ದರಿಂದ ಈ ನಿರ್ಧಾರ ತಪ್ಪು ಎಂದು ಹೇಳಬೇಕಾಗುತ್ತದೆ.

ವೀರಶೈವ ಪ್ರಾಚೀನ

ಒಂದು ಮುಖ್ಯವಾದ ವಿಚಾರ ಅಂದ್ರೆ, ವೀರಶೈವ ಧರ್ಮದ ಪ್ರಾಚೀನತೆ ಬಗ್ಗೆ ತಿಳಿದುಕೊಂಡೇ ಮುಂದೆ ಹೋಗಬೇಕಾಗುತ್ತದೆ. ವೀರಶೈವಧರ್ಮ ಸನಾತನವಾದ ಧರ್ಮ. ಅದಕ್ಕೆ ಸನಾತನ ಅಂದ್ರೆ ಏನು ಅಂದ್ರೆ "ಸದಾ ಭವಃ ಸನಾತನಃ". ಅಂದ್ರೆ ಯಾವ ಕಾಲಕ್ಕೂ ಕೂಡ ಯಾವಾಗಲೂ ಇರುವಂಥ ಧರ್ಮಕ್ಕೆ ಸನಾತನ ಧರ್ಮ ಅಂತ. ಅದಕ್ಕೆ ಯುಗಯುಗಗಳ ಪರಂಪರೆಯನ್ನು ಹೇಳಬೇಕು. ಅದನ್ನು ನಾವು ಒಪ್ಕೊಂಡು, ಇನ್ನು ಪಂಚಾಚಾರ್ಯರ ಬಗ್ಗೆ ಪುರಾವೆಗಳು ಬೇಕು ಅಂದಾಗ ಗಮನಿಸಬೇಕು. ವೀರಶೈವರಿಗೆ ಐತಿಹಾಸಿಕ ದಾಖಲೆಗಳನ್ನು ಇಡುವಂತ ಅಭ್ಯಾಸ ಬಹಳ ಕಡಿಮೆ. ನಾವು ಸಾವಿರಾರು ವರ್ಷಗಳ ಬಗ್ಗೆ ವಿಚಾರ ಮಾಡೋದು ಒಂದು ಕಡೆ ಇರಲಿ, ಒಂದು ಶತಮಾನದಲ್ಲಿ ಆಗಿ ಹೋಗಿರುವಂಥ ವ್ಯಕ್ತಿಗಳ ಚರಿತ್ರೆಯನ್ನು ಸರಿಯಾಗಿ ಬರೀಬೇಕಂದ್ರೆ ಕೂಡ ಸರಿಯಾದ ದಾಖಲೆಗಳು ಸಿಗೋದಿಲ್ಲ. ನಮ್ಮದೆ ಒಂದು ಅನುಭವ ನಾವು ಹೇಳಬೇಕಂದ್ರೆ, ನಮ್ಮ ಪೀಠದಲ್ಲಿ, ಕಾಶೀ ಜಂಗಮವಾಡಿ ಮಹಾಪೀಠದಲ್ಲಿ ವೀರಭದ್ರ ಶಿವಾಚಾರ್ಯರು ಎಂಬ ನಮ್ಮ ಗುರುಗಳು ಇದ್ದರು. ಅವರು ಬಹಳ ದೊಡ್ಡ ಪಂಡಿತರು. ಅವರು ಸುಮಾರು ಹದಿನಾಲ್ಕು ಭಾಷೆಗಳಲ್ಲಿ ಮಾತಾಡ್ತಾ ಇದ್ರು, ಬರೀತಾ ಇದ್ರು ಅನ್ನುವ ಪ್ರತೀತಿ ಇದೆ. ಶಿಲಾ ಶಾಸನಗಳನ್ನ ಗ್ರಂಥ ಲಿಪಿಗಳನ್ನ ಕೂಡ ಓದುವಂಥ ಸಂಶೋಧಕರು ಅವರು.

ನಮ್ಮ ವಿಶ್ವೇಶ್ವರ ಶಿವಾಚಾರ್ಯರ ಹತ್ತಿರ ಹೋಗಿ ಪುಣ್ಯಾರಾಧನೆ ಇನ್ನು ನಾಲ್ಕು ದಿವಸದಲ್ಲಿ ಬರ್ತಾ ಇದೆ; ಅದಕ್ಕೆ ವೀರಭದ್ರ ಶಿವಾಚಾರ್ಯರ ಬಗ್ಗೆ ಏನಾದರು ದಾಖಲೆಗಳು ಇದ್ರೆ ಅವರ ಬಗ್ಗೆ ಸಣ್ಣ ಗ್ರಂಥವನ್ನಾದರೂ ಅಥವಾ ಪತ್ರಿಕೆಗಳಿಗಾದರು ಅವರ ಬಗ್ಗೆ ಲೇಖನ ಕೊಡ್ಲಿಕ್ಕೆ ಬರ್ತದೆ ಅಂದಾಗ ಅವರು ಎರಡು ಪುಸ್ತಕ ಕೊಟ್ಟರು. ಅವು "ಸ್ವಲೇಖ ಸಂಗ್ರಹ" "ಪರಲೇಖ ಸಂಗ್ರಹ". ಎರಡೂ ದೊಡ್ಡ ಪುಸ್ತಕಗಳು. ಅವುಗಳಲ್ಲಿ ತಾವು ಎಲ್ಲೆಲ್ಲಿ ಲೇಖನಗಳನ್ನು ಬರೆದಿದ್ರೋ ಯಾವ್ಯಾವ ಪತ್ರಿಕೆಗಳಲ್ಲಿ ಪ್ರಿಂಟ್ ಆಗಿತ್ತು ಎಲ್ಲವನ್ನು ಕತ್ತರಿಸಿ ಅಂಟಿಸಿದ್ರು. ಅದೊಂದು ರಿಕಾರ್ಡ್ ಮಾಡಿದ್ರು. ತಮ್ಮ ಬಗ್ಗೆ ತಮ್ಮ ಚರಿತ್ರೆ ಬಗ್ಗೆ ಯಾರ್ಯಾರು ಎಲ್ಲೆಲ್ಲಿ ಹೇಳಿದ್ರು ಅವೆಲ್ಲವನ್ನು ಕೂಡ ಸಂಗ್ರಹ ಮಾಡಿದ್ರು. ಆ ಗ್ರಂಥ ನಮಗೆ ಸಿಕ್ಕಾಗ ನಮಗೆ ಎಷ್ಟು ಸಮಾಧಾನ ಆಯ್ತು ಅಂದ್ರೆ, ಜೇನು ತುಪ್ಪಾನ ಹಿತ್ತಲಲ್ಲಿ ಇಟ್ಕೊಂಡು ನಾವು ಗುಡ್ಡ ಹುಡುಕುವಂತಾಯ್ತು ಎಂದುಕೊಂಡು ಸಂತೋಷವಾಯ್ತು. ಕೊನೆಗೆ ಅವರ ಬಗ್ಗೆ ನಾವು ಒಂದು ಸಣ್ಣ ಪುಸ್ತಕ ಬರೆದೆವು.

ಧಾರವಾಡದ ಒಬ್ಬರು ಪ್ರೊಫೆಸರ್ ಕಾಶಿಗೆ ಬಂದಿಂದ್ರು. ಅವರಿಗೆ ಹೇಳ್ದಾಗ, ಅವರ ದಾಖಲೆಗಳನ್ನು ಇಟ್ಟುಕೊಂಡು ಇದರ ಮೇಲೆ Ph.D. ಮಾಡ್ಬೇಕು ಸ್ವಾಮಿಗಳೇ ಅಂದ್ರು. ಅವರು ಹೇಳಿದ ಮಾತನ್ನು ಲಕ್ಷ್ಯ ಇಟ್ಟುಕೊಂಡು ಅದನ್ನ ಆಂಧ್ರದ ಸ್ವಾಮೀಜಿ ಒಬ್ಬರು ಮಾಡಿಯೂ ಬಿಟ್ರು. ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಅವರಿಗೆ "ವೀರಭದ್ರ ಶಿವಾಚಾರ್ಯರು ವೀರಶೈವ ಧರ್ಮಕ್ಕೆ ಮಾಡಿರುವಂಥ ಒಂದು ಯೋಗದಾನ ಏನು?" ಅನ್ನುವ ವಿಷಯದ ಮೇಲೆ Ph.D. ಸಿಕ್ಕಿದೆ. ಒಂದು ಪ್ರಬಂಧವೇ ಆಗಿ ಇವತ್ತು ಅದು ಮುದ್ರಣ ಆಗಿ ಬರ್ತದೆ. ಅವರು ತಮ್ಮ ದಾಖಲೆಗಳನ್ನು ತಾವೇ ಇಟ್ಟಿದ್ದಕ್ಕೆ ಇವತ್ತು ಅವರ ಗ್ರಂಥ ಆಯ್ತು. ಅಷ್ಟೆ ಅಲ್ಲ Ph.D. ಪ್ರಬಂಧವನ್ನು ಬರೆಯಲಿಕ್ಕೆ ಸಾಧ್ಯ ಆಯ್ತು. ಹಾಗೆ ನಮ್ಮ ಪರಂಪರೆ ಇತಿಹಾಸ ನೋಡಿದಾಗ ಸಾವಿರ ವರ್ಷಗಳ ಇತಿಹಾಸ ಇದೆ ಅಂತ ಹೇಳ್ತಾ ಇದ್ರೂ ಕೂಡ, ಯಾರಾದರೂ ನಿಖರವಾಗಿ ಸಂಶೋಧನೆ ಮಾಡುವಂತಹವರು ದಾಖಲೆಗಳನ್ನು ತೋರಿಸಿ ಅಂದಾಗ ನಮ್ಮಲ್ಲಿ ಅಷ್ಟು ಪ್ರಾಚೀನ ದಾಖಲೆ ಸಿಗದೇ ಇದ್ರು ಕೂಡ, ಸುಮಾರು ಒಂದೂವರೆ ಸಾವಿರ ವರ್ಷಗಳಷ್ಟು ಪ್ರಾಚೀನ ದಾಖಲೆಗಳನ್ನು ತೋರಿಸಲಿಕ್ಕೆ ಸಾಧ್ಯವಾಗಿದೆ. ಕಾಶೀ ಮಹಾಪೀಠದಲ್ಲಿ ಜಯನಂದದೇವ ಮಹಾರಾಜನು ದಾನ ಕೊಟ್ಟಿರುವಂಥ ಶಾಸನ ಇದೆ. ಅದು ಸುಮಾರು ೫೭೦ನೇ ಇಸವಿ ಅಂದ್ರೆ ಅದು ಹದಿನೈದು ನೂರು ವರ್ಷ ಪ್ರಾಚೀನವಾಗಿರುವಂತಹ ಶಾಸನ. ಅದು ನಮ್ಮ ಮಹಾಪೀಠದಲ್ಲಿದೆ. ಅದನ್ನ ಒಂದು ವಾದ ಬಂದಾಗ ಅಲಹಾಬಾದ್ ಹೈಕೋರ್ಟಿಗೆ ಕೊಡುವಂಥ ಪ್ರಸಂಗ ಬಂತು. ಆ ಕೋರ್ಟಿನವರು ಕೂಡ ಆ ದಾನ ಪತ್ರದ ಸತ್ಯಾಸತ್ಯತೆಯ ಬಗ್ಗೆ ಅದರ ಪ್ರಾಚೀನತೆಯ ಬಗ್ಗೆ ವಿಚಾರ ಮಾಡಿ ಸಂಶೋಧಕರಿಂದ ನಿರ್ಧಾರ ಮಾಡಿಸಿ ಇದು ಪ್ರಾಮಾಣಿಕವಾಗಿ ಬಂದದ್ದು ಎಂದು ನಿರ್ಧರಿಸಿದ್ದಾರೆ. ಅದಕ್ಕೆ ಹೈಕೋರ್ಟಿನ ಮೊಹರು ಬಿದ್ದ ಮೇಲೆ ನಮಗೆ ಸಮಾಧಾನ. ಆದರೆ ನಮ್ಮ ಪೀಠದಲ್ಲಿ ೧೫೦೦ ವರ್ಷಗಳ ಐತಿಹಾಸಿಕ ದಾಖಲೆ ಸಿಗುತ್ತದೆ ಎನ್ನುವ ಸಂತೋಷವನ್ನು ವ್ಯಕ್ತ ಮಾಡಬೇಕು.

ಎಲ್ಲೆಲ್ಲಿ ಯಾವಾಗ ಪಂಚಾಚಾರ್ಯರ ಬಗ್ಗೆ ವಿಚಾರ ಬರುತ್ತದಲ್ಲ ಅವಾಗ ಚತುರಾಚಾರ್ಯರ ಪುರಾಣ ಒಂದು ಅಡ್ಡ ಬರುತ್ತದೆ. ಪಂಚಾಚಾರ್ಯರು ಇದ್ದಿಲ್ಲ

ಮೊದಲು ನಾಲ್ಕೇ ಮಂದಿ ಆಚಾರ್ಯರು ಇದ್ದಿದ್ದು. ಐದನೆಯವರು ಯಾವಾಗ ಬಂದು ಸೇರಿದ್ರು? ಅನ್ನುವವರು ಬಹಳ ಮಂದಿ ಆಗಿದ್ದಾರೆ. ಆದರೆ ಆರ್.ಸಿ. ಹಿರೇಮಠರವರು ಇದ್ದಾಗ ನಾವು ಒಂದು ಸಾರಿ ಕೇಳಿದೆವು. ನಾವು ಕನ್ನಡ ಪುರಾಣ ನೋಡಿರಲಿಲ್ಲ. ಚತುರಾಚಾರ್ಯ ಪುರಾಣ ಇದೇಂತ ತಿಳಿಯಿತು. ನಾಲ್ಕೇ ಮಂದಿ ಆಚಾರ್ಯರದು ಯಾಕೆ ಬರೆದರು. ಐದನೇ ಆಚಾರ್ಯರದು ಯಾಕೆ ಬರೀಲಿಲ್ಲಾ ಅನ್ನುವ ವಿಚಾರ ಮಾಡಿದಾಗ, ಅವರೊಂದು ಮಾತು ಹೇಳಿದರು. ಗ್ರಂಥವನ್ನು ಬರೀವಂಥ ವ್ಯಕ್ತಿ ಮೊಟ್ಟ ಮೊದಲು ಮಂಗಳಾಚರಣಾಂತ ಮಾಡ್ತಾನೆ, ಗುರುಗಳದೂ ದೇವರದೂ ಸ್ತುತಿ ಮಾಡಿ ತನಗೆ ಯಾವುದೇ ವಿಘ್ನಗಳು ಬರಬಾರದು ಅನ್ನುವ ದೃಷ್ಟಿಯೊಳಗೆ ಮಂಗಳಾಚರಣ ಮಾಡ್ತಾನೆ. ಆತ ಚತುರಾಚಾರ್ಯ ಪುರಾಣವನ್ನ ಬರೆದಿದ್ರೂನು ಕೂಡ ಅದರಲ್ಲಿ ಪಂಚಾಚಾರ್ಯರ ಸ್ತುತಿ ಇದೆ. ರೇವಣಸಿದ್ಧರ ಸ್ತುತಿ ಇದೆ. ಮರುಳಾರಾಧ್ಯರ ಸ್ತುತಿ ಇದೆ. ಏಕೋರಾಮಾರಾಧ್ಯರ ಸ್ತುತಿ ಇದೆ. ವಿಶ್ವಾರಾಧ್ಯರ ಸ್ತುತಿ ಇದೆ. ಅನ್ನುವುದನ್ನು ತೋರಿಸಿದರು. ಅವನು ವಿಶ್ವಾರಾಧ್ಯರ ಸ್ತೋತ್ರ ಮಾಡಿದ್ದಾನೆ. ಅಂದ್ರೆ ವಿಶ್ವಾರಾಧ್ಯರು ಇದ್ದರು ಅನ್ನುವುದು ಅವನಿಗೆ ಗೊತ್ತಿತ್ತು. ಮತ್ತೆ ಪುರಾಣದೊಳಗ್ಯಾಕೆ ಉಲ್ಲೇಖ ಮಾಡಲಿಲ್ಲ? ವಿಚಾರ ಮಾಡಿ ನಾವೊಂದು ಕಲ್ಪನೆ ಮಾಡ್ತೀವಿ. ಒಂದು ಗ್ರಂಥವನ್ನು ಬರಲಿಕ್ಕೆ ಒಬ್ಬ ವ್ಯಕ್ತಿ ಪ್ರಾರಂಭ ಮಾಡಿದ್ರೆ ಅವನೇ ಮುಗಿಸಬೇಕೆಂಬುದೇನೋ ನಿಜ. ಆದರೆ ಒಮ್ಮೊಮ್ಮೆ ಆ ಗ್ರಂಥವನ್ನ ಪೂರ್ಣ ಮಾಡದಲೆ ಅವನ ಆಯಸ್ಸು ಮುಗೀತು ಅಂದ್ರೆ ಆತ ಕೈಲಾಸಕ್ಕೆ ಹೋಗಬಹುದು. ಹಾಗೆ ನಮ್ಮ ವಿಚಾರದೊಳಗೆ ಆತ ಐದು ಮಂದಿ ಆಚಾರ್ಯರ ಪುರಾಣವನ್ನ ಬರೀಲಿಕ್ಕೆ ಪ್ರಾರಂಭ ಮಾಡಿದ ನಾಲ್ಕು ಮಂದಿ ಆಚಾರ್ಯರ ಬಗ್ಗೆ ಬರೆಯೋದರ ಬಗ್ಗೆ ಅವನ ಆಯುಷ್ಯ ಮುಗಿದು ಹೋಯಿತು. ಮುಂದೆ ಸಿಗುವಂಥದ್ದನ್ನ ತೊಗೊಂಡು ಸಂಪಾದನೆ ಮಾಡಿ ಪ್ರಿಂಟ್ ಮಾಡುವರಿಗೆ ನಾಲ್ಕೇ ಮಂದಿ ಆಚಾರ್ಯರ ಚರಿತ್ರೆ ಇದೆ ಎಂದು ಚತುರಾಚಾರ್ಯರ ಪುರಾಣ ಎಂದು ಹೆಸರಿಟ್ಟರಾಯ್ತು ಅಂದ್ಕೊಂಡು ಹಾಗೆ ಮಾಡಿರಬಹುದು.

ಕಾಶೀ ದಾಟಿ ಕೇದಾರಕ್ಕಿರುವಂಥ ಪುರಾಣ ಬರೀತಾನೆ, ಆದರೆ ಕಾಶೀದು ಯಾಕೆ ಬರೆಯಲಾಗಿಲ್ಲ ಆತ? ಚತುರಾಚಾರ್ಯರ ಪುರಾಣದಲ್ಲಿ ಕಾಶೀ ಪೀಠದ ವಿಚಾರ ಇಲ್ಲಾಂದ್ರ ಮಾತ್ರಕ್ಕೆ ಕಾಶೀ ಪೀಠವೇ ಇಲ್ಲಾಂತ ಹೇಳುವಂತಿಲ್ಲ. ಇವತ್ತು ಕಾಶೀ ಮಹಾಪೀಠದಲ್ಲಿ ಇರುವಷ್ಟು ಐತಿಹಾಸಿಕ ದಾಖಲೆಗಳನ್ನು ಬೇರ ಕಡೆ ಎಲ್ಲೂ ಇಲ್ಲ. ಇನ್ನೊಂದು ವಿಚಾರ. ಕಾಶೀಮಹಾಪೀಠದ ಒಂದು ಶಾಖಾಮಠ ನೇಪಾಳದ ಭಕ್ತಪುರದಲ್ಲಿ ಇದೆ. ಭಕ್ತಪುರದ ಇತಿಹಾಸ ನೋಡಿದಾಗ ಸುಮಾರು ೪ನೇ ಶತಮಾನದಲ್ಲಿ ಭಕ್ತಪುರ ಇತ್ತು. ಎಂದು ಇತಿಹಾಸಕಾರರು ಹೇಳ್ತಾರೆ. ಎಷ್ಟೊಂದು ಅತ್ಯಂತ ಪ್ರಾಚೀನವಾಗಿರುವಂಥ ಭಕ್ತಪುರದೊಳಗೆ ಜಂಗಮವಾಡಿ ಮಠ ಇವತ್ತಿಗೂ ಇದೆ. ಅಲ್ಲಿ ವಿಶ್ವಮಲ್ಲರಾಜ ಕೊಟ್ಟಿರತಕ್ಕಂಥ ದಾನದ ಶಿಲಾಶಾಸನ ಕೂಡ ವಿರಾಜಮಾನವಾಗಿದೆ. ಆ ಮಠದ ಪರಿಸರದಲ್ಲಿ ಸುಮಾರು ೭೦-೮೦ ಜಂಗಮ ಪರಿವಾರಗಳು ಇವತ್ತೂ ಕೂಡ ಇವೆ. ಅವರ ಅಡ್ಡ ಹೆಸರು ಜಂಗಮಾಂತಲೇ ಇದೆ. ಅವರು ತಮ್ಮ ಮಕ್ಕಳಿಗೆ ದೀಕ್ಷಾ ಶಿಕ್ಷಾ ಮಾಡಬೇಕಾದರೆ ಕಾಶೀ ಜಂಗಮವಾಡಿ ಮಠಕ್ಕೆ ಬಂದು ಅವರು ಲಿಂಗಧಾರಣೆಯನ್ನು ಮಾಡಿಸಿಕೊಂಡು ಹೋಗುವಂಥ ಪರಂಪರೆಯನ್ನು ಇಟ್ಟುಕೊಂಡು ಇದ್ದಾರೆ. ಹೀಗೆ ಯಾವುದೇ ಒಂದು ಪುರಾಣದಲ್ಲಿ

ಇಲ್ಲಾಂದ ಮಾತ್ರಕ್ಕೆ ಅದನ್ನ ಅಲ್ಲಗಳೆಯುವುದಕ್ಕೆ ಆಗೋದಿಲ್ಲ. ಇರುವಂಥ ಮಠಗಳ ಪ್ರಾಚೀನತೆಯನ್ನು ನೋಡಿದಾಗ ಕಂಡು ಬರುತ್ತದೆ. ಆದ್ದರಿಂದ ಪಂಚಾಚಾರ್ಯರು ಮೊದಲು ಇದ್ದಿಲ್ಲ ನಡುವೆ ಬಂದು ಸೇರಿಕೊಂಡರು ಅನ್ನುವ ವಿಚಾರ ಸರಿಯಾಗಿರುವಂತಹುದಲ್ಲ. ಪಂಚಪೀಠಗಳು ಸನಾತನವಾಗಿರುವಂತಹವು. ಪಂಚಪೀಠಗಳ ಪಂಚಾಚಾರ್ಯರು ಅನೇಕ ಶಾಖಾಮಠಗಳನ್ನು ದೇಶ ಮಧ್ಯದಲ್ಲಿ ಸ್ಥಾಪನೆ ಮಾಡಿ ತಾವು ಕೊಟ್ಟಿರುವಂತಹ ಸಂದೇಶವನ್ನು ನೇರವಾಗಿ ಜನರಿಗೆ ಮುಟ್ಟಿಸುವ ವ್ಯವಸ್ಥೆಯನ್ನ ಮಾಡಿದ್ದಾರೆ. ಆದ್ದರಿಂದ ಪಂಚಾಚಾರ್ಯರ ಬಗ್ಗೆ, ಪಂಚಾಚಾರ್ಯರ ಪ್ರಾಚೀನತೆ ಬಗ್ಗೆ ಅನಾವಶ್ಯಕ ವಾದಗಳನ್ನ ಮಾಡುವುದು ಬೇಡ.

ಸಂಸ್ಕಾರಗಳಲ್ಲಿ ಸಲ್ಲದ ಬದಲಾವಣೆಗಳು

ಈ ವಚನಗಳ ಆಧಾರದ ಮೇಲೆ ವೀರಶೈವರ ಸಂಸ್ಕಾರದ ಬಗ್ಗೆ ಒಂದು ನಿಬಂಧನೆಯನ್ನು ಓದ್ತಾ ಇರುವಾಗ ಅನೇಕ ಜನಗಳು ಪ್ರಶ್ನೆ ಮಾಡಿದ್ದಾರೆ. ಮುಖ್ಯವಾಗಿ ವಿವಾಹದ ಪ್ರಸಂಗ ಬಂದಾಗ ಅಕ್ಷತಾ ಹಾಕಬೇಕು ಅಂತ ನಿಯಮವಿದೆ. ಈಗ ಕೆಲವು ಜನ ಹೂವು ಹಾಕಬೇಕು ಅನ್ನುವ ವಿಚಾರ ಇತ್ತೀಚಿಗೆ ಬಂದಿದೆ. ಅದಕ್ಕೆ ಹೂವು ಹಾಕಬೇಕೋ, ಅಕ್ಷತೆ ಹಾಕಬೇಕೊ ಅನ್ನೊ ಪ್ರಶ್ನೆ ಏಳ್ತದೆ. ಅದಕ್ಕೆ ನಾವು ಏನು ಮಾಡ್ಬೇಕು? ಆದರೆ ಸುಮಾರಾಗಿ ಇತ್ತೀಚಿಗೆ ೨೦-೩೫ ವರ್ಷದಲ್ಲಿ ಈ ವಿಚಾರ ಬಂದಿದೆ. ಅದಕ್ಕಿಂತ ಪೂರ್ವದಲ್ಲಿ ಈ ವಿಚಾರ ಬಂದಿರಲಿಲ್ಲ. ಎಲ್ಲರೂ ಅಕ್ಷತಾ, ಜೋಳ ಹಾಕುತ್ತಿದ್ದರು. ಅಕ್ಷತಾ ಹಾಕಿದರೆ ಜೋಳ ಹಾಕಿದರೆ ಏನು ವಿಚಾರ ಮಾಡ್ತಾರೆಂದ್ರೆ, ಅವು ತಿನ್ನುವ ಪದಾರ್ಥಗಳು, ಧಾನ್ಯಗಳು, ಅನ್ನ ಚೆಲ್ಲಬಾರದು, ತುಳಿಬಾರದು ಅನ್ನುವ ವಿಚಾರಕ್ಕಾಗಿ ಲಗ್ನದಲ್ಲಿ ಅಕ್ಕಿ ಹಾಕದೆ ಜೋಳ ಹಾಕದೆ ಹೂವನ್ನು ಹಾಕಬೇಕು ಅನ್ನುವ ವಿಚಾರವನ್ನು ಹೇಳ್ತಾ ಇದ್ದಾರೆ. ಲಗ್ನದಲ್ಲಿ ವಧುವರರಿಗೆ ಹಾಕಿದಂತ ಅಕ್ಕಿ ಜೋಳ ಉಪಯೋಗಕ್ಕೆ ಬರ್ತದೋ ಹಾಳಾಗ್ತದೋ ಅನ್ನುವ ವಿಚಾರ ಮಾಡಿ. ಹಾಕಿರುವಂತ ಅಕ್ಕಿ ಕಾಳನ್ನ ಬಳಿದುಕೊಂಡು ಹೋಗಿ ಅನ್ನ ಮಾಡಿ ಊಟ ಮಾಡುವವರು ಇದ್ದಾರೆ. ಅದಕ್ಕೆ ಈ ನಿಮಿತ್ತವಾಗಿ ನಮಗೆ ಸೀದಾ ಅಕ್ಕಿಯನ್ನು ದಾನ ಮಾಡದಿದ್ದರೂ ವಧುವರರಿಗೆ ಅಕ್ಷತಾ ರೂಪದಲ್ಲಿ ಆಶೀರ್ವಾದಾನೂ ಆಗಿರಬೇಕು, ಬಿದ್ದಿರುವಂಥ ಅಕ್ಕಿಕಾಳನ್ನು ಆಯುದ್ಕೊಂಡು ಒಬ್ಬರ ಜೀವನ ಆಗಬೇಕು ಅನ್ನುವ ವಿಚಾರ ಇದರಲ್ಲಿ ಅಡಗಿಕೊಂಡಿದೆ. ಶಿವಶರಣರಲ್ಲಿ ಒಬ್ಬ ಶರಣ ಇದ್ದಾನೆ, ಆಯ್ದಕ್ಕಿ ಮಾರಯ್ಯ ಅಂತ. ಅವನು ಅಂಗಳದೊಳಗೆ ಬಿದ್ದಂತ ಅಕ್ಕಿ ಆರಿಸಿಕೊಂಡು ಬರ್ತಿದ್ದ. ಇಂಥ ಲಗ್ನ ಸಮಾರಂಭದಲ್ಲಿ ಹೋಗಿ ಕೂಡ ಆತ ಆರಿಸಿಕೊಂಡು ಬರಬಹುದಾಗಿತ್ತು. ಅಕ್ಕಿಕಾಳನ್ನು ಸುಮ್ಮನೆ ಯಾರೂ ಚೆಲ್ಲುವುದಿಲ್ಲ. ಅದಕ್ಕೆ ನಿಮಿತ್ತಬೇಕು. ಈ ಘಟನೆ ನಮಗೆ ಏನು ತೋರಿಸ್ತದೆ ಅಂದ್ರೆ ನಾವು ಚೆಲ್ಲಿರುವಂಥ ಅಕ್ಕಿಗಳು ಅವು ನಿಷ್ಪ್ರಯೋಜನ ಆಗೋದಿಲ್ಲ ಮತ್ತೊಬ್ಬರಿಗೆ ಉಪಯೋಗಕ್ಕೆ ಬರ್ತಾ ಇವೆ. ಹಾದು ಕಾಲಲ್ಲಿ ತುಳೀತೀವಲ್ಲ ಅಂತ ಕೇಳಿದರೆ, ಎತ್ತು ತುಳಿದ ಮೇಲೆ ರೈತ ತುಳಿದ ಮೇಲೆ ನಿಮ್ಮ ಕೈಲಿ ಬರುತ್ತದೆ. ತುಳಿಯದ ಅಕ್ಕಿ, ಜೋಳ ಯಾರಿಗೂ ಸಿಗುವ ಹಾಗಿಲ್ಲ. ನಾವು ಪಕ್ವ ಮಾಡ್ತೀವಲ್ಲ (ಅನ್ನ) ಅದನ್ನ ತುಳೀಬಾರದು. ಅದು ಪ್ರಸಾದ ಆಗುತ್ತದೆ. ಅದನ್ನ ದೇವರಿಗೆ ನೈವೇದ್ಯ ಮಾಡಿ ಸ್ವೀಕಾರ ಮಾಡಬೇಕು ಅನ್ನುವ ದೃಷ್ಟಿಯೊಳಗೆ ಕುದಿಸದೇ ಇರುವಂತ ಕಾಳುಗಳನ್ನು ತುಳಿದರೂ ತಪ್ಪಿಲ್ಲ. ಪರಂಪರೆಯಲ್ಲಿ ಬಂದಿರತಕ್ಕಂಥ ಪದ್ಧತಿಯನ್ನು ನಡೆಸಿಕೊಂಡು ಹೋಗುವಂತಹುದೇ ಸೂಕ್ತ.

ಕಾಶೀನಾಥ ಶಾಸ್ತ್ರಿಗಳು ಸಮಾಜವನ್ನು ಒಡೆಯಲಿಲ್ಲ

ನಮ್ಮ ಸಂಗನ ಬಸವ ಸ್ವಾಮೀಜಿಯವರು ನಮ್ಮ ಸಮಾಜ ಎರಡು ಭಾಗ ಆಗಲಿಕ್ಕೆ ಕಾಶೀನಾಥ ಶಾಸ್ತ್ರೀಗಳೇ ಕಾರಣ ಅನ್ನುವ ಮಾತನ್ನು ಹೇಳಿದರು. ಇದರಲ್ಲಿ ಎಷ್ಟು ಸತ್ಯ, ಅಸತ್ಯ ಅನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಒಂದು ವಿವಾದ ಹುಟ್ಟ ಬೇಕಾದರೆ ಒಬ್ಬ ವ್ಯಕ್ತಿಯಿಂದ ಹುಟ್ಟುವುದಿಲ್ಲ. ಎರಡು ಕೈ ಬಡಿದಾಗ ಚಪ್ಪಾಳೆಯಾಗುತ್ತೆ ಅಂತ ತಿಳಕ್ಕೊಂಡು, ಹಾಗೆ ಅವರಿಗೆ ಸಂವಾದಿಯಾಗಿ ವಿರೋಧವಾಗಿ ಮತ್ತೊಬ್ಬರು ಇದ್ದಿರಬಹುದು. ಆದರೆ ವಾಸ್ತವಿಕವಾಗಿ ವಿಚಾರ ಮಾಡಿದ್ದೇ ಆದರೆ ಕಾಶೀನಾಥ ಶಾಸ್ತ್ರೀಗಳವರು ವೀರಶೈವಧರ್ಮದ ಪ್ರಾಚೀನತೆಯ ಸಂಶೋಧನೆಯ ಬಗ್ಗೆ ಅವರು ಎಷ್ಟು ದೊಡ್ಡ ಕೆಲಸ ಮಾಡಿದ್ದಾರೆ ಅಂತ ಕೇಳಿದರೆ, ಒಬ್ಬ ದೊಡ್ಡ ಸಂಶೋಧಕರೂ ಕೂಡ ಮಾಡುವುದಕ್ಕೆ ಸಾಧ್ಯವಿಲ್ಲದಷ್ಟು ಕಾರ್ಯವನ್ನು ಮಾಡಿದ್ದಾರೆ. ಸಾಮಾನ್ಯವಾಗಿ ಲಿಂಗಮಹಾಪುರಾಣದೊಳಗೆ ವೀರಶೈವರ ಷಟ್‌ಸ್ಥಲ ಸಿದ್ಧಾಂತವನ್ನು ಬಹಳ ಸುಂದರವಾಗಿ ಬರೆದಿರುವುದನ್ನು ನೋಡುವುದಕ್ಕೆ ಸಾಧ್ಯವಾಗುತ್ತದೆ. ಅವರು ಭಾಷಣಗಳನ್ನು ಮಾಡಿದರೆ ಅವುಗಳನ್ನೇ ಗ್ರಂಥರೂಪದಲ್ಲಿ ಪ್ರಿಂಟ್ ಮಾಡಿದಾಗ ಲಿಂಗಪುರಾಣದೊಳಗೆ ವೀರಶೈವರ ವಿಷಯ ಎಲ್ಲಿ ಬರುತ್ತದೆ ಅನ್ನೋದನ್ನೇ ಅವರು ಪುರಾಣಗಳ ಅಂಕಿ ಸಂಖ್ಯೆಗಳನ್ನು ಬರೆದುದನ್ನು ತಿಳಿದುಕೊಂಡ್ವಿ. ಆಮೇಲೆ ಲಿಂಗಪುರಾಣಗಳನ್ನು ನೋಡಿದಾಗ ಆ ಶ್ಲೋಕಗಳೇ ಲಿಂಗಪುರಾಣದಲ್ಲಿ ಸಿಗಲಿಲ್ಲ. ಕಾಶೀ ಮಹಾಮಠದಲ್ಲೆ ಒಂದು ಲಿಂಗ ಪುರಾಣ ಸಿಗ್ತು. ಸುಮಾರು ಒಂದು ನೂರ ಇಪ್ಪತ್ತೈದು ವರ್ಷಗಳ ಹಿಂದೆ ಹೂವಾಡ ವೆಂಕಟರಾಯ ಅನ್ನುವವರು ೧೮ ಪುರಾಣಗಳನ್ನು ಮೊಟ್ಟ ಮೊದಲು ಪ್ರಕಾಶನ ಮಾಡಿದರು. "ಅಷ್ಟಾದಶ ಪುರಾಣೋದ್ಧಾರಕ" ಅನ್ನುವ ಪ್ರಶಸ್ತಿ ಅವರಿಗೆ ಸಿಕ್ಕಿದೆ. ಆ ಪುರಾಣವನ್ನು ನೋಡ್ತಾ ಇದ್ದಾಗ ಉತ್ತರ ಭಾಗದ ೨೧ನೆಯ ಅಧ್ಯಾಯದೊಳಗೆ ಸುಮಾರು ನೂರಾರು ಶ್ಲೋಕದಲ್ಲಿ ವೀರಶೈವಸಿದ್ಧಾಂತ ವರ್ಣನೆ ಮಾಡಿರುವುದು ಸಿಗುತ್ತದೆ. ಆದರೆ ಇತ್ತೀಚೆಗೆ ನಂತರ ಪ್ರಿಂಟ್ ಆಗಿರುವಂತ ಪುರಾಣಗಳನ್ನು ಸುಮಾರು ೭೦-೮೦ ಶ್ಲೋಕಗಳನ್ನು ತೆಗೆದು ಹಾಕಿ ಪ್ರಿಂಟ್ ಮಾಡಿದ್ದು ಅಪಚಾರ. ಕಾಶೀನಾಥ ಶಾಸ್ತ್ರಿಗಳು ಬಹಳ ದೊಡ್ಡ ಸಂಶೋಧಕರು. ಅವರು ಯಾವುದೇ ಪ್ರಕಾರ ಅಪಚಾರ ಮಾಡಿರುವುದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಅವರು ವೀರಶೈವಧರ್ಮದ ಪ್ರಾಚೀನತೆ ಬಗ್ಗೆ ಸಂಶೋಧನೆ ಮಾಡಿದ್ದಾರೆ. ಆದರೆ ವಾದ ಮಾಡೋ ಕಾಲಕ್ಕೆ ಪಂಚಾಚಾರ್ಯರ ಬಗ್ಗೆ ವಾದ ಮಾಡಿರಬಹುದು ಆದರೆ ಭೇದ ಮಾಡುವಂತ ವಿಚಾರ ಇರಲಿಕ್ಕಿಲ್ಲ ಅನ್ನುವ ಒಂದು ಸ್ಪಷ್ಟತೆಯನ್ನು ಕೂಡ ಈ ಸಂದರ್ಭದಲ್ಲಿ ನೀಡ್ತಾ ಇದ್ದೇವೆ.

ಎಲ್ಲರಿಗೂ ಜ|| ವಿಶ್ವಾರಾಧ್ಯರು, ಕಾಶಿಯ ವಿಶ್ವನಾಥ ಸ್ವಾಮಿ ಮತ್ತು ಅನ್ನಪೂರ್ಣಾದೇವಿ ಆಯುರಾರೋಗ್ಯ ಸಕಲ ಸಂಪದವನ್ನು ಅನುಗ್ರಹಿಸಲಿ ಎಂದು ಹಾರೈಸುತ್ತೇವೆ.

□□

೨. ಪೂಜ್ಯ ಉಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರರಾದ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ ಪಾದಂಗಳವರ ಆಶೀರ್ವಚನ

ವೀರಶೈವ ಅನ್ನುವುದು ಬಹಳ ಸನಾತನವಾಗಿರುವಂತಹದು. ವೀರಶೈವಧರ್ಮ ಪ್ರಾಕ್ಟಿಕಲ್ ಮತ್ತು ಥಿಯರಿ ಸಮಾನವಾಗಿರುವಂತಹ ಧರ್ಮ. ಅದನ್ನು ಬಿಟ್ಟು ನಾವೇನಾಗಿದ್ದೀವಿ ಅಂದ್ರೆ ಸಮಸ್ಯೆಗಳ ಸುರುಳಿಯಲ್ಲಿ ಸಿಲುಕಿದ್ದೇವೆ. ಮೇಲಿಂದ ಮೇಲೆ ಇಂತಹ ವಿಚಾರಸಂಕಿರಣಗಳನ್ನು ಮಾಡಬೇಕು. ಬರೀ ಸ್ವಾಮಿಗಳು ಜ್ಞಾನಿಗಳಾಗೋದಲ್ಲ ಜನರೆಲ್ಲಾ ಜ್ಞಾನಿಗಳಾಗಬೇಕು.

ವೀರಶೈವರು ಆಗಿರುವಂತಹವರು ವೀರಶೈವ ಅನ್ನುವ ಶಬ್ಧವನ್ನೇ, ಪ್ರಯೋಗದಲ್ಲಿ ತರಬೇಕು ಹೊರತಾಗಿ ನಾವೇನಾದರು ಲಿಂಗಾಯತ ಅನ್ನುವ ಶಬ್ಧವನ್ನ ಪ್ರಯೋಗದಲ್ಲಿ ತಂದರೆ, ಕರ್ನಾಟದದವರಿಗಷ್ಟೇ ಲಿಂಗಾಯತ ಅನ್ನೊ ಶಬ್ಧ ಗೊತ್ತಾಗುತ್ತದೆ. ನಾವೇನಾದರು ಮಹಾರಾಷ್ಟ್ರಕ್ಕೆ, ಆಂಧ್ರಕ್ಕೆ ಹೋದರೆ, ಅಲ್ಲಿ ನೀವು ವೀರಶೈವರು ನಾವು ಬೇರೆ, ನೀವು ಬೇರೆ, ನಮ್ಮ ಗುರುಗಳು ಬೇರೆ, ನಿಮ್ಮ ಗುರುಗಳು ಬೇರೆ, ಎಂಬ ವಿಚಾರ ಬರುತ್ತೆ. ಹಾನಗಲ್ ಕುಮಾರಸ್ವಾಮಿಯವರು ಅಖಿಲಭಾರತ ವೀರಶೈವ ಮಹಾಸಭಾ ಅಂತ ಸ್ಥಾಪನೆ ಮಾಡಿದರು. ಅವರು ಅವತ್ತೇ ಲಿಂಗಾಯತ ಮಹಾಸಭಾ ಅಂತ ಹೆಸರು ಇಡಬಹುದಾಗಿತ್ತು. ಆದರೆ ಹಾಗೆ ಇಡಲಿಲ್ಲ. ವೀರಶೈವ ಅನ್ನೋ ಶಬ್ದ ಇಟ್ರು. ಹಾಗಾಗಿ ನೀವೆಲ್ಲರು ವೀರಶೈವರು ಅಂತ ಹೇಳಬೇಕು ಹೊರತಾಗಿ ಲಿಂಗಾಯತ ಅನ್ನೋದು ಪ್ರಚಲಿತವಾಗಬಾರದು. ಕನ್ನಡ ಭಾಷೆಯಲ್ಲಿ ಬಳಸಬಹುದು. ಆದರೆ ಮಹಾರಾಷ್ಟ್ರ, ಕರ್ನಾಟಕ, ಆಂಧ್ರಕ್ಕೆ ಹೋದಾಗ ನಾವು ವೀರಶೈವರು ಅಂದ್ರೆ ಕನ್ಯಾ ಕೊಡ್ತಾರೆ. ನಿಮ್ಮ ಮನೇಲಿ ಕನ್ಯಾ ಇದ್ದರೆ ಮಾಡ್ಕೊಂತಾರೆ. ಲಿಂಗಾಯತರೆಂದರೆ ನೀವು ಬೇರೆ ಅಂತ ತಿಳ್ಕೊಂತಾರೆ. ಆದಕ್ಕೆ ನಮ್ಮ ಮೂಲ ಸಿದ್ಧಾಂತಗಳೇನಿದೆ, ಪರಂಪರೆ ಏನಿದೆ, ಎಷ್ಟು ಸನಾತನವಾಗಿದೆ ಎಂಬುದನ್ನು ತಿಳಿದುಕೊಳ್ಳಿರಿ. ನಮ್ಮ ಧರ್ಮ ಪುರುಷರಿಗೂ ಸ್ತ್ರೀಯರಿಗೂ ಸಮಾನವಾಗಿದೆ. ಯಾರು ಗುರುದತ್ತ ಲಿಂಗವನ್ನು ಕಟ್ಟಿಕೊಂಡಿದಾರೊ ಅಂತವರಿಗೆ ವೀರಶೈವರು ಅನ್ನಬಹುದು. ಯಾರು ಕಟ್ಟಿಕೊಂಡಿಲ್ಲವೊ ಅವರು ವೀರಶೈವರು ಆಗಲಿಕ್ಕೆ

ಸಾಧ್ಯವಿಲ್ಲ. ನಮ್ಮ ವೀರಶೈವ ಪಂಚಪೀಠಗಳು ಪರಂಪರೆ ಎಷ್ಟು ಸನಾತನವಾಗಿದೆ ಅಂದರೆ, ಅವುಗಳಿಗೆ ಐದು ಸಾವಿರ ವರ್ಷಗಳ ಇತಿಹಾಸ. ದಾನ, ಧರ್ಮ ಕೊಟ್ಟಿರುವ ಇತಿಹಾಸ ಸಿಗುತ್ತದೆ. ಅದಕ್ಕೆ ಇನ್ನೂ ಪೂರ್ವಕ್ಕೆ ಹೋದರೆ ಎಷ್ಟೋ ಇತಿಹಾಸ ಸಿಗುವಂತಹದ್ದಾಗಿದೆ. ಇಂತಹ ಧರ್ಮದಲ್ಲಿ ಜನಿಸಿರುವರು ಎಷ್ಟು ಭಾಗ್ಯಶಾಲಿಗಳು. ಇದನ್ನು ಪ್ರಚಾರ ಮಾಡುವಂತಹವರು, ವಿಚಾರ ಮಾಡುವಂತಹವರು, ಇದನ್ನು ಆಚರಣೆ ತರುವಂತಹವರು, ಇವತ್ತು ನೀವೆ ಇರಬಹುದು. ಇವತ್ತು ವೀರಶೈವಧರ್ಮದವರು ವಿದ್ಯೆಯನ್ನು ಕೊಟ್ಟು ದಾನವನ್ನು ಕೊಟ್ಟು ಉದ್ಧಾರ ಮಾಡಿರುವಂತಹವರು. "ಸರ್ವೇ ಜನಾಃ ಸುಖಿನೋ ಭವಂತು" ಎನ್ನುವ ಧ್ಯೇಯ ಯಾವ ಧರ್ಮದಲ್ಲಿ ಇದೇ ಅಂದರೆ ವೀರಶೈವ ಧರ್ಮದಲ್ಲಿದೆ, ಎಲ್ಲಾ ಧರ್ಮದವರನ್ನು ಒಪ್ಪಿಕೊಂಡು ನಡೀತಕ್ಕಂಥ ಭಾವನೆಗಳು ಇವೆ. ಇವತ್ತು ವೀರಶೈವ ಮಠಗಳಲ್ಲಿ ಎಷ್ಟೋ ವಿದ್ಯಾರ್ಥಿಗಳು ತಯಾರಾಗಿ ಪ್ರಸಾದವನ್ನು ಸ್ವೀಕಾರಮಾಡಿ ದೊಡ್ಡ ದೊಡ್ಡ ಉದ್ಯಮಗಳಲ್ಲಿ ತೊಡಗಿದ್ದಾರೆ. ಇವತ್ತು ವೇದ, ಆಗಮ, ಉಪನಿಷತ್ತು, ಸಿದ್ಧಾಂತ ಶಿಖಾಮಣಿ. ವಚನಗಳು ಒಂದೇ ಅಂತ ಭಾವನೆಯಿಂದ ನಡೀಬೇಕು. ಅದಕ್ಕೆ ಆ ಭಾವನೆ ನಿಮ್ಮೆಲ್ಲರಿಗೂ ಬಂದಿರಬೇಕು.

ಕಾಶೀ ಜಗದ್ಗುರುಗಳ ಪ್ರವಚನ ಮತ್ತು ಆರ್ಶೀವಚನವನ್ನು ಕೇಳ್ತಾ ಇದ್ದರೆ, ಗ್ರಂಥಗಳನ್ನು ಓದ್ತಾ ಇದ್ದರೆ ನಮಗೆ ನಿಜವಾದ ಮರ್ಮ ತಿಳಿಯುತ್ತೆ. ಇವತ್ತು ಏನಾಗಿದೆ ಅಂದ್ರೆ, ಟೆನ್ಷನ್ ಜೀವನ ನಡೆಸುತ್ತಿದ್ದೇವೆ. ಇದೇ ರೀತಿ ಮುಂದುವರೆದರೆ ಹುಚ್ಚರ ಆಸ್ಪತ್ರೆಯನ್ನು ಹೆಚ್ಚು ಹೆಚ್ಚಾಗಿ ತೆಗೆಯಬೇಕಾಗುತ್ತದೆ. ಮತ್ತೆ ಶಾಂತಿ ಸಮಾಧಾನ ಸಿಗಬೇಕಾದರೆ ಇಷ್ಟ ಲಿಂಗವನ್ನು ಪೂಜೆ ಮಾಡಿದಾಗ ಮಾತ್ರ. ಯೋಗಾಸನ ಆಗಲೀ ಪ್ರಾಣಾಯಾಮ ಆಗಲಿ ಅನುಸಂಧಾನವಾಗಲಿ ಇವೆಲ್ಲವನ್ನು ಮಾಡ್ತಾ ಮಾಡ್ತಾ ಹೋದಾಗ, ನಮಗೆ ಶಾಂತಿ ಸಿಗುತ್ತದೆ. ಬಳ್ಳಾರಿ ನಗರದಲ್ಲಿ ಕಾಶೀ ಮಹಾಸ್ವಾಮಿಯವರ ಪ್ರವಚನ ನಡೆದಿತ್ತು. ವೀರಶೈವ ಪಡೆದ ದೀಕ್ಷೆ ರಶಿಯಾದ ಡ್ಯಾನಿಷ್ (ದಿನೇಶ್) ಅನ್ನುವವರು ಶಿವಯೋಗವನ್ನು ಕಲಿತಿದ್ದಾರೆ. ಬಳ್ಳಾರಿ ನಗರದಲ್ಲಿ ಮಹಾಸನ್ನಿಧಿಯ ಸಾನಿಧ್ಯದಲ್ಲಿ ನಮ್ಮ ಭಾರತೀಯ ಸಂಸ್ಕೃತಿ ಪ್ರಕಾರವಾಗಿ, ಅದರಲ್ಲೂ ವೀರಶೈವ ಧರ್ಮದ ಪ್ರಕಾರವಾಗಿ ಪಂಚ ಕಳಸವನ್ನು ಸ್ಥಾಪನೆ ಮಾಡಿಕೊಂಡು ವೀರಶೈವ ದೀಕ್ಷೆ ಪಡೆದ ರಶಿಯಾ ಕನ್ಯೆಯೊಂದಿಗೆ ವಿವಾಹ ಮಾಡಿಕೊಂಡರು. ಈ ರೀತಿಯಾಗಿ ಹೊರ ರಾಷ್ಟ್ರದಿಂದ ಬರತಕ್ಕಂತಹವರಿದ್ದಾರೆ. ನಮ್ಮವರು ವಿಶೇಷವಾಗಿ ಗಮನಕೊಟ್ಟು ವೀರಶೈವವನ್ನು ಆಚರಣೆಗೆ ತರಬೇಕು. ವೀರಶೈವ ಧರ್ಮದಲ್ಲಿ ಅಷ್ಟಾವರಣ, ಪಂಚಾಚಾರಗಳಿಂದ ಕೂಡಿದ ಷಟ್‌ಸ್ಥಲ ಮಾರ್ಗವಿದೆ. ಅಷ್ಟಾವರಣವೇ ಅಂಗವಾಗಿ ಪಂಚಾಚಾರವೇ ಕೂಡಿದ ಪ್ರಾಣವಾಗಿ ಷಟ್‌ಸ್ಥಲವೇ ಆತ್ಮವಾಗಿ ಇರುವ ಸಿದ್ಧಾಂತ ವೀರಶೈವ ಸಿದ್ಧಾಂತ. ಗುರು, ಲಿಂಗ, ಜಂಗಮ, ಇವು ಪೂಜ್ಯ ವಸ್ತುಗಳು. ಇವುಗಳನ್ನು ಪೂಜೆ ಮಾಡಬೇಕಾದರೆ ವಿಭೂತಿ, ರುದ್ರಾಕ್ಷಿ, ಮಂತ್ರ ಪೂಜಾ ಸಾಧನಗಳು. ಇವುಗಳ ಫಲವೆಂದರೆ ಪಾದೋದಕ ಪ್ರಸಾದ. ಸರಳವಾಗಿರುವಂಥ ಧರ್ಮ ವೀರಶೈವಧರ್ಮ. ಈ ವಿಚಾರಸಂಕಿರಣದಲ್ಲಿ ಬಹಳಷ್ಟು ವಿಚಾರ ಮಂಥನ ಮಾಡಿದ್ದೀರಿ. ಇದನ್ನು ಬರೀ ತಿಳ್ಕೊಳ್ಳೋದು ಅಷ್ಟೇ ಅಲ್ಲ ಪ್ರಚಾರವನ್ನೂ ಮಾಡಬೇಕು. ಇನ್ನು ವಿಶೇಷವಾಗಿ ಬಸವಣ್ಣನವರು ದೀಕ್ಷೆ ಪಡೆದ ಗುರುಗಳು ಯಾವ ಶಾಖಾದವರು

ಅಂದ್ರೆ, ಉಜ್ಜಯನಿಯ ಶಾಖಾದವರು. ಅವರೇ ಕೂಡಲಸಂಗಮದ ಜಾತವೇದರು. ಅವರಿಂದ ವೀರಶೈವ ದೀಕ್ಷೆ ಪಡೆದ ಬಸವಣ್ಣನವರು ಬಹಳಷ್ಟು ಧರ್ಮಪ್ರಚಾರ ಪ್ರಸಾರವನ್ನು ಮಾಡಿದರು. ಇವತ್ತು ಹುಬ್ಬಳ್ಳಿಯ ಸಿದ್ಧಾರೂಢರು ಯಾರೂಂದ್ರೆ ಉಜ್ಜಯನಿಯ ಶಾಖಾಮಠಾಧೀಶ್ವರರು ಆಗಿರುವಂಥ ಅಮರೇಶ್ವರದ ಶಿವಾಚಾರ್ಯರಿಂದ ಶಿವದೀಕ್ಷೆಯನ್ನು ಪಡೆದರು. ಇನ್ನು ಅಕ್ಕಮಹಾದೇವಿಗೆ ಯಾರು ಶಿವದೀಕ್ಷೆಯನ್ನು ಕೊಟ್ಟರು ಅಂದ್ರೆ ಶ್ರೀ ಶೈಲ ಶಾಖಾಮಠದ ಶ್ರೀ ಗುರುಲಿಂಗ ಶಿವಾಚಾರ್ಯರು. ಈ ರೀತಿಯಾಗಿ ಇತಿಹಾಸವನ್ನು ನೋಡ್ತಾ ಹೋದಾಗ ನಮ್ಮ ಮಠಗಳು ಪ್ರಾಚೀನ ಎಂಬುದು ತಿಳಿಯುತ್ತದೆ. ಕಾಶೀಪೀಠದ ಶಾಖಾಮಠ ನೇಪಾಳದಲ್ಲೂ ಇದೆ. ರಾಮೇಶ್ವರದಲ್ಲೂ ಇದೆ. ಎಲ್ಲಿ ಭೂಮಿ ಇದೆ, ಎಲ್ಲಿ ಮನೆಗಳಿದ್ದಾವೆ, ಎಲ್ಲಿ ಜನಗಳಿದ್ದಾರೆ. ಎಲ್ಲಿ ಮನಗಳಿದ್ದಾವೆ ಅಲ್ಲೆಲ್ಲಾ ಪಂಚಾಚಾರ್ಯರ ತತ್ತ್ವ ಇದೆ, ಅನ್ನೋದನ್ನ ಯಾರೂ ಮರೆಯಬಾರದು.

ಕಾಶಿಯಲ್ಲಿ ರಾಮದಾಸಗೌಡ ಅವರು ಭಾರತದ ಎಲ್ಲಾ ಗ್ರಂಥಗಳನ್ನು ನೋಡಿ ಹಿಂದುತ್ವ ಅನ್ನುವ ಗ್ರಂಥವನ್ನು ಹಿಂದಿಯಲ್ಲಿ ಬರೆದಿದ್ದಾರೆ. ಅದರಲ್ಲಿ ೭ಗನೇ ಅಧ್ಯಾಯ ಓದಿದಾಗ ಪಂಚಪೀಠಗಳ ಪರಂಪರೆ ಎಷ್ಟು ಸ್ಪಷ್ಟವಾಗಿ ಮೂಡಿ ಬಂದಿದೆ ಎಂಬುದು ಗೊತ್ತಾಗುತ್ತದೆ. ಅವರು ವೀರಶೈವರಲ್ಲ, ಅನ್ಯಧರ್ಮದವರಾದವರೂ ಸಹ ಅವರು ಪಂಚಪೀಠಾಧೀಶ್ವರ ಇತಿಹಾಸವನ್ನು ಬರೆದು ಕೊನೆಯಲ್ಲಿ ಭಕ್ತಿ ಭಂಡಾರಿ ಬಸವಣ್ಣನವರ ಬಗ್ಗೆ ಬರೆದಿರುವುದನ್ನು ಇಲ್ಲಿರುವಂಥ ಪಂಡಿತರು ಓದಿ ತಿಳಿದುಕೊಳ್ಳಬೇಕು.

□□

೩. ಶ್ರೀಮದ್ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೧೦೦ಲ ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ ಆಶೀರ್ವಚನ

ಓಂ ಪರ ಬ್ರಹ್ಮಣೇ ನಮಃ ಬ್ರಮರಾಂಭ ಸಹಿತ ಶ್ರೀ ಶೈಲಮಲ್ಲಿಕಾರ್ಜುನ ಸ್ವಾಮಿಯನ್ನು ಸ್ಮರಿಸಿಕೊಂಡು ಆದಿ ಜಗದ್ಗುರು ಪಂಡಿತಾರಾಧ್ಯರನ್ನು ಮೊದಲುಗೊಂಡು ಗುರುಪರಂಪರೆಯನ್ನು ಸ್ಮರಿಸಿ, ಶ್ರೀ ಜಗದ್ಗುರು ಪಂಚಾಚಾರ್ಯರ ಮಾನವ ಧರ್ಮಸಂಸ್ಥೆಯ ಜಿಲ್ಲಾ ಘಟಕ ಧಾರವಾಡ ಇವರ ಆಶ್ರಯದಲ್ಲಿ ವೀರಶೈವ ಅನುಸಂಧಾನ ಸಂಸ್ಥಾನ ಬೆಂಗಳೂರು ಇವರು ಹಮ್ಮಿಕೊಂಡಿರುವ ವಿಚಾರ ಸಂಕಿರಣ ವೀರಶೈವ ಧರ್ಮ: ಒಂದು ಪುನರವಲೋಕನ ಸಭೆಯ ಒಂದು ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಉಪಸ್ಥಿತರಿದ್ದು ಸಿಂಹಾಸನಾರೂಢರಾದ ಶ್ರೀಮದ್ ಕಾಶೀಜಗದ್ಗುರು ಹಾಗೂ ಶ್ರೀಮದ್ ಉಜ್ಜಯನಿ ಜಗದ್ಗುರುಗಳಿಗೆ ಅನಂತ ಪ್ರಣಾಮಗಳನ್ನು ಸಲ್ಲಿಸಿ. ಪರಮಾತ್ಮನಿಂದ ನಿರ್ಮಾಣವಾಗಿರುವಂತಹ ಈ ಜಗತ್ತಿನಲ್ಲಿ ಅನೇಕ ಜೀವಿಗಳು ಜೀವಿಸುವಂತೆ ಮನುಷ್ಯನು ಬದುಕಿ ಹೋಗುವಂಥ ವ್ಯವಸ್ಥೆ ಇದೆ. ಬದುಕು ಬಂಗಾರವಾಗಬೇಕಿದೆ. ಈ ಬದುಕಿನಿಂದ ಪರಮಾತ್ಮನಿಗೆ ಪ್ರಿಯವಾಗಬೇಕಿದೆ. ಆ ಒಂದು ವ್ಯವಸ್ಥೆಯನ್ನು ಹಮ್ಮಿಕೊಳ್ಳುವಂತಹ ವ್ಯವಸ್ಥೆಯನ್ನು ಪರಮಾತ್ಮ ಮನುಷ್ಯನಿಗೆ ಕರುಣಿಸಿದ್ದಾನೆ ವಿನಃ ಪ್ರಾಣಿ ಪಕ್ಷಿಗಳಿಗೆ ದಯಪಾಲಿಸಿಲ್ಲ.

ಶ್ರೀ ಸಿದ್ಧಾಂತ ಶಿಖಾಮಣಿ ವೀರಶೈವ ಗ್ರಂಥದ ಪತ್ಯದೋಪಾದಿಯಲ್ಲಿದೆ. ಮೊದಲಿಗೆ ಶೈವಾಗಮಗಳ ಸಂಪ್ರದಾಯವನ್ನು ಅನುಸರಿಸಿದಂಥ ಸಿದ್ಧಾಂತ ಶಿಖಾಮಣಿ ವೀರಶೈವ ಶಬ್ಧ ನಿರ್ವಚನದೊಂದಿಗೆ ವಿಷಯ ಪ್ರತಿಪಾದನೆಯನ್ನು ಆರಂಭ ಮಾಡಿದೆ. ಸಾಮಾನ್ಯವಾಗಿ ಸಿದ್ಧಾಂತ ಶಿಖಾಮಣಿ ಗ್ರಂಥವನ್ನು ರಚಿಸಿದಂಥ ಶಿವಯೋಗಿ ಶಿವಾಚಾರ್ಯರು ಮೊದಲಿಗೆ ಆ ಗ್ರಂಥಗಳ ಆಕರಗಳ ಬಗ್ಗೆ ಪರಿಚಯಿಸಿ ಅನಂತರ ವೀರಶೈವದ ಶಬ್ಧದ ನಿರ್ವಚನವನ್ನು ಹೇಳ್ತಾರೆ. "ವೀ" ಎಂದರೆ ವಿದ್ಯೆ- ಶಿವ-ಜೀವಪರ ಐಕ್ಯವನ್ನು ಬೋದಿಸತಕ್ಕಂತಹ ವಿದ್ಯೆ. ಯಾವ ಶೈವರು ಅದರಲ್ಲಿ ಆನಂದವನ್ನು ಪಡೆವರೋ ಅವರು ವೀರಶೈವರು; ಯಾವ ಜ್ಞಾನ ವೇದಾಂತ ಜನ್ಯವಾದುದೋ ಅದು ವಿದ್ಯೆ ಎಂಬುದಾಗಿ ಕರೆಯಲ್ಪಟ್ಟಿದೆ. ಅಂತಹ ವಿದ್ಯೆಯಲ್ಲಿ ಆನಂದಪಡತಕ್ಕಂಥವನು ವೀರ ಎಂಬುದಾಗಿ ಕರೆಯಲ್ಪಡುತ್ತಿದೆ. ಈ ವೀರ

ಎಂಬ ಶಬ್ಧದಲ್ಲಿ, 'ವೀ' ಎಂದರೆ ವಿದ್ಯೆ 'ರ' ಅಂದರೆ ರತಿ ಅಂದರೆ ಆನಂದ ಎಂಬುದು ವೀರ ಎಂಬ ಶಬ್ಧದಲ್ಲಿ ಅಡಕವಾಗಿದೆ. ಸಚ್ಚಿದಾನಂದ ರೂಪವಾಗಿರುವಂತ ವಿದ್ಯೆಯಲ್ಲಿ ಯಾರಿಗೆ ಆಸಕ್ತಿ ಇರುತ್ತದೊ ಅವರು ವೀರಶೈವರು ಎಂಬುದಾಗಿ ಸಿದ್ಧಾಂತ ಶಿಖಾಮಣಿಯಲ್ಲಿ ವೀರಶೈವ ಶಬ್ಧದ ನಿರ್ವಚನವನ್ನ ನೀಡುತ್ತಾರೆ. ಸಿದ್ಧಾಂತ ಶಿಖಾಮಣಿ ನಿರೂಪಿಸಿರುವಂತೆ ವೀರಶೈವ ಶಬ್ಧದ ನಿರ್ವಚನದಿಂದ ಶಿವ-ಜೀವರ ಸಾಮರಸ್ಯ ರೂಪದ ಐಕ್ಯವನ್ನು ಗುರಿಯಾಗಿಟ್ಟುಕೊಂಡು ಪ್ರವೃತ್ತವಾದ ಧರ್ಮ ವೀರಶೈವಧರ್ಮ ಎಂಬುದು ಸ್ಪಷ್ಟವಾಗಿದೆ.

ಸಾಮಾನ್ಯವಾಗಿ ಶಿವದೀಕ್ಷೆ ವೀರಶೈವದ ಪ್ರಮುಖವಾಗಿರುವಂತಹ ಧಾರ್ಮಿಕ ವಿಧಿ. ವೀರಶೈವ ಧರ್ಮಾಚರಣೆಗೆ ಶಿವದೀಕ್ಷೆಯೇ ಸೋಪಾನ. ಅದಕ್ಕಾಗಿ ಸದ್ಗುರು ಶಿಷ್ಯನಿಗೆ ಶಿವದೀಕ್ಷೆಯನ್ನು ಅನುಗ್ರಹ ಮಾಡುತ್ತಾನೆ. ದೀಕ್ಷಾ ವಿಷಯ ಶೈವಾಗಮೋತ್ತರ ಭಾಗಗಳಲ್ಲಿ ವಿಶೇಷವಾಗಿ ಕಾರಣಾಗಮದಲ್ಲಿ ನಿರೂಪಿತವಾಗಿದೆ. ಸಿದ್ಧಾಂತ ಶಿಖಾಮಣಿಯು ಶೈವಾಗಮದಲ್ಲಿ ನಿರೂಪಿತವಾಗಿರುವ ಅಭಿಪ್ರಾಯವನ್ನು ಗರ್ಭಿಕರಿಸಿಕೊಂಡು ದೀಕ್ಷಾ ಶಬ್ದದ ನಿರ್ವಚನವನ್ನು ಈ ರೀತಿಯಾಗಿ ಅಳವಡಿಸಿಕೊಂಡಿದೆ: "ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಂ। ಯಸ್ಮಾದತಃ ಸಮಾಖ್ಯಾತಾ ದೀಕ್ಷೇಯತೀಯಂ ವಿಚಕ್ಷಣೈಃ॥" ಅಂದರೆ ಯಾವುದರಿಂದ ದೀಯತೇ ಕ್ಷೀಯತೇ; ಯಾವುದು ಶಿವಜ್ಞಾನವನ್ನು ನೀಡುತ್ತದೆ ಮತ್ತೆ ಪಾಶಬಂಧನವನ್ನು ನಾಶ ಮಾಡುತ್ತದೆಯೋ ಅದನ್ನು ಜ್ಞಾನಿಗಳು ದೀಕ್ಷಾ ಎಂಬುದಾಗಿ ಕರೆದಿದ್ದಾರೆ. ಅಂದರೆ ದೀಕ್ಷೆಯನ್ನು ಪಡೆಯುವುದರಿಂದ ಸಾಧಕನಿಗೆ ಎರಡು ಪ್ರಯೋಜನಗಳು ಆಗುತ್ತವೆ. ಅದು ಒಂದು ಶಿವಜ್ಞಾನದ ಪ್ರಾಪ್ತಿ ಮತ್ತೊಂದು ಭವ ಬಂಧನದ ನಾಶ. ಶೈವಾಗಮಗಳಂತೆ ಸಿದ್ಧಾಂತ ಶಿಖಾಮಣಿ ಕೂಡ ತ್ರಿವಿಧ ದೀಕ್ಷಾ ಪ್ರಭೇದಗಳ ವಿಧಾನವನ್ನು ನಿರೂಪಣೆ ಮಾಡುತ್ತದೆ. ದೀಕ್ಷೆ ವೇಧಾ, ಕ್ರಿಯೆ ಮತ್ತು ಮನು ಎಂಬುದಾಗಿ ತ್ರಿವಿಧವಾಗಿದ್ದು ಅವುಗಳ ಸ್ವರೂಪವನ್ನು ಕೂಡ ಸಿದ್ಧಾಂತ ಶಿಖಾಮಣಿ ನೇರವಾಗಿ ಸ್ಪಷ್ಟಪಡಿಸುತ್ತದೆ. ಸಿದ್ಧಾಂತ ಶಿಖಾಮಣಿ ಶೈವಾಗಮಗಳ ಹೆಜ್ಜೆಯಲ್ಲಿಯೆ ದೀಕ್ಷೆಯ ಸ್ವರೂಪ ಮತ್ತು ಪ್ರಭೇದಗಳನ್ನು ನಿರೂಪಣೆ ಮಾಡಿರುವಂತಹದು ಗ್ರಂಥಾವಲೋಕನದಿಂದ ನಮಗೆ ಸ್ಪಷ್ಟವಾಗುತ್ತದೆ. ಅಷ್ಟಾವರಣ ವೀರಶೈವದ ಪ್ರಮುಖವಾಗಿರುವಂತ ಕಟ್ಟಳೆ. ಗುರುವಿನಿಂದ ದೀಕ್ಷಾ ಸಂಸ್ಕಾರದ ಮೂಲಕ ಲಿಂಗವನ್ನು ಪಡೆಯುವಂಥ ಭಕ್ತ ಅಷ್ಟಾವರಣ ಸಂಪನ್ನನಾಗುತ್ತಾನೆ. ಗುರು, ಲಿಂಗ, ಜಂಗಮ, ಭಸ್ಮ, ರುದ್ರಾಕ್ಷ, ಮಂತ್ರ, ಪಾದೋದಕ ಮತ್ತು ಪ್ರಸಾದ ಇವು ಅಷ್ಟಾವರಣಗಳು. ಅವು ಭಕ್ತನ ಧರ್ಮ ಶ್ರದ್ಧೆಯನ್ನು ರಕ್ಷಿಸುವ ಕವಚಗಳು. ಈ ಕಾರಣದಿಂದ ವೀರಶೈವ ಸಿದ್ಧಾಂತದಲ್ಲಿ ಅವುಗಳನ್ನು ಅಷ್ಟ ಆವರಣಗಳು ಎಂದು ಕರೆಯುತ್ತೇವೆ. ಅಷ್ಟಾವರಣದಲ್ಲಿ ಪ್ರಯೋಗವಾಗಿರುವಂತಹ ಆವರಣ ಶಬ್ದಕ್ಕೆ ರಕ್ಷಾಕವಚ ಎಂಬ ಅರ್ಥ ವೀರಶೈವ ಸಿದ್ಧಾಂತದಲ್ಲಿ ಸ್ಪಷ್ಟವಾಗಿದೆ.

□□

ಳ. ಶ್ರೀ ಮ.ನಿ.ಪ್ರ.ಸ್ವ. ಹೇಮಕೂಟ ಸಿಂಹಾಸನಾಧೀಶ್ವರ ಸಂಗನ ಬಸವ ಮಹಾಸ್ವಾಮಿಗಳು ಕೊಟ್ಟೂರು ಸಂಸ್ಥಾನ ಮಠ ಹೊಸಪೇಟೆ ಅವರ ಆಶೀರ್ವಚನ

ಧಾರವಾಡನಗರದಲ್ಲಿ ನಡೆಯುತ್ತಿರುವ ಈ ವಿಚಾರಸಂಕಿರಣದಲ್ಲಿ, ಆಸಕ್ತಿಯಿಂದ ಭಾಗವಹಿಸಿರುವ ಇಷ್ಟು ಜನಗಳನ್ನು ನೋಡಿದರೆ ಮಹಾ ಪೂಜ್ಯರಾಗಿರುವ ಶ್ರೀ ಕಾಶೀಜಗದ್ಗುರುಗಳ ಉದ್ದೇಶವೇನಿದೆಯೋ ಅದು ಈಡೇರುತ್ತದೆ ಎನ್ನಿಸುತ್ತದೆ. ಯಾಕೆಂದರೆ ಪೂಜ್ಯರಾದ ಕಾಶೀಜಗದ್ಗುರು ವೀರಶೈವ ಧರ್ಮದ ಸಮಗ್ರತೆ ಎಲ್ಲವೂ ಸಾಮಾನ್ಯ ಜನರಿಗೆ ಗೊತ್ತಾಗಬೇಕು. ಇವತ್ತಿನ ಗೊಂದಲಮಯ ಪರಿಸ್ಥಿತಿ ಏನಿದೆಯೋ ಅದು ನಿವಾರಣೆಯಾಗಬೇಕು. ಗುರು ವಿರಕ್ತರು ಒಂದಾಗಬೇಕು. ಸಮಾಜದ ಸಂಘಟನೆ ಸಮೃದ್ಧವಾಗಿ ಬೆಳೆಯಬೇಕು. ವೀರಶೈವ ಸಮಾಜ ಒಂದು ಬೃಹತ್ ಶಕ್ತಿಯಾಗಿದೆ. ಕರ್ನಾಟಕದಲ್ಲಿ ಅದನ್ನೇ ತೋರಿಸಿ ಕೊಡಬೇಕು ಎನ್ನುವ ಉದ್ದೇಶ ಶ್ರೀ ಕಾಶೀಜಗದ್ಗುರುಗಳವರದ್ದು. ನಾನು ಬಾಗಲುಕೋಟೆಯ ಸಮಾವೇಶದಲ್ಲಿ ಪಾಲ್ಗೊಂಡಿದ್ದೆ. ಅಷ್ಟೊಂದು ಜನರು ಆ ವಿಚಾರಸಂಕಿರಣದಲ್ಲಿ ಭಾಗವಹಿಸಿರಲಿಲ್ಲ. ಇವತ್ತು ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ಪಂಡಿತರು, ಅನುಭಾವಿಗಳು, ವಿಚಾರಶೀಲರು, ವೀರಶೈವ ಧರ್ಮದ ಅತ್ಯಂತ ಅಭಿಮಾನಿಗಳು, ತಾಯಂದಿರು ಕೂಡ ಈ ಸಂಕಿರಣದಲ್ಲಿ ಭಾಗವಹಿಸಿರುವುದನ್ನು ನೋಡಿದರೆ ಎಷ್ಟು ಆಸಕ್ತಿ ಇದೆ ಎನ್ನುವುದು ನಮಗೆಲ್ಲರಿಗೂ ಗೊತ್ತಾಗುತ್ತದೆ. ನಿಜವಾಗಿಯೂ ಮೂರುವರೆ ಕೋಟಿ ಜನ ವೀರಶೈವರು ಈ ದೇಶದಲ್ಲಿ ಇದ್ದೇವೆ. ವೀರಶೈವ ಧರ್ಮಕ್ಕೆ ಅತ್ಯಂತ ಪ್ರಾಚೀನವಾದ ಹಿನ್ನೆಲೆ ಇದೆ. ಇದು ಸ್ವತಂತ್ರವಾಗಿರುವಂಥಹ ಧರ್ಮ, ಅಂದರೆ ವೀರಶೈವ ಮತ್ತು ಲಿಂಗಾಯತ ಎನ್ನುವುದು ಎರಡು ಪರ್ಯಾಯ ಶಬ್ಧಗಳು, ಇಷ್ಟು ದೊಡ್ಡದಾಗಿರುತಕ್ಕಂಥ ಧರ್ಮ ಪರಂಪರೆ, ವೀರಶೈವ ಧರ್ಮದಲ್ಲಿ ಆಗಿ ಹೋಗಿರುವಂಥಹ ಮಹಾಸ್ವಾಮಿಗಳು ಸಂತರು ಇನ್ನಾವ ಧರ್ಮಗಳಲ್ಲಿಯೂ ಆಗಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಇಷ್ಟು ದೊಡ್ಡ ಪರಂಪರೆ, ಒಂದು ದಾರ್ಶನಿಕ ಹಿನ್ನೆಲೆ, ಮೂರುವರೆ ಕೋಟಿ ಜನಸಂಖ್ಯೆ ಇರುವಂಥಹ ವೀರಶೈವ ಧರ್ಮದಲ್ಲಿ ಕೆಲವರು ಅತೀ ಬುದ್ಧಿವಂತರು ಕೆಲವು ಗೊಂದಲಮಯ ಸ್ಥಿತಿಯನ್ನು ನಿರ್ಮಾಣ ಮಾಡುತ್ತಿದ್ದಾರೆನ್ನುವುದು ಅತ್ಯಂತ ದುಃಖದ ಸಂಗತಿ. ನಮ್ಮ ವೀರಶೈವ ಜನ ಬಹಳ ಭಕ್ತಿವಂತರು. ಸ್ವಾಮಿಗಳವರನ್ನು ಎಲ್ಲರನ್ನೂ ಬಹಳ ಭಕ್ತಿಯಿಂದ ಕಾಣುವಂಥಹ ಒಂದು ಭಾವನೆ ನಮ್ಮ ವೀರಶೈವ ಜನಾಂಗದಲ್ಲಿದೆ. ಅವರು ಗುರುವರ್ಗದವರಾಗಲಿ ವಿರಕ್ತ ವರ್ಗದವರಾಗಲಿ ಎಲ್ಲರನ್ನು

ಸಮಾನವಾಗಿ ಪೂಜ್ಯವಾಗಿ ಕಾಣುವಂಥ ಭಾವನೆ ನಮ್ಮ ವೀರಶೈವ ಧರ್ಮದಲ್ಲಿದೆ. ಅಷ್ಟೇ ಅಲ್ಲದೆ, ವೀರಶೈವ ಧರ್ಮೇತರ ಸ್ವಾಮಿಗಳನ್ನೂ ಕೂಡ ಅಷ್ಟೇ ಗೌರವದಿಂದ ಕಾಣುವಂಥಹ ವಿಶಾಲವಾದ ಮನೋಭಾವ ಇದೆ ಅನ್ನುವುದನ್ನು ಬಹಳ ಅಭಿಮಾನದಿಂದ ಹೇಳಬೇಕಾಗುತ್ತದೆ. ಅದಕ್ಕಾಗಿ ಇಷ್ಟು ವಿಶಾಲವಾದ ಧರ್ಮದಲ್ಲಿಯೂ ಕೆಲವು ಅತೀ ಬುದ್ಧಿವಂತರು ಬಸವ ಧರ್ಮವನ್ನು ಹುಟ್ಟು ಹಾಕಲು ಹೊರಟಿದ್ದಾರಲ್ಲ ಅದು ಅಪ್ರಸ್ತುತವಿದೆ. ಅದಕ್ಕೆಲ್ಲ ಕಾರಣವಿಲ್ಲ ಎನ್ನುವುದನ್ನು ಹೇಳಬೇಕಾಗುತ್ತದೆ. ವೀರಶೈವ, ಲಿಂಗಾಯತ ಎರಡೂ ಒಂದೇ. ನಮ್ಮದು ಆಗಮಗಳ ಕಾಲದಿಂದಲೂ ಶುರುವಾಗಿರುವಂತಹ ವೀರಶೈವ ಧರ್ಮ. ಅದರಲ್ಲಿ ಅಷ್ಟಾವರಣ, ಷಟ್‌ಸ್ಥಲ, ಪಂಚಾಚಾರದ ಆಲೋಚನೆ ಇದೆ. ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಪ್ರಮಥರು ದೊಡ್ಡದಾದ ಒಂದು ಕ್ರಾಂತಿಯನ್ನು ಮಾಡಿ ಅದಕ್ಕೆ ಹೊಸ ಆಯಾಮಗಳನ್ನು, ಸ್ವರೂಪವನ್ನು ಕೊಟ್ಟರು ಅನ್ನುವುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಇವತ್ತು ವೀರಶೈವ, ಲಿಂಗಾಯತ ಎನ್ನುವಂಥದ್ದು ಎರಡೂ ಒಂದೇ, ವೀರಶೈವ ಧರ್ಮದ ಒಂದು ಸಾಹಿತ್ಯ ಆಗಮಗಳಲ್ಲಿದೆ, ವೀರಶೈವ ಧರ್ಮದ ದರ್ಶನದ ಒಂದು ಸಾಹಿತ್ಯ ವಚನ ವಾಙ್ಮಯದಲ್ಲಿ ಬಹಳ ವಿಪುಲವಾಗಿ ಸಿಗುತ್ತದೆ. ಅನ್ನುವ ಮಾತನ್ನು ನಾನು ಹೇಳಬಹುದು. ಇವತ್ತಿನ ಪ್ರಬಂಧ ಮಂಡನಕಾರರಲ್ಲಿ ಇವತ್ತು ಶಿವಶರಣ ಗುರುಪರಂಪರೆ ಬಗ್ಗೆ ಬಹಳ ಸಂಶೋಧನಾತ್ಮಕವಾಗಿರುವಂಥಹ ಒಂದು ಪ್ರಬಂಧವನ್ನು ನಮ್ಮ ಡಾ|| ಎಂ. ಶಿವಕುಮಾರ ಸ್ವಾಮಿಗಳು ಮಂಡಿಸಿದರು ಅಂದರೆ ಈ ಗುರು ಪರಂಪರೆ ಹನ್ನೆರಡನೇ ಶತಮಾನದ ಹಿಂದಿನಿಂದಲೂ ಕೂಡ ಬಹಳ ಭವ್ಯವಾಗಿ ನಡೆದು ಬಂದಿದೆ. ಅದಕ್ಕೆ ಅವರಲ್ಲಿ ಕೆಲವು ಉದಾಹರಣೆಗಳನ್ನು ಕೊಟ್ಟು ಕೇಳಿದರು. ಬ್ರಹ್ಮಾಂಡ ಪುರಾಣದಲ್ಲಿ ಪಂಡಿತಾರಾಧ್ಯದಿಂದ ಯಾವ ನಮ್ಮ ದೇವರದಾಸಿಮಯ್ಯನವರಿಗೆ ಅಲ್ಲಿ ದೀಕ್ಷೆ ಆಯಿತು ಎಂಬ ವಿಚಾರವನ್ನು ಹೇಳಿದರು ಬಸವಣ್ಣನವರಿಗೆ ಜಾತಿವೇದ ಮುನಿಗಳಿಂದ ದೀಕ್ಷೆಯಾಯಿತು ಎಂಬ ಮಾತನ್ನು ಉಲ್ಲೇಖ ಮಾಡಿದರು. ಸಿಂಗಿರಾಜಪುರಾಣದಲ್ಲಿ ಸಿದ್ಧರಾಮೇಶ್ವರಿಗೆ ಯಾವ ರೇವಣಸಿದ್ದೇಶ್ವರರು ದೀಕ್ಷೆ ಮಾಡಿದರು ಎಂಬ ವಿಚಾರವನ್ನು ಹೇಳಿದರು ಇವೆಲ್ಲವೂ ಗುರುಪರಂಪರೆಯ ಬಗ್ಗೆ ಬಸವಾದಿ ಪ್ರಮಥರ ಪೂರ್ವದಲ್ಲಿಯೂ ಕೂಡ ಈ ಗುರುಪರಂಪರೆ ಭವ್ಯವಾಗಿ ಬೆಳೆದು ಬಂದಿದೆ. ಆ ಗುರು ಪರಂಪರೆಯಲ್ಲಿ ಶರಣರು ದೀಕ್ಷೆಯಿಂದ ಒಂದು ಆಧ್ಯಾತ್ಮ ಶಕ್ತಿಯನ್ನು ಬೆಳೆಸಿಕೊಂಡರು, ಮಹಾ ಶರಣರಾಗಿ ಈ ಜಗತ್ತಿಗೆ ಒಂದು ಬೆಳಕನ್ನು ಕೊಟ್ಟರು ಎನ್ನುವುದನ್ನು ನಾವೆಲ್ಲರೂ ವಿಚಾರ ಮಾಡುವಂಥದ್ದಾಗಿದೆ. ಮತ್ತು ಯಾವ ಬ್ರಹ್ಮಾಂಡ ಪುರಾಣವಾಗಲೀ, ಸಿಂಗೀರಾಜ ಪುರಾಣವಾಗಲಿ ಮತ್ತು ಭೀಮಕವಿ ರಚಿತವಾಗಿರುವ ಬಸವ ಪುರಾಣವಾಗಲಿ, ಬಸವರಾಜ ದೇವರ ರಗಳೆಯಾಗಲೀ ಈ ಕಾಲಮಾನದ ಬಗ್ಗೆ ಪಂಡಿತರಲ್ಲಿ ಭಿನ್ನಾಭಿಪ್ರಾಯಗಳಿರ- ಬಹುದು, ಕಾಲಮಾನಗಳ ಬಗ್ಗೆ ನಾವು ಹೋಗದೆ ಆ ಗ್ರಂಥದ ಬಗ್ಗೆ ಮಹತ್ವವನ್ನು ಆ ಗ್ರಂಥಗಳ ಅಸ್ತಿತ್ವವನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆ ಗ್ರಂಥಗಳಲ್ಲಿ ಬಂದಿರುವ ವಿಚಾರಗಳಿಗೆ ಮನ್ನಣೆ ಕೊಡಬೇಕಾಗುತ್ತದೆ. ಯಾವುದೇ ಒಂದು ಗ್ರಂಥದಲ್ಲಿ ಪ್ರಕ್ಷಿಪ್ತ ಅಂಶ ಇರಬಹುದು, ಅದನ್ನು ಬಿಟ್ಟು ಇನ್ನುಳಿದ ಅಂಶಗಳಿಗೆ ನಾವು ಮನ್ನಣೆ ಕೊಟ್ಟಾಗ ಮಾತ್ರ ನಮ್ಮ ಗುರುಪರಂಪರೆಯ ಒಂದು ಮಹತ್ವದ ಇತಿಹಾಸ ತಿಳಿಯುತ್ತದೆ, ಎನ್ನುವ ಮಾತನ್ನು ಹೇಳಬಹುದು. ಅದೇ ರೀತಿ ನಮ್ಮ ಪಂಡಿತರಾಗಿರುವಂಥ ರಾಜಶೇಖರ ಸ್ವಾಮಿಯವರು ನಮ್ಮ ಪಂಚಾಚಾರ್ಯರ ಉಲ್ಲೇಖ ಆಗಮಗಳಲ್ಲಿ ದೊರೆಯುತ್ತಿದೆ, ಸೂಕ್ಷ್ಮಾಗಮಗಳಲ್ಲಿ, ಕಾರಣಗಮಗಳಲ್ಲಿ, ಸುಪ್ರಭೇದಾಗಮಗಳಲ್ಲಿ ಅದು ದೊರೆಯುತ್ತಿದೆ. ಅನ್ನುವಂಥದ್ದೂ ಮತ್ತು ವಚನ ವಾಗ್ಮಯಗಳಲ್ಲೂ ಮತ್ತು ಶರಣರ ವಚನಗಳಲ್ಲಿಯೂ ಕೂಡ ಪಂಚಾಚಾರ್ಯರ ಉಲ್ಲೇಖ ದೊರೆತಿದೆ. ಎನ್ನುವುದನ್ನು

ಸವಿಸ್ತಾರವಾಗಿ ಹೇಳಿದರು. ನಾವೆಲ್ಲಾ ಚಿಂತನೆ ಮಾಡಬೇಕು. ಇವತ್ತು ನಾವು ಇಂಥ ವಿಚಾರಸಂಕಿರಣಗಳಲ್ಲಿ ಪೂರ್ವಾಗ್ರಹ ಪೀಡಿತರಾಗಿರಬಾರದು. ನಾವು ಮುಕ್ತ ಮನಸ್ಸಿನಿಂದ, ವಿಶಾಲ ಮನೋಭಾವದಿಂದ, ವಿಶಾಲ ಹೃದಯದವರಾಗಿ ಪಾಲ್ಗೊಳ್ಳಬೇಕು. ಈ ವಿಚಾರ ಸಂಕಿರಣಗಳಲ್ಲಿ ಚಿಂತನ ಮಂಥನದಲ್ಲಿರುವಂಥ ವಿಚಾರಗಳನ್ನ ಒಂದು ಪಾಂಡಿತ್ಯದ ಒರೆಗಲ್ಲಿಗೆ ಹಚ್ಚಿ, ಪಥ್ಯವಾದ ವಿಷಯಗಳನ್ನು ಒಪ್ಪಿಕೊಳ್ಳುವಂಥ ವಿಶಾಲ ಮನೋಭಾವನೆ ಬರಬೇಕು. ಪೂರ್ವಾಗ್ರಹ ಪೀಡಿತರಾಗಿ ಬಂದರೆ ಈ ವಿಚಾರಸಂಕಿರಣದಲ್ಲಿ ಅವರಿಗೆ ಉತ್ತರ ಸಿಗಲಿಕ್ಕೆ ಸಾಧ್ಯವಿಲ್ಲ ಅನ್ನುವ ಮಾತನ್ನು ನಾವು ಹೇಳಬಹುದು. ಅದಕ್ಕಾಗಿ ಅವರು ಬಹಳ ಹೇಳಿದರು. ನಾವೇ ಕಾಶಿಯಲ್ಲಿ ಓದುತ್ತಿರುವ ಕಾಲಕ್ಕೆ ಅಲ್ಲಿ ಇಂದು ಒಂದು ಹಿಂದೂ ವಿಶ್ವವಿದ್ಯಾಲಯವನ್ನೇ ಕಟ್ಟಿದ್ದಾರೆ. ಅದು ಜಂಗಮಪುರವೆಂಬ ಊರಲ್ಲಿದ್ದು, ಅದನ್ನೇ ಮದನಮೋಹನ ಮೂಲವೀಯರವರು, ಕಾಶೀ ಜಗದ್ಗುರುಗಳಿಂದ ಆಶೀರ್ವಾದ ಮಾಡಿಸಿಕೊಂಡು ಹಿಂದೂ ವಿಶ್ವವಿದ್ಯಾಲಯವನ್ನು ಕಟ್ಟಿದರು. ಅಲ್ಲಿ ಕೂಡ ಒಂದು ಆಲದಗಿಡವಿದೆ, ಲಿಂಗವಿದೆ. ಅದೇ ಜಂಗಮಪುರ. ಇವತ್ತು ಕಾಶೀ ಜಗದ್ಗುರುಗಳ ಮಠವೇನಿದೆ ಅದನ್ನು ಜಂಗಮವಾಡಿ ಎನ್ನುತ್ತಾರೆ. ಅದನ್ನೆಲ್ಲಾ ಕಾಶೀ ಮಹಾರಾಜರು ದಾನಮಾಡಿರುವ ವಿಷಯವಿದೆ. ಇದೇ ರೀತಿಯಲ್ಲಿ ನೇಪಾಳದ ಕಾಠ್ಮಂಡುವಿನಲ್ಲೂ ಭಕ್ತಪುರವೆಂಬಲ್ಲಿಯೂ ಜಂಗಮವಾಡಿ ಮಠವಿದೆ. ಹೀಗೆಲ್ಲಾ ಒಂದು ಐತಿಹಾಸಿಕ ದಾಖಲೆಗಳು ಇರುವ ಹೊತ್ತಿನಲ್ಲಿ ನಾವು ಬಸವಾದಿ ಪ್ರಮಥರ ಪೂರ್ವದಲ್ಲಿಯೂ ಈ ಪಂಚಾಚಾರ್ಯ ಪರಂಪರೆ ಇತ್ತೆಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಎಂಬುದನ್ನು ಹೇಳ ಬಯಸುತ್ತೇವೆ. ಅದಕ್ಕಾಗಿ ನಿಜವಾಗಿ ಯಾವ ನಮ್ಮ ವಚನ ಸಾಹಿತ್ಯದಲ್ಲಿ ಧಾರ್ಮಿಕ ಸಂಸ್ಕಾರಗಳ ಪರಿಕಲ್ಪನೆಯ ಬಗ್ಗೆ ಒಬ್ಬರು ಕೂಡ ಮಾತನಾಡಿದರು. ನಮ್ಮ ವಚನ ಸಾಹಿತ್ಯದಲ್ಲಿ ಧಾರ್ಮಿಕ ಸಂಸ್ಕಾರಗಳ ಪರಿಕಲ್ಪನೆಯ ಬಗ್ಗೆ ಹೇಳಿದರು. ಅವು ವಚನ ವಾಙ್ಮಯದಲ್ಲಿ ಪ್ರಚುರವಾಗಿ ಬಂದಿದೆ. ಅದರ ಬಗ್ಗೆ ಅವಲೋಕನ ಮಾಡಬೇಕಾಗಿದೆ. ನಿಜವಾಗಿ ಪೂಜ್ಯ ಜಗದ್ಗುರು ಮಹಾಸನ್ನಿಧಿಯವರ ಅಪೇಕ್ಷೆ ಏನೆಂದರೆ ಸಾಮಾನ್ಯ ಜನರಿಗೆ ನಮ್ಮ ವೀರಶೈವ ಧರ್ಮದ ಮರ್ಮ ಗೊತ್ತಾಗಲಿ ಎಂದು, ಅವರು ನಮ್ಮ ಧರ್ಮದ ತತ್ತ್ವವನ್ನು ತಿಳಿದುಕೊಂಡರೆ ನಿಜವಾದ ವೀರಶೈವರಾಗಿ ನಮ್ಮ ಸಮಾಜದ ಸಂಘಟನೆಗೆ ಪೂರಕವಾಗುತ್ತಾರೆ, ಅನ್ನುವ ವಿಶ್ವಾಸವನ್ನು ಇಟ್ಟುಕೊಂಡಿದ್ದಾರೆ. ಅದಕ್ಕಾಗಿ ಅವರು ಪ್ರತಿಯೊಂದು ನಗರದಲ್ಲಿಯೂ ಈ ರೀತಿಯಾದ ವಿಚಾರಸಂಕಿರಣ ನಡೆಸುತ್ತಾ ಬಂದಿದ್ದಾರೆ. ಅದಕ್ಕಾಗಿ ನನ್ನದೊಂದು ಪ್ರಾರ್ಥನೆ ಏನೆಂದರೆ, ಇವತ್ತು ನಾವು ತುಲನಾತ್ಮಕವಾಗಿರುವಂಥ ಅಧ್ಯಯನವನ್ನು ಮಾಡಬೇಕು. ಆಗಮ ಸಾಹಿತ್ಯಕ್ಕೂ, ಮತ್ತು ವಚನ ವಾಗ್ಮಯ ಸಾಹಿತ್ಯಕ್ಕೂ ಎಲ್ಲಿ ಸಾಮ್ಯವಿದೆ ಎಲ್ಲಿ ಭೇದವಿದೆ, ತಾತ್ವಿಕವಾಗಿರುವಂಥ ಭೇದ ಇನ್ನುಳಿದಿರುವಂಥ ಸಾಮ್ಯವನ್ನು ನಾವು ಒಪ್ಪಿಕೊಂಡು ವೀರಶೈವ ಸಮಾಜದಲ್ಲಿ ಗುರು-ವಿರಕ್ತ ಸಮಾವೇಶ ಆಗಬೇಕು. ಎಲ್ಲರೂ ಒಂದಾಗಬೇಕು ಎಂಬ ಅಪೇಕ್ಷೆ. ಹಾನಗಲ್ಲ ಕುಮಾರ ಮಹಾಸ್ವಾಮಿಗಳು ಕಂಡಿದ್ದಂಥ ಕನಸನ್ನ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ನೆರವೇರಿಸಿದರು. ಪೂಜ್ಯರಾಗಿರುವಂಥ ರಂಭಾಪುರಿ ಜಗದ್ಗುರುಗಳವರ ಪೂಜ್ಯರಾಗಿರುವಂಥಹ ಕಾಶೀ ಜಗದ್ಗುರುಗಳವರ ಸನ್ನಿಧಿಯಲ್ಲಿ ನಾವೆಲ್ಲರೂ ಒಂದಾಗಿದ್ದೇವೆ. ಒಂದಾಗಿದ್ದೇವೆನ್ನುವುದಕ್ಕೆ ಇದೇ ಒಂದು ನಿದರ್ಶನ. ನಾವೆಲ್ಲರೂ ಸಮಾನವಾದ ವೇದಿಕೆಯ ಮೇಲೆ ಕುಳಿತುಕೊಂಡಿದ್ದೇವೆ ಎನ್ನುವುದನ್ನು ಇಲ್ಲಿ ಹೇಳಬೇಕಾಗುತ್ತದೆ. ಅದಕ್ಕಾಗಿ ಗುರುವಿರಕ್ತರು ವೀರಶೈವ ಸಮಾಜದ ಒಂದು ಅವಿಭಾಜ್ಯ ಅಂಗ ಎಂಬ ಭಾವನೆ ಎಲ್ಲರಲ್ಲಿಯೂ ಬರಬೇಕು. ಅದಕ್ಕಾಗಿ ನಾವು ಬೇರೆಯಲ್ಲ ಅವರು ಬೇರೆಯಲ್ಲ, ನಾವು

ಅವರನ್ನ ಬಹಳ ಗೌರವ ಶ್ರದ್ಧೆಯಿಂದ ಕಾಣಬೇಕು. ಅವರೂ ಕೂಡ ನಮ್ಮನ್ನು ಅಷ್ಟೇ ಗೌರವ ಶ್ರದ್ಧೆಯಿಂದ ಕಾಣಬೇಕು. ಅವರೂ ಕೂಡ ನಮ್ಮನ್ನು ಅಷ್ಟೇ ಗೌರವ ಶ್ರದ್ಧೆಯಿಂದ ಕಂಡರೆ ಈ ಸಮಾಜದಲ್ಲಿ ಸಾಮರಸ್ಯ ಸದ್ಭಾವನೆ ಉಂಟಾಗಲು ಸಾಧ್ಯ, ಎಂದು ಈ ಪ್ರಸಂಗದಲ್ಲಿ ಹೇಳಿ, ಯಾಕೆಂದರೆ ಇವತ್ತು ವಿಚಾರಸಂಕಿರಣದಲ್ಲಿ ಅಮೂಲ್ಯವಾಗಿರುವಂಥ ವಿಚಾರವನ್ನು ಪಂಡಿತರು ವ್ಯಕ್ತಮಾಡಿದ್ದಾರೆ. ಅವುಗಳ ಬಗ್ಗೆ ನಾವು ಚಿಂತನ ಮಂಥನ ಮಾಡಬೇಕು. ಅವರೆಲ್ಲಾ ಶಿಲಾಶಾಸನಗಳ ಬಗ್ಗೆ ಹೇಳಿದರು. ಆರನೇ ಶತಮಾನದಿಂದ ಹಿಡಿದು ೧೫ನೇ ಶತಮಾನದವರೆಗಿನ ಶಿಲಾಶಾಸನಗಳ ಬಗ್ಗೆ ಹೇಳಿದರು. ನಾವು ಆ ಶಿಲಾಶಾಸನಗಳ ಬಗ್ಗೆ ಚನ್ನಾಗಿ ತಿಳಿದುಕೊಂಡು ಓದಿ ಅರ್ಥಮಾಡಿಕೊಂಡರೆ ಆವಾಗ ನಮ್ಮ ಅಭಿಪ್ರಾಯ ವ್ಯಕ್ತ ಮಾಡಲಿಕ್ಕೆ ಬರುತ್ತದೆ. ಏನಾದರೂ ಸಮಸ್ಯೆ ವ್ಯಕ್ತ ಮಾಡಲಿಕ್ಕೆ ಬರುತ್ತದೆ. ಅಂಥ ಶಿಲಾಶಾಸನಗಳ ಅಧ್ಯಯನ ಆಗಬೇಕು. ಆಗಮಗಳ ಅಧ್ಯಯನ ಆಗಬೇಕು, ವಚನ ಶಾಸ್ತ್ರದ ಅಧ್ಯಯನ ಆಗಬೇಕು. ಆಗ ನಮಗೆ ವೀರಶೈವ ಧರ್ಮದ ತಿರುಳು ಗೊತ್ತಾಗುತ್ತದೆ. ಎಂದು ಹೇಳುತ್ತೇವೆ. ಯಾಕೆಂದರೆ ಷಟ್‌ಸ್ಥಲ ಸಿದ್ಧಾಂತದಲ್ಲಿ, ಆಗಮ ಸಿದ್ಧಾಂತದಲ್ಲಿ ಕ್ರಮ ಸಮುಚ್ಚಯದ ಒಂದು ಪ್ರತಿಪಾದನೆ ಆಗಿದೆ. ಆದರೆ ವಚನ ವಾಙ್ಮಯದಲ್ಲಿ ಚನ್ನಬಸವಣ್ಣನವರ ಒಂದು ವಚನದಲ್ಲಿ ಸಮಸಮುಚ್ಚಯದ ಒಂದು ಷಟ್‌ಸ್ಥಲದ ವಿವೇಚನೆ ಬಂದಿದೆ. ಸಮಸಮುಚ್ಚಯ ಎಂದರೇನು, ಕ್ರಮಸಮುಚ್ಚಯ ಎಂದರೇನು ಇವುಗಳ ಭೇದವನ್ನು ಅರಿತುಕೊಂಡು ಷಟ್‌ಸ್ಥಲ ಸಿದ್ಧಾಂತ ವೀರಶೈವ ಸಮಾಜದ ಜೀವಾಳ ಎಂದು ಹೇಳಬೇಕಾಗುತ್ತದೆ. ವೀರಶೈವರಿಗೆ ಗುರುಲಿಂಗ ಜಂಗಮರೇ ನಮಗೆ ಆರಾಧ್ಯವಾಗಿರುವಂಥ ದೇವರು. ಅಂದಾಗ ಗುಡಿಗುಂಡಾಂತರಗಳಿಗೆ ವೀರಶೈವರು ಹೋಗುತ್ತಾರೆ. ಎಂದರೆ ಗುಡಿ ಗುಂಡಾರಗಳು ಗೌಣವಾಗಿರುವಂಥದ್ದು. ವೀರಶೈವರಾಗಿರುವಂಥ ನಾವುಗಳು ಮೊಟ್ಟಮೊದಲು ಲಿಂಗಯ್ಯನ ಪೂಜೆ, ಇಷ್ಟಲಿಂಗ ಪೂಜೆ ಮಾಡಿಕೊಂಡು, ಸಮಾಜದ ಒಂದು ಸದ್ಭಾವನೆ, ಬೇರೇ ಸಮಾಜದವರು ಬಹಳ ಮಂದಿ ಇದ್ದಾರೆ ಅಂದಾಗ, ಬೇರೆ ಸಮಾಜದವರು ಒಂದು ಗುಡಿ ಕಟ್ಟಿದ್ದಾರೆ ಅಂದಾಗ, ನಮ್ಮನ್ನು ಆಮಂತ್ರಣ ಮಾಡಿ ಕರೆದಾಗ ಅಲ್ಲಿಗೆ ಹೋಗದೆ ಇರಲು ಆಗುವುದಿಲ್ಲ. ಅಲ್ಲಿ ಹಾಗೆ ನಿಲ್ಲಲು ಬರುವುದಿಲ್ಲ. ನಾವು ಲಿಂಗಯ್ಯನನ್ನು ಹಿಡಿದುಕೊಂಡಿದ್ದರೂ ಕೂಡ ಲಿಂಗಯ್ಯನಿಗೆ ನಮಸ್ಕಾರ ಮಾಡಿ ನಂತರ ದೇವಿಗೆ ನಮಸ್ಕಾರ ಮಾಡಿದರೆ ಅಪಚಾರವಾಗುವುದಿಲ್ಲ, ಇನ್ನೊಂದು, ಯಾವುದೇ ದೇವರಿಗೆ ನಮಸ್ಕಾರ ಮಾಡಿದರೆ ಅಪಚಾರವಾಗುವುದಿಲ್ಲ. ಮೊದಲೇ ದೇವರು ನಮಗೆ ಇಷ್ಟಲಿಂಗ ಆ ಇಷ್ಟಲಿಂಗದ ಆರಾಧನೆ ನಿಷ್ಠೆ ಗೌರವವನ್ನು ಕೊಟ್ಟು ಇನ್ನುಳಿದ ದೇವರಿಗೆ ನಮಸ್ಕರಿಸಿದರೆ ಗೌರವ ಸಲ್ಲಿಸಿದರೆ ತಪ್ಪಾಗುವುದಿಲ್ಲ. ಸಮಾಜದ ಸಾಮರಸ್ಯರಕ್ಕಾಗಿ ಸಲ್ಲಿಸಬೇಕಾಗುತ್ತದೆ. ಎಂಬ ಮಾತನ್ನು ಇಲ್ಲಿ ಹೇಳಬೇಕಾಗುತ್ತದೆ. ಅದಕ್ಕಾಗಿ ಪೂಜ್ಯರಾಗಿರುವ, ಜಗದ್ಗುರು ಮಹಾಸ್ವಾಮಿಗಳ ಒಂದು ಆಗ್ರಹದ ಮೇರೆಗೆ ನಾವೆಲ್ಲಾ ಬಂದಿದ್ದೇವೆ; ಈ ಧಾರವಾಡದಲ್ಲಿ ಇಷ್ಟು ಜನ ವಿದ್ಯಾನಗರಿಯಲ್ಲಿ ವಿದ್ಯಾವಂತರು, ವಿಚಾರಶೀಲರು ಬಂದಿದ್ದೀರಿ, ಇದು ನಿಜವಾಗಿಯೂ ಒಂದು ಸಫಲತೆಯನ್ನು ಹೊಂದುವಂಥ ವಿಚಾರ ಸಂಕಿರಣ. ಇದರಿಂದ ನಮ್ಮ ಸಮಾಜದ ಸಂಘಟನೆಗೆ, ಸಮಗ್ರ ಅಭಿವೃದ್ಧಿಗೆ, ಸಾಮರಸ್ಯಕ್ಕೆ ನಾಂದಿ ಆಗಲಿ ಎಂದು ಹಾರೈಸಿ ನಮ್ಮ ನಾಲ್ಕು ಮಾತುಗಳನ್ನು ಮುಗಿಸುತ್ತೇವೆ.

□□

೫. ಶ್ರೀ ವಿ.ಎಸ್. ಮಳಿಮಠ್
ನಿವೃತ್ತ ಉಚ್ಚನ್ಯಾಯಾಲಯ ಮುಖ್ಯ ನ್ಯಾಯಾಧೀಶರು, ಕೇರಳ ಮತ್ತು ಕರ್ನಾಟಕ, ಅವರ ಉದ್ಘಾಟನಾ ಭಾಷಣ

ಪರಮಪೂಜ್ಯ ಕಾಶೀಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಸನ್ನಿಧಿಗೆ ಭಕ್ತಿಪೂರ್ವಕ ನಮಸ್ಕಾರಗಳನ್ನು ಅರ್ಪಿಸುತ್ತಾ, ಎಲ್ಲಾ ಮಠಗಳ ಸ್ವಾಮಿಗಳಿಗೆ ಮತ್ತು ಎಲ್ಲಾ ಮಾನ್ಯರಿಗೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ. "ವೀರಶೈವಧರ್ಮ-ಒಂದು ಪುನರವಲೋಕನ" ಎಂಬ ವಿಚಾರಸಂಕಿರಣ ನಡೆಯುತ್ತಿರುವುದು ಬಹಳ ಅಭಿಮಾನದ ಸಂಗತಿ. ಧಾರವಾಡ ನನ್ನ ತವರು ಮನೆಯಾದ್ದರಿಂದ ನಮ್ಮೂರಿನಲ್ಲಿ ನಡೆಯುತ್ತಿದೆ ಎಂಬ ಹೆಮ್ಮೆ ನನಗೆ. ನಾನು ವೀರಶೈವ ಧರ್ಮವನ್ನು ಅಷ್ಟಾಗಿ ಅಭ್ಯಾಸ ಮಾಡಿದ ಮನುಷ್ಯನಲ್ಲ. ನನ್ನ ಕಾರ್ಯಕ್ಷೇತ್ರವೇ ಬೇರೆ. ನಾನು ಯಾವ ದಿಕ್ಕಿನಲ್ಲಿ ಬೆಳೆದಿದ್ದೇನೋ ಆ ದಿಕ್ಕಿಗೂ ಈ ದಿಕ್ಕಿಗೂ, ಬಹಳ ಅಂತರವಿದೆಯೆಂದು ನನಗೆ ಗೊತ್ತು. ಆದರೂ ಉದ್ಘಾಟನೆಗೆಂದು ಕರೆದಿದ್ದೀರಿ. ಕಾಶೀ ಜಗದ್ಗುರುಗಳ ಅಪೇಕ್ಷೆಯ ಮೇರೆಗೆ ನಾನು ಬಂದಿದ್ದೇನೆ. ಅವರ ಮೇಲೆ ನನಗೆ ಅಪಾರ ಗೌರವ. ಸ್ವಾಮಿಗಳು ಹೇಗಿರಬೇಕೆಂದು ಮನಸ್ಸು ಮಾಡುತ್ತೇವೋ, ಅವರನ್ನು ಯಾವ ಉಚ್ಚಮಟ್ಟದಲ್ಲಿ ಕಾಣಬಯಸುತ್ತೇವೋ, ಯಾವ ಆಶೆಗಳನ್ನು, ಆದರ್ಶಗಳನ್ನು ಬಯಸುತ್ತೇವೋ ಅವುಗಳನ್ನೆಲ್ಲಾ ಕಾಶೀ ಜಗದ್ಗುರುಗಳಲ್ಲಿ ಕಾಣಬಹುದು. ಆದ್ದರಿಂದ ಇವರು ಒಂದು ಮಾದರಿ ಸ್ವಾಮಿಗಳು (ideal swamiji) ಎಂದರೆ ತಪ್ಪಾಗಲಾರದು. ಈ ನಮ್ಮ ಜಗದ್ಗುರುಗಳು ವೀರಶೈವಧರ್ಮದ "ವಿವೇಕಾನಂದ ಸ್ವಾಮಿಗಳು" ಎಂದು ನನ್ನ ಭಾವನೆ.

ಒಮ್ಮೆ ದೆಹಲಿಯ ಛತ್ರಪುರದಲ್ಲಿ ಒಂದು ಸಮಾರಂಭವಿತ್ತು. ಅಲ್ಲಿ ಹುಟಗಿ ಸ್ವಾಮಿಗಳು ಒಂದು ಸಂಸ್ಥೆಯನ್ನು ಕಟ್ಟಿದ್ದಾರೆ. ಅದರ ಉದ್ಘಾಟನೆ ಸಮಾರಂಭಕ್ಕಾಗಿ ಒಂದು ದೊಡ್ಡ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಕಾರ್ಯಕ್ರಮದ ಜವಬ್ದಾರಿ ನನ್ನ ಮೇಲಿತ್ತು. ಎಲ್ಲಾ ಜಗದ್ಗುರುಗಳನ್ನು ಕರೆಸುವ ನಿರ್ಣಯವನ್ನು ಕೈಕೊಂಡಿದ್ದರು. ಎಲ್ಲಾ ಜಗದ್ಗುರುಗಳು ಬರಲಿಲ್ಲ. ಕಾಶೀ ಜಗದ್ಗುರುಗಳು ಬಂದಿದ್ದರು. ಇವರಿಗೆ ಅಲ್ಲಿ ಪ್ರಮುಖ ಬಾಬಾಸಂತರ ಛತ್ರದಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದ್ದರು. ಬಾಬಾಸಂತರು ಸ್ವಾಮಿಗಳ ಪ್ರವಚನದ ವ್ಯವಸ್ಥೆ ಮಾಡಬೇಕೆಂದು ಕೇಳಿದರು. ಆ ಬಿನ್ನಹಕ್ಕೆ ಕಾಶೀ

ಜಗದ್ಗುರುಗಳು ಒಪ್ಪಿಕೊಂಡರು. ಅಲ್ಲಿ ಜಗದ್ಗುರುಗಳು ಮಾಡಿದ ಭಾಷಣ ಹಿಂದಿಯಲ್ಲಿ ಭಾಷಾಂತರವಾಗಿ ಜನರ ಮೆಚ್ಚುಗೆಗೆ ಪಾತ್ರವಾಯಿತು. ಇಂತಹ ವಿದ್ವತ್‌ಪೂರ್ಣ ಸ್ವಾಮಿಗಳನ್ನೇ ಅವರು ಕಂಡಿರಲಿಲ್ಲ. ಆ ಛತ್ರಪುರದ ಬಾಬಾ ಹೇಳಿದರು "ಸ್ವಾಮೀಜಿ, ಆಪ್ ಮಾಲೀಕ್ ಹೈ ಮೈ ಆಪ ಕಾ ಸೇವಕ ಹೂ" (ಸ್ವಾಮಿಗಳೇ, ನೀವು ಒಡೆಯರು ನಾನು ನಿಮ್ಮ ಸೇವಕ) "ನೀವು ಯಾವಾಗ ಬಂದರೂ ಛತ್ರಪುರದಲ್ಲಿ ಇರಿ. ನೀವು ನನಗೆ ಮೊದಲೇ ತಿಳಿಸಿ. ಎಲ್ಲಾ ವ್ಯವಸ್ಥೆ ಮಾಡುತ್ತೇನೆ" ಎಂದು ಅವರು ಮುಂದುವರೆದು (ಹಿಂದಿಯಲ್ಲಿ) ಹೇಳಿದರು. ಅದನ್ನು ಇದುವರೆಗೂ ನಡೆಸಿಕೊಂಡು ಬಂದಿದ್ದಾರೆ. ಪ್ರತಿವರ್ಷ ನವರಾತ್ರಿಯಲ್ಲಿ ಸ್ವಾಮಿಗಳನ್ನು ಕರೆದು ಪ್ರವಚನಗಳನ್ನು ಮಾಡಿಸುತ್ತಾರೆ. ಇವರು ಬರೀ ವೀರಶೈವರ ಬಗ್ಗೆ, ಬಸವಣ್ಣನ ಬಗ್ಗೆ, ಪಂಚಾಚಾರ್ಯರ ಬಗ್ಗೆ ಭಾಷಣ ಮಾಡೋದಿಲ್ಲ. ಇವರು ಭಗವದ್ಗೀತೆ, ವೇದಗಳ ಬಗ್ಗೆ ಮಾತನಾಡುತ್ತಾರೆ, ಜನರನ್ನು ಮುಗ್ಧರನ್ನಾಗಿ ಮಾಡುತ್ತಾರೆ. ಇವರ ವಿರಾಮದ ವೇಳೆ ಜನರು ಇವರ ದರ್ಶನ ತೆಗೆದುಕೊಳ್ಳುವುದಕ್ಕೆ ಸಾಲು ಸಾಲಾಗಿ ನಿಂತಿರುವುದನ್ನು ನೋಡಬಹುದು. ಅಷ್ಟೊಂದು ಗೌರವಗಳಿಸಬೇಕು ಅಂದರೆ ಸಾಮಾನ್ಯ ಮಾತಲ್ಲ. ಆ ಜನರು ವೀರಶೈವ ಧರ್ಮದವರಲ್ಲ, ಕನ್ನಡ ಬರುವ ಜನರೂ ಅಲ್ಲ. ಅವರಲ್ಲಿ ನೂರಕ್ಕೂ ಹೆಚ್ಚು ಜನರು ಇವರಿಂದ ಪ್ರಭಾವಿತರಾಗಿ ವೀರಶೈವಧರ್ಮವನ್ನು ಸ್ವೀಕರಿಸಿದರು. ಅವರಿಗೆಲ್ಲಾ ಲಿಂಗಕಟ್ಟಿ ಉಪದೇಶ ಮಾಡಿದರು: "ಮಾಂಸ ತಿನ್ನೊ ಹಾಗಿಲ್ಲ. ಲಿಂಗಪೂಜೆ ಮಾಡದೆ ಒಂದು ಹನಿ ನೀರನ್ನೂ ಕುಡಿಯುವ ಹಾಗಿಲ್ಲ." ಹಾಗೆ ಹೇಳಿದರೂ ಕೂಡ ಅವರು "ನಾವು ಅದನ್ನೆಲ್ಲಾ ನಡೆಸಿಕೊಂಡು ಬರ್ತೀವಿ" ಎಂದು ಹೇಳಿದರು.

ಅಲ್ಲಿ ನೂರಾರು ಜನ ನಮ್ಮ ಧರ್ಮಕ್ಕೆ ಬಂದರು. ಇದರಿಂದ ಎರಡು ವಿಷಯ ವಿದಿತವಾಗುತ್ತದೆ. ಮೊದಲನೆಯದಾಗಿ ನಮ್ಮ ಧರ್ಮದ ಬಗ್ಗೆ ಸರಿಯಾದ ತಿಳುವಳಿಕೆ ಕೊಟ್ಟರೆ ಎಲ್ಲರೂ ಧರ್ಮವನ್ನು ಸೇರುವುದಕ್ಕೆ ಮನಸ್ಸು ಮಾಡುತ್ತಾರೆ. ಎರಡನೆಯದಾಗಿ ಈ ವೀರಶೈವಧರ್ಮ ಉದಾತ್ತ ಮಾನವಧರ್ಮ. ಮಾನವ ಧರ್ಮಕ್ಕೆ ಜಯವಾಗಲಿ ಎಂದು ಹೇಳುವ ಧರ್ಮ. ಕೇವಲ ವೀರಶೈವರಿಗೆ ಶಾಂತಿ ದೊರೆಯಲಿ, ವೀರಶೈವರಿಗೆ ಒಳ್ಳೆಯದಾಗಲಿ ಎಂದು ಹೇಳುವ ಧರ್ಮ ಅಲ್ಲ; ಇಡೀ ಮಾನವ ಕುಲಕ್ಕೆ ಶಾಂತಿ ದೊರೆಯಲಿ, ಮಾನವಕುಲಕ್ಕೆ ಒಳ್ಳೆಯದಾಗಲಿ ಎಂಧು ಹೇಳುವ ಧರ್ಮ. ಆದ್ದರಿಂದ ವೀರಶೈವರಾದ ನಾವು ನಮ್ಮ ಏಳಿಗೆಗೆ, ನಮ್ಮ ಸುಖಕ್ಕೆ ಮಾತ್ರ ಸೀಮಿತರಾಗಬಾರದು. ಜಗತ್ತಿಗೆ ಶಾಂತಿ ನೀಡುವ ಜವಾಬ್ದಾರಿ ನಮ್ಮದಾಗಿದೆ, ಜಗತ್ತಿಗೆ ಕಲ್ಯಾಣ ಮಾಡುವ ಜವಾಬ್ದಾರಿ ಇದೆ. ಇದನ್ನು ನಾವು ತಿಳಿದುಕೊಳ್ಳುವುದು ಸಂಕುಚಿತ ಭಾವನೆಯಿಂದಲ್ಲ. ನಮ್ಮದು ವಿಶಾಲವಾದ ಧರ್ಮ.

ಆ ವಿಶಾಲತೆಯ ಅರಿವು ನಮಗೆ ಸಾಕಷ್ಟು ಆಗಿಲ್ಲ ಎಂದು ನನ್ನ ಭಾವನೆ. ಮೊಟ್ಟ ಮೊದಲು ನಮ್ಮ ಧರ್ಮವನ್ನು ತಿಳಿದುಕೊಳ್ಳುವುದೇ ನಮ್ಮ ಕರ್ತವ್ಯ. ಬಹಳಷ್ಟು ಜನರಿಗೆ ನಮ್ಮ ಧರ್ಮವೇನೆಂಬುದೇ ಅರಿವಿಲ್ಲ. ತಿಳಿದುಕೊಳ್ಳುವುದಕ್ಕೂ ಹೋಗುವುದಿಲ್ಲ. ತಿಳಿಸುವುದಕ್ಕೆ ಹೋದವರನ್ನು ಸರಿಯಾಗಿ ತಿಳಿಸುವುದಕ್ಕೆ ಬಿಡುವುದಿಲ್ಲ. ತಿಳಿಸುವವರೂ ಅಷ್ಟೊಂದು ಶಕ್ತರಾಗಿ ಇರುವುದಿಲ್ಲ. ಆದ್ದರಿಂದ ನಮಗೆ ಧರ್ಮದ ಸಂಬಂಧ ಬರುವುದಿಲ್ಲ. ಮದುವೆಯಾದಾಗ ಧರ್ಮದ ಸಂಬಂಧ ಬರುತ್ತದೆ. ಸತ್ತಾಗ ಹುಗಿಯುವಾಗ ಅದರ ಸಂಬಂಧ ಬರುತ್ತದೆ. ಉಳಿದಾಗ ಸಂಬಂಧ ಅಷ್ಟಕ್ಕಷ್ಟೇ. ಆದ್ದರಿಂದ ಜನ ಧರ್ಮವನ್ನು

ಸರಿಯಾಗಿ ಅರ್ಥಮಾಡಿಕೊಳ್ಳುವುದಿಲ್ಲ. ನಾವು ಈ ಧರ್ಮದವರು ಎಂದು ಹೇಳಿದ ಮೇಲೆ ನಾವು ಆ ಧರ್ಮವನ್ನು ತಿಳಿದುಕೊಳ್ಳುವುದು ಮೊದಲ ಧರ್ಮ. ಈ ಧರ್ಮವನ್ನು ತಿಳಿಸಿ ಹೇಳುವುದು ಗುರುಗಳ ಧರ್ಮ. ಅದಕ್ಕೇ ಇರುವುದು ಮಠಮಾನ್ಯಗಳು. ನಮಗೆ ಈ ಧರ್ಮದ ಅರಿವನ್ನು ಮಾಡಿಕೊಟ್ಟು ಧರ್ಮದ ಪ್ರಕಾರ ನಮ್ಮ ನಡತೆಯನ್ನೂ ಮಾರ್ಪಾಡು ಮಾಡಿ, ಒಳ್ಳೆಯ ಧರ್ಮನಿಷ್ಠರಾಗಿ ಬಾಳುವುದಕ್ಕೆ ನಮಗೆ ಮಾರ್ಗದರ್ಶನ ಮಾಡುವುದು ಮಠಗಳ ಕರ್ತವ್ಯ.

ನಮ್ಮ ಧರ್ಮ ಪುರಾತನ ಧರ್ಮ. ಬಹಳ ಹಿಂದಿನ ಧರ್ಮ ಇದು. ಆದರೂ ಕಾಲಕಾಲಕ್ಕೂ ಬೆಳೆಯುತ್ತಾ ಇದೆ. ಕಾಲಕಾಲಕ್ಕೆ ಸುಧಾರಣೆಯಾಗುತ್ತಾ ಇದೆ. ಈ ಸುಧಾರಣೆಯ ಪ್ರವೃತ್ತಿ ಏನಿದೆಯೋ ಅದನ್ನು ಬೆಳೆಸಿಕೊಂಡು ಹೋಗಬೇಕು. ಇದನ್ನ ರೆಫ್ರಿಜಿರೇಟರ್‌ನಲ್ಲಿ ಇಟ್ಟಹಾಗೆ, ನಾವು ಹಿಂದಿನ ಕಾಲದ ಧರ್ಮಕ್ಕೆ ಕೀಲಿ ಹಾಕಿ ಅಷ್ಟನ್ನೇ ಉಳಿಸುವುದು ಧರ್ಮವಲ್ಲ, ಪ್ರಗತಿಯ ಸಂಕೇತವಲ್ಲ. ಯಾವುದು ಪ್ರಗತಿ ಹೊಂದುವುದಿಲ್ಲವೋ ಬೆಳವಣಿಗೆ ಆಗುವುದಿಲ್ಲವೋ ಅದು ಸಾಯುತ್ತದೆ. ಅದು ಬೆಳೆಯಬೇಕಿದ್ದರೆ ಪ್ರಗತಿ ಬರಬೇಕು. ಪ್ರಗತಿ ಬರಬೇಕಾದರೆ ಈಗಿನ ಕಾಲದ ಅವಶ್ಯಕತೆಗಳೇನು ಎಂಬುದನ್ನು ತಿಳಿಯಬೇಕು. ಈಗಿನ ಜೀವನದಲ್ಲಿ ಇರುವಂಥ ನಮ್ಮ ಸಮಸ್ಯೆಗಳನ್ನು ತಿಳಿಯಬೇಕು. ಅವುಗಳಿಗೆ ನಮ್ಮ ಧರ್ಮ ಹೇಗೆ ಸ್ಪಂದಿಸಬೇಕು ಎನ್ನುವುದನ್ನು ತಿಳಿಯುವ ಸತತ ಪ್ರಯತ್ನ ಮಠಗಳಿಂದ, ಪ್ರಜೆಗಳಿಂದ, ಎಲ್ಲರಿಂದ ನಡೆಯಬೇಕು. ಅದರಂತೆ ಬದಲಾಗುತ್ತಾ ಸುಧಾರಣೆಯಾಗುತ್ತಾ ಹೋಗಬೇಕು. ಅದು ಪ್ರಗತಿಯ ಚಿಹ್ನೆ. ಪ್ರಾಚೀನತೆಯನ್ನು ನಮ್ಮ ಮನಸ್ಸನ್ನು ಕ್ರೋಢೀಕರಿಸಿ ಮುಂದೆ ಬೆಳೆಯುವುದಕ್ಕೆ ನಾವು ಮನಸ್ಸು ಮಾಡದೇ ಇದ್ದರೆ ನಾವೇ ನಮ್ಮ ಧರ್ಮಕ್ಕೆ ಅನ್ಯಾಯ ಮಾಡಿದಂತೆ.

ಆದ್ದರಿಂದ ಇದನ್ನು ತಿಳಿದುಕೊಂಡು, ಈ ಅನುಸಂಧಾನದವರು, ಸ್ವಾಮಿಗಳು, ವೀರಶೈವ ಧರ್ಮದ ಪುನರವಲೋಕನವನ್ನು ಮಾಡಿ ಹೊಸಬೆಳಕನ್ನು ಬೀರುವುದಕ್ಕೆ ಎಷ್ಟು ಸಾಧ್ಯವಿದೆ ಅಷ್ಟು ಕೂಲಂಕಶವಾಗಿ ಮಾಡೋಣ ಎಂಬ ಸದುದ್ದೇಶದಿಂದ ಈ ಸಂಕಿರಣವನ್ನು ಆಯ್ದುಕೊಂಡಿರುವುದು ಸ್ತುತ್ಯ, ಅತ್ಯಾವಶ್ಯಕ ಎಂದು ಹೇಳ ಬಯಸುತ್ತೇನೆ. ಇದರಲ್ಲಿ ವಿಷಯಗಳನ್ನು ಆಯ್ದುಕೊಂಡಿರುವುದರ ನನಗೆ ಬಹಳ ಆನಂದವಾಗಿದೆ. ಇದರಲ್ಲಿ ಗುರುವರ್ಗ ಮಠದವರಿಗೆ ಸಂಬಂಧಪಟ್ಟ ವಿಷಯಗಳಿವೆ, ವಿರಕ್ತಮಠದವರಿಗೆ ಸಂಬಂಧಪಟ್ಟ ವಿಷಯಗಳಿವೆ, ಶರಣಾದಿಗಳ ಬಗ್ಗೆ, ಪಂಚಾಚಾರ್ಯರ ಬಗ್ಗೆ ಮತ್ತು ಒಳಪಂಗಡಗಳ ಬಗ್ಗೆ ವಿಷಯಗಳಿವೆ. ಸಮಗ್ರವಾದ ರೀತಿಯಲ್ಲಿ ನಮ್ಮ ಧರ್ಮವನ್ನು, ನಮ್ಮ ಸ್ಥಿತಿಗತಿಗಳನ್ನು ನೋಡುವುದಕ್ಕೆ ಒಳ್ಳೆಯ ವಿಷಯಗಳನ್ನು ಆಯ್ದುಕೊಂಡಿದ್ದೀರಿ. ಒಳ್ಳೆಯ ವಿದ್ವಾಂಸರನ್ನು ಕರೆದಿದ್ದೀರಿ. ಇದನ್ನು ವ್ಯವಸ್ಥೆ ಮಾಡಿದಂಥ ಎಲ್ಲರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸ ಬಯಸುತ್ತೇನೆ. ಇದನ್ನು ನೋಡಿದರೆ ಚರ್ಚೆಗೂ ಅವಕಾಶವಿದೆ ಎಂದೂ ಅನ್ನಿಸುತ್ತಾ ಇದೆ. ಕೂಲಂಕಶವಾಗಿ ಚರ್ಚೆ ಆಗಬೇಕು.

ಇದು ಬಸವಣ್ಣನ ಕಾಲದ ಅನುಭವ ಮಂಟಪವನ್ನು ನೆನಪಿಗೆ ತರುತ್ತದೆ. ಅನುಭವ ಮಂಟಪದಲ್ಲಿಯಂತೆ ಯಾವುದೇ ವಿಷಯವನ್ನು ಕೂಲಂಕಶವಾಗಿ ವಿದ್ವಾಂಸರು ವಿಚಾರ ಮಾಡಿ, ವಿಚಾರ ವಿನಿಮಯ (exchange of views) ಎನ್ನುತ್ತಾರಲ್ಲಾ ಹಾಗೆ, ನಮ್ಮ ಪರಸ್ಪರ ನಿಲುವೇನು ಎಂಬುದರ ಬಗ್ಗೆ ಚರ್ಚೆ ಮಾಡಿ ನಿಷ್ಕರ್ಷೆಗೆ ಬರಬೇಕು. ಹಾಗೆ ನಿರ್ಣಯಕ್ಕೆ ಬರೋಣ; ಮೂಢನಂಬಿಕೆಯಿಂದಲ್ಲ, ಮೊಂಡುತನದಿಂದಲ್ಲ, ಜಿಜ್ಞಾಸೆಯಿಂದ,

ಹೇಗೆ ಅನುಭವಮಂಟಪದ ಅಧ್ಯಕ್ಷರಾಗಿ ಅಲ್ಲಮಪ್ರಭುಗಳು ಕಾರ್ಯ ನಿಭಾಯಿಸಿದರೋ ಹಾಗೆ ನಮ್ಮ ಕಾಶೀ ಜಗದ್ಗುರುಗಳು ಈ ಅನುಭವ ಮಂಟಪದ ಅಧ್ಯಕ್ಷರಾಗಿ ನಿಷ್ಕರ್ಷೆಗೆ ಬರುವಂತೆ ವಿಚಾರಸಂಕಿರಣಗಳನ್ನು ನಡೆಸಿ, ಸದುದ್ದೇಶದಿಂದ, ಯಾವುದೇ ಪೂರ್ವಾಗ್ರಹಗಳಿಲ್ಲದೆ ಬಿಚ್ಚು ಮನಸ್ಸಿನಿಂದ ವಿಚಾರ ಮಾಡುವಂತೆ ಮಾಡಲೆಂದು ಪ್ರಾರ್ಥಿಸುತ್ತೇನೆ. ಈ ಅನುಭವಮಂಟಪಕ್ಕೆ ಯೋಗ್ಯವಾದ ಸ್ಥಲ ಮಾಡಿಕೊಟ್ಟಿದ್ದೀರಿ. ಎಲ್ಲರಿಗೂ ಅಭಿನಂದನೆಗಳು.

ಇಲ್ಲಿ ವಿದ್ವಾಂಸರು ಈ ನಿಲುವನ್ನು ತೆಗೆದುಕೊಂಡಿದ್ದೇನೆ, ಈ ನಿಲುವನ್ನೇ ಪ್ರತಿಪಾದಿಸಬೇಕು ಎನ್ನುವ ವಿಚಾರವನ್ನು ಬಿಡಬೇಕು. ಮತ್ತೊಬ್ಬರ ನಿಲುವು ಸರಿಯಾಗಿದ್ದರೆ ಅದನ್ನು ಮೆಚ್ಚುವ, ಒಪ್ಪುವ ಸ್ಥೈರ್ಯ, ಧೈರ್ಯ, ದೊಡ್ಡಸ್ತಿಕೆ ನಿಮ್ಮಲ್ಲಿರಬೇಕು. ಅಂತಹ ಅನುಭವ ಮಂಟಪದ ಅಪೇಕ್ಷೆಯಿಲ್ಲದಿದ್ದರೆ, ಹುಂಬರಾಗಿ ನಮ್ಮದೇ ಜಯ್ ನಿಮ್ಮದೇ ಜಯ್ ಎನ್ನುವುದು ಇದ್ದರೆ, ಯಾವ ವಿಚಾರ ಸಂಕಿರಣದ ಅವಶ್ಯಕತೆಯಿರಲಿಲ್ಲ. ಈ ವಿಚಾರಸಂಕಿರಣದಲ್ಲಿ ಆ ದೊಡ್ಡಗುಣ, ದೊಡ್ಡಸ್ತಿಕೆ ಮತ್ತು ಆಧಾರಗಳ ಮೇಲಿನಿಂದ ನಿರ್ಣಯ, ನಿಷ್ಕರ್ಷೆ ಮಾಡುವ ಭಾವನೆಗಳಿಂದ ಚರ್ಚೆ ಆಗುವುದು ಅತ್ಯಂತ ಆವಶ್ಯಕವಾಗಿದೆ. ವಿಚಾರಸಂಕಿರಣವನ್ನು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ, ಇಷ್ಟೊಂದು ವಿಜೃಂಭಣೆಯಿಂದ ವ್ಯವಸ್ಥೆ ಮಾಡಿದ ಎಲ್ಲಾ ವ್ಯವಸ್ಥಾಪಕರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ವೀರಶೈವ ಧರ್ಮವನ್ನು ತಿಳಿಸಿ ಹೇಳುವವರು ಸ್ವಾಮಿಗಳು. ಜನಸಾಮಾನ್ಯ ಸಮಾಜದ ಜನರಾದ ನಾವು ಭಕ್ತರು ಎಂದು ಹೇಳಿದರೆ ತಪ್ಪಾಗಲಾರದು. ಅಥವಾ ಸಮಾಜದಲ್ಲಿನ ಜನ ನಾವು. ನಮ್ಮ ಕರ್ತವ್ಯ ಏನು? ಎನ್ನುವುದರ ಬಗ್ಗೆ ನಿಷ್ಕರ್ಷೆಯಾಗಬೇಕು ಎಂದು ನನ್ನ ಇಚ್ಛೆ. ನಮ್ಮ ನಮ್ಮ ಜವಾಬ್ದಾರಿ ಅರಿತುಕೊಳ್ಳುವುದು ಅತ್ಯವಶ್ಯ. ಗುರುಗಳು, ಮಠಗಳ, ಹಿರಿಯರ ಜವಾಬ್ದಾರಿ ಏನು? ನಮ್ಮ ಜನರ, ಸಮಾಜದ ಜವಾಬ್ದಾರಿ ಏನು? ಎನ್ನುವುದರ ಅರಿವು ನಮಗಾಗಬೇಕು. ಇಲ್ಲದೇ ಇದ್ದರೆ ಅದನ್ನ ನಿಭಾಯಿಸುವುದಕ್ಕೆ ಅದರ ಕಡೆಗೆ ಮನಸ್ಸು ಆಗುವುದಿಲ್ಲ. ನಮ್ಮಲ್ಲಿ ನಮ್ಮ ಧರ್ಮಗಳನ್ನು ತಿಳಿದುಕೊಳ್ಳುವಾಗ ನಮ್ಮಲ್ಲಿ ಭೇದಭಾವಗಳಿವೆ ಎಂದು ಗೊತ್ತಾಗುತ್ತದೆ. ನಮ್ಮಲ್ಲಿ ಒಡಕಿದೆ. ಯಾರು ವೀರಶೈವ ಧರ್ಮವನ್ನು ಹುಟ್ಟಿಸಿದರು, ಬೆಳೆಸಿದರು ಎನ್ನುವ ಬಗ್ಗೆ ವಾಧವಿವಾದಗಳು ಇವೆ. ಇವು ಎಲ್ಲಾ ಜನರಲ್ಲಿ ಇದ್ದಂತಹವೇ: ಪಂಚಾಚಾರ್ಯರ ಅನುಯಾಯಿಗಳಿರಬಹುದು, ವಿರಕ್ತಮಠದ ಅನುಯಾಯಿಗಳಿರಬಹುದು ಅಥವಾ ಮತ್ತೊಂದು ಮಠದ ಅನುಯಾಯಿಗಳಿರಬಹುದು. ಎಲ್ಲರೂ ಶಿವಭಕ್ತರೆ. ಪಂಚಾಚಾರ್ಯರೂ ಶಿವಭಕ್ತರು, ಬಸವಣ್ಣನೂ ಶಿವಭಕ್ತನು. ನಾವು ಮಾಡುವ ಪೂಜೆ ಇಷ್ಟಲಿಂಗದ ಪೂಜೆ. ಆದ್ದರಿಂದ ನಾವೆಲ್ಲರೂ ಒಂದೇ ಎನ್ನುವುದು ಮುಖ್ಯ. ಏಕೆಂದರೆ ನಾವೆಲ್ಲರೂ ಇಷ್ಟಲಿಂಗದ ಪೂಜಕರು. ಲಿಂಗಾಯತರು, ವೀರಶೈವರು ಎಲ್ಲರೂ ಒಂದೇ. ಇದನ್ನು ಕಾನೂನಿನಲ್ಲಿ ಅರ್ಥಮಾಡಿಕೊಂಡಿದ್ದಾರೆ. ನಮ್ಮ ಹಿಂದು ವಿವಾಹ ಕಾನೂನು (Hindu Marriage Act) ಎಂಬುದರಲ್ಲಿ ಹಿಂದು ಎಂಬುದರ ವ್ಯಾಖ್ಯೆಯಲ್ಲಿ, ವೀರಶೈವ ಅಥವಾ ಲಿಂಗಾಯತ ಸೇರಿ (in cluding Virashaiva or Lingayet) ಎಂದಿದೆ. ಲಿಂಗಾಯತ ಎಂದರೂ ಅಸಮಾಧಾನವಿಲ್ಲ, ವೀರಶೈವ ಎಂದರೂ ಅಸಮಾಧಾನವಿಲ್ಲ. ಎಲ್ಲರೂ ಒಂದೇ ಎನ್ನುವ ಭಾವನೆ ತಿಳಿದುಕೊಳ್ಳುವುದು ಬಹಳ ಅವಶ್ಯಕ.

ಈಗ ಕೂಡಲಸಂಗಮದಲ್ಲಿ ಒಂದು ದೊಡ್ಡ ಕ್ರಾಂತಿಯೇ ಆಯಿತು. ವೀರಶೈವರು ನಾವೆಲ್ಲಾ ಒಂದೇ ಎನ್ನುವ Universal Delaration ಹಾಗೆ ಅಲ್ಲಿ ಒಂದು ಘೋಷಣೆ ಆಯಿತು. ನಮ್ಮಲ್ಲಿ ಸಂಘಟನೆ ಆಗಿದೆ. ಇದೊಂದು ಕ್ರಾಂತಿಕಾರಕ ವಿಷಯ, ಕ್ರಾಂತಿಕಾರಕ ನಿರ್ಣಯ. ಆದ್ದರಿಂದ ನಾವು ಬೇರೆ ಬೇರೆ ಎನ್ನುವ ಭಾವನೆಯನ್ನು ಬಿಟ್ಟು ನಾವೆಲ್ಲಾ ವೀರಶೈವರು ಒಂದಾಗಿದ್ದೇವೆ ಎಂಬ ಮಂತ್ರವನ್ನು ಜಪಿಸುತ್ತಾ ಹೋಗಬೇಕು. ಆ ಭಿನ್ನಭೇದ ಕೆಲವು ಸ್ವಾಮಿಗಳಲ್ಲಿದೆ; ಅವರ ಸುತ್ತಮುತ್ತ ಇರುವ ಕೆಲವು ಜನ ಭಟ್ಟಂಗಿಗಳಲ್ಲಿ ಇದೆ. ನಿಜವಾದ ಸ್ವಾಮಿಗಳಿದ್ದರೆ, ನಿಜವಾದ ಸ್ವಾಮಿತ್ವವಿದ್ದರೆ, ನಿಜವಾಗಿ ಅರಿತಿದ್ದರೆ, ಈ ಭಾವನೆಗೆ ಅವಕಾಶವೇ ಇಲ್ಲ. ಇದು ಸಣ್ಣತನವನ್ನು ತೋರಿಸುತ್ತದೆಯೇ ಹೊರತಾಗಿ ದೊಡ್ಡತನವನ್ನಲ್ಲ. ನಾವು ಸ್ವಾಮಿಗಳನ್ನು ಯಾವ ಸ್ಥಾನದಲ್ಲಿಟ್ಟಿದ್ದೇವೆ? ತ್ಯಾಗಿಗಳು, ದೇಶಕ್ಕಾಗಿ ಮುಡಿಪಾಗಿರುವರು ಎಂದು ತಾನೇ. ಅವರಿಗೆ ಏಕೆ ಪಂಗಡಗಳು? ಅವರಿಗೇಕೆ ಕೆಟ್ಟ ಮಾತುಗಳು? ಅವರಿಗೇಕೆ ದ್ವೇಷಗಳು? ಸ್ವಾಮಿಗಳು ಯಾವಸ್ಥಾನದಲ್ಲಿರಬೇಕೋ ಅಲ್ಲಿದ್ದರೆ ಅವರಿಗ ಭೂಷಣ ನಮಗೂ ಭೂಷಣ. ಆ ಸ್ಥಾನದಿಂದ ಕೆಳಗಿಳಿಯಬೇಡಿ, ಸಣ್ಣ ವಿಷಯಗಳ ಬಗ್ಗೆ ನಿಮ್ಮ ಮನಸ್ಸನ್ನು ಹಾಕಬೇಡಿ ಎಂದು ಎಲ್ಲಾ ಸ್ವಾಮಿಗಳನ್ನೂ ನಾನು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ.

ಧರ್ಮ ಎನ್ನುವುದಕ್ಕೆ 'ನಂಬಿಕೆ' ಎಂದು (Faith) ಹೇಳುತ್ತಾರೆ. ನಂಬಿದರೆ ದೇವರು, ಇಲ್ಲದಿದ್ದರೆ ಕಲ್ಲು ಎಂದು ಹೇಳುತ್ತಾರೆ. ನಂಬಿಕೆ ಎನ್ನುವುದು ಮುಖ್ಯ. ನಮ್ಮ ಘಟನೆಯಲ್ಲಿ ಅಧಿನಿಯಮ ೨೫ (Article 25) ಏನು ಹೇಳುತ್ತೆ ಎಂದರೆ, ಪ್ರತಿಯೊಬ್ಬ ನಾಗರಿಕನೂ ತನಗೆ ಬೇಕಾದ ಯಾವುದೇ ಧರ್ಮವನ್ನು ಬೇಕೆಂದು ಅನುಸರಿಸುವ ಹಕ್ಕು, ತನ್ನ ಧರ್ಮ ಒಳ್ಳೆಯದೆಂದು ಹೇಳುವ ಹಕ್ಕು ಇದೆ. ಆದ್ದರಿಂದ ಧರ್ಮನಿರಪೇಕ್ಷ ರಾಜ್ಯದಲ್ಲಿ (Secular State) ನಾವು ಧರ್ಮಿಷ್ಠರು, ನಾವು ವೀರಶೈವರು ಎಂದರೆ ಹೇಗೋ ಎನ್ನುವ ಭೀತಿ ಬೇಕಾಗಿಲ್ಲ. ಪ್ರತಿಯೊಬ್ಬರಿಗೂ ತಮ್ಮ ಧರ್ಮದ ಬಗ್ಗೆ ಒಳ್ಳೆಯದೆಂದು ಅಭಿಮಾನದಿಂದರಲಿಕ್ಕೆ, ಪ್ರತಿಪಾದಿಸುವುದಕ್ಕೆ ಅಧಿಕಾರ ಇದೆ. ಆದರೆ ಮತ್ತೊಬ್ಬನ ಮೇಲೆ ದಬ್ಬಾಳಿಕೆ ಮಾಡಿ ನಾನು ಹೇಳಿದ್ದನ್ನು ಒಪ್ಪಿಕೊಳ್ಳಬೇಕು;ವೀರಶೈವಧರ್ಮ ಒಳ್ಳೆಯದು, ಮತ್ತೊಂದ ಧರ್ಮ ಸರಿಯಲ್ಲ ಎನ್ನುವ ಅಧಿಕಾರ ಇಲ್ಲ. ಇದು ಮೂಲಭೂತ ಹಕ್ಕು (Fundemental Right) ಎಂದು ಹೇಳ ಬಯಸುತ್ತೇನೆ. ಎಲ್ಲರಿಗೂ ತಮ್ಮ ವಿಚಾರವನ್ನು ಮಂಡಿಸುವ ಅಧಿಕಾರ ಇದೆ. ಅದನ್ನು ಒಪ್ಪುವ, ಬಿಡುವ ಅಧಿಕಾರ ಇದೆ. ಆದ್ದರಿಂದ ಈ ವಿಷಯದ ಬಗ್ಗೆ ಮನಸ್ಸನ್ನು ಕೆಡಿಸಿಕೊಳ್ಳಬಾರದು. ಹಿಂದೆ ನೋಡಬೇಡಿ, ಮುಂದೆ ಹೋಗಿ, ಎರಡು ಹೇಳುವುದಿಲ್ಲ. ಇನ್ನೂ ಹಿಂದೆ ಹಿಂದೆ ಹೋಗಿ ನಮ್ಮ ಧರ್ಮವನ್ನು, ನಮ್ಮ ಸಮಾಜವನ್ನು ಹಿಂದೆ ಒಯ್ಯುತ್ತಿದ್ದೇವೆ. ೧೨ನೇ ಶತಮಾನಕ್ಕಿಂತ ಹಿಂದೆ ಹೋದರೆ ಇನ್ನೂ ಸಂತೋಷ. ನನಗೆ ಸಮಾಜ ಮುಂದೆ ಹೋದರೆ ಇನ್ನೂ ಸಂತೋಷ. ಆದರೆ ಮುಂದೆ ಹೋಗುವುದಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಸಮಗ್ರವಾದ ವಿಚಾರ ಧರ್ಮದಲ್ಲಿ ಆಗಬೇಕು. ಅದು ಈ ಸಂಕಿರಣದ ಮುಖ್ಯ ಉದ್ದೇಶವೆಂದು ತಿಳಿದುಕೊಂಡಿದ್ದೇನೆ.

ಈಗ ಧರ್ಮದ ಬಗ್ಗೆ ಆತ್ಮನಿರೀಕ್ಷಣೆ ಆಗಬೇಕು. ಅಂತರಂಗದಲ್ಲಿ ಹೊಕ್ಕು ನಾವು ಈ ಧರ್ಮದ ಬಗ್ಗೆ ಎಷ್ಟು ಪ್ರತಿಪಾದಿಸಿದ್ದೇವೆ? ಎಷ್ಟರಮಟ್ಟಿಗೆ ಬಿಟ್ಟು ನಡೆದಿದ್ದೇವೆ? ಈ ಧರ್ಮದಿಂದ ನಮಗೆ ಎಷ್ಟು ಉಪಯೋಗವಾಗಿದೆ? ಈ ಧರ್ಮದಿಂದ ಎಷ್ಟು

ತೊಂದರೆಯಾಗಿದೆ? ಈಗಿನ ಆಧುನಿಕ ವಾತಾವರಣದಲ್ಲಿ ನಾವು ಮಾಡಿಕೊಂಡ ಪದ್ಧತಿಗಳನ್ನು ಎಷ್ಟು ಪಾಲಿಸಿಕೊಂಡು ಬರುವುದು? ಏನು ಮಾರ್ಪಾಡು ಆಗಬೇಕು? ವಿಚಾರಧಾರೆಗಳಲ್ಲಿ ಆಗಬೇಕೋ ಅಥವಾ ನಡತೆಯಲ್ಲಿ ಆಗಬೇಕೋ? ಇವುಗಳ ಬಗ್ಗೆ ಸಮಗ್ರ ವಿಚಾರ ಆಗಬೇಕು. ಸ್ಪಂದಿಸಬೇಕು ನಾವು ಈ ಆಧುನಿಕ ಕಾಲಕ್ಕೆ ಸ್ಪಂದಿಸುವ ಧರ್ಮ ವೀರಶೈವ ಧರ್ಮ ಆಗಬೇಕೇ ಹೊರತಾಗಿ ನೆಲೆನಿಂತ ಪುರಾತನ ಧರ್ಮ ಆಗಬಾರದು. I dont want a frozen Virashaiva religion I want dynamic, a progressive Virashaiva religion. ಮುಂದೆ ನೋಡುವಂಥ ಧರ್ಮ ವೀರಶೈವಧರ್ಮ. ಅದರಲ್ಲಿ ಬೀಜ ಇದೆ. ಅದರಲ್ಲಿ ಶಕ್ತಿಯಿದೆ. ಆ ಶಕ್ತಿಯನ್ನು ಕುಂಠಿತಗೊಳಿಸಿ ಹಿಂದೆ ತೆಗೆದುಕೊಂಡು ಹೋಗಬೇಡಿ; ಮುಂದೆ ತೆಗೆದುಕೊಂಡು ಹೋಗುವಂಥ ವಿಚಾರ ಮಾಡಬೇಕು. ಧರ್ಮವನ್ನು ವಿಚಾರ ಮಾಡುವಾಗ ಧರ್ಮವನ್ನು ಪ್ರತಿಪಾದಿಸುವಂಥವರು ಇರುವಾಗ, ನಾವೆಲ್ಲಾ ಬಹಳ ಧರ್ಮಿಷ್ಠರು ಎಂದು ತಿಳಿದುಕೊಳ್ಳುತ್ತೇವೆ; ಪಂಚಾಚಾರ್ಯರು ಹೀಗೆ ಹೇಳಿದರು, ಸ್ವಾಮಿಗಳು ಹೀಗೆ ಹೇಳಿದರು, ಮಂತ್ರ ಹೇಳಿದರು, ಬಸವಣ್ಣನವರು ಈ ವಚನ ಹೇಳಿದರು; ಎಂತಹ ಘನವಾದ ವಿಚಾರ ಹೇಳಿದರು ಎಂದು ಅಭಿಮಾನ ತುಂಬಿಕೊಳ್ಳುತ್ತೇವೆ ಅಭಿಮಾನ ಪಡುತ್ತೇವೆ; ಅವರ ಗುಣಗಾನ ಮಾಡುತ್ತೇವೆ, ಹಾಡಿಕೊಳ್ಳುತ್ತಾ ಹೋಗುತ್ತೇವೆ; ಕೆಲವರು ಪಂಚಾಚಾರ್ಯರನ್ನು ಕೆಲವರು ಬಸವಣ್ಣನವರನ್ನು, ಮತ್ತೊಬ್ಬರನ್ನು ಹೊಗಳಿಕೊಳ್ಳುತ್ತಾ ಹೋಗುತ್ತೇವೆಯೇ ಹೊರತಾಗಿ ಅವರು ಹೇಳಿದ ನೀತಿಗಳನ್ನು ನಾವು ಆಚರಣೆಗೆ ತಂದುಕೊಳ್ಳಬಲ್ಲ ವಿಚಾರಣೆ ಬಗ್ಗೆ ಗಮನ ಇಲ್ಲ. ನಮಗೆ ಅಷ್ಟೇ ಸಮಾಧಾನ. ಬಸವಣ್ಣ ಎಂಥ ವಿಚಾರವನ್ನು ಹೇಳಿದ್ದಾರೆ, ಗಾಂಧಿ ಮಾರ್ಗಕ್ಕಿಂತ ಮುಂದೆ ವಿಚಾರಗಳನ್ನು ಹೇಳಿದ್ದಾರೆ! ಹೌದು, ನಾವು ಮಾಡಿದ್ದೇನು? ನಾವು ಅವರ ಭಕ್ತರಾದಂಥವರು ಮಾಡಿದ್ದೇನು? ಆ ವಿಚಾರಗಳನ್ನು ಎಷ್ಟರ ಮಟ್ಟಿಗೆ ಆಚರಣೆಯಲ್ಲಿ ತಂದುಕೊಂಡಿದ್ದೇವೆ? "ಅನುಸರಣೆಯೇ ಧರ್ಮದ ಮೂಲ;" ನಾವು ಅನುಸರಣೆ ಮಾಡದೆಯೇ ಬರೀ ಮಂತ್ರ ಹೇಳಿಕೊಳ್ಳುತ್ತಾ, ಅವರು ಹಾಗೆ ಮಾಡಿದ್ದಾರೆ ದೊಡ್ಡವರು, ಅವರು ಹೀಗೆ ಮಾಡಿದ್ದಾರೆ ಎಂದು ಕಾಲ ಕಳೆಯೋದನ್ನು ಬಿಟ್ಟು ನಾನು ಹೇಗೆ ಬೆಳೆಯಬೇಕು? ವಿಚಾರಗಳನ್ನು ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು? ನಾನು ಹೇಗೆ ಒಳ್ಳೆಯವನಾಗಬೇಕು ನೀತಿವಂತನಾಗಬೇಕು, ಶಿವನಿಗೆ ಪ್ರಿಯನಾಗುವಂತೆ ನನ್ನ ಜೀವನವನ್ನು ನಡೆಸಬೇಕು? ಎನ್ನುವುದರ ಬಗ್ಗೆ ಬಹಳ ಕಡಿಮೆ ಪ್ರಯತ್ನ ಮಾಡಿದ್ದೇವೆ ಎಂದು ಹೇಳಬಹುದು.

ನಾವು ಪ್ರತಿಯೊಂದು ಭಾಷಣದಲ್ಲಿ ಹೇಳುತ್ತೇವೆ "ಕಾಯಕವೇ ಕೈಲಾಸ" ಎಂದು; ಕಾಯಕನಿಷ್ಠರಾಗಬೇಕು, ದೇವರು ಬಂದರೂ ಕಾಯಕ ಬಿಟ್ಟು ನೀವು ಅಲುಗಾಡಬಾರದು, ಕಾಯಕ ಮಾಡಿದರೆ ಅದರಲ್ಲೇ ಕೈಲಾಸ, ಕೈಲಾಸ ಬೇರೆ ಇಲ್ಲಾ, ನಿಮ್ಮ ಕಾಯಕದಲ್ಲಿ ಕಸುಬಿನಲ್ಲಿ ನೀವು ಕೈಲಾಸವನ್ನು ಕಂಡುಕೊಳ್ಳಬೇಕು ಎಂದು ಹೇಳುತ್ತೇವೆ. ನಿಮ್ಮ ಕೆಲಸ ಯಾವುದೇ ಆಗಿರಬಹುದು, ಸಣ್ಣದಿರಬಹುದು, ದೊಡ್ಡದಿರಬಹುದು. ಅದೆಲ್ಲಾ ಮುಖ್ಯವಲ್ಲ, ಅದು ನಿಮಿತ್ತ ಮಾತ್ರ. ಎಲ್ಲಾ ಕಾರ್ಯಗಳೂ ಒಳ್ಳೆಯವೇ. ನಮ್ಮ ಪಾಲಿಗೆ ಯಾವುದೇ ಕೆಲಸ ಬಂದರೂ ಅದನ್ನು ದಕ್ಷ ರೀತಿಯಿಂದ, ನೀತಿಯಿಂದ ಪ್ರಾಮಾಣಿಕತೆಯಿಂದ ಮಾಡಿದರೆ ನಮ್ಮ ಬೆಳವಣಿಗೆ ಆಗುತ್ತದೆ. ನಮ್ಮ ಬೆಳವಣಿಗೆ ಆದರೆ ದೇಶದ ಬೆಳವಣಿಗೆ ಆಗುತ್ತದೆ. ಬಸವಣ್ಣನವರು ಅದನ್ನೇ ಒಂದು ಬೀಜಮಂತ್ರವಾಗಿ

ಕೊಟ್ಟರು, ಏಕೆಂದರೆ ಎಲ್ಲಾ ವೀರಶೈವರು ಕಾಯಕದಲ್ಲಿ ಮಗ್ನರಾಗಿ, ಒಳ್ಳೆಯ ಕಸುಬು ಮಾಡುತ್ತಾ ಹೋದರೆ ಗಳಿಕೆ ಹೆಚ್ಚಾಗುತ್ತೆ, ಅದರಿಂದ ಪ್ರತಿಷ್ಠೆ ಹೆಚ್ಚಾಗುತ್ತೆ, ಪ್ರತಿಷ್ಠೆ ಹೆಚ್ಚಾದರೆ ದೇಶದ ಉನ್ನತಿಯಾಗುತ್ತದೆ. ಕಾಯಕಧರ್ಮದ ಅನುಯಾಯಿಗಳಾಗಿದ್ದರೆ ವೀರಶೈವ ಮನುಷ್ಯ ಕೆಲಸ ಮಾಡಿದರೆ ಉತ್ತಮವಾಗಿ ಕೆಲಸ ಮಾಡ್ತಾನೆ ಎನ್ನುವ ಭರವಸೆ ಮೂಡಬೇಕು ಎಲ್ಲರಲ್ಲಿಯೂ, ಅವನ ಕಡೆ ಬೆರಳ ಮಾಡಿ ತೋರಿಸುವ ಹಾಗಿರಬಾರದು. ಈ ಭರವಸೆ ಇದೆಯೇ? ನಾವು ಕಾಯಕನಿಷ್ಠರಾಗಿದ್ದೇವೆಯೇ? ಪ್ರತಿಯೊಬ್ಬ ವೀರಶೈವ ಎಂದರೆ synonymous with perfection in duty ಎಂಬಂತಿರಬೇಕು. (ವೀರಶೈವ ಎಂಬುದು ಕರ್ತವ್ಯ ಪರಿಪಕ್ವತೆಗೆ ಇನ್ನೊಂದು ಹೆಸರು ಎಂಬಂತಿರಬೇಕು). ಎಲ್ಲರಿಗಿಂತ exact ಆಗಿ ಸರಿಯಾಗಿ ಕೆಲಸ ಮಾಡುವಂಥ ಮನುಷ್ಯ ಎಂದರೆ 'ವೀರಶೈವ' ಎನ್ನುವಂಥ ಕೀರ್ತಿಯನ್ನು ನಾವು ಗಳಿಸಿದ್ದೇವೆಯೇ? ಉದಾಹರಣೆಗೆ ನೇಪಾಳದ ಗೂರ್ಖನನ್ನು ನೋಡಿ. ಗೂರ್ಖರು ವೀರಪುರುಷರು. ಬೇಕಾದ್ದಾಗಲಿ ಅವರು ಯುದ್ಧದಲ್ಲಿ ಶೌರ್ಯದಿಂದ ಕಾದಾಡುತ್ತಾರೆ, ಜೀವಕೊಡ್ತಾರೆ. ಇವತ್ತಿಗೂ ನೀವೆಲ್ಲಿಯೇ ನೋಡಿ ಅವರನ್ನು ನಂಬಿಕಸ್ಥರೆಂಬ ಕಾರಣದಿಂದ ರಕ್ಷಣೆಯ ಕೆಲಸ(security job)ಗಳಿಗೆ ನೇಮಿಸಿಕೊಳ್ಳುತ್ತಾರೆ. ಅಂತಹ ಮಾದರಿ ನಮ್ಮದಾಗಬೇಕೆಂದು ಹೇಳಿ ಬಯಸುತ್ತೇನೆ.

ಕಾಯಕ ತತ್ವದ ಜೊತೆಗೆ ದಾಸೋಹವೂ ಸೇರಿದೆ. ದಾಸೋಹದ ಉದ್ದೇಶವೇನು? ನಮ್ಮಷ್ಟಕ್ಕೆ ನಮ್ಮ ಕಾಯಕದಲ್ಲಿ ಕೈಲಾಸ ಕಂಡರೆ ಸಾಲದು. ಯಾರಿಗೆ ಆ ಕೈಲಾಸ ಕಾಣುವುದಕ್ಕೆ ಸಾಧ್ಯವಿಲ್ಲವೋ, ಯಾರು ಬಡವರಿದ್ದಾರೋ, ಯಾರು ದುಃಖದಿಂದ ಇದ್ದಾರೋ, ದೀನದಲಿತರಾಗಿದ್ದಾರೋ ಅವರಿಗೆ ಸಹಾಯ ಮಾಡುವುದು ನಮ್ಮ ಧರ್ಮ. ನಮ್ಮಲ್ಲಿ ಎಷ್ಟು ಜನ ದಾಸೋಹತತ್ತ್ವವನ್ನು ಪ್ರತಿಪಾದಿಸುತ್ತಿದ್ದೇವೆ? "ಇವನಾರವ, ಇವನಾರವ ಎನ್ನದಿರಿ, ಇವ ನಮ್ಮವ, ಇವ ನಮ್ಮವ" ಎನ್ನುವ ಉದಾತ್ತವಾದ ಬಸವಣ್ಣನ ಮಾತನ್ನು ಸ್ವಾಮಿಗಳೂ ಸಹಿತ ಎಲ್ಲರೂ ನಡೆಸಬೇಕು. ಇವರು ಪಂಚಾಚಾರ್ಯರು, ಇವರು ವಿರಕ್ತರೂ ಎಂಬ ಭೇದವಿದೆ. ಬಸವಣ್ಣನವರು ಹೇಳುವುದಕ್ಕೂ ಹೀಗೆ ಭೇದ ಮಾಡುವುದಕ್ಕೂ ಎಷ್ಟು ಅಂತರವಿದೆ. ಆ ಅಂತರ ಹೋಗಿ ನಾವು ಎಲ್ಲಾ ಬಂಧುಗಳು ಎಂಬ ಭಾವವು ಮಾಡಬೇಕು. ಈ ದಾಸೋಹದ ಉಲ್ಲೇಖದಿಂದ ಒಂದು ವಿಷಯ ಸ್ಮರಣೆಗೆ ಬರುತ್ತೆ. ಅದೇನೆಂದರೆ ಸ್ವಚ್ಛತೆಯ ವಿಷಯ. ಒಮ್ಮೆ ಒಂದು ದೊಡ್ಡ ದಾಸೋಹ ಮಠಕ್ಕೆ ಹೋಗಿದ್ದೆ. ಊಟದ ಮನೆಯನ್ನು ನೋಡಲು ಮಠದ ಸ್ವಾಮಿಗಳೇ ಹೇಳಿದರು. ಅದರಂತೆ ನೋಡಲು ಹೋದರೆ ಅಲ್ಲಿ ನನ್ನ ಕಾಲುಗಳನ್ನೇ ಇಡುವ ಮನಸ್ಸಾಗಲಿಲ್ಲ. ಅಷ್ಟು ಹೊಲಸು. ಆ ಮಕ್ಕಳಿಗೆ ಸ್ವಚ್ಛತೆಯ ಬಗ್ಗೆ ಎಷ್ಟು ಗಮನ ಕೊಟ್ಟಿದ್ದಾರೆ. ಅದನ್ನು ಹೇಗೆ ರೂಢಿಯಲ್ಲಿ ನಡೆಸಿಕೊಂಡು ಬಂದಿದ್ದಾರೆ. ಇದು ಸಾಧ್ಯ ಎನ್ನುವುದಕ್ಕೆ ಈ ಮಾತು ಹೇಳುತ್ತಿದ್ದೇನೆ. ಒಂದು ಸಾರಿ ನನ್ನ ಮೊಮ್ಮಗಳು ಅಮೇರಿಕಾದಿಂದ ಬಂದಿದ್ದಳು. ನಾವು ರೋಡಿನಲ್ಲಿ ಸಿಗುವ ಕಡ್ಲೆಗಿಡ ಕೊಂಡು ಕಡ್ಲೆ ತಿನ್ನುತ್ತಾ ಕಾರಿನಲ್ಲಿ ಹೋಗ್ತಾ ಇದ್ದೆವು. ನಾನು ಕಡ್ಲೆ ಸಿಪ್ಪೆಯನ್ನು ದಾರಿಯ ಬದಿ ತಿಪ್ಪೆಗೆ ಎಸೆಯುವುದಕ್ಕೆ ತಯಾರಾಗಿದ್ದೆ. ಆಗ ನನ್ನ ಮೊಮ್ಮಗಳು "ಅಜ್ಜಾ, you dont dirty the road. Keep it inside" ಎಂದಳು. ಸ್ವಚ್ಛತೆಯ ಬಗ್ಗೆ ಎಷ್ಟು ಕಾಳಜಿ ಇದೆ ಎನ್ನುವುದಕ್ಕೆ ಇದು ನಿದರ್ಶನ.

ಇಷ್ಟು ಹೇಳಿ, ಉದ್ಘಾಟನಾ ಪರವಾದ ಭಾಷಣಕ್ಕೆ ವಿರಾಮ ಕೊಡುತ್ತಿದ್ದೇನೆ.

□□

೬. ಗೋಷ್ಠಿ ಅಧ್ಯಕ್ಷರುಗಳ ಭಾಷಣ

೬.೧. ಪ್ರೊ॥ ಎನ್. ಬಸವಾರಾಧ್ಯರ ಭಾಷಣ

ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನವು ಶ್ರೀಮತ್ ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಮಹಾಪೋಷಕತ್ವದಲ್ಲಿ ವಾರಣಾಸಿಯಲ್ಲಿ ಸ್ಥಾಪಿತವಾಗಿದ್ದು ಧರ್ಮ-ಸಮಾಜ ಹಾಗೂ ಸಾಹಿತ್ಯ ಪೋಷಣೆಯಲ್ಲಿ ತನ್ನದೇ ಆದ ವೈಶಿಷ್ಟ್ಯಪೂರ್ಣ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಇದರ ಅಂಗಸಂಸ್ಥೆಯಾದ ವೀರಶೈವ ಅನುಸಂಧಾನ ಸಂಸ್ಥಾನವು ಬೆಂಗಳೂರಿನಲ್ಲಿ ೧೯೯೮ರಲ್ಲಿ ಸ್ಥಾಪಿತವಾಗಿದ್ದು ಅದು ತನ್ನ ಚಟುವಟಿಕೆಯನ್ನು ಪ್ರಧಾನವಾಗಿ ವೀರಶೈವ ಧರ್ಮ ಹಾಗೂ ಸಾಹಿತ್ಯಗಳ ಕಡೆಗೆ ಹೊರಳಿಸಿದೆ. ಕಾಶೀ ಜಗದ್ಗುರುಗಳವರು ವೀರಶೈವಧರ್ಮದ ಮೂಲ ಆಕರ ಗ್ರಂಥಗಳಾದ ಶಿವಾಗಮಗಳನ್ನು ಸಂಸ್ಕೃತ ಮೂಲದೊಂದಿಗೆ ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳಲ್ಲಿ ಅವುಗಳ ಶ್ಲೋಕಗಳ ತಾತ್ಪರ್ಯವನ್ನು ಸರಳವಾಗಿ ಹೇಳಿ ಆ ಮೂಲಕ ಸಂಸ್ಕೃತ ತಿಳಿಯದವರಿಗೆ ಶಿವಾಗಮಗಳ ಪತ್ಯವಿಷಯವನ್ನು ಪರಿಚಯಿಸುತ್ತಿರುವರು. ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನದವರು ಇದರ ಮುಂದುವರಿಕೆಯಾಗಿ ಕನ್ನಡದಲ್ಲಿ ಶಿವಾಗಮಗಳನ್ನು ಹೊರತರುತ್ತಿರುವರು. ಈಗಾಗಲೇ ಮಕುಟಾಗಮ, ಕಾರಣಾಗಮ, ಪಾರಮೇಶ್ವರಾಗಮ, ಸೂಕ್ಷ್ಮಾಗಮ, ಚಂದ್ರಜ್ಞಾನಾಗಮಗಳು ಪ್ರಕಟವಾಗಿವೆ. ಇದರ ಜೊತೆಗೆ, ಸಿದ್ಧಾಂತ ಶಿಖಾಮಣಿ, ಚಂದ್ರಜ್ಞಾನಾಗಮ, ಸೂಕ್ಷ್ಮಾಗಮ ಹಾಗೂ ಶೈವಾಗಮಗಳಲ್ಲಿ ವೀರಶೈವದ ಬಗೆಗೆ ಪ್ರತ್ಯೇಕ ವಿಚಾರ ಸಂಕಿರಣಗಳನ್ನು ನಡೆಸಿದೆ.

ಕಾಶೀ ಜಗದ್ಗುರುಗಳವರದು ಸಮನ್ವಯ ಸೂತ್ರ. ಗುರು-ವಿರಕ್ತರ ನಡುವೆಯಿರುವ ಭಿನ್ನಾಭಿಪ್ರಾಯಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ನಿವಾರಿಸಿ ಇವರ ನಡುವೆ ಸಾಮರಸ್ಯ ಮೂಡಿಸಲು 'ವೇದಾಗಮಗಳು ಮತ್ತು ಶಿವಶರಣರು' ಎಂಬ ಎರಡು ವಿಚಾರ ಸಂಕಿರಣಗಳನ್ನು ಬೆಂಗಳೂರು ಮತ್ತು ಬಾಗಲಕೋಟೆಯಲ್ಲಿ ವೀರಶೈವ ಅನುಸಂಧಾನ ಸಂಸ್ಥಾನ ಹಾಗೂ ಸ್ಥಳೀಯ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದರು. ಅವು ಪುಸ್ತಕ ರೂಪದಲ್ಲೂ ಈಗ ಹೊರಬಂದಿವೆ. ಈ ಸಮನ್ವಯ ಸೂತ್ರದ ಮುಂದುವರಿಕೆಯಾಗಿ ಈಗ 'ವೀರಶೈವ ಧರ್ಮ : ಒಂದು ಪುನರವಲೋಕನ' ಎಂಬ ವಿಚಾರ ಸಂಕಿರಣವನ್ನು ಧಾರವಾಡದಲ್ಲಿ ಹಮ್ಮಿಕೊಳ್ಳಲಾಗಿದೆ.

ವೀರಶೈವ ಅಥವಾ ಲಿಂಗಾಯತ ಎನ್ನುವ ಒಂದು ಜನಾಂಗವು ಆ ಹೆಸರಿನ ಮೂಲಕ ಒಂದು ಪ್ರಾಚೀನ ಪರಂಪರೆಯು ತನ್ನ ಧಾರ್ಮಿಕ ಆಚರಣೆಗಳು,

ವಿಧಿ-ವಿಧಾನಗಳು, ನಂಬಿಕೆಗಳು -ಇವನ್ನು ಅಲಿಖಿತ ಹಾಗೂ ಲಿಖಿತ ಪರಂಪರೆಯಾಗಿ ಉಳಿಸಿಕೊಂಡು ಬಂದಿದೆ. ಈ ಧರ್ಮದ ಮೂಲಪುರುಷರು ಪಂಚಾಚಾರ್ಯರು, ಬಸವಾದಿ ಪ್ರಮಥರು, ನೂರೊಂದು ವಿರಕ್ತರು -ಈ ಎಲ್ಲ ಮಹಾಪುರುಷರು ತಮ್ಮ ದಿವ್ಯ ಮಾರ್ಗದರ್ಶನದ ಮೂಲಕ ಈ ಮಂತ್ರರೂಪವಾದ ವೀರಶೈವ ಅಥವಾ ಲಿಂಗಾಯತ ಧರ್ಮಕ್ಕೆ ಒಂದು ಚೈತನ್ಯ ಶಕ್ತಿಯನ್ನು ಆವಾಹಿಸಿರುವರು. ಅವರಿಗೆ ಈ ಧರ್ಮದ ಅಖಂಡತೆಯ ಪರಿಕಲ್ಪನೆಯಿದ್ದಿತು. ಏಕದೇವೋಪಾಸನೆಯನ್ನು ವೀರವ್ರತವಾಗಿ ಸ್ವೀಕರಿಸಿದ ಅವರು ಏಕತೆಯಲ್ಲಿ ಅನೇಕತೆಯನ್ನು ಪರಿಭಾವಿಸಿದರೇ ಹೊರತು ಅನೈಕ್ಯತೆಯನ್ನಲ್ಲ. ಅವರದು ವಿಶ್ವಮಾನವ ತತ್ವದ ಆರಾಧನೆ. ಲೋಕದ ಸಮಷ್ಟಿಹಿತವನ್ನು ಬಯಸುವ ಮಹೋನ್ನತ ಆದರ್ಶ. ಜನಸಮೂಹದ ನಡುವೆ ಒಂದು ದ್ವೀಪವಾಗದೆ ಆ ಜನಸಮೂಹದ ನಡುವೆ ತನ್ನ ಧರ್ಮಮಂದಿರದ ಎಲ್ಲ ಕಿಟಕಿ ಬಾಗಿಲುಗಳನ್ನು ತೆರೆದು ತಮ್ಮ ತತ್ವಗಳಿಗೆ, ಆದರ್ಶಗಳಿಗೆ ನಿಷ್ಠರಾಗಿರುವವರನ್ನು ತಮ್ಮ ತೆಕ್ಕೆಗೆ ಸೇರಿಸಿಕೊಂಡರು. ತಮ್ಮ ಗಟ್ಟಿ ಧ್ಯೇಯಗಳಿಗೆ ಹೊರಗಾದವರನ್ನು ಭವಿಗಳೆಂದು ದೂರವಿಟ್ಟರು. ಇದು ಪುರೋಹಿತಶಾಹಿಯ ಇನ್ನೊಂದು ರೂಪವೆಂದು ಕೆಲವರು ಕರೆದರು. ಭಾರತೀಯರಿಗೆ ಸಂವಿಧಾನವು ಒಂದು ನೀತಿ ಸಂಹಿತೆಯನ್ನು ಬೋಧಿಸಿ ಅವರ ಹಕ್ಕು ಹಾಗೂ ಕರ್ತವ್ಯಗಳನ್ನು ಹೇಗೆ ತಿಳಿಯಪಡಿಸಿತೋ ಹಾಗೆ ಈ ಧರ್ಮವೂ ತನ್ನದೇ ಆದ ನೀತಿಸಂಹಿತೆಯನ್ನು ಹೊಂದಿದೆ. ಸಹಬಾಳ್ವೆ, ಕಾಯಕ ಹಾಗೂ ದುಡಿಮೆಯ ಪ್ರತಿಫಲವು ವ್ಯಕ್ತಿ ಮತ್ತು ಸಮಾಜದ ಒಳಿತಿಗೆ ವಿತರಣಗೊಳ್ಳಬೇಕೆಂಬುದು ಈ ಧರ್ಮದ ಪ್ರಧಾನ ತತ್ವ. ನ್ಯಾಯಾಂಗ-ಆಡಳಿತಾಂಗ-ಕಾರ್ಯಾಂಗಗಳು ನಮ್ಮ ಸಂವಿಧಾನದ ಮೂಲಸೂತ್ರಗಳು. ವೀರಶೈವಧರ್ಮ ಧಾರ್ಮಿಕ ಸಮಾನತೆ, ಆರ್ಥಿಕ ಸಮಾನತೆ, ಸಾಮಾಜಿಕ ಸಮಾನತೆ, ಭಾಷಿಕ ಸಮಾನತೆ, ಲಿಂಗಸಮಾನತೆಗಳನ್ನು ತರುವ ಮೂಲಕ ಸಾಮಾಜಿಕ ನ್ಯಾಯವನ್ನು ಶೋಷಿತರಿಗೆ ಒದಗಿಸಿಕೊಟ್ಟಿತು. ವೀರಶೈವ ಧರ್ಮವು ಗುರು-ವಿರಕ್ತರ ಕರ್ತವ್ಯಗಳನ್ನು ಸ್ಪಷ್ಟಪಡಿಸಿತು. ಜಂಗಮವು ನಿಜವಾದ ಅರ್ಥದಲ್ಲಿ 'ಚರಿಸುವ ಲಿಂಗ'ವಾಗಿ ಜ್ಞಾನವನ್ನು ನೀಡುವ ಕರ್ತವ್ಯವನ್ನು ನಿರ್ವಹಿಸಿತು. ಮಠಗಳು ಧಾರ್ಮಿಕ ಕೇಂದ್ರಗಳಾಗಿದ್ದರೂ ಅವು ಅಷ್ಟಕ್ಕೇ ತಮ್ಮ ಕಾರ್ಯಕ್ಷೇತ್ರವನ್ನು ಮೀಸಲು ಮಾಡದೆ ಧರ್ಮ - ಸಮಾಜ - ಸಾಹಿತ್ಯ - ಸಂಸ್ಕೃತಿ - ಕಲೆಗಳ ವರ್ಧನೆಗೂ ವಿಸ್ತರಿಸಿತು. ಈ ಹಿನ್ನೆಲೆಯಲ್ಲಿ ಆಧುನಿಕ ಭಾರತದ ಸಂವಿಧಾನವು ತಿಳಿಸುವ ಮೂಲಭೂತ ಹಕ್ಕುಗಳು ಹಾಗೂ ಕರ್ತವ್ಯಗಳನ್ನು ಬಹಳ ಹಿಂದೆಯೇ ೧೨ ಮತ್ತು ೧೫ನೇ ಶತಮಾನಗಳಲ್ಲಿ ನಡೆದ ಮೊದಲನೇ ಘಟ್ಟ ಹಾಗೂ ಎರಡನೇ ಘಟ್ಟದ ವೀರಶೈವ ಚಳುವಳಿಗಳಲ್ಲಿ ಸ್ಪಷ್ಟಪಡಿಸಿದೆ. ವೀರಶೈವ ಧರ್ಮವು ಸಾಮಾಜಿಕ ಬದ್ಧತೆಯನ್ನು ಹಾಗೂ ತಾತ್ವಿಕ ನಿಯಮಗಳನ್ನು ತನ್ನ ಗುರು-ವಿರಕ್ತ ಹಾಗೂ ಶ್ರೀಸಾಮಾನ್ಯರಾದ ಭಕ್ತರ ಸಾಹಿತ್ಯದಲ್ಲಿ ಸ್ಪಷ್ಟಪಡಿಸಿದೆ.

ಕಾಲಕಾಲಕ್ಕೆ ಧರ್ಮದ ಪುನರ್‌ಮೌಲ್ಯೀಕರಣ ಕಾರ್ಯ ಆಗಬೇಕು. ಹಳೆಯ ಹಾಗೂ ಹೊಸ ಚಿಂತನೆಗಳು ಪ್ರಸ್ತುತ ಕಾಲಮಾನದ ಬೆಳಕಿನಲ್ಲಿ ಹೊಸ ಹೊಸ ಅರ್ಥಗಳನ್ನು, ವ್ಯಾಖ್ಯೆಗಳನ್ನು ಪಡೆದುಕೊಳ್ಳಬೇಕು. ಆಗ ಧರ್ಮಕ್ಕೆ ಜೀವಂತಿಕೆ ಬರುತ್ತದೆ. ಇಲ್ಲದಿದ್ದರೆ ಅದು ಪಳೆಯುಳಿಕೆಯಾಗುವ (Fossil) ಅಪಾಯವೂ ಇದೆ. ಈ ಮೌಲ್ಯಮಾಪನ ಅಥವಾ ಪುನರವಲೋಕನದಲ್ಲಿ ಸಂಗತ (ಸ್ವೀಕಾರಾರ್ಹ), ಅಸಂಗತ (ಸ್ವೀಕಾರಾರ್ಹವಲ್ಲದ್ದು) ಎರಡೂ ನಿಕಷಕ್ಕೆ ಒಳಗಾಗಬೇಕು. ಇವು ತೆರೆದ ಮನಸ್ಸಿನ ಚಿಂತನೆಗಳಾಗಬೇಕೇ ಹೊರತು ಪೂರ್ವ ನಿರ್ಧರಿತ ಸನ್ನಿಪಾತ ಚಿಂತನೆಗಳಾಗಬಾರದು. ಧರ್ಮದಲ್ಲಿ ಸಹಜೀವನ, ಸಹಮತ, ಸಹಯೋಗ, ಸಹವಾಸ, ಸಹಭಾಗಿತ್ವ -ಈ ಐದು ಏಕತ್ರ ಸೇರಬೇಕು. ಆಗ ಏಕತೆ (Unity) ಎನ್ನುವುದು ಈ ಧರ್ಮದ ಅವಿಭಾಜ್ಯ

ಭಾಗವಾಗುತ್ತದೆ. ಭಿನ್ನಮತ ಇರಲೇಬಾರದು ಎನ್ನುವುದು ವೀರಶೈವ ಸಿದ್ಧಾಂತಕ್ಕೆ ಹೊರತು. ಭಿನ್ನಮತ ಎನ್ನುವುದು ಸನಾತನ ಹಾಗೂ ಅರ್ವಾಚೀನಗಳ ನಡುವಿನ ಘರ್ಷಣೆಯಾಗಬಾರದು. ಧರ್ಮದ ಏಕತೆಯ-ಸಮಾನತೆಯ ಬಂಧ ಅಥವಾ ಕಟ್ಟು ವಿಗಳಿತವಾಗಬಾರದು. ಭಿನ್ನಮತ ಪ್ರಗತಿಯ ಕಡೆ ಮುಖಮಾಡಿದಾಗ ಅದು ಸ್ವೀಕಾರಾರ್ಹವಾಗುತ್ತದೆ. ಅದು ವಿಚ್ಛಂದವಾದಲ್ಲಿ ಅಥವಾ ವಿಚ್ಛಿದ್ರಕಾರಿಯಾದಲ್ಲಿ ಅಪಾಯಕಾರಿಯಾದುದು. ನಾವು ೨೧ನೇ ಶತಮಾನದಲ್ಲಿದ್ದೇವೆ. ಇದು ವಿಜ್ಞಾನ ಯುಗ, ಕಂಪ್ಯೂಟರ್ ಯುಗ. ಸಮಾನತೆಯ ಸಮಾನ ಹಕ್ಕುಗಳ ಪ್ರಸ್ತಾಪ ಇಂದಿನ ದಿನಮಾನಗಳಲ್ಲಿ ವಿಶೇಷವಾಗಿ ಕೇಳಬರುತ್ತಿರುವಾಗ, ಪಾಶ್ಚಾತ್ಯ ಸಂಸ್ಕೃತಿಯ ಬಲವಾದ ಗಾಳಿ ನಮ್ಮ ಧರ್ಮ - ಸಮಾಜ - ಭಾಷೆ - ಸಾಹಿತ್ಯ - ಸಂಸ್ಕೃತಿಗಳ ಮೇಲೆ ದಾಳಿ ನಡೆಸುತ್ತಿರುವಾಗ ನಾವು ಸನಾತನತೆಯ ಹಿರಿಮೆಯನ್ನು ಇಂದಿನ ಯುವಪೀಳಿಗೆಗೆ ಮನಗಾಣಿಸಬೇಕಾದ ತುರ್ತಿದೆ. ಈ ಪರ್ವಕಾಲದಲ್ಲಿ ನಾವು ಪರಂಪರೆಯ ಪಳೆಯುಳಿಕೆಗಳಾಗಿ ಉಳಿಯಬಾರದು. ಹೊಸ ಯುಗದ ಹೊಸ ಚಿಂತನೆಗೆ ನಮ್ಮ ಪರಂಪರೆಯ ಮಾರ್ಗದರ್ಶನದಲ್ಲಿ ಹೊಸ ಆಲೋಚನೆಗಳಿಗೆ, ಆವಿಷ್ಕಾರಗಳಿಗೆ ಅವಕಾಶ ಕಲ್ಪಿಸಿಕೊಡಬೇಕಾದುದು ಸದ್ಯದ ನಮ್ಮ ಕರ್ತವ್ಯವಾಗಿದೆ. ನಮ್ಮ ಆಚಾರ್ಯರು, ಶರಣರು, ಜ್ಞಾನಿಗಳು ಹೇಳಿದ ತತ್ತ್ವ, ಸಿದ್ಧಾಂತಗಳೂ ಈಗ ವಿವಕ್ಷೆಗೆ ಒಳಪಡಬೇಕಾದ ಅಗತ್ಯವಿದೆ. ಏಕೆಂದರೆ, ಒಂದು ಕಾಲದ ನಂಬುಗೆ ಹಾಗೂ ಧೋರಣೆಗಳು, ತತ್ತ್ವ ಹಾಗೂ ಸಿದ್ಧಾಂತಗಳು ಇನ್ನೊಂದು ಕಾಲಕ್ಕೂ ಸ್ವೀಕಾರಾರ್ಹವಾಗಲೇಬೇಕೆಂಬ ನಿರ್ಬಂಧವಿರಬಾರದು.

ಈ ಮುಕ್ತ ಮನೋಭಾವ ಬೆಳೆದಲ್ಲಿ ವೀರಶೈವ ಧರ್ಮ ಪ್ರಸ್ತುತ ದಿನಮಾನಗಳಿಗೆ ಇನ್ನಷ್ಟು ಹತ್ತಿರವಾಗುತ್ತದೆ. ವೀರಶೈವ ಧರ್ಮದ ಎಲ್ಲ ನೆಲೆಗಳೂ, ಆಯಾಮಗಳೂ ಈ ವಿಚಾರ ಸಂಕಿರಣದಲ್ಲಿ ಚರ್ಚೆಗೆ ಒಳಗಾಗುತ್ತಿರುವುದು ಸಂತೋಷ. ಹಳೆಯ ತಲೆಮೊರೆ ಹೊಸ ತಲೆಮೊರೆಗೆ ವೀರಶೈವ ಧರ್ಮದ ಸಾರ್ವಕಾಲಿಕ ಸತ್ಯದ ಸಕೃದ್ದರ್ಶನ ಮಾಡಿಸುವುದು ಹಿಂದಿಗಿಂತ ಈಗ ಅಗತ್ಯವೆನ್ನಿಸಿದೆ, ಪ್ರಸ್ತುತವೆನಿಸಿದೆ.

ಬಂಧುಗಳೆ,

'ವೀರಶೈವ ಧರ್ಮ : ಒಂದು ಪುನರವಲೋಕನ' ಎಂಬ ಇಂದಿನ ವಿಚಾರ ಸಂಕಿರಣದ ಮೊದಲನೆಯ ಗೋಷ್ಠಿಯಲ್ಲಿ ವಿದ್ವಾನ್ ಕೋ.ರಂ. ಬಸವರಾಜು ಅವರು ಸಾದರಪಡಿಸಿದ 'ವೀರಶೈವ ಲಿಂಗಾಯತ : ಮೂಲ ಮತ್ತು ಬೆಳವಣಿಗೆ' ಎಂಬ ವಿಷಯವನ್ನು ಕುರಿತ ವಿದ್ವತ್ಪೂರ್ಣ ಮೌಲಿಕ ಪ್ರಬಂಧವನ್ನು ಆಲಿಸಿದ್ದೀರಿ. ಅನೇಕ ಪ್ರಾಚೀನ ಗ್ರಂಥಾಧಾರಗಳಿಂದ ವೀರಶೈವದ ಪ್ರಾಚೀನತೆಯನ್ನು ಪ್ರತಿಪಾದಿಸಿದ್ದಾರೆ. ಇವೆರಡೂ ಪರ್ಯಾಯ ಪದಗಳು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಸಂಸ್ಕೃತ ಕನ್ನಡ ನಿಘಂಟುಗಳಲ್ಲಿ ಈ ಎರಡೂ ಶಬ್ದಗಳನ್ನು ಕೊಟ್ಟಿದೆ. ಮೋನಿಯರ್ ವಿಲಿಯಮ್ಸ್ ಅವರ ಸಂಸ್ಕೃತ ನಿಘಂಟಿನಲ್ಲಿ ಲಿಂಗ ಶಬ್ದವನ್ನು ಅದರ ಎಲ್ಲ ಅರ್ಥಗಳೊಂದಿಗೆ ಕೊಟ್ಟು ಅದರೊಂದಿಗೆ ನಿಷ್ಪನ್ನವಾಗುವ ಅನೇಕ ಶಬ್ದಗಳನ್ನು ಕೊಟ್ಟಿದೆ. ಆದರೆ ಲಿಂಗಾಯತ ಎಂಬ ಪದವನ್ನು ಕೊಟ್ಟಿಲ್ಲ. ಆದರೆ 'ವೀರ' ಶಬ್ದದ ಕೆಳಗೆ ವೀರಶೈವ ಎಂಬ ರೂಪವನ್ನು ಕೊಟ್ಟಿದೆ. ವೇದಾಗಮ ಪುರಾಣ ಉಪನಿಷತ್ತುಗಳಲ್ಲಿ ವೀರಶೈವದ ಬಳಕೆ

ಕಂಡುಬರುತ್ತದೆಯೇ ಹೊರತು ಲಿಂಗಾಯತದ ಬಳಕೆ ಕಂಡುಬಂದಂತಿಲ್ಲ. ಹೀಗಾಗಿ ವೀರಶೈವ ಪ್ರಾಚೀನವಾದರೂ ತರುವಾಯದ ಲಿಂಗಾಯತದಷ್ಟು ಪ್ರಾಚುರ್ಯತೆ ಕಂಡುಬರುವುದಿಲ್ಲ. ವೇದಾಗಮ ಪುರಾಣೋಪನಿಷತ್ತುಗಳ ಸಾರಸರ್ವಸ್ವವನ್ನು ನಾಡಿನ ಜನತೆಯು ಕನ್ನಡದಲ್ಲಿ ಬಳಸಿದ್ದರಿಂದ ವೀರಶೈವ ಧರ್ಮವಾಗಿಯೂ ಲಿಂಗವಂತ ಪದ ವ್ಯಾಪಕವಾಗಿ ಬಳಕೆಗೆ ಬಂದಿರುವುದು ಸಹಜವೆನಿಸುತ್ತದೆ.

ಪುರಾಣೋಪನಿಷತ್ತುಗಳ ಕಾಲದ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ವೀರಶೈವ ಧರ್ಮದ ಸಿದ್ಧಾಂತ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ಶ್ರೀಕರ ಭಾಷ್ಯಗಳ ಕಾಲವರ್ತನೆಗಳ ಬಗೆಗೆ ಸುಪ್ರಸಿದ್ಧ ವಿದ್ವಾಂಸರಾದ ಡಾ|| ಇಮ್ಮಡಿ ಶಿವಬಸವ ಸ್ವಾಮಿಗಳು ಅತ್ಯಂತ ಅಮೂಲ್ಯವಾದ ಕೃತಿಯನ್ನು ಬರೆದಿದ್ದಾರೆ. ಈ ಗ್ರಂಥ ರಚನೆಗೆ, ಪರಮ ಪೂಜ್ಯರು ಅನೇಕ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳನ್ನು ಪರಿಶೀಲಿಸಿದ್ದಾರೆ. ತಮಗೆ ಅಗತ್ಯವೆನಿಸಿದ ಭಾಗಗಳನ್ನು ಉದ್ಧರಿಸಿದ್ದಾರೆ. ಪರಮಪೂಜ್ಯರು ಪರಿಶೀಲಿಸಿರುವ ಅಪ್ರಕಟಿತ ಕೃತಿಗಳು ಪ್ರಕಟವಾಗುವವರೆಗೂ ಇದಮಿತ್ಥಂ ಎಂದು ನಿರ್ಧರಿಸುವುದು ಸಾಧ್ಯವಿಲ್ಲವಾಗಿದೆ.

ಪ್ರಸ್ತುತ ಜ್ವಲಂತವಾಗಿರುವ ಸಮಸ್ಯೆ ವಚನ ಸಾಹಿತ್ಯ ಪ್ರಾಚೀನವೋ ಅಥವಾ ವಚನ ಸಾಹಿತ್ಯಕ್ಕೆ ಪರಿಪೋಷಕವಾಗಿರುವ ಸಿದ್ಧಾಂತ ಶಿಖಾಮಣಿ ಪ್ರಾಚೀನವೋ ಎಂಬುದು. ಬಹುಕಾಲದಿಂದ ಅನೇಕ ವಿದ್ವಾಂಸರು ಪ್ರತಿಪಾದಿಸಿರುವಂತೆ ಪುರಣಾಗಮ ಉಪನಿಷತ್ತುಗಳಲ್ಲಿ ಪ್ರತಿಪಾದಕವಾಗಿರುವ ವೀರಶೈವ ಸಿದ್ಧಾಂತ ಸಂಸ್ಕೃತದಲ್ಲಿದೆ. ಅದನ್ನು ಕನ್ನಡಕ್ಕೆ ತಂದುಕೊಟ್ಟು ಈ ಧರ್ಮಕ್ಕೆ ಒಂದು ವ್ಯಾಪಕತೆಯನ್ನು ತಂದುಕೊಟ್ಟರು. ಒಟ್ಟಿನಲ್ಲಿ ಯಾವ ಪ್ರಕಾರದ ಸಾಹಿತ್ಯ ಪ್ರಾಚೀನ ಅರ್ವಾಚೀನಗಳು ಎಂಬುದು ಮುಖ್ಯವಲ್ಲ. ವೀರಶೈವರು ಅರ್ಥಾತ್ ಲಿಂಗಾಯತರು ಮಾಡುತ್ತಿರುವುದು ಇಷ್ಟಲಿಂಗೋಪಾಸನೆಯನ್ನೇ. ಏಕದೈವೋಪಾಸನೆಯಲ್ಲಿ ನಿರತವಾಗಿರುವ ವೀರಶೈವ ಲಿಂಗಾಯತ ಬಂಧುಗಳು ಇಂದಿನ ದಿನಮಾನದಲ್ಲಿ ಈ ಧರ್ಮದ ಈ ಸಮುದಾಯದ ಈ ಸಮಾಜದ ಶ್ರೇಯಸ್ಸಿಗೆ ಶ್ರಮಿಸುವುದು ಶ್ರೇಯಸ್ಕರವಲ್ಲವೆ? ಸಮಾಜ ಬಾಂಧವರು ಈ ಬಗೆಗೆ ಕೈ ಜೋಡಿಸುವರೆಂದು ದೃಢವಾಗಿ ನಂಬಿದ್ದೇನೆ.

* * *

೬.೨. ಡಾ. ಮಲ್ಲಿಕಾರ್ಜುನ ಪರಡ್ಡಿ ಅವರ ಭಾಷಣ

ಯತ್ತರೋರ್ವಾ ಲತಾಯಾಃ ಶಿರೋಭೂಷಣಂ
ಪುಷ್ಪವೃಂದಂ ಸದಾ ದೃಷ್ಟುಕಾಮೋ ನರಃ।
ಪಾದಪಾನಾಮಿದಂ ಯೈಃ ಕೃತಂ ಪೋಷಣಂ
ತಾನಿ ಪಶ್ಯೇತ್ತು ಮೂಲಾನಿ ನಮ್ರಾನನಃ॥

(ಡಾ. ಮಲ್ಲಿಕಾರ್ಜುನ ಪರಡ್ಡಿ)

(ತರುಲತೆಗಳ ಶಿರೋಭೂಷಣವಾದ ಪುಷ್ಪ ಸಮೂಹವನ್ನು ಮನುಷ್ಯ ಯಾವಾಗಲೂ ನೋಡಲು ಬಯಸುತ್ತಾನೆ. ಆದರೆ ಆ ಗಿಡಗಳ, ಲತೆಗಳ ಪೋಷಣೆ

ಮಾಡುವ, ಆಧಾರಭೂತವಾದ ಬೇರುಗಳನ್ನು ತಲೆಬಾಗಿ ನೋಡಬೇಕಾದದ್ದು ಅವನ ಕರ್ತವ್ಯ).

ಹನ್ನೆರಡನೇ ಶತಮಾನದ ಬಸವಾದಿ ಶಿವಶರಣರು ಸಮಾನತೆ ಹಾಗೂ ಸರ್ವೋದಯದ ತಳಹದಿಯ ಮೇಲೆ ಕಟ್ಟಬಯಸಿದ ಜಾತ್ಯತೀತ ಸಮಾಜದ ಭವ್ಯ ಚಿತ್ರಣವನ್ನು ಕಲ್ಪಿಸಿದ ಬುದ್ಧಿಜೀವಿಗಳೆಂದು ಕರೆಯಲ್ಪಡುವ ಕೆಲ ಜನರು ಬಸವಪೂರ್ವಯುಗದಲ್ಲಿ ವೀರಶೈವ ಧರ್ಮದ ಉದಾತ್ತವಾದ ವಿಚಾರಧಾರೆಯೇ ಇರಲಿಲ್ಲವೆಂದು ಭಾವಿಸುವುದು ಈಗ ಒಂದು fashion ಆಗಿವೆ. ಆದರೆ ಬಸವಪೂರ್ವಯುಗದ ಶಿವಶರಣರನ್ನು ಗಣನೆಗೆ ತೆಗೆದುಕೊಂಡರೆ ಅವರ ಅಭಿಪ್ರಾಯ ತಪ್ಪೆಂದು ವ್ಯಕ್ತವಾಗದಿರದು. ಅಲ್ಲದೆ 'ಹಿಂದಿನ ಜನ್ಮದಲ್ಲಿ ಲಿಂಗವ ಮರೆತದ್ದರಿಂದ ಮತ್ತು ಜಂಗಮವ ಜರಿದಿದ್ದರಿಂದ ನನಗೆ ಈ ಭವಬಂಧನ ಉಂಟಾಯಿತು' ಎಂದು ಅಣ್ಣ ಬಸವಣ್ಣನೇ ಹೇಳುವುದನ್ನು ಉಪೇಕ್ಷೆ ಮಾಡುವುದು ಸರಿಯಲ್ಲ. 'ಶಿವಪಥವನರಿವೊಡೆ ಗುರುಪಥವೇ ಮೊದಲು', ಎಂದು ಗುರುಮಹಿಮೆಯನ್ನು ಪ್ರಾಂಜಲವಾಗಿ ಕೊಂಡಾಡುವ ಬಸವಣ್ಣನವರು ಜಾತಿವೇದ ಮುನಿಗಳೆಂಬ ಗುರುವಿನಿಂದ ಲಿಂಗದೀಕ್ಷೆಯನ್ನು ಹೊಂದಿದ ಐತಿಹಾಸಿಕ ಘಟನೆಯನ್ನು ತಳ್ಳಿ ಹಾಕುವುದು ದುಸ್ಸಾಹಸವೆನ್ನವೇ ಗತ್ಯಂತವಿಲ್ಲ. ಬಸವಾದಿ ಪ್ರಮಥರು ತಾವು ನಂಬಿ ಆಚರಿಸುವ ವೀರಶೈವ ವಿಚಾರಧಾರೆಗೆ ಪ್ರಮಾಣವನ್ನೊದಗಿಸಲು ವೇದಾಗಮಗಳ ವಾಕ್ಯಗಳನ್ನು ಹೇರಳವಾಗಿ ಉಪಯೋಗಿಸುವುದನ್ನು ಅವಲೋಕಿಸಿದಾಗ ಅನಾದಿ ವೀರಶೈವದ ಬೇರುಗಳನ್ನು ಶಿವಾಗಮಾದಿ ಸದ್ಗ್ರಂಥಗಳಲ್ಲಿ ಕಾಣಲು ಸಾಧ್ಯವಿದೆ.

ಜಾತವೇದ ಮುನಿಗಳು ಬಸವಣ್ಣನವರಿಗೆ ಧರ್ಮೋಪ್ರದೇಶ ಮಾಡುವ ಪ್ರಸಂಗದಲ್ಲಿ ಹೇಳುವ ಈ ಮಾತು ಅರ್ಥಪೂರ್ಣವಾದುದು-

ಶಿವಾಗಮಾದಿಸದ್ಗ್ರಂಥನಿರೂಪಿತಮಿದಂ ಪುರಾ।
ಕಾಲಲೀಲಾಖಿಲೀಭೂತಂ ವೀರಶೈವಮತಂ ಪರಮ್॥

(ಶಿವಾಗಮ ಮುಂತಾದ ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿ ನಿರೂಪಿಸಲ್ಪಟ್ಟ ಈ ವೀರಶೈವ ಮತಸಿದ್ಧಾಂತವು ಕಾಲಲೀಲೆಯಿಂದಾಗಿ ಶಿಥಿಲವಾಗಿದೆ.)

ವೈದಿಕಧರ್ಮದ ಪ್ರಾಬಲ್ಯದಿಂದಾಗಿ ಶಿವಾಗರ್ಮಗಳ ಉದಾರ ವಿಚಾರಧಾರೆ ಜಗತ್ತಿನಲ್ಲಿ ಕಣ್ಣರೆಯಾಗಿದ್ದು ೧೨ನೇ ಶತಮಾನದ ಬಸವಣ್ಣನವರು ಅದರ ಪ್ರಚಾರ, ಪ್ರಸಾರ ಮಾಡಲಾಗಿ ಶಿವಾಗಮಗಳ ಅಸ್ತಿತ್ವ ಕರ್ನಾಟಕದಲ್ಲಿಯಾದರೂ ಉಳಿಯಲು ಸಾಧ್ಯವಾಯಿತು. ಈ ವಿಷಯವಾಗಿ ಸಿದ್ಧರಾಮಪ್ಪ ಪಾವಟೆ ಅವರ ಈ ಅಭಿಪ್ರಾಯ ಅತ್ಯಂತ ತರ್ಕಬದ್ಧವೆಂದು ಹೇಳಬೇಕಾಗುತ್ತದೆ.

The influence of Vedic lore was so great that the Agama literature was lost to the world but the great Basava in the 12th century preached and spread the doctrines of Shivaganas, and thus their revival in Karnataka (S.D. Pawate, Veerashaiva Philosophy of Shivaganas)

ಇಷ್ಟೆಲ್ಲಾ ಪ್ರಮಾಣಗಳು ಉಪಲಬ್ಧವಿದ್ದರೂ ಪೂರ್ವಾಗ್ರಹಪೀಡಿತರಾದ ಕೆಲವರು ಅನಾದಿ ವೀರಶೈವವು ೧೨ನೇ ಶತಮಾನದಿಂದೀಚೆಗೆ ಉಗಮವಾಗಿದ್ದು ಬಸವಣ್ಣನೇ

ಈ ಧರ್ಮದ ಸ್ಥಾಪಕನೆಂದು ವಾದಿಸುತ್ತಾರೆ. ಇನ್ನೂ ಕೆಲವರಂತೂ ವೀರಶೈವ/ ಲಿಂಗಾಯತ ಧರ್ಮಕ್ಕೆ ಪರ್ಯಾಯವಾಗಿ ಬಸವಧರ್ಮದ ಘೋಷಣೆಯನ್ನು ಮಾಡುವಷ್ಟು ಅತ್ಯುತ್ಸಾಹವನ್ನು ಮೆರೆಯುವುದನ್ನು ಕಂಡಾಗ ಸಮಾಜ ವಿಘಟನೆಯತ್ತ ಸಾಗದೇ ಇರಲು ಸಾಧ್ಯವೆ? ಈ ಎಲ್ಲ ಗೊಂದಲಗಳನ್ನು ಅವಲೋಕಿಸಿದಾಗ ಮುಗ್ಧ ಸ್ವಭಾವದ ಸಮಾಜ ಬಾಂಧವರಿಗೆ ಯಾವುದನ್ನು ಅನುಸರಿಸಬೇಕು, ಯಾವುದನ್ನು ಅನುಸರಿಸಬಾರದೆಂಬ ಸಂದೇಹ ಭೂತಾಕಾರವಾಗಿ ಕಾಡುತ್ತದೆ. ಆದ್ದರಿಂದ ಸಮನ್ವಯ ಸಮಗ್ರತೆ ಹಾಗೂ ಏಕತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಏರ್ಪಡಿಸಿದ, 'ವೀರಶೈವಧರ್ಮ -ಒಂದು ಪುನರವಲೋಕನ' ಎಂಬ ವಿಚಾರಸಂಕಿರಣವನ್ನು ಏರ್ಪಡಿಸಲಾಗಿದ್ದು ಆ ಬುದ್ಧಿಜೀವಿಗಳು ತಮ್ಮ ಮನಸ್ಸಿನಲ್ಲಿಯ ತಪ್ಪು ಕಲ್ಪನೆ ಎಂಬ ವಿಷವನ್ನು ಹೊರ ಹಾಕಿದರೂ ಈ ವಿಚಾರಸಂಕಿರಣದ ಸಂಘಟಕರು ಶಿವನಂತೆ ವಿಷವನ್ನು ಕುಡಿದು ನೀಲಕಂಠರಾಗಲು ಸಿದ್ಧರಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ಸಮುದ್ರಮಂಥನವಾದಾಗ ಅಮೃತಕ್ಕಿಂತಲೂ ಮೊದಲು ವಿಷವು ಹೊಮ್ಮಿದ್ದಾಗ ಶಿವನನ್ನುಳಿದು ಇತರ ದೇವತೆಗಳು ದಿಕ್ಕಾಪಾಲಾಗಿ ಓಡಿಹೋದ ಘಟನೆಯನ್ನಿಲ್ಲಿ ಸ್ಮರಿಸಬಹುದಲ್ಲವೇ?

ಶಿವಾಗಮಾದಿ ಪ್ರಾಚೀನ ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿವೆ ಎಂಬ ಒಂದೇ ಕಾರಣಕ್ಕೆ ಅವುಗಳಲ್ಲಿಯ ಉದಾತ್ತ ತತ್ತ್ವಗಳನ್ನು ಉದಾರ ವಿಚಾರಧಾರೆಯನ್ನು ಕಡೆಗಣಿಸುವುದು ಯುಕ್ತಿಸಂಗತವಲ್ಲ. ಬುದ್ಧನು ತನ್ನ ಧರ್ಮತತ್ತ್ವಗಳನ್ನು ಜನಸಾಮಾನ್ಯ ಭಾಷೆಯಾದ ಪಾಲಿಯಲ್ಲಿಯೂ, ಮಹಾವೀರನು ಜೈನಧರ್ಮದ ತತ್ತ್ವಗಳನ್ನು ಪ್ರಾಕೃತದಲ್ಲಿಯೂ ಉಪದೇಶಿಸಿದರೂ ಸಹ ಮುಂದೆ ಅವುಗಳ ಪ್ರಚಾರವನ್ನು ಸಂಸ್ಕೃತಮಾಧ್ಯಮದಲ್ಲಿ ಮಾಡಿದ್ದರಿಂದಾಗಿ ಅವು ಇಂದು ವಿಶ್ವದಾದ್ಯಂತ ಪ್ರಚಾರದಲ್ಲಿದೆ. ಆದರೆ ಅವೆಲ್ಲಕ್ಕಿಂತಲೂ ಹೆಚ್ಚು ಉದಾರತತ್ತ್ವಗಳನ್ನೊಂಡು ವಿಶ್ವಧರ್ಮವಾಗಲು ಯೋಗ್ಯವಾದ ವೀರಶೈವ ಧರ್ಮವು ನಮ್ಮ ಈ ಸಂಸ್ಕೃತ ದ್ವೇಷದಿಂದ ಕೂಪಮಂಡೂಕವೃತ್ತಿಯಿಂದಾಗಿ ಕರ್ನಾಟಕವನ್ನು ಬಿಟ್ಟು ಇತರ ಪ್ರದೇಶಗಳಲ್ಲಿ ಅಷ್ಟು ವಿಖ್ಯಾತವಾಗಿಲ್ಲವೆಂದು ಹೇಳಲು ಅತ್ಯಂತ ಖೇದವೆನಿಸುತ್ತದೆ.

ಯತ್ರಾಪಿ ಕುತ್ರಾಪಿ ಭವಂತಿ ಹಂಸಾಃ
ಹಂಸಾ ಮಹಿಮಂಡಲಮಂಡನಾನಿ।
ಹಾನಿಸ್ತು ತೇಷಾಂ ಹಿ ಸರೋವರಾಣಾಂ
ಏಷಾಂ ಮರಾಲೈಃ ಸಹ ವಿಪ್ರಯೋಗಃ॥

ಎಂಬ ಸುಭಾಷಿತದಂತೆ ಹಂಸಗಳು ವಾಸ ಮಾಡದಿದ್ದರೆ ಸರೋವರಗಳಿಗೆ ಹಾನಿಯಾಗುವಂತೆ ನಾವು ಸಂಸ್ಕೃತದ ಉಪೇಕ್ಷೆಯನ್ನು ಮಾಡಿದ್ದಾದರೆ ಹಾನಿ ನಮಗೇ ಹೊರತು ಸಂಸ್ಕೃತ ಭಾಷೆಗಲ್ಲವೆಂಬ ಸತ್ಯವನ್ನು ಅರಿತರೆ ನಮಗೇ ಕ್ಷೇಮ. ಬಸವಾದಿ ಪ್ರಮಥರು ಭಾಷೆಯ ವಿಷಯದಲ್ಲಿ ಯಾವುದೇ ಮಡಿವಂತಿಕೆಯನ್ನು ಇಟ್ಟುಕೊಳ್ಳದೇ ವೀರಶೈವಧರ್ಮದ ಮೂಲಗ್ರಂಥಗಳಾದ ಶಿವಾಗಮಗಳ ಅಧ್ಯಯನವನ್ನು ಗೌರವಪೂರ್ವಕವಾಗಿ ಮಾಡಿ ಅವುಗಳಲ್ಲಿಯ ಮಹತ್ತ್ವಪೂರ್ಣವಾದ ವಾಕ್ಯಗಳನ್ನು ತಮ್ಮ ವಚನಗಳಲ್ಲಿ ಪ್ರಮಾಣವಾಗಿ ಉದಾಹರಿಸಿರುವುದನ್ನು ಬಸವಾಭಿಮಾನಿಗಳು ಉಪೇಕ್ಷೆ ಮಾಡುವುದು ಸರಿಯೇ?

ಹೀಗೆ ಸಂಸ್ಕೃತದಲ್ಲಿಯ ಆಚಾರ್ಯವಾಣಿ ಮತ್ತು ಕನ್ನಡಭಾಷೆಯಲ್ಲಿಯ ಶರಣವಾಣಿಗಳು ವೀರಶೈವಮತದ ಎರಡು ಕಣ್ಣುಗಳಾಗಿರುವಂತೆ ಗುರು ವಿರಕ್ತರು ವೀರಶೈವ ಸಮಾಜದ ಎರಡು ಕಣ್ಣುಗಳಾಗಿದ್ದಾರೆಂದು ಒಪ್ಪುವುದು ಸಮಾಜ ಹಿತದೃಷ್ಟಿಯಿಂದ ಅತ್ಯಗತ್ಯ: ಅವರಲ್ಲಿ ಯಾವುದೇ ತಾತ್ವಿಕ ಭಿನ್ನಾಭಿಪ್ರಾಯವಿದ್ದರೂ ಸಮಾಜ ಸಂಘಟನೆಯ ದೃಷ್ಟಿಯಿಂದ ಅದು ಗೌಣವೆನಿಸುತ್ತದೆ.

ಪರಸ್ಪರವಿರೋಧೇ ತು ವಯಂ ಪಂಚ ಚ ತೇ ಶತಂ।
ಪರೈಸ್ತು ವಿಗ್ರಹೇ ಪ್ರಾಪ್ತೇ ವಯಂ ಪಂಚಾಧಿಕಂ ಶತಮ್॥

(ಪರಸ್ಪರ ವಿರೋಧವಿದ್ದಾಗ ನಾವು ಐವರು ಕೌರವರು ನೂರು ಮಂದಿ. ಪರಕೀಯ ನಮ್ಮ ಮೇಲೆ ಆಕ್ರಮಣ ಮಾಡಿದಾಗ ನಾವು ನೂರೈದು ಮಂದಿ.)

ಎಂಬ ಧರ್ಮರಾಜನ ಉದಾತ್ತ ಧ್ಯೇಯ ನಮ್ಮದಾಗದಿದ್ದರೆ ಸಮಾಜದ ಸಂಘಟನೆ ಸಾಧ್ಯವಾಗುವುದು ಕನಸಿನ ಮಾತೇ ಸರಿ.

ಮಹಾದೇವಿಯಕ್ಕನು ಗುರುವಿನಿಂದ ಲಿಂಗದೀಕ್ಷೆಯನ್ನು ಪಡೆದು ವೀರಶೈವ ಮತಾವಲಂಬಿಯಾಗದಿದ್ದರೆ ಆ ನಾಡಿನ ದೊರೆ ಕೌಶಿಕನನ್ನು ಭವಿಯೆಂದು ತಿರಸ್ಕರಿಸುವ ಪ್ರಸಂಗವೇ ಬರುತ್ತಿರಲಿಲ್ಲ. ಏಕೆಂದರೆ ದೊರೆಯನ್ನು ಮದುವೆಯಾಗಲು ಯಾವ ಹೆಣ್ಣು ಮಗಳೂ ಸಿದ್ಧಳಿದ್ದಳೆಂಬುದು ನಿರ್ವಿವಾದ. ಲಿಂಗಧಾರಿಯಾದ ಮೇಲೆ ಭವಿಸಂಪರ್ಕ ವರ್ಜ್ಯವೆಂದು ವೀರಶೈವಧರ್ಮ ಸ್ಪಷ್ಟವಾಗಿ ಆದೇಶವಿಯುತ್ತದೆ:

ಯದಾ ದೀಕ್ಷಾಪ್ರವೇಶಃ ಸ್ಯಾತ್ ಲಿಂಗಧಾರಣಪೂರ್ವಕಮ್।
ತದಾಪ್ರಭೃತಿ ಭಕ್ತೋಽಸೌ ಪೂಜಯೇತ್ ಸ್ವಾಗಮಸ್ಥಿತಾನ್॥

ಎಂಬ ಸಿದ್ಧಾಂತ ಶಿಖಾಮಣಿಯ ಸೂಕ್ತಿಯಂತೆ ಶಿವಾಚಾರಸಂಪನ್ನಳಾದ ಅಕ್ಕಮಹಾದೇವಿಯು ಕೌಶಿಕನನ್ನು ತೃಣೀಕರಿಸಿ ವೀರವಿರಾಗಿಣಿಯಾಗಿ ಅನುಭಮಂಟಪಕ್ಕೆ ಬಂದ ಐತಿಹಾಸಿಕ ಘಟನೆ ನಿಜಕ್ಕೂ ರೋಮಾಂಚಕಾರಿಯಾಗಿದೆ. ಬಾಲ್ಯದಲ್ಲಿ ಗುರುವಿನಿಂದ ಲಿಂಗದೀಕ್ಷೆಯನ್ನು ಹೊಂದಿದ ಅಕ್ಕನು ಶಿವಯೋಗವನ್ನು ಪೂರ್ಣವಾಗಿ ಸಾಧಿಸಲು ಶರಣರಿದ್ದ ಅನುಭವಮಂಟಪಕ್ಕೆ ಬಂದಳೆಂದು ಒಪ್ಪುವುದು ಯುಕ್ತಿ ಸಂಗತಿ. ಆದ್ದರಿಂದ ಶಿವಶರಣರಿಗೆ ಗುರುಗಳು ಲಿಂಗದೀಕ್ಷೆ ಮಾಡಿದ ಐತಿಹಾಸಿಕ ಸತ್ಯವನ್ನು ಒಪ್ಪಲೇ ಬೇಕಾಗುತ್ತದೆ.

ಶ್ರೀ ರಾಜಶೇಖರಸ್ವಾಮಿ ಗೋರಟಾ ಅವರು ತಮ್ಮ ಪಂಚಾಚಾರ್ಯರ ಉಲ್ಲೇಖಗಳ ವಿವೇಚನೆ ಎಂಬ ನಿಬಂಧದಲ್ಲಿ ಶಿವಾಗಮಗಳು ವಚನ ಸಾಹಿತ್ಯ ಮತ್ತು ಶಿಲಾಶಾಸನಗಳಲ್ಲಿ ಕಂಡು ಬರುವ ಪಂಚಾಚಾರ್ಯರ ಉಲ್ಲೇಖಗಳನ್ನು ಆಧಾರಸಹಿತವಾಗಿ ನಿರೂಪಿಸಿರುವಾಗ ಬಸವಪೂರ್ವ ಯುಗದಲ್ಲಿ ವೀರಶೈವಮತದ ಪ್ರಚಾರಕಾರ್ಯದಲ್ಲಿ ತೊಡಗಿದ ಆಚಾರ್ಯ ಪರಂಪರೆಯನ್ನು ಅಷ್ಟು ಸುಲಭವಾಗಿ ತಳ್ಳಿಹಾಕುವುದಾಗಲೀ, ಅದು ಬಸವೋತ್ತರಯುಗದ, ಅಂದರೆ ಇತ್ತೀಚಿನ ಪರಿಕಲ್ಪನೆಯೆಂದು ವಾದಿಸುವುದಾಗಲೀ ಜಾಣ್ಮೆಯ ಲಕ್ಷಣವಾಗದು.

'ಜನ್ಮನಾ ಜಾಯತೇ ಶೂದ್ರಃ ಸಂಸ್ಕಾರಾದ್ ದ್ವಿಜ ಉಚ್ಯತೇ'

ಎಂಬ ಸ್ಮೃತಿ ವಾಕ್ಯದಂತೆ ಸಂಸ್ಕಾರವಿಲ್ಲದೆ ಮಾನವನು ಪರಿಪೂರ್ಣತೆಯನ್ನು ಹೊಂದಲಾರ. ಮಹಾದೇವನಾಗುವ ಹಾದಿಯಲ್ಲಿ ಸಾಗಲಾರ. ಜಾಗತಿಕ ಧರ್ಮಗಳಲ್ಲೆಲ್ಲಾ ಒಂದಿಲ್ಲೊಂದು ಸಂಸ್ಕಾರ ವಿದ್ಯಮಾನವಾಗಿರುವುದನ್ನು ಕಾಣಬಹುದು.

ಪಿ.ವಿ. ಕಾಣೆ ಅವರು History of Dharmashastra ಎಂಬ ಗ್ರಂಥದ ಸಂಪುಟಗಳಲ್ಲಿ ಹಿಂದೂ ಧರ್ಮದ ಧಾರ್ಮಿಕ ಸಂಸ್ಕಾರಗಳ ಉಲ್ಲೇಖ ಮತ್ತು ವಿಸ್ತೃತ ವರ್ಣನೆಯನ್ನು ಮಾಡಿರುವ ಸಂಗತಿಯನ್ನು ಈ ಸಂದರ್ಭದಲ್ಲಿ ಸ್ಮರಿಸುವುದು ಸಮಂಜಸ. ನೈಮಿತ್ತಿಕ ಹಾಗೂ ಕಾಮ್ಯಕರ್ಮಗಳನ್ನು ಉಪೇಕ್ಷೆ ಮಾಡಿದ ವೀರಶೈವಮತವು ಶಿವಪೂಜಾದಿ ನಿತ್ಯಕರ್ಮಗಳನ್ನು ಮಾತ್ರ ಉಲ್ಲೇಖಿಸುವುದು ಗಮನಾರ್ಹ. ಆದರೆ ಕೆಲವೊಂದು ಅಗತ್ಯವಾದ ಸಂಸ್ಕಾರಗಳ ವಿವರಣೆಯನ್ನು ಕೊಡುವುದು ಅನಿವಾರ್ಯವೆನಿಸುತ್ತದೆ.

ಗರ್ಭಾಧಾನ, ಪುಂಸವನ ಮುಂತಾದ ಎಷ್ಟೋ ಧಾರ್ಮಿಕ ಸಂಸ್ಕಾರಗಳನ್ನು ಹಿಂದೂ ಧರ್ಮದಲ್ಲಿ ಕಾಣುತ್ತೇವೆ. 'ಉತ್ಸವಪ್ರಿಯಾಃ ಖಲು ಮಾನವಾಃ' ಎಂಬ ಕಾಳಿದಾಸನ ಶಾಕುಂತಲ ನಾಟಕದ ವಾಕ್ಯದಂತೆ ಒಂದಿಲ್ಲೊಂದು ನೆಲದಿಂದ ಉತ್ಸವಮಗ್ನನಾಗುವುದು ಮಾನವ ಸ್ವಭಾವವೆಂದು ಹೇಳಿದರೆ ತಪ್ಪಾಗದು. ಆದರೆ ವೀರಶೈವ ಧರ್ಮದಲ್ಲಿ ಮುಖ್ಯವಾಗಿ ಗರ್ಭಾಷ್ಟಮಾಸದಲ್ಲಿ ಶಿಶುವಿಗೆ ಲಿಂಗಧಾರಣೆ ಗುರುವಿನ ಹಸ್ತದಿಂದ ಮಾಡಿಸುವುದರಿಂದಾಗಿ ಶಿಶು ಲಿಂಗಗರ್ಭದಿಂದ ಉದಯಿಸುವ ಪ್ರಸಂಗ ಒದಗುತ್ತದೆ. ಈ ವಿಷಯವಾಗಿ ನನ್ನ ಶ್ಲೋಕಾರ್ಧವೊಂದು ಇಂತಿದೆ-

ಮಾತೃಗರ್ಭೇ ಯತೋ ಲಿಂಗಾದೀಕ್ಷಾಯುತಾಃ
ವೀರಶೈವಾಃ ಸಮಸ್ತಾಶ್ಚ ಲಿಂಗೋದ್ಭವಾಃ।

ಲಿಂಗದೀಕ್ಷೆಯಂತೂ ವೀರಶೈವಧಾರ್ಮಿಕ ಸಂಸ್ಕಾರದಲ್ಲಿ ಮೂರ್ಧನ್ಯ ಪ್ರಾಯವಾಗಿದೆ. ಈ ಸಂದರ್ಭದಲ್ಲಿ ಶಿವಪಥವನರಿವೊಡೆ ಗುರುಪಥವೇ ಮೊದಲು ಎಂಬ ಬಸವಣ್ಣನವರ ಮಾತು ಅರ್ಥಪೂರ್ಣವೆನಿಸುತ್ತದೆ. ಇದಕ್ಕೆ ಪ್ರೇರಣೆನ್ನಿತ್ತಿರಬಹುದಾದ ಆಗಮಶ್ಲೋಕವಿಂತಿದೆ:

ಶಿಷ್ಯಸ್ಯ ದೀಕ್ಷಾಸಂಪ್ರಾಪ್ತ್ಯೈ ಗುರುಃ ಸ್ಯಾನ್ಮೂಲಕಾರಣಮ್।
ನ ವಿನಾ ಗುರುಣಾ ಸಿದ್ಧ್ಯೈ ಸಾಧನಾನಿ ಭವಂತ್ಯಲಮ್॥

ವಿವಾಹಸಂಸ್ಕಾರವು ದಾಂಪತ್ಯಜೀವನಕ್ಕೆ ಸಮಾಜ ಸಾಕ್ಷಿಯಾಗುವ ಪ್ರಸಂಗವನ್ನೊದಗಿಸುತ್ತದೆ. ಶಿವಾಗಮಗಳಲ್ಲಿ ವಿವಾಹ ಸಂಸ್ಕಾರದ ದೀರ್ಘ ನಿರೂಪಣೆಯನ್ನು ಕಾಣುವಂತೆಯೇ ವಚನಶಾಸ್ತ್ರದಲ್ಲಿ ಅಲ್ಲಲ್ಲಿ ಈ ಸಂಸ್ಕಾರ ಉಲ್ಲೇಖವನ್ನವಲೋಕಿಸಲೂ ಬಹುದು. ಕೊನೆಯದಾಗಿ 'ಜಾತಸ್ಯ ಮರಣಂ ಧ್ರುವಮ್' ಎಂಬ ಗೀತೋಕ್ತಿಯಂತೆ ಮರಣಭೀತಿ ಬಿಟ್ಟದ್ದಲ್ಲ. ಪಂಚಕ್ಲೇಶಗಳ ನಿರೂಪಣಾವಸರದಲ್ಲಿ ಪತಂಜಲಿಯು ತನ್ನ ಯೋಗ ಸೂತ್ರದಲ್ಲಿ ಅಭಿನಿವೇಶವೆಂಬ ಹೆಸರಿನಿಂದ ಜ್ಞಾನಿಗಳಿಗೂ ಬಿಡದ ಮರಣ ಭೀತಿಯನ್ನು ಉಲ್ಲೇಖಿಸುತ್ತಾನೆ. ಆದರೆ ಶಿವಭಕ್ತರಿಗೆ, ಶರಣರಿಗೆ ಮರಣವೇ ಮಹಾನವಮಿಯಾಗಿರುತ್ತದೆ, ಏಕೆಂದರೆ ಅವರು ಲಿಂಗಲೀನರಾಗುತ್ತಾರೆ. ಅಂದರೆ ಲಿಂಗಾಂಗ ಸಾಮರಸ್ಯ ರೂಪದ ಮೋಕ್ಷವನ್ನು ಹೊಂದಿ ಶಾಶ್ವತ ಸುಖ ಪಡೆಯುತ್ತಾರೆ. ಅಂತೂ ಶಿವಶರಣರು ದೇಹತ್ಯಾಗ ಮಾಡಿದಾಗ ಅದರ ಅಂತ್ಯಕ್ರಿಯೆ ಅನಿವಾರ್ಯವಾಗುತ್ತದೆ. ಗುರುವಿನ ಅನುಗ್ರಹದಿಂದ ಸ್ಥೂಲಾದಿಶರೀರತ್ರಯದಲ್ಲಿಯ ಮಾಯಾದಿಮಲತ್ರಯ ನಾಶವಾಗಿ ಅಂಗವು ಲಿಂಗಗುಣಗಳನ್ನು ಮೈಗೂಡಿಸಿಕೊಂಡು ಶುದ್ಧವಾಗಿರಲು ಅಂದರೆ ಜ್ಞಾನಾಗ್ನಿಯಿಂದ ದೇಹವು ಮೊದಲೇ ದಗ್ಧವಾಗಿರುವಾಗ ಪುನಃ ದಹಿಸುವ ಪ್ರಸಂಗ ಉಂಟಾಗುವುದಿಲ್ಲ.

ಅರ್ಥಾತ್ ವೀರಶೈವರ ದೇಹವನ್ನು ಮರಣಾನಂತರ ಹೂಳುತ್ತಾರೆ. ಈ ವಿಷಯವಾಗಿ ಶಿವಾಗಮೋಕ್ತಿ ಇಂತಿದೆ-

ದಗ್ಧಸ್ಯ ದಹನಂ ನಾಸ್ತಿ ಪಕ್ವಸ್ಯ ಪಚನಂ ಯಥಾ।
ಜ್ಞಾನಾಗ್ನಿದಗ್ಧದೇಹಸ್ಯ ನ ಪುನರ್ದಹನಕ್ರಿಯಾ॥

'ಅಟ್ಟುದ ಅಡುವರೆ ಸುಟ್ಟುದ ಸುಡುವರೆ...' ಎಂಬ ಶಿವಶರಣರ ವಚನದಲ್ಲಿ ಈ ಆಗಮವಾಕ್ಯದ ಭಾವಾನುವಾದವನ್ನು ಕಾಣಬಹುದಲ್ಲವೇ? ಈ ಎಲ್ಲಾ ಧಾರ್ಮಿಕ ಸಂಸ್ಕಾರಗಳ ವಿವರವನ್ನು ಡಾ. ವಿ.ಜಿ. ಪೂಜಾರವರು ತಮ್ಮ 'ವಚನವಾಙ್ಮಯದಲ್ಲಿ ಧಾರ್ಮಿಕ ಸಂಸ್ಕಾರಗಳ ಪರಿಕಲ್ಪನೆ' ಎಂಬ ಶೋಧ ಲೇಖನದಲ್ಲಿ ಸಾಧಾರವಾಗಿ ಕೊಟ್ಟಿದ್ದಾರೆ.

ಕೊನೆಯದಾಗಿ ವೀರಶೈವ ಸಮಾಜದ ಎಲ್ಲಾ ಬಾಂಧವರಿಗೂ (ಕೆಲ ಪಟ್ಟಭದ್ರ ಹಿತಾಶಕ್ತಿಯುಳ್ಳ ಜನರನ್ನು ಬಿಟ್ಟು) ಸಮಾಜದ ಸಂಘಟನೆ ಅಂದರೆ ಸಮಗ್ರತೆ ಹಾಗೂ ಏಕತೆಯ ಅನಿವಾರ್ಯತೆ ಅರ್ಥವಾಗಿದೆ ಎಂಬ ಸಂಗತಿ ಅಭೂತ ಪೂರ್ವವಾದ ಈ ವಿಚಾರ ಸಂಕಿರಣದಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸಮಾಜ ಬಾಂಧವರು ಉಪಸ್ಥಿತರಿದ್ದು ವೀರಶೈವಮತದ ನಿಜವಾದ ತತ್ತ್ವಗಳನ್ನು ಅರಿಯುವುದರ ಜೊತೆಗೆ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಮನಸ್ಸಿನಲ್ಲಿಯ ಸಂದೇಹಗಳನ್ನು ಪರಿಹರಿಸಿಕೊಳ್ಳುವಲ್ಲಿ ವ್ಯಕ್ತವಾಗದೇ ಇರದು. ಒಟ್ಟಿನಲ್ಲಿ ವೀರಶೈವ ಸಮಾಜದ ಸಂಘಟನೆಯನ್ನು ಯಾವ ಶಕ್ತಿಯೂ ತಡೆಯಲಾರದೆಂಬ ಶುಭಸೂಚನೆ ಇದಾಗಿದೆ ಎಂದು ಹೇಳಿದರೆ ತಪ್ಪಾಗದು.

ನನ್ನ ಈ ಭಾಷಣವನ್ನು ಮುಗಿಸುವ ಪೂರ್ವದಲ್ಲಿ ಬೆಂಗಳೂರಿನ ಡಾ. ಸಿದ್ಧಲಿಂಗಪ್ಪ ಅವರು ಶಿವಪಥವನರಿವೊಡೆ ಗುರುಪಥವೇ ಮೊದಲು ಎಂಬ ಬಸವಣ್ಣನವರ ವಚನದಲ್ಲಿಯ ಗುರುಪದಕ್ಕೆ ನಿಷ್ಕಲ ಪರಮಾತ್ಮನೆಂದು ಅರ್ಥೈಸಿದ್ದಕ್ಕೆ ಈ ವಿವರಣೆ ಅಗತ್ಯವಾಗುತ್ತದೆ.

'ಅಪ್ರತ್ಯಕ್ಷೋ ಮಹಾದೇವಃ ಸರ್ವೇಷಾಂ ಆತ್ಮಮಾಯಯಾ
ವರ್ತತೇ ಗುರುರೂಪೇಣ ಭಕ್ತಾನಾಂ ಮುಕ್ತಿಸಿದ್ಧಿಯೇ॥'

ಎಂಬ ಸಿದ್ಧಾಂತ ಶಿಖಾಮಣಿಯ ಸೂಕ್ತಿಯಂತೆ ಶಿವನೇ ಗುರುಲಿಂಗಜಂಗಮ ರೂಪದಲ್ಲಿ ಪ್ರತ್ಯಕ್ಷನಾಗಿ ಪೂಜೆಗೊಳ್ಳುತ್ತಾನೆಂಬುದು ವೀರಶೈವರ ಅಚಲವಾದ ನಿಲುವು. ಇದನ್ನೇ ಸರ್ವಜ್ಞ 'ಗುರು ಲಿಂಗ ಜಂಗಮರು ಹರನೊಲಿದ ರೂಪಗಳು' ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದನ್ನು ಅವಲೋಕಿಸಬಹುದು.

□□

೭. ವಿಚಾರ ಸಂಕಿರಣದಲ್ಲಿ ತೆಗೆದುಕೊಂಡ ಮಹತ್ವದ ನಿರ್ಣಯಗಳು

೧. ವೀರಶೈವ ಧರ್ಮಕ್ಕೆ ವೀರಶೈವ ಎನ್ನುವ ಹೆಸರೇ ಆಗಮ, ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯದಲ್ಲಿ ಪ್ರಸ್ತಾಪವಾಗಿರುವುದರಿಂದ ವೀರಶೈವ ಅನ್ನುವ ಪದವೇ ಸಶಾಸ್ತ್ರೀಯವಾದುದು. ಕಳೆದ ಅನೇಕ ವರ್ಷಗಳಿಂದ ಸಮುದಾಯದಲ್ಲಿ ಲಿಂಗಾಯತ ಅನ್ನುವ ಪದವ ವ್ಯವಹಾರಿಕವಾಗಿ ಹೆಚ್ಚು ರೂಢಿಯಾಗಿರುವುದರಿಂದ ಯಾವುದೇ ಪ್ರಕಾರವಾದ ವಾದ ವಿವಾದಗಳಿಗೆ ಎಡೆಯಾಗಬಾರದೆಂಬ ಉದ್ದೇಶದಿಂದ ವೀರಶೈವಕ್ಕೆ ಪರ್ಯಾಯವಾಗಿ ಲಿಂಗಾಯತ ಎಂಬ ಪದವನ್ನು ಬಳಸುವುದರ ಬಗ್ಗೆ ಈ ವಿಚಾರ ಸಂಕಿರಣವು ಒಮ್ಮತದ ನಿರ್ಣಯವನ್ನು ಕೈಕೊಂಡಿದೆ.

೨. ವೀರಶೈವ ಧರ್ಮದ ಸಾಹಿತ್ಯವಾದ ವೇದ ಆಗಮ ಸಿದ್ಧಾಂತಶಿಖಾಮಣಿ ಹಾಗೂ ಅಪಾರವಾದ ಶಿವಶರಣರ ವಚನ ಸಾಹಿತ್ಯದ ಬಗ್ಗೆ ಪರಸ್ಪರ ಘೋಷಣೆಯನ್ನು ಮಾಡದೆ ಸರ್ವರೂ ಈ ಸಮಗ್ರ ಸಾಹಿತ್ಯವನ್ನು ಆದರದಿಂದ ಅಭ್ಯಸಿಸಿ ಅದನ್ನು ತಮ್ಮ ಅನುಭಾವಕ್ಕೆ ಅನುಕೂಲ ಮಾಡಿಕೊಂಡು ಸರ್ವರಿಗೂ ಲೇಸನ್ನೇ ಬಯಸುವ ಚಿಂತನೆಯನ್ನು ವ್ಯಕ್ತಪಡಿಸಬೇಕೆಂಬ ನಿರ್ಣಯವನ್ನು ಈ ವಿಚಾರ ಸಂಕಿರಣ ತೆಗೆದುಕೊಂಡಿದೆ.

೩. ವೀರಶೈವ ಧರ್ಮವು ತತ್ತ್ವನಿಷ್ಠವಾದುದು. ಆದ್ದರಿಂದ ಇದನ್ನು ವ್ಯಕ್ತಿಗೆ ಸಂಬಂಧಿಸಿ ಯಾವುದೇ ಒಬ್ಬ ವ್ಯಕ್ತಿ ಹೆಸರಿನಿಂದ ಧರ್ಮಕ್ಕೆ ಹೊಸ ಹೆಸರನ್ನು ಕಲ್ಪಿಸುವುದು ಅಪ್ರಸ್ತುತವಾದುದು. ಈಗಾಗಲೆ ವೀರಶೈವ ಅಥವಾ ಲಿಂಗಾಯತ ಎಂದು ಬಳಕೆಯಾಗಿರುವ ಪದಗಳನ್ನೇ ಧರ್ಮದ ಹೆಸರುಗಳನ್ನಾಗಿ ಬಳಸಬೇಕೆಂದು ಸ್ಪಷ್ಟವಾದ ನಿಲುವನ್ನು ಈ ವಿಚಾರ ಸಂಕಿರಣ ತಾಳಿದೆ.

೪. ವೀರಶೈವ, ಲಿಂಗಾಯತ ಧರ್ಮವು ಕೇವಲ ಕರ್ನಾಟಕ ರಾಜ್ಯಕ್ಕೆ ಮಾತ್ರ ನೀಮಿತವಾದುದಲ್ಲ, ಇದು ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಉತ್ತರ ಪ್ರದೇಶ, ಮಧ್ಯಪ್ರದೇಶ ಸೇರಿದಂತೆ ರಾಷ್ಟ್ರವ್ಯಾಪಿ ನೆಲಹೊಂದಿದೆ. ಹಾಗೆಯೇ ನೆರೆರಾಷ್ಟ್ರಗಳಾದ ನೇಪಾಳ ಮತ್ತು ಶ್ರೀಲಂಕಾದಲ್ಲಿಯೂ ವೀರಶೈವ ಲಿಂಗಾಯತ ಧರ್ಮದ ಅನುಯಾಯಿಗಳು ನೆಲೆಸಿದ್ದಾರೆ. ಈ ನಿಟ್ಟಿನಲ್ಲಿ ಮರಾಠಿ, ತೆಲುಗು, ತಮಿಳು, ಹಿಂದಿ ಭಾಷೆಗಳಲ್ಲಿ ಹಂಚಿಹೋಗಿರುವ ವೀರಶೈವ ಸಾಹಿತ್ಯವು ಅಧಿಕವಾಗಿರುವುದರಿಂದ ಆ ಸಾಹಿತ್ಯವನ್ನು ವಿದ್ವಾಂಸರ ಮೂಲಕ ಸಂಶೋಧನೆ

ಸಂಪಾದನೆ ಮತ್ತು ಪ್ರಕಟಣೆ ಮಾಡಲು ಅ ಮೂಲಕ ಸಮಗ್ರ ವೀರಶೈವ ಲಿಂಗಾಯತ ಸಾಹಿತ್ಯವನ್ನು ಸಂರಕ್ಷಿಸುವ ನಿರ್ಣಯವನ್ನು ಈ ವಿಚಾರ ಸಂಕಿರಣ ಕೈಕೊಂಡಿದೆ.

೫. ವೀರಶೈವ ಧರ್ಮದ ಐತಿಹಾಸಿಕ ದಾಖಲೆಗಳಾದ ಶಿವಾಗಮಗಳು. ಶಾಸನಗಳು ಚರಿತ್ರೆ ಪುರಾಣಗಳು ಹಾಗೂ ವಚನ ಸಾಹಿತ್ಯವನ್ನು ಸಂಗ್ರಹಿಸಿ ವೀರಶೈವ ಲಿಂಗಾಯತ ಧರ್ಮ ಒಂದು ಸಪ್ರಮಾಣ ಐತಿಹಾಸಿಕ ಧರ್ಮಗ್ರಂಥವನ್ನು ಸಮನ್ವಯದ ನೆಲೆಯಲ್ಲಿ ರಚಿಸಲು ಒಂದು ವಿದ್ವತ್ ಸಮಿತಿಯನ್ನು ರಚನೆ ಮಾಡಿ ಆದನ್ನು ಚಾಲನೆಗೊಳಿಸಲು ಈ ವಿಚಾರ ಸಂಕಿರಣ ಮತ್ತೊಂದು ನಿರ್ಣಯವನ್ನು ಕೈಕೊಂಡಿದೆ.

೬. ಬಾಲಕರು ಮತ್ತು ಯುವಕರಿಗೆ ವೀರಶೈವ ಲಿಂಗಾಯತ ಧರ್ಮದ ತತ್ತ್ವ ಸಿದ್ಧಾಂತಗಳಲ್ಲಿ ತರಬೇತಿಗೊಳಿಸಲು ಅಲ್ಲಲ್ಲಿ ಧಾರ್ಮಿಕ ಶಿಬಿರಗಳನ್ನು ಸಂಘಟಿಸಿ ಆವರಿಗೆ ಧರ್ಮದ ಸಂಸ್ಕಾರ ಕೊಡುವ ಮೂಲಕ ಜನಮನಗಳಲ್ಲಿ ಸತ್ಯ ಶುದ್ಧ ಸಾತ್ತ್ವಿಕ ವಿನೀತ ಭಾವನೆಗಳನ್ನು ಬೆಳೆಸಲು ಈ ವಿಚಾರ ಸಂಕಿರಣ ನಿರ್ಣಯವನ್ನು ಅಂಗೀಕರಿಸಿದೆ.

೭. ವೀರಶೈವ ಲಿಂಗಾಯತರಲ್ಲಿರುವ ಎಲ್ಲ ಒಳಪಂಗಡಗಳ ಸಂಕುಚಿತ ಭಾವನೆಗಳನ್ನು ಹೋಗಲಾಡಿಸಿ ಸರ್ವರನ್ನು ಸಂಘಟಿಸಿ ಪ್ರತಿಯೊಬ್ಬರಲ್ಲಿ ಕಾಯಕ ನಿಷ್ಠೆಯನ್ನು ಮೂಡಿಸುವ ಮೂಲಕ ಪ್ರತಿಯೊಬ್ಬರು ಈ ರಾಷ್ಟ್ರದ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಉದಾತ್ತ ಮನೋಭಾವನೆಯನ್ನು ನಿರ್ಮಾಣ ಮಾಡಲು ಶ್ರೀ ಜಗದ್ಗುರು ಪಂಚಾಚಾರ್ಯರ ಮಾರ್ಗದರ್ಶನದಲ್ಲಿ ಎಲ್ಲ ಶಿವಾಚಾರ್ಯರು ಹಾಗೂ ನಾಡಿನ ಮಠಾಧೀಶರು ತಮ್ಮ ತಮ್ಮ ಭಾಗದಲ್ಲಿ ವ್ಯಾಪಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಈ ವಿಚಾರ ಸಂಕಿರಣದ ಈ ಬಹಿರಂಗ ಅದಿವೇಶನ ನಿರ್ಣಯವನ್ನು ಕೈಕೊಂಡಿದೆ.

□□

೮. ವಿಶೇಷ ಉಪನ್ಯಾಸ

ವೀರಶೈವಕ್ಕೆ ಪರ್ಯಾಯದ ಪ್ರಸ್ತುತತೆ

-ಡಾ|| ಎಸ್. ವಿದ್ಯಾಶಂಕರ

ಶಿವನ ಪೂಜೆಯು ಸ್ಥಾವರಲಿಂಗ ಹಾಗೂ ಮೂರ್ತಿರೂಪದಲ್ಲಿ ಪೂಜಿಸುವ ಪದ್ಧತಿ ಕ್ರಿಸ್ತಪೂರ್ವದಿಂದಲೂ ಭಾರತದಲ್ಲಿ ಜನಪ್ರಿಯವಾಗಿದ್ದಿತು. ಡಾ|| ಎಸ್.ಸಿ. ನಂದಿಮಠರು ಹೇಳುವಂತೆ ಶೈವಮತದ ಮೂಲವು ಮುಸುಕಿನಲ್ಲಿ ಮುಚ್ಚಿ ಮರೆಯಾಗಿಹೋಗಿದೆ. ಕನಿಷ್ಠಪಕ್ಷ ಕ್ರಿ.ಪೂ. ಒಂದನೆಯ ಶತಮಾನದಿಂದಲಾದರೂ ಶಿವಮತ ರೂಢಿಯಲ್ಲಿದ್ದಿತೆಂಬುದಕ್ಕೆ ಭೂಶೋಧ, ಶಾಸನ ಹಾಗೂ ನಾಣ್ಯಗಳು ಸಾಕಷ್ಟು ಆಧಾರಗಳನ್ನು ಒದಗಿಸಿವೆ. ಶೈವಧರ್ಮದ ಪರಿಷ್ಕರಣ ರೂಪವೇ ವೀರಶೈವವೆಂದು ಹೇಳಲಾಗಿದೆ. ಶೈವದಿಂದ ವೀರಶೈವಕ್ಕೆ ಪರಿವರ್ತಿತವಾಗುವಾಗ ಪಾಶುಪತ- ಕಾಳಾಮುಖ-ಕಾಪಾಲಿಕ-ತಮಿಳುಶೈವ-ಕಾಶ್ಮೀರಶೈವಗಳ ಅನೇಕ ಉತ್ತಮಾಂಶಗಳು ಅದರಲ್ಲಿ ಸಮಾವೇಶಗೊಂಡಿವೆ. ಶಿವಾಗಮಗಳಿಗೆ ವೀರಶೈವವು ವಿಶೇಷ ಋಣಿಯಾಗಿದೆ. ವೀರಶೈವವು ವೇದ-ಆಗಮ ಉಪನಿಷತ್ ಪ್ರಮಾಣಗಳನ್ನು ಕೆಲವೆಡೆ ಒಪ್ಪಿಯೂ ಮತ್ತೆ ಕೆಲವೆಡೆ ತಮಗೆ ಒಪ್ಪಿಗೆಯಾಗದುದನ್ನು ಖಂಡಿಸಿಯೂ ತನ್ನ ತಾತ್ತ್ವಿಕಾಂಶಗಳನ್ನು ನಿಖರಗೊಳಿಸಿದೆ.

ಬಸವಣ್ಣನವರೇ ವೀರಶೈವ ಧರ್ಮದ ಮೂಲಪುರುಷರೆಂದು ವಾದಿಸುವವರೂ ಇರುವರು. ಇದು ವಾಸ್ತವವಲ್ಲ. ಅವರಿಗಿಂತ ಪೂರ್ವದಲ್ಲಿ ವೀರಶೈವ ಧರ್ಮವಿದ್ದಿತು. ಆ ಧರ್ಮವು ತನ್ನೆಲ್ಲ ಪರಿಕಲ್ಪನೆಗಳನ್ನು ಆಗಲೇ ಬೆಳೆಸಿಕೊಂಡು ಪ್ರಚಾರದಲ್ಲಿದ್ದಿತು. ಜೇಡರ ದಾಸಿಮಯ್ಯನ ಕಾಲಕ್ಕಾಗಲೇ ನೂರೊಂದು ಸ್ಥಲದ ಪರಿಕಲ್ಪನೆ ಬಂದಿದ್ದಿತು. ಅವಸರದ ರೇಕಣ್ಣನೆಂಬ ಅಪ್ರಸಿದ್ಧ ವಚನಕಾರನ ವಚನಗಳಲ್ಲಿ ನೂರೊಂದು ಸ್ಥಲದ ಪ್ರಸ್ತಾಪ ಬಂದಿದೆ. ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ, ಇಷ್ಟಲಿಂಗ, ಗುರು, ವಿರಕ್ತ -ಇವುಗಳ ಪರಿಕಲ್ಪನೆ ಸ್ಪಷ್ಟವಾಗಿದ್ದಿತು. ಅವುಗಳ ಬಗೆಗಿನ ವಿವರಣೆ ಸಿದ್ಧಾಂತ ಶಿಖಾಮಣಿ ಹಾಗೂ ಬಸವಾದಿ ಶರಣರ ವಚನಗಳಲ್ಲಿ ಕಂಡುಬರುತ್ತದೆ. ದೇಹವೇ ದೇವಾಲಯ, ಸತಿ-ಪತಿ ಭಾವ -ಇವುಗಳೂ ಬಸವಪೂರ್ವದಲ್ಲೇ ಪರಿಚಿತವಿದ್ದಿತು. ಸ್ತ್ರೀ ಶೂದ್ರರು ಪ್ರಣವರಹಿತವಾದ ಪಂಚಾಕ್ಷರಿಗೆ ಯೋಗ್ಯರು. ಒಂದು ವೇಳೆ ಅವರಿಗೆ ಪ್ರಣವಸಹಿತವಾದ ಮಂತ್ರದೀಕ್ಷೆಯನ್ನು ಕೊಟ್ಟರೆ ದೀಕ್ಷೆ ಕೊಟ್ಟವರು ಹಾಗೂ ಪಡೆದುಕೊಂಡವರು ಅಧೋಗತಿ ಹೊಂದುವರು ಎಂಬ ಸೂಕ್ಷ್ಮಾಗಮದ ಹೇಳಿಕೆ ಗಮನಾರ್ಹವಾದುದು. ಅದರ ಕಾಲಕ್ಕಾಗಲೇ

ಸ್ತ್ರೀ ಹಾಗೂ ಶೂದ್ರರು ಓಂಕಾರರಹಿತವಾದ ಪಂಚಾಕ್ಷರಿ ಮಂತ್ರದೀಕ್ಷೆಯನ್ನು ಹೊಂದುವ ಅವಕಾಶ ಪಡೆದಿದ್ದರು. ಸೂಕ್ಷ್ಮಾಗಮ ಒಡ್ಡಿದ ಬೆದರಿಕೆಯನ್ನೂ ಲಕ್ಷಿಸದೆ ಶಿವಶರಣರು ಓಂಕಾರಸಹಿತವಾದ ಮಂತ್ರದೀಕ್ಷೆಯನ್ನು ಕೊಡುವ ಮೂಲಕ ಲಿಂಗಭೇದ ಹಾಗೂ ವರ್ಣಭೇದ ನಿರಾಕರಣೆಗೆ ಸಾಮಾಜಿಕ ನ್ಯಾಯವನ್ನು ಒದಗಿಸಿದರು.

ಆದಯ್ಯನ ವಚನಗಳಲ್ಲಿ ಬಸವಣ್ಣನವರಿಗಿಂತ ಹೀಗೆ ಇದ್ದ ಶೈವ ಪ್ರಭೇದಗಳನ್ನು ಪ್ರಸ್ತಾಪಿಸಲಾಗಿದೆ. ಅವನು ತನಗಿಂತ ಮೊದಲು ಇದ್ದ ರೇವಣಸಿದ್ಧ, ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯರನ್ನು ತನ್ನ ಎರಡು ವಚನಗಳಲ್ಲಿ ನೆನೆದಿರುವನು (ಸಂಕೀ. ವ.ಸಂ. ೧ ವ. ೧೧೩೩, ೧೧೩೪). ಅವನು ಶುದ್ಧಶೈವ ಹಾಗೂ ವೀರಶೈವಗಳ ನಡುವಿನ ವ್ಯತ್ಯಾಸವನ್ನು ಮನಂಬುಗುವಂತೆ ತಿಳಿಯಪಡಿಸಿರುವರು. ಶ್ರೀಗುರು ತನ್ನಲ್ಲಿಗೆ ಬಂದ ಶಿಷ್ಯನ ಮಲಮಾಯಾ ಶರೀರವನ್ನು ತನ್ನ ಕೃಪಾವಲೋಕನದಿಂದ ಪವಿತ್ರವನ್ನಾಗಿ ಮಾಡಿ ನಿರ್ಮಲವಾದ ಶಿಷ್ಯನ ಉತ್ತಮಾಂಗದಲ್ಲಿರುವ ಪರಮ ಚಿತ್ಕಳೆಯನ್ನು ಹಸ್ತಮಸ್ತಕ ಸಂಯೋಗದ ಮೂಲಕ ಬೆಡಗಿನಿಂದ ತೆಗೆದು ಆ ಮಹಾಪರಮಕಳೆಯನ್ನು ತಾನು ಅನುಗ್ರಹಿಸುವ ಇಷ್ಟಲಿಂಗದಲ್ಲಿ ಸೇರಿಸಿ ಅದನ್ನು ಮಹಾಲಿಂಗವೆಂದು ಕರೆದು ಶಿಷ್ಯನ ಶರೀರದ ಮೇಲೆ ಧರಿಸುವನು. ಶಿಷ್ಯನ ಕಿವಿಯಲ್ಲಿ ಆ ಮಹಾಲಿಂಗವನ್ನು ಜಪಿಸುವ ಪ್ರಣವ ಪಂಚಾಕ್ಷರಿ ಮಂತ್ರವನ್ನು ಹೇಳಿ ಆ ಇಷ್ಟಲಿಂಗವನ್ನು ಶಿಷ್ಯನ ಕರತಳದಲ್ಲಿರಿಸಿ ಅದನ್ನು ಪೂಜಿಸುವ ವಿಧಾನವನ್ನು ಹೇಳಿಕೊಡುವನು. ಇದು ವೀರಶೈವದ ಲಕ್ಷಣ. ಶುದ್ಧಶೈವನನ್ನು ಗುರುವು ತನ್ನ ನಿರೀಕ್ಷಣಮಾತ್ರದಿಂದ ಶುದ್ಧನನ್ನಾಗಿ ಮಾಡಿ ಅವನಿಗೆ ಪಂಚಾಕ್ಷರಿ ಮಂತ್ರೋಪದೇಶ ಮಾಡಿ ಸ್ಥಾವರ ಲಿಂಗವನ್ನು ಪೂಜಿಸುವಂತೆ ಲಿಂಗವನ್ನು ಕೊಟ್ಟು ಅದನ್ನು ಭೂಮಿಯ ಮೇಲಿಟ್ಟು ಅರ್ಚನೆ, ಪೂಜೆ ಮಾಡೆಂದು ಹೇಳುವನು. ಶುದ್ಧಶೈವನಿಗೆ ಸ್ಥಾವರಲಿಂಗದ ನೆನಹು, ವೀರಶೈವನಿಗೆ ಇಷ್ಟಲಿಂಗ ಸಂಗ. ಶುದ್ಧಶೈವದ ನೆನಹಿಗೂ ವೀರಶೈವದ ಸಂಗಕ್ಕೂ ಇರುವ ವ್ಯತ್ಯಾಸವನ್ನು ಒಂದು ದೃಷ್ಟಾಂತದ ಮೂಲಕ ಆದಯ್ಯ ಸ್ಪಷ್ಟಪಡಿಸುವನು. ಕುಲಸ್ತ್ರೀಗೆ ತನ್ನ ಪತಿಯ ಒಲವಿನ ನೆನಹಿಗಿಂತ ಅವನ ಸಂಗಸುಖವು ಹೆಚ್ಚಿನ ಆನಂದ ತರುತ್ತದೆ. ಸ್ಥಾವರಲಿಂಗದಲ್ಲಿ ಶುದ್ಧಶೈವನ ನೆನಹು ನಿಷ್ಪತ್ತಿಯಾದರೆ ಸಾರೂಪ್ಯನಾಗುವನು. ಇಷ್ಟಲಿಂಗದಲ್ಲಿ ವೀರಶೈವನ ನೆನಹು ನಿಷ್ಪತ್ತಿಯಾದರೆ ಸಾಯುಜ್ಯನಾಗುವನು. ಕೀಟವು ಭ್ರಮರಧ್ಯಾನದಿಂದ ಆ ಭ್ರಮರವೇ ಆಗುವಂತೆ ಶೈವನು ಶಿವಧ್ಯಾನದಿಂದ ಶಿವನ ಸಾರೂಪ್ಯನಾಗುವನು. ವೀರಶೈವನು ಅಗ್ನಿಯ ಸಂಗವ ಮಾಡಿದ ಕರ್ಪೂರದಂತೆ ಶಿವನಲ್ಲಿ ಸಾಯುಜ್ಯವನ್ನು ಹೊಂದುವನು. ಹೀಗಾಗಿ ಶುದ್ಧಶೈವಕ್ಕೂ ವೀರಶೈವಕ್ಕೂ ಮಹಂತರವಿದೆಯೆಂದು ಆದಯ್ಯ ವಿವರಿಸಿರುವನು. ಅವನು ತನ್ನ ಕಾಲದಲ್ಲಿದ್ದ ಶುದ್ಧಶೈವ, ಮಿಶ್ರಶೈವ, ಸಂಕೀರ್ಣಶೈವ, ಪೂರ್ವಶೈವಗಳನ್ನು ಉಲ್ಲೇಖಿಸಿ ಅದೆಲ್ಲಕ್ಕೆ ಭಿನ್ನವಾಗಿ ಶರೀರದ ಮೇಲೆ ಅನವರತ ಇಷ್ಟಲಿಂಗವನ್ನು ಧರಿಸಿ ದೇಹ ಇಂದ್ರಿಯ ಮನ ಪ್ರಾಣ ಜ್ಞಾನ ಭಾವಗಳನ್ನು ಒಮ್ಮುಖವಾಗಿಸಿ, ಸದ್ಗುರು ಕಾರುಣ್ಯವನ್ನು ಪಡೆದು ಲಿಂಗವೇ ಪತಿ, ಗುರುವೆ ತಂದೆ, ಜಂಗಮವೆ ಲಿಂಗವೆಂದು ಭಾವಿಸಿ, ಲಿಂಗದ ಪಾದೋದಕವೇ ಲಿಂಗಕ್ಕೆ ಮಜ್ಜನವಾಗಿ, ಲಿಂಗದ ಪ್ರಸಾದವೇ ಲಿಂಗಕ್ಕೆ ಆರೋಗಣೆಯಾಗಿ ಲಿಂಗದಿಂದ ನೋಡುತ್ತ ಕೇಳುತ್ತ ರುಚಿಸುತ್ತ ಮುಟ್ಟುತ್ತ ವಾಸಿಸುತ್ತ ಕೊಡುತ್ತ ಆನಂದಿಸುತ್ತ ಅಹಂಯಮತೆಗೆಟ್ಟು ಸಂದು ಸಂಶಯವರಿತು ಹಿಂದು ಮುಂದ ಹಾರದಿಪ್ಪುದೆ ವೀರಶೈವ ಎಂದು ಆದಯ್ಯ ಸ್ಪಷ್ಟಪಡಿಸುವನು.

೧೨ನೇ ಶತಮಾನದಲ್ಲಿ ಶೈವರನ್ನು ಜಾತಿ ಶೈವರು ಅಜಾತಿ ಶೈವರು ಎಂದು ಎರಡು ಭೇದ ಮಾಡಲಾಗಿದೆ. ಜಾತಿಶೈವರು 'ಶಿವನ ಭೋಗಸ್ತ್ರೀಯಿದ್ದಂತೆ', ಅಜಾತಿ ಶೈವರು 'ಶಿವನ ಕುಲಸ್ತ್ರೀಯಿದ್ದಂತೆ' ಎಂದು ಹೇಳಲಾಗಿದ್ದು ಅಲ್ಲಿ ಅಜಾತಿ ಶೈವರು ಜಾತಿ ಶೈವರಿಗಿಂತ ಶ್ರೇಷ್ಠರೆಂಬುದನ್ನು ಎತ್ತಿ ಹೇಳಲಾಗಿದೆ. ಬಹುಶಃ ಜಾತಿಶೈವರು ಹುಟ್ಟಿನಿಂದ ಶೈವರಾಗಿ ಅದಕ್ಕೆ ಅಂಟಿಕೊಂಡು ಬಂದು, ಇತರರನ್ನು ತಮ್ಮ ವರ್ಗಕ್ಕೆ ಸೇರಿಸಿಕೊಳ್ಳದೆ ಜಾತಿವ್ಯವಸ್ಥೆಯನ್ನು ಮುಂದುವರಿಸಿಕೊಂಡು ಬಂದವರು. ಅಜಾತಿ ಶೈವರು ಇದಕ್ಕೆ ವಿರುದ್ಧ ದಿಕ್ಕಿನಲ್ಲಿರುವವರು. ಇಲ್ಲಿ ವೀರಶೈವರನ್ನು ಕುರಿತು ಅಜಾತಿಶೈವರು ಎಂದು ಹೇಳಿದ್ದಿರಬಹುದು.

ಕನ್ನಡದ ಮೊದಲ ವೀರಶೈವ ಕವಿಯಾದ ಕೊಂಡಗುಳಿ ಕೇಶಿರಾಜನು (ಕ್ರಿ.ಶ. ೧೧೦೭) ತಾನು ಆಚರಿಸುತ್ತಿದ್ದ ಧರ್ಮವನ್ನು 'ವೀರಶೈವ' ಎಂದೂ 'ಲಿಂಗಾಯತ' ಎಂದೂ ಕರೆದಿರುವನು. ಇವುಗಳ ನಡುವೆ ಆತ ವ್ಯತ್ಯಾಸವೇನನ್ನೂ ಕಂಡಿಲ್ಲ. ಆದರೆ ಈಚಿನವರು ವೀರಶೈವರೇ ಬೇರೆ, ಲಿಂಗಾಯತರೇ ಬೇರೆ ಎಂದು ಅರ್ಥೈಸುವರು. ವೀರಶೈವರೆಂದರೆ ಗುರುಪೀಠಗಳ ಅನುಯಾಯಿಗಳು, ಲಿಂಗಾಯತರೆಂದರೆ ವಿರಕ್ತ ಪೀಠಗಳ ಅನುಯಾಯಿಗಳು ಎಂದು ಅವರು ಹೇಳುವುದು ಆಧಾರರಹಿತ. ಗುರುವಿನಿಂದ ಇಷ್ಟಲಿಂಗವು ಆಯತವಾದದ್ದರಿಂದ 'ಲಿಂಗಾಯತ' ಪದ ಹೆಚ್ಚು ಬಳಕೆಯಲ್ಲಿದೆ. ಲಿಂಗವನ್ನು ಹೊಂದಿರುವವನು ಲಿಂಗವಂತ. ಇಷ್ಟಲಿಂಗವನ್ನು ಸದಾ ಮೈಮೇಲೆ ಧರಿಸಿರುವುದು ವೀರಶೈವದ ಮುಖ್ಯ ಲಕ್ಷಣ. 'ವೀರವ್ರತಿ ಭಕ್ತ' ಎಂದು ಬಸವಣ್ಣ ತನ್ನ ವಚನವೊಂದರಲ್ಲಿ ಹೇಳಿರುವನು (ವ. ೬೭೨). ಭಕ್ತನಲ್ಲಿನ ವಿಶಿಷ್ಟ ಗುಣವಾದ ವೀರವ್ರತವನ್ನು ಇಲ್ಲಿ ಬಸವಣ್ಣ ಹೇಳುತ್ತಿರುವಂತಿದೆ. ಅದು ಬಸವಣ್ಣ ವಿವರಿಸುವಂತೆ ಏಕಲಿಂಗ ನಿಷ್ಠಾಚಾರಯುಕ್ತನಾದ ವೀರಮಾಹೇಶ್ವರನ ಆಚರಣೆ (ವ. ೯೬೬). 'ಲಿಂಗವಂತ' 'ವೀರಮಾಹೇಶ್ವರ' 'ವೀರಶೈವ' ಎಂಬ ಸಮಾನಾರ್ಥಕ ಪದಗಳನ್ನು ಬಸವಣ್ಣ ತನ್ನ ವಚನವೊಂದರಲ್ಲಿ ಉಲ್ಲೇಖಿಸಿರುವನು (ವ.೯೬೬). ಚನ್ನಬಸವಣ್ಣ ತನ್ನ ಅನೇಕ ವಚನಗಳಲ್ಲಿ 'ವೀರಶೈವ'ದ ಉಲ್ಲೇಖ ಮಾಡಿರುವನು (ಉದಾ. ೧೬೬, ೮೫೧, ೮೬೫, ೮೬೬, ೮೬೭, ೧೦೮೭). ಚನ್ನಬಸವಣ್ಣ ತನ್ನ ವಚನವೊಂದರಲ್ಲಿ ವೀರಶೈವನ ವಿಶಿಷ್ಟ ಲಕ್ಷಣಗಳಾದ ಪರಧನ ಪರಸತಿಯರ ಮುಟ್ಟದಿರುವುದನ್ನು ಉಲ್ಲೇಖಿಸಿರುವನು (ವ. ೧೬೬). ಚನ್ನಬಸವಣ್ಣ 'ಲಿಂಗಾಯತ' ಪದವನ್ನು ಕೇವಲ ಒಂದು ಪಾರಿಭಾಷಿಕ ಪದವಾಗಿ ಬಳಸುತ್ತಿಲ್ಲ. ಭಕ್ತನಲ್ಲಿ ಕ್ರಮಕ್ರಮೇಣ ಆಗುವ ಸ್ಥಿತ್ಯಂತರವನ್ನು ಧ್ವನಿಪೂರ್ಣವಾಗಿ ಅವನು ಹೇಳುತ್ತಿರುವನು. ಅಂಗದ ಮೇಲೆ ಲಿಂಗ ಸಾಹಿತ್ಯವಾದ ಬಳಿಕ ಅಂಗವೆ ಲಿಂಗ. ಮನದ ಮೇಲೆ ಲಿಂಗ ಸಾಹಿತ್ಯವಾದ ಬಳಿಕ ಸರ್ವಕರಣಂಗಳೆ ಲಿಂಗ. ಪ್ರಾಣದ ಮೇಲೆ ಲಿಂಗಸಾಹಿತ್ಯವಾದ ಬಳಿಕ ಅರಿವಿನ ವಿಷಯಾದಿ ಭೋಗಂಗಳ ಲಿಂಗ. ಅದು ಕಾರಣ ಸರ್ವಾಂಗಲಿಂಗ ಲಿಂಗಭೋಗವೆನ್ನುವನು. ಸಿದ್ಧರಾಮನು ತನ್ನ ವಚನವೊಂದರಲ್ಲಿ 'ಚತುರ್ವರ್ಣಿಯಾದಡೇನು ಚತುರ್ವರ್ಣಾತೀತನೆ ವೀರಶೈವ ನೋಡಾ' ಎಂದಿರುವನು (ವ. ೧೭೦೧). ಚನ್ನಬಸವಣ್ಣನೂ ಇದಕ್ಕೆ 'ಆವ ಕುಲ ಜಾತಿಗಳಲ್ಲಿ ಹುಟ್ಟಿದಡೇನು' ಶಿವಜ್ಞಾನ ಸಿದ್ಧನಾದ ಶಿವಭಕ್ತನು ಸಾಧಕರಂತೆ ವರ್ಣಾಶ್ರಮದ ಅಭಿಮಾನಕ್ಕೆ ಒಳಗಪ್ಪನೆ? ಇಲ್ಲಿಲ್ಲ' ಎಂದಿರುವನು (ವ. ೧೬೦೨). ಯಾವ ಶ್ವಪಚನು ಲಿಂಗಾರ್ಚನಾರತನೋ ಅವನೇ ಮುನಿಶ್ರೇಷ್ಠ; ಬ್ರಾಹ್ಮಣನಾದರೂ ಲಿಂಗಾರ್ಚನಾವಿಹೀನನಾಗಿದ್ದರೆ ಅವನು ಶ್ವಪಚನಿಗಿಂತ ಕಡೆ

(ವ.೬೦೫); ಕೊಲುವವನೇ ಮಾದಿಗ, ಹೊಲಸು ತಿಂಬವವನೇ ಹೊಲೆಯ. ಸಕಲಜೀವಾತ್ಮರಿಗೆ ಒಳ್ಳೆಯದನ್ನೇ ಬಯಸುವವ ಶಿವಶರಣರ ಕುಲಜರು ಎಂದು ಬಸವಣ್ಣ ಹೇಳುವನು (ವ. ೫೯೧).

ವೀರಶೈವ / ಲಿಂಗಾಯತ ಧರ್ಮಕ್ಕೆ ಪರ್ಯಾಯವಾಗಿ 'ಬಸವಧರ್ಮ' ಎಂದು ಮೊದಲು ಕರೆದವರು ಮಾತೆ ಮಹದೇವಿ. ಆನಂತರ 'ಬಸವಧರ್ಮ'ವನ್ನು ಒಂದು ಸಾಂಸ್ಥಿಕ ಧರ್ಮವೆಂದು ಘೋಷಿಸಹೊರಟವರು ಚಿತ್ರದುರ್ಗ ಬೃಹನ್ಮಠದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು. ಮೇ ೧ ಮತ್ತು ೨ ರಂದು ಕೂಡಲಸಂಗಮದಲ್ಲಿ ಅಖಿಲ ಭಾರತ ಬಸವಧರ್ಮ ಪ್ರಥಮ ಸಮ್ಮೇಳನವನ್ನು ಹಮ್ಮಿಕೊಂಡು ಅಲ್ಲಿ ವಿಧಿವತ್ತಾಗಿ ಅದನ್ನು ಘೋಷಿಸಿದರು. ಇದಕ್ಕೆ ಪೂರ್ವಭಾವಿಯಾಗಿ ಒಂದು ವರ್ಷದಿಂದಲೂ ಅವರು ಸಿದ್ಧತೆ ನಡೆಸಿದ್ದರು. ಹಲವೆಡೆ ಹೊಸ ಧರ್ಮವೊಂದನ್ನು ತಾವು ಹುಟ್ಟುಹಾಕುವ ಸೂಚನೆಯನ್ನು ನೀಡಿದ್ದರು. ಆ ಬಗ್ಗೆ ಕೆಲವರು ಅದನ್ನು ಬೆಂಬಲಿಸಿ ಪತ್ರಿಕೆಗಳಲ್ಲಿ ಲೇಖನಗಳನ್ನೂ ಬರೆದಿದ್ದರು. ಶ್ರೀ ಮುರುಘ ರಾಜೇಂದ್ರ ಶರಣರು ಪ್ರಗತಿಪರ ನಿಲುವಿನವರು. ಪರಂಪರೆ ಸೃಷ್ಟಿಸಿರುವ ಗೋಡೆಗಳನ್ನು ಕೆಡವಿಹಾಕಲು ತಮ್ಮ ತೀವ್ರವಾದ ಕಾರ್ಯಾಚರಣೆಗೆ ಅವರಿಗೆ ಹಾರೆ, ಪಿಕಾಸಿ, ಗುದ್ದಲಿಗಳು ಬೇಡವಾದುವು, ಬುಲ್ಡೋಜರ್ರೇ ಬೇಕಾಯಿತು. ಸಮಾಜದಲ್ಲಿ ತಾವು ನಿರೀಕ್ಷಿಸಿದ ಬದಲಾವಣೆಯನ್ನು ತರಲು ಕಾವಿಧರಿಸಿದ ಶ್ರೀ ಶಿವಮೂರ್ತಿ ಶರಣರು ಹೊರಟರು. ಇದರ ಮೊದಲನೆ ಹಂತ ಶೂನ್ಯಸಿಂಹಾಸನ ಪರಂಪರೆಯ 'ನಿರಂಜನ ಜಗದ್ಗುರು' ಪಟ್ಟವನ್ನು ತ್ಯಜಿಸಿ 'ಶರಣ'ರಾದುದು. ಚಿತ್ರದುರ್ಗದ ಬೃಹನ್ಮಠಕ್ಕೆ ಪೀಠಾಧಿಕಾರಿಗಳನ್ನು ಗೊತ್ತುಮಾಡುವುದು ಪೀಠದ ಶ್ರದ್ಧಾವಂತ ಭಕ್ತರ ಕರ್ತವ್ಯ ಲಾಗಾಯ್ತಿನಿಂದಲೂ ಅದು ನಡೆದುಬಂದಿರುವ ಸಂಪ್ರದಾಯ. ಶ್ರೀ ಶಿವಮೂರ್ತಿ ಶರಣರೂ ಇದಕ್ಕೆ ಬದ್ಧರು. ತಾವು ಪರಂಪರೆಯ 'ನಿರಂಜನ ಜಗದ್ಗುರು' ಪಟ್ಟವನ್ನು ತ್ಯಜಿಸುವ ನಿರ್ಧಾರ ಕೈಗೊಂಡಾಗ ಮಠದ ಭಕ್ತರನ್ನು ಕರೆದು ಅವರ ಅನುಮತಿಯನ್ನು ಪಡೆಯಬೇಕಾದುದು ಅಗತ್ಯ ಹಾಗೂ ಸೌಜನ್ಯದ್ದು. ಶೂನ್ಯಪೀಠದ ನಿರಂಜನ ಪರಂಪರೆಯವರು 'ಶರಣರು' ಎಂದು ಕರೆದುಕೊಳ್ಳುವುದು ಕ್ರಮವಲ್ಲ. ಗುರು ಪರಂಪರೆಯವರಿಗೂ ವಿರಕ್ತ ಪರಂಪರೆಯವರಿಗೂ ಒಂದು ರೂಢಿಗತ ನಾಮನಿರ್ದೇಶನ ಹೇಗೆ ಇರುತ್ತದೆಯೋ, ಅದನ್ನು ಪರಸ್ಪರ ಬದಲಿಸಿಕೊಳ್ಳಲು ಹೇಗೆ ಸಾಧ್ಯವಿಲ್ಲವೋ ಹಾಗೆ ನಿರಂಜನ ಪರಂಪರೆಯವರೂ 'ಶರಣರು' ಎಂದು ಕರೆದುಕೊಳ್ಳುವುದು ಸಂಪ್ರದಾಯ ವಿರುದ್ಧ. ಸ್ವಯಿಚ್ಛೆಯಿಂದ ವರ್ತಿಸಲು ಗುರುಗಳಾದವರಿಗೆ ಇಲ್ಲಿ ಅವಕಾಶವಿಲ್ಲ. ಮಠದ ಭಕ್ತರ ನಿರ್ಣಯವೇ ಅಂತಿಮವಾದುದು. ಶ್ರೀ ಶಿವಮೂರ್ತಿ ಶರಣರು ಪೀಠದ ಸತ್ಸಂಪ್ರದಾಯವನ್ನು ಮೀರಿದಾಗಲೂ ವೀರಶೈವ ಸಮಾಜ ಸಂಯಮದಿಂದ ವರ್ತಿಸಿತು. ನಿರಂಜನ ಪೀಠಪರಂಪರೆಯ ಆ ಪದ್ಧತಿಗೆ ವ್ಯತ್ಯಯ ತಂದಾಗ ಸಮಾಜ ಅವರನ್ನು ಪ್ರಶ್ನಿಸಬಹುದಿತ್ತು; ಈ ವಿಷಯದಲ್ಲಿ ಸ್ವಯಂ ತೀರ್ಮಾನ ತೆಗೆದುಕೊಳ್ಳುವ ತುರ್ತು ಏನಿದ್ದಿತು? ಎಂದು ಅವರನ್ನು ಕೇಳಬಹುದಿತ್ತು. ಇದು ಸಮಾಜದಿಂದ ಆದ ವ್ಯತ್ಯಯ. ಶ್ರೀಗಳವರ ಎರಡನೆಯ ದುಡುಕಿನ ತೀರ್ಮಾನ 'ಬಸವಧರ್ಮ' ಸ್ಥಾಪನೆಯ ಪ್ರಯತ್ನ. ಇದನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗೊ.ರು. ಚನ್ನಬಸಪ್ಪನವರು ಪತ್ರಿಕಾ ಹೇಳಿಕೆಯಲ್ಲಿ 'ನಿಮಗೆ ಅಧಿಕಾರ ಕೊಟ್ಟವರಾರು?' ಎಂದು ಧೈರ್ಯವಾಗಿ ಪ್ರಶ್ನಿಸಿರುವರು. ಈ ಧೈರ್ಯವನ್ನು ನಾನು ಏಕೆ ಮೆಚ್ಚುತ್ತೇನೆಂದರೆ ನಮಗೆ

ಮಾರ್ಗದರ್ಶನ ಮಾಡುವವರೇ ತಪ್ಪು ಮಾಡಿದರೆ ವಿವೇಕಿಗಳಾದವರು ಯಾರಾದರೂ ಅದನ್ನು ಪ್ರಶ್ನಿಸಬೇಕು. ಹಾಗೆ ಮಾಡದಿದ್ದರೆ ಮಾಡಿದ ತಪ್ಪಿಗೆ ನಮ್ಮ ಒಪ್ಪಿಗೆಯಿದೆಯೆಂಬುದನ್ನು ನಮ್ಮ ಮೌನ ಸೂಚಿಸುತ್ತದೆ. ಶ್ರೀ ಗೊ.ರು.ಚ. ಒಬ್ಬ ವ್ಯಕ್ತಿಯಾಗಿ ಪ್ರಶ್ನಿಸುತ್ತಿಲ್ಲ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಪ್ರಶ್ನಿಸುತ್ತಿರುವರು. ಅವರು ಶ್ರೀಗಳವರ ತೀರ್ಮಾನವನ್ನು ಆಕ್ಷೇಪಿಸುತ್ತಾ "ತಾವು ನನ್ನನ್ನು ಕರೆದಾಗ ಪ್ರಸ್ತಾಪಿಸಿದಂತೆ ಬಸವಧರ್ಮ ಎಂದರೆ ಬಸವ ವಿಚಾರಧಾರೆ ಎಂದೇ ನಾನು ತಿಳಿದಿದ್ದೆ. ಆದರೆ ಅಲ್ಲಿಗೆ ಬಂದಾಗ ವಸ್ತುಸ್ಥಿತಿ ಬೇರೆಂಬುದು ಅರ್ಥವಾಯಿತು. ಧಾರ್ಮಿಕ ಸ್ವಾತಂತ್ರ್ಯವಿರುವ ಸ್ವತಂತ್ರ ಭಾರತದಲ್ಲಿ ಯಾರು ಬೇಕಾದರೂ ಹೊಸಧರ್ಮ ಸ್ಥಾಪಿಸಲು ಅವಕಾಶವಿರಬಹುದು. ಆದರೆ ಎಂಟುನೂರು ವರ್ಷಗಳಿಗೂ ಮಿಕ್ಕ ಪರಂಪರೆಯನ್ನು ಹೊಂದಿರುವ ಶರಣ ಸಿದ್ಧಾಂತ ಪ್ರವರ್ತಕ ಬಸವಣ್ಣನವರ ಹೆಸರಿನಲ್ಲಿ ಹೊಸ ಧರ್ಮ ಸ್ಥಾಪಿಸುವುದಾಗಲೀ ಕರೆಯುವುದಾಗಲೀ ಅರ್ಥಹೀನವಾದದ್ದು. ಸಾಂಸ್ಥಿಕ ಚೌಕಟ್ಟಿನ ಧಾರ್ಮಿಕ ವ್ಯವಸ್ಥೆಯನ್ನೇ ವಿರೋಧಿಸಿದ್ದ ಬಸವಣ್ಣನವರ ಹೆಸರಿಗೇ ಧರ್ಮದ ಶಬ್ದ ಸೇರಿಸಿ ಮತ್ತೊಂದು ವ್ಯವಸ್ಥೆಯನ್ನು ಹುಟ್ಟುಹಾಕುವುದು ನಿಜಕ್ಕೂ ವಿಪರ್ಯಾಸ.

ಗೊ.ರು.ಚ. ಪತ್ರಿಕೆಗೆ ಬಿಡುಗಡೆ ಮಾಡಿದ ಪತ್ರದ ಕೊನೆಯಲ್ಲಿ ಹೀಗೆ ಹೇಳಿರುವರು: "ಧರ್ಮ ಸ್ಥಾಪಕರ ಸಾಲಿನಲ್ಲಿ ಸೇರಬೇಕೆಂಬುದು ತಮ್ಮ ಪ್ರಬಲ ಸಂಕಲ್ಪವಾಗಿದ್ದರೆ ಅದಕ್ಕೆ ನಮ್ಮ ಅಡ್ಡಿಯಿಲ್ಲ. ಆದರೆ ಬಸವಣ್ಣನ ಹೆಸರಿನಲ್ಲಿ ಮತ್ತೊಂದು ಧರ್ಮ ಸ್ಥಾಪನೆಗೆ ನಮ್ಮ ವಿರೋಧವಿದೆ. ಈಗಾಗಲೇ ಲಕ್ಷ ಲಕ್ಷ ಸಂಖ್ಯೆಯಲ್ಲಿ ಇರುವ ಬಸವಣ್ಣನವರ ಅನುಯಾಯಿಗಳ ಭಾವನಾತ್ಮಕ ಸಂಬಂಧಗಳಿಗೆ ಭಂಗವುಂಟುಮಾಡುವ ಕೆಲಸವನ್ನು ನಿಲ್ಲಿಸಬೇಕೆಂದು ಬಿನ್ನವಿಸಿಕೊಳ್ಳುತ್ತೇವೆ."

ಈ ಘಟ್ಟದಲ್ಲಿ ವೀರಶೈವ ಸಮಾಜದ ಇನ್ನೊಂದು ಪ್ರತಿಷ್ಠಿತ ಸಂಸ್ಥೆಯಾದ ಅಖಿಲ ಭಾರತ ವೀರಶೈವ ಮಹಾಸಭೆಯೂ ದಿಟ್ಟತನದ ನಿರ್ಣಯ ಕೈಗೊಂಡಿದೆ. ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು ವೀರಶೈವ / ಲಿಂಗಾಯತ ಪರಂಪರೆಯ ಮಠವೊಂದರ ಅಧಿಪತಿಯಾಗಿ ಅದರ ಸಂಸ್ಕೃತಿ ಉದ್ದೇಶಗಳಿಗೆ ಬದ್ಧರಾಗಿರದೆ ಹೊಸ ಧರ್ಮಸ್ಥಾಪಕ ಎನ್ನಿಸಿಕೊಳ್ಳಲು ಹೊರಟಿರುವುದು ನೀತಿಬಾಹಿರವಾದುದು. ಹೊಸ ಧರ್ಮೀಯರಿಗೆ ಮಾಂಸಾಹಾರ ನಿಷಿದ್ಧವಲ್ಲವೆಂಬ ಅವರ ನಿರ್ಣಯ ಅಹಿಂಸೆಯನ್ನು ಪ್ರತಿಪಾದಿಸಿದ ಬಸವಣ್ಣನವರ ತತ್ವಕ್ಕೆ ವಿರುದ್ಧವಾದುದು. ಸ್ವಾಮೀಜಿಯವರು ವೀರಶೈವ / ಲಿಂಗಾಯತ ಮಠಾಧಿಪತಿಗಳಾಗಿ ಇರುವವರೆಗೆ ಆ ಮಠದ ನಿಯಮಗಳಿಗೆ ಬದ್ಧರಾಗಿರಬೇಕು. ಹೊಸ ಧರ್ಮ ಸ್ಥಾಪಿಸುವುದಾದರೆ ಈಗಿರುವ ಪೀಠ ತ್ಯಜಿಸಬೇಕು ಎಂದು ತೀರ್ಮಾನಿಸಿತು.

ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರ 'ಬಸವಧರ್ಮ' ಸ್ಥಾಪನೆಯ ಪ್ರಯತ್ನವನ್ನು ವೀರಶೈವ ಧರ್ಮದ ಪಂಚಪೀಠಾಧಿಪತಿಗಳು ತೀವ್ರವಾಗಿ ವಿರೋಧಿಸಿ 'ಕೊಲುವವನೇ ಮಾದಿಗ, ಹೊಲಸು ತಿಂಬುವವನೇ ಹೊಲೆಯ'; 'ಆಚಾರವೆ ಸ್ವರ್ಗ ಅನಾಚಾರವೆ ನರಕ' ಎಂಬ ಬಸವಣ್ಣನವರ ವಾಕ್ಯಗಳು ಪ್ರಸಿದ್ಧವಿರುವಾಗ ಜನರನ್ನು ತಪ್ಪು ದಾರಿಗೆ ಒಯ್ಯುವಂತಹ ಕಾರ್ಯ ನಡೆಯದಂತಿರಲಿ. ಶರಣರ ಸ್ಥಾನದಲ್ಲಿಯೇ ಶರಣರಿಗೆ ಅಪಚಾರವೆಸಗುವವರ ವಿರುದ್ಧ ಜನರ ಪ್ರತಿಭಟನೆ ನಡೆಯಲಿ" ಎಂದು ತಮ್ಮ ಸಂಯುಕ್ತ ಹೇಳಿಕೆಯಲ್ಲಿ ಖಂಡಿಸಿರುವರು.

ಚಿತ್ರದುರ್ಗದ ಶ್ರೀಗಳವರ ನೇತೃತ್ವದಲ್ಲಿ ಕೂಡಲಸಂಗಮದಲ್ಲಿ ಜರುಗಿದ ಪ್ರಥಮ ಬಸವಧರ್ಮ ಸಮ್ಮೇಳನದ ಮುಕ್ತಾಯ ಸಮಾರಂಭದಲ್ಲಿ ಮಂಡಿಸಲಾದ ಎಂಟು ನಿರ್ಣಯಗಳ ಬಗೆಗೆ ತೀರ್ಮಾನ ತೆಗೆದುಕೊಳ್ಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀಗಳವರು "ಬಸವ ಎಂದರೆ ಕ್ರಾಂತಿ, ಹೋರಾಟ, ಆಂದೋಲನ ಆಗಿರುವುದರಿಂದ ಬಸವಣ್ಣನವರ ಹೆಸರಿನ ಮುಂದೆ 'ಧರ್ಮ'ವನ್ನು ಬರೆದರೆ, ಕರೆದರೆ ತಪ್ಪಲ್ಲ, ಕ್ರಾಂತಿಯ ಆಶಯಗಳನ್ನು ನಾವು ಕಳೆದುಕೊಳ್ಳುವುದಿಲ್ಲ, ಸ್ವತಃ ಬಸವಣ್ಣನವರೇ ಕ್ರಾಂತಿಕಾರಿಗಳು" ಎಂದು ಅಪ್ಪಣೆ ಕೊಡಿಸಿದರು. ಬಸವಣ್ಣನವರ ಕ್ರಾಂತಿಕಾರ ಆಲೋಚನೆಗಳನ್ನು ಮೆಚ್ಚಿಕೊಂಡು ಅದನ್ನು ಕಾರ್ಯರೂಪಕ್ಕೆ ತರುವುದು ವ್ಯಕ್ತಿಯೊಬ್ಬರ ವೈಚಾರಿಕ ಮನೋಭೂಮಿಕೆಯ ಪ್ರಕ್ರಿಯೆ. ಕಲ್ಯಾಣದಲ್ಲಿ ನಡೆದ ಸಮಾಜೋಧಾರ್ಮಿಕ ಚಟುವಟಿಕೆಯ ನೇತಾರನಾಗಿ ಬಸವಣ್ಣ ಒಂದು ದೊಡ್ಡ ಹೋರಾಟವನ್ನು ಸಂಘಟಿಸಿದ. ಅದರ ಸಾಫಲ್ಯ-ವೈಫಲ್ಯಗಳನ್ನು ಇತಿಹಾಸ ಗುರುತಿಸಿದೆ. ಇತಿಹಾಸವನ್ನು ಓದಿದ ಮೇಲೆಯೂ ಆ ಇತಿಹಾಸವನ್ನು ಮರುಕಳಿಸುವ ಪ್ರಯತ್ನಕ್ಕೆ ಹೊರಡುವುದು ವಿವೇಕದ ತೀರ್ಮಾನವಲ್ಲ. ಮೇಲಾಗಿ ಬಸವಣ್ಣ ನಡೆಸಿದ್ದು ರಾಜಕೀಯ-ಸಾಮಾಜಿಕ-ಧಾರ್ಮಿಕ-ಭಾಷಿಕ ಕ್ರಾಂತಿಯೇ ಹೊರತು ಇದ್ದ ಧರ್ಮದ ಹೆಸರನ್ನು ಬದಲಿಸುವ ಕ್ರಾಂತಿಯಲ್ಲ. ಬಸವಣ್ಣನವರ ವೈಚಾರಿಕ ಕ್ರಾಂತಿಯನ್ನು ಅನುಷ್ಠಾನಕ್ಕೆ ತರುವುದೇ ಬೇರೆ; ಪರಂಪರೆಯಿಂದ ಅನೂಚಾನವಾಗಿ, ಒಂದು ಸಾಮಾಜಿಕ ಒಪ್ಪಂದವಾಗಿ, ತನ್ನದೇ ಆದ ಸಿದ್ಧಾಂತಗಳನ್ನು ರೂಪಿಸಿಕೊಂಡು ಬಂದ ಒಂದು ನಿರ್ದಿಷ್ಟ ಸಮಾಜದ ಬದುಕಿನ ಶ್ರದ್ಧೆಯ ಭಾಗವೇ ಆಗಿರುವ ಧರ್ಮದ ಹೆಸರನ್ನು ಬದಲಿಸುವುದೇ ಬೇರೆ. ಇಲ್ಲಿ ಮೊದಲನೆಯದು ಸಾಧ್ಯ, ಎರಡನೆಯದು ಅಸಾಧ್ಯ. ನಾಡಿನ ಶ್ರೇಷ್ಠ ವಿದ್ವಾಂಸರಾದ ಡಾ. ಎಂ. ಚಿದಾನಂದ ಮೂರ್ತಿಯವರು 'ಕನ್ನಡ ಪ್ರಭ' ಪತ್ರಿಕೆಯಲ್ಲಿ 'ಬಸವಧರ್ಮ' ಕುರಿತಂತೆ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತ ಒಂದು ಮುಖ್ಯ ಸಂಗತಿಯ ಕಡೆಗೆ ನಮ್ಮ ಗಮನ ಸೆಳೆದಿರುವರು. ಅವರು ಹೇಳುವಂತೆ "ಒಂದು ಧರ್ಮ ಸ್ಥಾಪನೆಗೂ ಒಂದು ಪಕ್ಷ ಅಥವಾ ಸಂಸ್ಥೆ ಸ್ಥಾಪನೆಗೂ ಅರ್ಥಾತ್ ಸಂಬಂಧವಿಲ್ಲ. ಸಭೆಯೊಂದರಲ್ಲಿ ನಿರ್ಣಯ ಮಾಡಿ, ಅರ್ಜಿಗೆ ರುಜು ಪಡೆದು ನೋಂದಾವಣೆ ಮಾಡಿಸಿದರೆ ಸಾಕು, ಅಲ್ಲಿಗೆ ಒಂದು ರಾಜಕೀಯ ಪಕ್ಷದ ಉದಯ ಆದಂತೆ. 'ಧರ್ಮ' ಸ್ಥಾಪನೆ ಆ ರೀತಿ ಆಗಲು ಸಾಧ್ಯವೇ? ಸಾಧುವೇ? ಯಾರಾದರೂ ಅದನ್ನು ಗಂಭೀರವಾಗಿ ಭಾವಿಸುವರೇ? ಹಿಂದೂ, ಕ್ರೈಸ್ತ, ಬೌದ್ಧ ಧರ್ಮಗಳಲ್ಲಿ ಆಯಾ ಧರ್ಮದ ಒಳಗೇ ಸುಧಾರಣಾಕಾರರು ಹುಟ್ಟಿ ಸುಧಾರಣೆಗಳನ್ನು ತಂದಿದ್ದಾರೆ. ಆದರೆ ಬೇರೆ 'ಧರ್ಮ'ವನ್ನು ಸ್ಥಾಪಿಸಲಿಲ್ಲ. ಏಸು, ಬುದ್ಧರೂ ಕೂಡಾ ಪ್ರಜ್ಞಾಪೂರ್ವಕವಾಗಿ ಧರ್ಮವನ್ನು 'ಸ್ಥಾಪಿಸಿ'ದವರಲ್ಲವೆಂಬುದು ಐತಿಹಾಸಿಕ ಸತ್ಯ. ಅವರ ಕಾಲಕ್ಕೂ ಈಗಿನ ಕಾಲಕ್ಕೂ ಬಹಳ ವ್ಯತ್ಯಾಸಗಳಾಗಿವೆ. 'ಬಸವಧರ್ಮ'ಕ್ಕೆ ಸೇರಿದವರೆಲ್ಲ ಸಜ್ಜನರಾಗುತ್ತಾರೆಂದಲ್ಲ. ಏಸು, ಬುದ್ಧರು ಸಾಮಾಜಿಕ ನೋವನ್ನು ತಮ್ಮದನ್ನಾಗಿಸಿಕೊಂಡು ತಾವು ಅನುಭವಿಸಿದ ನೋವಿನ ಮೂಲಕವೇ ಜನರ ಮನಸ್ಸನ್ನು ಗೆದ್ದರು. ರಾಜಕೀಯ ಪಕ್ಷಕ್ಕೆ ಸೇರಿ ಆ ಪಕ್ಷವನ್ನೇ ಧ್ವಂಸ ಮಾಡಲು ಯತ್ನಗಳು ನಡೆದಿರುವುದು, ನಡೆಯುತ್ತಿರುವುದು ದಿನಬೆಳಗಾದರೆ ಪತ್ರಿಕೆಗಳ ಪ್ರಮುಖ ಸುದ್ದಿಯಾಗಿದೆ. ಹೀಗಿರುವಾಗ 'ಬಸವಧರ್ಮ'ವನ್ನು ಒಂದು ನಿರ್ಣಯದ ಮೂಲಕ ಸ್ಥಾಪಿಸಹೊರಟಿರುವುದೇ ಅದರ ಸ್ವರೂಪವನ್ನು ತಾನೇ ಬಯಲಾಗಿಸುತ್ತದೆ.

ವೀರಶೈವ/ ಲಿಂಗಾಯತ ಧರ್ಮಕ್ಕೆ ಪರ್ಯಾಯವಾಗಿ 'ಬಸವಧರ್ಮ' ಎಂಬುದನ್ನು ಘೋಷಿಸಲು ಚಿತ್ರದುರ್ಗದ ಬೃಹನ್ಮಠದ ಶ್ರೀಗಳವರಿಗೆ ಒದಗಿಬಂದ ಬಲವಾದ ಪ್ರೇರಣೆ ಅವರ ಪ್ರಗತಿಪರ ನಿಲುವುಗಳು. ಬಹುಶಃ ಅವರ ಪ್ರಗತಿಪರ ಆಲೋಚನೆಗೆ ಲಾಗಾಯ್ತಿನಿಂದ ಬಂದ ವೀರಶೈವ/ ಲಿಂಗಾಯತ ಧರ್ಮವು ತನ್ನ ಪೂರ್ವದ ವರ್ಚಸ್ಸನ್ನು ಕಳೆದುಕೊಂಡು ಪ್ರಸ್ತುತ ದಿನಮಾನಗಳಲ್ಲಿ ಅದು ಪುರೋಹಿತಶಾಹಿಯ ಪಳೆಯುಳಿಕೆಯಾಗಿ ಉಳಿದಿರುವುದು, ಅದರ ಪೂರ್ವಪ್ರಭೆ ವಿಗಳಿತವಾಗಿ ಅದು ಯಾವ ರೀತಿಯಲ್ಲೂ ಪ್ರಭಾವಬೀರದೆ, ಇಂದಿನ ದಿನಮಾನದ ಸಮಸ್ಯೆಗಳಿಗೆ ಸ್ಪಂದಿಸದೆ ನಿಂತ ನೀರಾಗಿರುವುದು ಆಚರಣೆಯಲ್ಲಿ ಪರಿಣಾಮಕಾರಿಯಾಗಿರದೆ ಹಳವಂಡವಾಗಿರುವುದು ವೀರಶೈವ ಧರ್ಮದಿಂದ ಅವರು ಹೊರಬರಲು ಪ್ರಚೋದನೆ ನೀಡಿರಬಹುದು. ಅವರು ಚಿತ್ರದುರ್ಗ ಬೃಹನ್ಮಠದ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯ ವಕ್ತಾರರು ಎಂಬುದು ಅವರಿಗೆ ಮರೆತುಹೋಗಿದೆ. ಅವರು ತಮ್ಮ ಪೀಠಪರಂಪರೆಯ ಹಿನ್ನೆಲೆಯನ್ನು ಗಮನಿಸಿದಂತಿಲ್ಲ. ಚಿತ್ರದುರ್ಗ ಬೃಹನ್ಮಠವು ನಿಸ್ಸಂಶಯವಾಗಿ ಪ್ರಸಿದ್ಧ ವೀರಶೈವ ಮಠ. ಈ ಪೀಠದ ಮೂಲಸ್ಥಾಪಕರು ಕ್ರಿ.ಶ. ೧೭೦೦ರಲ್ಲಿದ್ದ ಶ್ರೀ ಮುರಿಗೆ ಶಾಂತವೀರ ಸ್ವಾಮಿಗಳು. ಅವರು ಕನ್ನಡದ ಶ್ರೇಷ್ಠ ಕವಿಗಳು. ಹಮ್ಮೀರಕಾವ್ಯ, ಪ್ರಭುಲಿಂಗಕಂದ, ನೀಲಾಂಬಿಕಾ ಲಲಿತ ಪಂಚವಿಂಶತಿ, ವೈರಾಗ್ಯ ಷಟ್ಪದಿ, ಮನುರಾಜೇಂದ್ರನ ತಾರಾವಳಿ, ಕಟ್ಟಿಗೆಯ ತಾರಾವಳಿ, ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ, ಶಬ್ದರತ್ನಾಕರ, ಏಕೋನವಿಂಶತಿಪದ, ಷಡ್ವಕ್ತ್ರ ಸ್ತೋತ್ರ ಎಂಬ ಕೃತಿಗಳನ್ನು ರಚಿಸಿರುವರು. ಇವುಗಳಲ್ಲದೆ ಇನ್ನೂ ಹಲವು ಕೃತಿಗಳನ್ನು ಬರೆದಿರುವುದಾಗಿ ತಿಳಿದುಬಂದಿದೆ. ಇವರ ಬಗ್ಗೆ ಇವರ ನಂತರ ಪಟ್ಟಕ್ಕೆ ಬಂದ ಇಮ್ಮಡಿ ಮುರಿಗಾ ಗುರುಸಿದ್ಧರು ತಮ್ಮ ಗುರುಗಳ ಬಗ್ಗೆ 'ಮುರಿಗೆ ತಾರಾವಳಿ' ಎಂಬ ಮಹತ್ವದ ಕೃತಿ ರಚಿಸಿರುವರು. ಆ ಕಾಲದ ವೀರಶೈವಧರ್ಮದ ಒಳಜಗಳಗಳು, ಅವುಗಳನ್ನು ಪರಿಹರಿಸುವಲ್ಲಿ ಮುರಿಗೆ ಶಾಂತವೀರರು ನಡೆಸಿದ ಪ್ರಯತ್ನ, ಅವರ ಆಳವಾದ ವಿದ್ವತ್ತು, ವೇದಗಮ ಉಪನಿಷತ್ತುಗಳು ಅವರ ಮುಖೋದ್ಗತವಾಗಿದ್ದುದು, ವಾದೀಭಸಿಂಹರಾಗಿ ಸದ್ಧರ್ಮದ ಪ್ರತಿಪಾದನೆಗಾಗಿ ಪ್ರಯತ್ನ ನಡೆಸಿದ್ದುದು -ಇವೇ ಮೊದಲಾದುವು ಮುರಿಗೆ ತಾರಾವಳಿಯಲ್ಲಿ ವಿವರಣೆಗೊಂಡಿವೆ. ಇಮ್ಮಡಿ ಮುರಿಗಾ ಗುರುಸಿದ್ಧರು ತಾವು ರಚಿಸಿದ ಹಾಡುಗಳೊಂದರಲ್ಲಿ ಮುರಿಗಾ ಶಾಂತವೀರರನ್ನು ಹೀಗೆ ವರ್ಣಿಸಿರುವರು:

ವೀರಶೈವಾಚಾರ ಷಟ್‌ಸ್ಥಲಬ್ರಹ್ಮಿ ತಾ
ಭೂರಿ ಶಿವಭಕ್ತರಲಿ ಪೂಜೆಗಳ ಕೈಕೊಂಬ
ಮಾರ ಹಾದಿಯಲಿ ಬಂದ ವಿಕ್ಷವನುಂಡು ವೀರಾವತಾರನಾಗಿ
ಆರನಾದೊಡೆಯು ಬೋಧಿಪನಲ್ಲ ಅಕಳಂಕ
ವೀರಶೈವಾಚ್ಛರಿತ ಶಾಸ್ತ್ರವ ನಿರೂಪಿಸುತ
ಪಾತಮಾರ್ಥಜ್ಞಾನಿಯಾಗಿ ಚರಿಸುತಿರ್ಪ ಧೀರ ಮುರಿಗೆಯ ದೇಶಿಕ॥

ಹೀಗೆ ತಮ್ಮ ಪೀಠ ಪರಂಪರೆಯ ಗುರುಗಳು ವೀರಶೈವರೆಂದು ಕರೆದುಕೊಂಡು, ಆ ಧರ್ಮದ ಶ್ರೇಷ್ಠ ಜ್ಞಾನಿಗಳಾಗಿ, ಆ ಧರ್ಮದ ತತ್ವ-ಸಿದ್ಧಾಂತ-ಆಚರಣೆಗಳನ್ನು ತಮ್ಮ ಬದುಕಿನ ಅವಿಭಾಜ್ಯ ಭಾಗವಾಗಿ ಸ್ವೀಕರಿಸಿರುವರೆಂಬುದನ್ನು ಶ್ರೀ ಶಿವಮೂರ್ತಿ ಶರಣರು

ಮರೆತಂತಿದೆ. ಆ ಪೀಠ ಪರಂಪರೆಗೆ ವ್ಯತಿರಿಕ್ತವಾಗಿ ಆ ಪರಂಪರೆ ಬಲವಾಗಿ ನಂಬಿದ್ದ ವೀರಶೈವ ಧರ್ಮದಿಂದ ಹೊರಬಂದು ಬಸವಧರ್ಮವನ್ನು ಸ್ಥಾಪಿಸಲು ಶ್ರೀಗಳವರಿಗೆ ಯಾವ ನೈತಿಕ ಹಕ್ಕಿದೆ?

'ಬಸವಧರ್ಮ'ವೆನ್ನುವಾಗ ಬಸವಕೇಂದ್ರಿತ ಧರ್ಮವಾಗುವ ಅಪಾಯವೂ ಇದೆ. ವೀರಶೈವ / ಲಿಂಗಾಯತವೆನ್ನುವುದನ್ನು ಗುರು-ವಿರಕ್ತ ವರ್ಗದವರು ಮುಕ್ತ ಮನಸ್ಸಿನಿಂದ ಸ್ವೀಕರಿಸಿರುವರು. ಅದು ಅವರ ಪಾಲಿಗೆ ಒಂದು ಪವಿತ್ರ ಹೆಸರು. ಈ ಪವಿತ್ರ ಹೆಸರಿನ ಅಡಿಯಲ್ಲಿ ಗುರ-ವಿರಕ್ತರು ಸಮಾನತೆ, ಪರಸ್ಪರ ಗೌರವ ಸಮರ್ಪಣೆ, ಸಾಮರಸ್ಯ ಭಾವನೆ -ಇವುಗಳನ್ನು ಸಾಮಾಜಿಕ ನೆಲೆಯಲ್ಲಿ ಹಿಂದಿನಿಂದಲೂ ರೂಢಿಸಿಕೊಂಡು ಬಂದಿರುವರು. ಇದೇ ಕೂಡಲಸಂಗಮದಲ್ಲಿ ಕಳೆದ ವರ್ಷ ಈ ಗುರು-ವಿರಕ್ತರು ಒಂದಾಗಲು ಒಂದು ಸಮಾವೇಶವನ್ನೂ ಕೂಡಿಸಿದ್ದರು. ಈ ಘಟ್ಟದಲ್ಲಿ ಗುರುವರ್ಗದವರನ್ನು 'ಬಸವಧರ್ಮ' ವೀರಶೈವರು ಎಂದು ದೂರವಿಡುವುದು ಯಾವ ನ್ಯಾಯ?

ಒಂದು ಸ್ವಾರಸ್ಯದ ಸಂಗತಿಯೆಂದರೆ, ಚಿತ್ರದುರ್ಗ ಬೃಹನ್ಮಠ ಪೀಠಪರಂಪರೆಗೆ ಸೇರಿದ ಇಮ್ಮಡಿ ಮುರಿಗಾ ಗುರುಸಿದ್ಧರು ಆ ಪೀಠಾಧಿಕಾರಿಗಳಾಗುವ ಮೊದಲು ಗುರುವರ್ಗಕ್ಕೆ ಸೇರಿದ್ದ ಧನಗೂರು ಮಠದಲ್ಲಿದ್ದರು. ಅವರು ಉದ್ದಾನ ಯೋಗೀಶನ ವಂಶದಲ್ಲಿ ಹುಟ್ಟಿದವರು. ಅಲ್ಲಿನ ಸೋಮಶೇಖರ ದೇಶಿಕರಿಂದ ಲಿಂಗದೀಕ್ಷೆ ಪಡೆದರು. ಕುಂಭಪಲ್ಲಿಯ ಚಿದ್ಬಸವೇಶರಿಂದ ವಿದ್ಯೆಯನ್ನು ಕಲಿತು ಪಂಡಿತರಾದರು. ಇವರ ಪಾಂಡಿತ್ಯ, ಪ್ರತಿಭೆ, ಸತ್‌ಶೀಲಗಳನ್ನು ತಿಳಿದ ಮುರಿಗೆ ಶಾಂತವೀರರು ಇವರನ್ನು ಚಿನ್ಮೂಲಾದ್ರಿಯ ಬೃಹನ್ಮಠದ ಉತ್ತರಾಧಿಕಾರಿಯನ್ನಾಗಿ ಮಾಡಿದರು. ಮುರಿಗಾ ಗುರುಸಿದ್ಧರು 'ಮುರಿಗೆ ತಾರಾವಳಿಯಲ್ಲಿ ತಮ್ಮ ಗುರುಗಳಾದ ಮುರಿಗೆ ಶಾಂತವೀರರನ್ನು "ಅಲ್ಲಮನೊ, ದಧೀಚಿಯೊ, ಕುಂಭಜಮುನಿಯೊ, ರೇಣುಕೇಶನೊ, ಸದಾನಂದನೊ, ಸಾನಂದನೊ" ಎಂದು ಲೋಕ ಹೊಗಳಿತೆಂದು ಹೇಳಿರುವನು. ತಮ್ಮ ಗುರುಗಳನ್ನು ರೇಣುಕರಿಗೆ ಹೋಲಿಸಿರುವುದು ಗಮನಾರ್ಹ ಸಂಗತಿ.

ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಕಾಶೀ ವಿಶ್ವಾರಾಧ್ಯ ಪೀಠದಲ್ಲಿ ಜಗದ್ಗುರು ಶ್ರೀ ಶ್ರೀ ರಾಜೇಶ್ವರ ಶಿವಾಚಾರ್ಯರ ವಿಶೇಷ ಪ್ರೀತಿ ಅಭಿಮಾನಿಗಳಿಗೆ ಪಾತ್ರರಾಗಿದ್ದರು. ಅವರನ್ನು ಕಾಶೀಪೀಠಕ್ಕೆ ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡುವ ವಿಚಾರವಿದ್ದಿತು. ಹಾಗೆಯೇ ಶಿರಸಂಗಿ ಲಿಂಗರಾಜರು ಮತ್ತು ವಾರದ ಮಲ್ಲಪ್ಪನವರು ರಂಭಾಪುರಿ ಪೀಠಕ್ಕೆ ಇವರನ್ನು ಉತ್ತರಾಧಿಕಾರಿಯನ್ನಾಗಿ ನಿಯೋಜಿಸುವ ಆಲೋಚನೆ ಮಾಡಿದ್ದರು. ಆದರೆ, ದೈವದ ತೀರ್ಮಾನವೇ ಬೇರೆಯಿದ್ದಿತು. ಜಯದೇವ ಜಗದ್ಗುರುಗಳು ಚಿತ್ರದುರ್ಗದ ಬೃಹನ್ಮಠಕ್ಕೆ ನೇಮಕಗೊಂಡರು. ಈ ಎಲ್ಲ ಹಿನ್ನೆಲೆ ಗಮನಿಸಿದಾಗ ಹಿಂದೆ ಗುರು-ವಿರಕ್ತರ ನಡುವೆ ಯಾವ ಘರ್ಷಣೆಯೂ ಇರಲಿಲ್ಲ, ಅವರ ನಡುವೆ ಸುಮಧುರ ಬಾಂಧವ್ಯವಿದ್ದಿತೆಂಬುದು ವಿದಿತವಾಗುತ್ತದೆ.

ಚಿತ್ರದುರ್ಗದ ಶ್ರೀಗಳವರು ಕೂಡಲಸಂಗಮದ ಸಮ್ಮೇಳನದಲ್ಲಿ ತಮ್ಮೊಂದಿಗೆ ಸೇರಿದ್ದ ಸಂಘ ಸಂಸ್ಥೆಗಳ, ಮಠಾಧೀಶ್ವರರ ಜೊತೆ ಪೂರ್ವಭಾವೀ ಸಮಾಲೋಚನೆ ನಡೆಸದೆ ತಾವೇ ಸಿದ್ಧಪಡಿಸಿಕೊಂಡು ಬಂದಿದ್ದ ನಿರ್ಣಯಗಳನ್ನು ಇದ್ದಕ್ಕಿದ್ದಂತೆ ಓದಿ

ಸಮ್ಮೇಳನದ ವ್ಯವಸ್ಥಾಪಕರನ್ನು ಚಕಿತಗೊಳಿಸಿದರೆಂಬುದು ಪತ್ರಿಕೆಗಳಲ್ಲಿ ಬಂದ ವರದಿ. "ನಿರ್ಣಯಗಳು ಮಂಜೂರಾದವು ಎಂದು ಘೋಷಿಸಿದರು. ವೇದಿಕೆಯ ಮೇಲಿದ್ದ ಮಠಾಧೀಶರು ಚಪ್ಪಾಳೆ ತಟ್ಟಿ ಸ್ವಾಗತಿಸಿದರು" ಎಂಬ ಪತ್ರಿಕಾ ವರದಿಯ ಬಗ್ಗೆ ಇಳಕಲ್ಲಿನ ವಿಜಯ ಮಹಾಂತೇಶ್ವರ ಮಠದ ಶ್ರೀ ಮಹಾಂತಸ್ವಾಮಿಗಳು ಪ್ರತಿಕ್ರಿಯಿಸುತ್ತಾ ಚಿತ್ರದುರ್ಗದ ಶ್ರೀಗಳು ಗೊತ್ತುವಳಿ ಓದಿದರು. ಅದನ್ನು ಮೊದಲೇ ತಿಳಿಸಿರಲಿಲ್ಲ. ಏಕಾಏಕಿ ಓದಿ ಅವರ ಇಂಗಿತ ಜನರಿಗೆ ಅರ್ಥವಾಗುವ ಮೊದಲೇ ಅಂಗೀಕಾರವಾಯಿತು ಎಂದು ಘೋಷಿಸಿದರು" ಎಂದಿರುವರು.

ಸಮ್ಮೇಳನದಲ್ಲಿ ಅಂಗೀಕಾರವಾದ ಎಂಟು ನಿರ್ಣಯಗಳಲ್ಲಿ ಅನಂತರ ತೀವ್ರ ಚರ್ಚೆಗೆ ಒಳಗಾದದ್ದು ಕೊನೆಯ ನಿರ್ಣಯ. ಅದು ಹೀಗಿದೆ: "ಹಿಂದೂಧರ್ಮದ ಜಾತಿವಾದ, ಅಸಮಾನತೆ, ಅವೈಜ್ಞಾನಿಕ ಆಚರಣೆ ಹಾಗೂ ಶೋಷಣೆಗಳಿಗೆ ಬೇಸತ್ತು ಆ ಧರ್ಮದಿಂದ ಹೊರಬಂದು 'ಬಸವಧರ್ಮ' ಸ್ಥಾಪಿಸಲಾಗಿದೆ. ಆದಕಾರಣ ಬಸವಧರ್ಮಕ್ಕೆ ಸೇರಿದವರೆಲ್ಲರೂ ಇನ್ನು ಮುಂದೆ ಸರಕಾರದ ದಾಖಲೆಗಳಲ್ಲಿ ಧರ್ಮ ಮತ್ತು ಜಾತಿ ಕಾಲಂಗಳೆರಡರಲ್ಲಿಯೂ ಬಸವಧರ್ಮ ಎಂದು ನಮೂದಿಸಬೇಕು ಮತ್ತು ಬಸವಧರ್ಮ ಸ್ವೀಕರಿಸಲು ಯಾರಿಗೂ ನಿರ್ಬಂಧವಿಲ್ಲ. ಆಹಾರದ ಮೇಲೆ ಧರ್ಮವನ್ನು ನಿರ್ಧರಿಸಲಾಗದು. ಅದು ಅವರವರ ವೈಯಕ್ತಿಕ ವಿಚಾರ."

ಮೇ ಒರಂದು ಶ್ರೀ ಶಿವಮೂರ್ತಿ ಶರಣರು 'ಕನ್ನಡ ಪ್ರಭ' ದಿನಪತ್ರಿಕೆಯಲ್ಲಿ 'ಮಾಂಸಾಹಾರಿಗಳಿಗೂ ಬಸವಧರ್ಮ ಸ್ವೀಕರಿಸಲು ನಿರ್ಬಂಧವಿಲ್ಲ' ಎಂಬ ಕೂಡಲಸಂಗಮದಲ್ಲಿ ಕೈಗೊಂಡ ನಿರ್ಣಯಕ್ಕೆ ಪೂರಕವಾಗಿ ವಿವರಣೆ ನೀಡುತ್ತ "ಮಾಂಸಾಹಾರಿಗಳು ಬಸವಧರ್ಮ ಸ್ವೀಕರಿಸಿದ ನಂತರವೂ ಮಾಂಸಾಹಾರ ತ್ಯಜಿಸುವುದು ಕಡ್ಡಾಯವೇನಿಲ್ಲ" ಎಂದು ಹೇಳಿದರು. ಇದನ್ನು ಒಪ್ಪದ ಇಳಕಲ್ಲಿನ ಶ್ರೀ ವಿಜಯ ಮಹಾಂತೇಶ್ವರ ಮಠದ ಮಹಾಂತಪ್ಪಗಳು "ಲಿಂಗದಿಚ್ಛೆಗೆ ಮದ್ಯ ಮಾಂಸ ತಿಂಬರು, ಕಂಗಳಿಚ್ಛೆಗೆ ಪರವಧುವ ನೆರೆವರು. ಲಿಂಗ ಲಾಂಛನಧಾರಿಯಾದಲ್ಲಿ ಫಲವೇನು ?" ಎಂಬ ಬಸವಣ್ಣನವರ ವಚನವನ್ನು ಉಲ್ಲೇಖಿಸಿ 'ದಯವೇ ಧರ್ಮದ ಮೂಲವಯ್ಯಾ' ಎಂಬ ಅವರ ನಿಲುವಿಗೆ ವ್ಯತಿರಿಕ್ತವಾಗಿ ಪ್ರಾಣಿದಯೆ ಪಕ್ಷಿದಯೆ ಇರದೇಹೋದರೆ ಬಸವಧರ್ಮದ ಹೃದಯವೇ ಹೋದಂತೆ. ಬಸವಧರ್ಮ ಸ್ವೀಕರಿಸಿದ ಮೇಲೆ ಯಾರೇ ಆಗಲಿ ಮಾಂಸಾಹಾರ ತ್ಯಜಿಸಿ ಸಸ್ಯಾಹಾರಿಗಳಾಗಿ ಬದುಕುವುದು ಬಸವಧರ್ಮ ಸಂವಿಧಾನ ಸಮ್ಮತವಾದುದು" ಎಂದು ಪತ್ರಿಕಾ ಪ್ರಕಟಣೆಯಲ್ಲಿ ಸ್ಪಷ್ಟೀಕರಣ ನೀಡಿರುವರು. "ಬಸವಧರ್ಮದ ಅನುಯಾಯಿಗಳು ಮಾಂಸಾಹಾರ ಸೇವಿಸಲು ಅಡ್ಡಿಯಿಲ್ಲ ಎಂದು ಲೈಸೆನ್ಸ್ ಕೊಟ್ಟಿರುವುದು ಬಸವ ಸಿದ್ಧಾಂತಕ್ಕೆ, ಬಸವಧರ್ಮಕ್ಕೆ ವಿರುದ್ಧವಾಗಿರುವುದರಿಂದ ಶುದ್ಧ ಅವಿವೇಕವೂ, ಅನುಚಿತವೂ ಆಗಿದೆ. ಕ್ರಿಶ್ಚಿಯನ್, ಇಸ್ಲಾಂ ಧರ್ಮದಲ್ಲಿ ಪ್ರಾಣಿವಧೆ ಪಶುಬಲಿ ನಿಷಿದ್ಧವಾಗಿರುವುದರಿಂದ, ಆ ನಿಷಿದ್ಧ ಹಿಂಸಾಚಾರಕ್ಕೆ ಹೆಬ್ಬಾಗಿಲು ತೆರೆಯುವುದು ಬಸವಧರ್ಮಕ್ಕೆ ಸಮ್ಮತವಲ್ಲ. ಹಾಗೇನಾದರೂ ಮಾಡಿದರೆ ಬಸವಧರ್ಮವನ್ನೇ ಧ್ವಂಸ ಮಾಡಿದಂತೆ" ಎಂದು ಪ್ರಸಿದ್ಧ ನ್ಯಾಯವಾದಿಗಳಾದ ಕೋ. ಚೆನ್ನಬಸಪ್ಪನವರು ಇದನ್ನು ತೀವ್ರವಾಗಿ ಖಂಡಿಸಿರುವರು.

ಕರ್ನಾಟಕದಾದ್ಯಂತ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರ ನಿಲುವಿಗೆ ಉಗ್ರವಾದ ಪ್ರತಿಭಟನೆ ವ್ಯಕ್ತವಾಯಿತು. ಆದರೂ ಇದನ್ನು ಲೆಕ್ಕಿಸದೆ ಜೂನ್ ೪ ರಂದು ದಾವಣಗೆರೆಯಲ್ಲಿ ನಡೆದ ರಾಜ್ಯಮಟ್ಟದ ಬಸವಕೇಂದ್ರದ ಪದಾಧಿಕಾರಿಗಳ ಸಭೆಯು ಬಸವಧರ್ಮದ ಪುನರುತ್ಥಾನಕ್ಕೆ ಕೈಹಾಕಿರುವ ಚಿತ್ರದುರ್ಗದ ಬೃಹನ್ಮಠದ ಶ್ರೀ ಶಿವಮೂರ್ತಿ ಶರಣರಿಗೆ ಸಂಪೂರ್ಣ ಬೆಂಬಲ ನೀಡಿ, ಬಸವತತ್ವ ಪ್ರಚಾರದಲ್ಲಿ ಪೂಜ್ಯರ ಹೆಜ್ಜೆಯಲ್ಲಿ ಹೆಜ್ಜೆ ಹಾಕಲು ಸರ್ವಾನುಮತದಿಂದ ನಿರ್ಧರಿಸಿತು ಎಂದು ತಿಳಿದುಬಂದಿದೆ.

ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರ ಪ್ರಗತಿಪರ ನಿಲುವು ವೀರಶೈವದ ಏಕತೆ ಹಾಗೂ ಶಾಂತಿ-ಸಹಬಾಳ್ವೆಗೆ ಭಂಗತರುವ ಪ್ರಯತ್ನವಾಗಿ ತೋರುತ್ತದೆ. ವೀರಶೈವ/ಲಿಂಗಾಯತವು ಮುಕ್ತ ಬಳಕೆಯ, ಉದಾತ್ತ ಸಂಸ್ಕೃತಿಯೊಂದರ ಭಾವನಾತ್ಮಕ ಸಂಕೇತ; ಪರಂಪರೆಯ ಅವಿಚ್ಛಿನ್ನವಾದ ಮಂತ್ರಸದೃಶ ಪವಿತ್ರ ನಾಮ. ಈ ಭಾವನಾತ್ಮಕ ಏಕತೆಯ ಸೂತ್ರವನ್ನು 'ಬಸವಧರ್ಮ'ವೆಂಬ ಬದಲಾದ ಹೆಸರಿನಲ್ಲಿ ಕರೆಯುವುದರ ಔಚಿತ್ಯವೇ ನನಗೆ ಹಾಗೂ ನನ್ನಂತೆ ಯೋಚಿಸುವವರಿಗೆ ಅರ್ಥವಾಗುತ್ತಿಲ್ಲ. ಇದು ಪ್ರಚಲಿತ ಧರ್ಮಕ್ಕೆ ಬೇರೊಂದು ಹೆಸರಿಟ್ಟು ಚಾಲ್ತಿಗೆ ತರುವ ಮೂಲಕ ಅರಿಯದವರ ಮನಸ್ಸಿನಲ್ಲಿ ಗೊಂದಲವನ್ನುಂಟುಮಾಡುವ ನಿರರ್ಥಕ ಪ್ರಯತ್ನವಾಗಿ ತೋರುತ್ತದೆ. ಪರಂಪರೆಯಿಂದ ದಾಖಲಾಗಿರುವ ಒಂದು ಜನಾಂಗದ ಹೆಸರನ್ನು ಬದಲಿಸುವ ಮೂಲಕ ಕ್ರಾಂತಿಕಾರಕ ಬದಲಾವಣೆಯನ್ನೇನೂ ತರಲು ಸಾಧ್ಯವಿಲ್ಲ. ಏಕೆಂದರೆ, ೧೨ನೇ ಶತಮಾನದ ಸಮಾಜೋಧಾರ್ಮಿಕ ಚಳುವಳಿಯು ವಿಶ್ವದಲ್ಲೇ ದಾಖಲೆ ನಿರ್ಮಿಸಿದ ಚಳುವಳಿಯಾಗಿದ್ದು, ಅದರ ದಾಖಲೆ ಈ ಧರ್ಮದ ಸಾಹಿತ್ಯದಲ್ಲಿ ಅವಿಭಾಜ್ಯ ಭಾಗವಾಗಿ ಸೇರಿಹೋಗಿದೆ. ಹೀಗಾಗಿ 'ಬಸವಧರ್ಮ'ವೆನ್ನುವ ಪುನರ್ನಾಮಕರಣದಿಂದ ಹೊಸದೇನನ್ನು ಸಾಧಿಸಲಾಗುತ್ತದೆಯೋ ನನಗೆ ತಿಳಿಯುತ್ತಿಲ್ಲ. ಈಗಾಗಲೇ ಮುಖ್ಯ ಪ್ರವಾಹದಲ್ಲಿ ನಾವು ನಮ್ಮನ್ನು ಗುರುತಿಸಿಕೊಂಡಿದ್ದೇವೆ, ವೀರಶೈವ / ಲಿಂಗಾಯತ ಎಂದು. ವಿಶ್ವದ ಮುಖ್ಯ ಧರ್ಮಗಳಲ್ಲಿ ವ್ಯಕ್ತಿಗಳಲ್ಲಿ ತಾತ್ವಿಕ ಭಿನ್ನಾಭಿಪ್ರಾಯಗಳು ತಲೆದೋರಿವೆಯೇ ಹೊರತು ಅವು ಆ ಭಿನ್ನತೆಯನ್ನು ಧರ್ಮದ ಮೂಲಭೂತ ಹೆಸರನ್ನು ಬದಲಿಸುವ ನೆಲೆಗೆ ಮುಟ್ಟಿಸಿಲ್ಲ. ಅವು ಅನೇಕತೆಯಲ್ಲಿ ಏಕತೆಯನ್ನು ಉಳಿಸಿಕೊಂಡಿವೆ.

ನಮಗಿಂದು ಬೇಕಾಗಿರುವುದು ವೈಚಾರಿಕ ಮನೋಧರ್ಮ. ಅದನ್ನು ಈಗಿರುವ ಧಾರ್ಮಿಕ ವ್ಯವಸ್ಥೆಯಲ್ಲಿಯೇ ಪರಿಣಾಮಕಾರಿಯಾಗಿ ಸಾಧಿಸಬಹುದು. ಅದಕ್ಕೆ ಪರ್ಯಾಯ ವ್ಯವಸ್ಥೆಯೊಂದರ ಅಗತ್ಯವಿರುವಂತೆ ತೋರುವುದಿಲ್ಲ. ಸಾಮಾಜಿಕ ನೆಲೆಯಲ್ಲಿ ವ್ಯಕ್ತಿಗಳ ಆಂತರಂಗಿಕ ಹಾಗೂ ಬಾಹ್ಯ ವಿಚಾರಗಳಲ್ಲಿ ಅಗತ್ಯ ಮಾರ್ಪಾಡು ತರುವುದಕ್ಕೆ ಅನೇಕ ತೆರೆದ ಅವಕಾಶಗಳಿರುವಾಗ ಹೊಸ ವ್ಯವಸ್ಥೆಯೊಂದನ್ನು ಹುಟ್ಟುಹಾಕುವ ಬದಲು ಆ ಧರ್ಮದ ಪುನರುಜ್ಜೀವನ ಕಾರ್ಯವನ್ನು ೧೫ನೇ ಶತಮಾನದಲ್ಲಿ ನಡೆದಂತೆ ೨೧ನೇ ಶತಮಾನದಲ್ಲಿ ಈ ಕಾಲಮಾನದ ಅಗತ್ಯಗಳಿಗೆ, ಸಂವೇದನೆಗಳಿಗೆ ತಕ್ಕಂತೆ ನಡೆಸಬಹುದಾಗಿದೆ. ವೈಚಾರಿಕ ಮನೋಧರ್ಮದ ಶ್ರೀ ಶಿವಮೂರ್ತಿ ಶರಣರು ತಮ್ಮ ಪ್ರಗತಿಪರ ಚಿಂತನೆಗಳನ್ನು ಬಿತ್ತಿ ಬೆಳೆಯುವುದರಲ್ಲಿ ಸಮಾಜದ ಹಿತವಿದೆಯೆಂಬುದನ್ನು ಪ್ರಾಜ್ಞರೆಲ್ಲರೂ ಬಲ್ಲರು. ಆದರೆ, ಪರಂಪರೆ ನಂಬಿ ಬಂದ ಒಂದು ಧರ್ಮದ ವಿಶಿಷ್ಟ ಸ್ವರೂಪವಾಗಿರುವ ಹೆಸರನ್ನು ವೈಚಾರಿಕ ನೆಲೆಯಲ್ಲಿ ವಿಘಟನ ಮಾಡುವುದು ಒಳ್ಳೆಯ ಲಕ್ಷಣವಲ್ಲ. ಇದನ್ನು ನಾಡಿನ ವಿಚಾರವಂತರೆಲ್ಲರೂ ಪರಿಭಾವಿಸಬೇಕು.

□□

ದ್ವಿತೀಯ ಭಾಗ : ಪ್ರಬಂಧಗುಚ್ಛಕ

೧. ವೀರಶೈವ-ಲಿಂಗಾಯತ
(ನಿರ್ವಚನ, ಮೂಲ ಮತ್ತು ಬೆಳವಣಿಗೆ)

-ಕೋ.ರಂ. ಬಸವರಾಜು

'ವೀರಶೈವ-ಲಿಂಗಾಯತ' ಶಬ್ದಗಳ ವಿಚಾರ ಸಮರ ಸುಮಾರು ಒಂದೂವರೆ ಶತಮಾನದಿಂದಲೂ ನಡುಯುತ್ತಲೇ ಬಂದಿದೆ. ೧೮೪೦ ರಲ್ಲಿ ಪಿ.ಸಿ. ಬ್ರೌನ್ ಎಂಬ ಆಂಗ್ಲ ಸಂಶೋಧಕನು 'ಮದ್ರಾಸ್ ಜರ್ನಲ್ ಆಫ್ ಲಿಟರೇಚರ್ ಅಂಡ್ ಸೈನ್ಸ್' ಎಂಬ ಸಂಶೋಧನಾ ಪತ್ರಿಕೆಯಲ್ಲಿ, 'ಕ್ರೀಡ್ ಕಸ್ಟಂ ಅಂಡ್ ಲಿಟರೇಚರ್ ಆಫ್ ಜಂಗಂಸ್' ಎಂಬ ಲೇಖನವನ್ನು ಆ ಕಾಲಕ್ಕೆ ಲಭ್ಯವಾದಷ್ಟಲ್ಲ ವೀರಶೈವ ಸಾಹಿತ್ಯ ಮತ್ತು ಜನಹೇಳಿಕೆಯ ಆಧಾರದ ಮೇಲೆ ಪ್ರಕಟಿಸಿದ್ದಾನೆ. (ರಾಜಶೇಖರ ಹೆಚ್. ಚಂದನಗೌಡರ ಬಸವಪಥ' ಏಪ್ರಿಲ್ ೨೦೦೪). ನಂತರ ಯಜಮಾನ್ ವೈ. ಸಂಗಪ್ಪಾ ಮೈಸೂರು ಇವರ ಸಂಪಾದಕಮಾಲೀಕತ್ವದಲ್ಲಿ ಪ್ರಕಟವಾಗುತ್ತಿದ್ದ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ೧೮೮೨ ರಿಂದಲೂ ನಡೆಯುತ್ತಿದ್ದ ವೀರಶೈವದ ಮೇಲಿನ ಚರ್ಚೆಗಳನ್ನು (ಕರಸ್ಪಾಂಡೆನ್ಸ್) ಅವರೇ ೧೮೮೪ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ೧೯೦೧ ರಲ್ಲಿ ಮೈಸೂರು ಸೀಮೆಯ ಸೆನ್ಸಸ್ ರಿಪೋರ್ಟ್‌ನಲ್ಲಿ ನಮೂದಿತವಾದ ಲಿಂಗಾಯತ ಶಬ್ದದ ಮೇಲಿನ ಚರ್ಚೆ ಮತ್ತು 'ಎತ್ನೋಗ್ರಫಿ'ಯಲ್ಲಿ (ಇಂಡಿಯಾ ಗೌರ್ನಮೆಂಟಿನವರು ಆ ಕಾಲದಲ್ಲಿ ತರಲು ಯತ್ನಿಸಿದ ಸಕಲ ಜನಾಂಗದ ವರ್ಣನೆ) ಪ್ರಕಟಿಸಿದ ವೀರಶೈವ ಮತ ಪರವಾದ ಅಭಿಪ್ರಾಯಗಳ ಬಗ್ಗೆ ಮುಡುಕುತೊರೆಯ 'ವೀರಶೈವ ಮತ ಸಂವರ್ಧಿನೀ ಸಭೆ'ಯು ವಿದ್ವಾಂಸರುಗಳ ಮುಖಾಂತರ ನಡೆಸಿದ ಮರು ಚಿಂತನೆಯನ್ನು ೧೯೦೪ ರಲ್ಲಿ ಛಾಪಿಸಿತು. ಮತ್ತು ೧೯೧೯ ರವರೆವಿಗೂ ನಡೆದ ವಿದ್ವಾಂಸರುಗಳ ಉಪನ್ಯಾಸಗಳನ್ನು 'ಉಪನ್ಯಾಸ ಮಾಲಿಕೆ' ಎಂಬ ಹೆಸರಿಟ್ಟು ಪುಸ್ತಕರೂಪದಲ್ಲಿ ಮುದ್ರಿಸಲಾಗಿದೆ. ಇದರಂತೆ ಈ ಶತಮಾನದಲ್ಲಿಯೂ ಈ ವಿಚಾರ ಸಮರ ಸಾಗುತ್ತಲೇ ಇದೆ.

ಪ್ರಸ್ತುತ ಪ್ರಬಂಧದ ವಿಷಯವನ್ನು ೧. ಪದನಿರ್ವಚನ ೨. ಮೂಲ ಮತ್ತು ಬೆಳವಣಿಗೆ ೩. ಯಾವುದು ಸರಿ? ಎಂಬ ಮೂರು ಭಾಗಗಳಲ್ಲಿ ನಿರೂಪಿಸಲು ಯತ್ನಿಸಲಾಗಿದೆ.

ವೀರಶೈವ : ಪದನಿರ್ವಚನ

ವೀರಶೈವ: ನಿರ್ವಚನ

'ವೀರಶೈವ'ದ ಜಿಜ್ಞಾಸೆಯು ಮೊಟ್ಟಮೊದಲು ಕಂಡಬರುವುದು ಪಾರಮೇಶ್ವರಾಗಮದಲ್ಲಿ ಅಲ್ಲಿ ಜಿಜ್ಞಾಸುಗಳ ಪ್ರತಿನಿಧಿಯಾಗಿ ಪಾರ್ವತಿಯು ಪರಮೇಶ್ವರನನ್ನು ಪ್ರಶ್ನಿಸುತ್ತಾಳೆ: ಹೇ ಪ್ರಭೋ!

"ಮತೇತು ವೀರಪೂರ್ವತ್ವೇ ಕಿಂ ಪ್ರಮಾಣಮ್?
ಯೌಗಿಕಂ ರೂಢಿಕಂ ವೇದಮುಪಚಾರೋಽಪಿವಾ?
ತದದ್ಯಕಥಯ"

ಶೈವ ಪದದ ಮೊದಲಲ್ಲಿ ವೀರಪದ ಬರಲು ಅಂದರೆ ವೀರಶೈವ ಎಂದು ಕರೆಯಲು ಪ್ರಮಾಣವೇನು? ಈ ವೀರಶೈವ ಪದವು ಯೌಗಿಕಪದವೋ? ರೂಢಿಪದವೋ? ಯೋಗರೂಢಿಯೋ ಅಥವಾ ಲಾಕ್ಷಣಿಕಪದವೋ? ಹೇಳು ಎಂಬುದಾಗಿ (ಪಾ. ಆ. ಪ: ೧ ಶ್ಲೋಕ: ೬೩,೬೪)

ಪಾರ್ವತಿಯ ಈ ಪ್ರಶ್ನೆಯ ಇಂಗಿತದ ಹಿನ್ನೆಲೆಯಲ್ಲಿ ಈ ಅಭಿಪ್ರಾಯಗಳನ್ನು ಊಹಿಸಬಹುದಾಗಿದೆ. ಒಂದು: ಯಾವುದೇ ಧರ್ಮವನ್ನು ನಿರ್ದೇಶಿಸುವ ಪಾರಿಭಾಷಿಕ ಶಬ್ದದರ್ಥವನ್ನು ಅವಯವಾರ್ಥ ಶಕ್ತಿಯಿಂದ ಬರುವ ಯೌಗಿಕಾರ್ಥ, ಸಮುದಾಯ ಶಕ್ತಿಯಿಂದ ಬರುವ ರೂಢ್ಯರ್ಥ, ಶಾಸ್ತ್ರಕಲ್ಪಿತವಾದ ಅವಯವಾರ್ಥಾನುಸಂಧಾನಪೂರ್ವಕ ಸಮುದಾಯ ಶಕ್ತಿಯಿಂದ ಬರುವ ಯೋಗರೂಢ್ಯರ್ಥ, ಇಲ್ಲವೇ ಲಕ್ಷಣಾ ವೃತ್ತಿಯಿಂದ ತೋರುವ ಲಕ್ಷ್ಯಾರ್ಥ ಇವುಗಳ ಹಿನ್ನೆಲೆಯಲ್ಲಿ ಶಾಸ್ತ್ರೀಯವಾಗಿ ವಿವೇಚಿಸಬೇಕು. ಎರಡು: ಹೀಗೆ ವಿವಿಚ್ಯವಾದ ಶಬ್ದವು ಧರ್ಮದ ಮೂರು ಅಂಗಗಳಲ್ಲಿ (ತಾತ್ವಿಕಾಂಗ ಧಾರ್ಮಿಕಾಂಗ ನೈತಿಕಾಂಗ) ಸಮಾಯೋಗಗೊಂಡಿರಬೇಕು. ಮೂರು: ಆ ಶಬ್ದ ನಿರ್ದಿಷ್ಟವಾದ ವ್ರತ ಇಲ್ಲವೆ ಆಚರಣೆಯುಳ್ಳ ವ್ಯಷ್ಟಿ ಹಾಗೂ ಸಮುದಾಯವನ್ನು ಪ್ರತಿನಿಧಿಸುವಂತಿರಬೇಕು. ಈ ಹಿನ್ನೆಲೆಯಲ್ಲಿ ವೀರಶೈವ ಶಬ್ದವನ್ನು ಇಲ್ಲಿ ನಿರ್ವಚಿಸಲಾಗಿದೆ.

೧. ವೀರ ಎಂದರೆ: ಭಕ್ತ್ಯುತ್ಸಾಹವುಳ್ಳವನು. ಭಕ್ತ್ಯುತ್ಸಾಹವೆಂಬುದು ವ್ರತ ವಿಶೇಷ. ಅದುಳ್ಳ ಶೈವನು ವೀರಶೈವ. (ಚ.ಆ. ೧-೧೦-೩೪)

೨. ವೀರ ಎಂದರೆ: ಇತರ ಶೈವಕ್ಕಿಂತಲೂ ವಿಶಿಷ್ಟಗುಣವುಳ್ಳವನು. ಈ ವಿಶೇಷ ಗುಣವುಳ್ಳ ಶೈವವೇ ವೀರಶೈವ. (ವಾ.ಆ. ೧೦-೩೦,೩೧)

೩. ವೀರ ಎಂದರೆ: ಶಿವ. ಆ ವೀರನಿಂದ (ಶಿವನಿಂದ) ನಿರೂಪಿಸಲ್ಪಟ್ಟದ್ದು ವೀರಶೈವ. (ಗ್ರಂಥಾಂತರ)

೪. ವೀರ ಎಂದರೆ: ಬಲದಿಂದಲೂ ಕಾರ್ಯದಿಂದಲೂ ವೀರತ್ವವನ್ನು ಸಂಪಾದಿಸಿದ ರಣರಂಗದ ವೀರನಂತೆ ಶಿವಭಕ್ತಿಯಿಂದಲೂ ದೃಢವಾದ ವೈರಾಗ್ಯದಿಂದಲೂ ಸಂಪಾದಿಸಿದ ವೀರತ್ವವುಳ್ಳವನು. ಇಂಥ ವೀರತ್ವವುಳ್ಳ ಶೈವನು ವೀರಶೈವ. ಇಂಥ ವೀರತ್ವವುಳ್ಳ ವೀರಶೈವನಾರು?

೧. ಈಷಣತ್ರಯಮುಕ್ತನಾದವನು.
೨. ಶಿವಜ್ಞಾನ ಶಿವಕ್ರಿಯೆಗಳಲ್ಲಿ ಮಗ್ನನಾದವನು.
೩. ಪರಸತಿಯ ನೋಡುವುದರಲ್ಲಿ ಕುರುಡನಾದವನು.
೪. ಎಲ್ಲ ಬಲ್ಲವನಾದರೂ ಬಾಲರಂತೆ ಮುಗ್ಧನಾದವನು.
೫. ಪರಸ್ತ್ರೀ ವಿಷಯದಲ್ಲಿ ಷಂಡನಾದವನು.
೬. ಪರಪೀಡನೆಯಲ್ಲಿ ಕುಂಟನಾದವನು.
೭. ರುಚಿನೋಡುವುದರಲ್ಲಿ ನಾಲಗೆಯಿಲ್ಲದವನು..
೮. ದುರಭಿಮಾನ ದಂಭರಹಿತನು.
೯. ಅಹಿಂಸೆ ಕ್ಷಾಂತಿ ಸರಳತೆ ಸಹಿತನು.
೧೦. ಗುರುವಿನ ಉಪಾಸನೆಯಲ್ಲಿ ನಿರತನು.
೧೧. ಶುಚಿತ್ವ, ಸ್ಥಿರತೆ ನಿರಹಂಕಾರಗಳಿಂದ ಶೋಭಿತನು.
೧೨. ಸರ್ವತ್ರ ಸಮಚಿತ್ತನು.
೧೩. ನಿರ್ಮಲ ಭಕ್ತಿಯುತನು.
೧೪. ನಿತ್ಯ ಶಿವಧ್ಯಾನ ನಿರತನು ...ಇತ್ಯಾದಿ. (ಪಾ.ಆ. ೮ ಶ್ಲೋ. ೭ ರಿಂದ ೧೪)

೫. ವೀರ ಎಂದರೆ : ಜಾಗ್ರತ್ ಸ್ವಪ್ನ ಸುಷುಪ್ತಿ ಅವಸ್ಥೆಗಳನ್ನು ಮೀರಿದ ತುರೀಯಾವಸ್ಥೆ (ಕೇವಲ ಆನಂದಸ್ಥಿತಿ ಅಥವಾ ವೀರಶೈವಾವಧೂತಾವಸ್ಥೆ) ಹೊಂದಿರುವನು. ಇದನ್ನು ಪಡೆದ ಶೈವನು ವೀರಶೈವ. (ಪಾ.ಆ. ೧ ಶ್ಲೋ. ೬೬,೬೭)

೬. ವೀರ ಎಂದರೆ : ಶಿವಜೀವರ ಐಕ್ಯವನ್ನು ಬೋಧಿಸುವ ವೇದಾಂತಜನ್ಯ ಹಾಗೂ ಶಿವಾಗಮೋಕ್ತ ಶಿವರೂಪ ವಿದ್ಯೆಯಲ್ಲಿ ರಮಿಸುವವನು. ಅಂಥ ಶೈವನೇ ವೀರಶೈವ (ಸಿ.ಶಿ. ಪರಿ ೬. ಶ್ಲೋ. ೧೫ ರಿಂದ ೧೭)

೭. ವೀರ ಎಂದರೆ : ವಿಕಲ್ಪವಿಲ್ಲದವನು. ಈ ವಿಕಲ್ಪ ಅಕಲ್ಪಗಳು ಇಲ್ಲದಿರುವಿಕೆ ದೋಷಗಳನ್ನು ಬಿಡುವುದರಿಂದಲೂ ಆತ್ಮವಿಚಾರಣೆ ಯಿಂದಲೂ 'ಉಂಟಾಗುತ್ತದೆ.' ಇಂಥ ಸಂಕಲ್ಪ ವಿಕಲ್ಪರಹಿತನಾದ ಶೈವನೇ ವೀರಶೈವ. (ವಿ.ಪ್ರಕಾಶಿಕೆ. ೨-೩೦) ಮತ್ತು ಸೂ. ಆ. ೮-೨೯)

೭. (ಅ) ವೀರ ಎಂದರೆ : ವಿ-ವಿಕಲ್ಪ, ರ-ರಹಿತನಾದವನು. ಅಂಥ ಶೈವನೇ ವೀರಶೈವ, (ವಿ.ಪ್ರ, ೨-೩೦)

೮. ವೀರ ಎಂದರೆ : ಶಿವವ್ರತ ಎಂದು ಕರೆಯಲ್ಪಡುವ ಸನಾತನವಾದ ನಿಯಮವೆಂದು ಹೇಳಲ್ಪಡುವ ಶೀಲವುಳ್ಳವನು. ಈ ಶೀಲವುಳ್ಳ ಶೈವನೇ ವೀರಶೈವ. (ಶಿವಪುರಾಣ)

೯. ವೀರ ಎಂದರೆ : ತನ್ನ ಹಸ್ತಪೀಠದಲ್ಲಿ ಗುರುವಿನಿಂದ ಕೊಡಲ್ಪಟ್ಟ ಇಷ್ಟಲಿಂಗವನ್ನಿರಿಸಿಕೊಂಡು ಪೂಜಿಸುವ ವ್ರತವುಳ್ಳವನು. ಅಂಥ ಶೈವನು ವೀರಶೈವ. (ಶಂಕರ ಸಂಹಿತೆ)

೧೦. ವೀರ ಎಂದರೆ : ಷಟ್‌ಸ್ಥಲಯೋಗಿ. ಅಂಥ ಯೋಗಿಯಾದ ಶೈವನು ವೀರಶೈವ (ಸೂ. ಆ. ೬-೫೭)

೧೧. ವೀರ ಎಂದರೆ : ಷಟ್‌ಸ್ಥಲಯೋಗಿ. ಅಂಥ ಯೋಗಿಯಾದ ಶೈವನು ವೀರಶೈವ (ಸೂ. ಆ ೬-೫೭)

೧೧. ವೀರ ಎಂದರೆ : ಇಷ್ಟಲಿಂಗ ಕಳೆದುಹೋದರೆ ಅಥವಾ ವ್ರತಾಚರಣೆಯಲ್ಲಿ ಚ್ಯುತಿಯುಂಟಾದರೆ ಪ್ರಾಣವನ್ನು ತ್ಯಜಿಸುವ ವೀರವ್ರತಿ. ಇಂಥ ವೀರವ್ರತವುಳ್ಳ ಶೈವ ವೀರಶೈವ. (ಚ. ಆ. ೧೦-೩೩)

೧೧. (ಅ) ವೀರ ಎಂದರೆ : ಶಿವನಿಗೋಸ್ಕರ ಸಮರ್ಪಿಸಲ್ಪಟ್ಟ ಜೀವವುಳ್ಳವನು. ಅಂಥ ಶೈವನೇ ವೀರಶೈವ.

೧೨. ವೀರ ಎಂದರೆ : ಆಚಾರಾದಿ ಆರುಲಿಂಗಗಳಲ್ಲಿ ವೀರತ್ವದ ನಡೆವಳಿಕೆಯನ್ನು ತೋರುವವನು. ಇಂಥ ನಡವಳಿಕೆಯುಳ್ಳ ಶೈವನೇ ವೀರಶೈವ.

ಆ ನಡೆವಳಿಕೆಗಳುಳ್ಳ ವೀರಶೈವನಾರು?

೧. ಪ್ರಾಣಹೋದರೂ ಆಚಾರವನ್ನು ಬಿಡದವನು.

೨. ಗುರೂಪದೇಶವನ್ನು ಬಿಟ್ಟು ಅನ್ಯಾಚಾರಗಳನ್ನು ಹೊಂದದವನು.

೩. ಶಿವಲಿಂಗವನ್ನು ಬಿಟ್ಟು ಅನ್ಯಲಿಂಗವನ್ನು ಹೊಂದದವನು.

೪. ತನುಮನಧನಗಳನ್ನು ಗುರುಲಿಂಗಜಂಗಮಕ್ಕೆ ಅರ್ಪಿಸುವವನು.

೫. ಪರರ ಸ್ವತ್ತನ್ನು ಮುಟ್ಟದವನು.

೬. ಜೀವ ಭಾವಕ್ಕೆ ಸಂಬಂಧಿಸಿದ ಕೃತ್ಯ ಭಾವನೆಯಿಲ್ಲದವನು. ಇವನನ್ನೇ ಕ್ರಮವಾಗಿ ಆಚಾರಲಿಂಗವೀರ, ಗುರುಲಿಂಗವೀರ, ಶಿವಲಿಂಗವೀರ, ಚರಲಿಂಗವೀರ, ಪ್ರಸಾದಲಿಂಗವೀರ, ಮಹಾಲಿಂಗವೀರ ಎಂದು ಕರೆಯುತ್ತಾರೆ. (ಸೂ. ಆ. ೮-೪೧ ರಿಂದ ೪೪)

೧೩. ವೀರ ಎಂದರೆ : ವೀರಶೈವ ಎಂದೇ ಅರ್ಥ. ಅದು ವೀರಶೈವದ ಪರ್ಯಾಯಪದ. (ಪಾ. ಆ. ೧೦-೬೩, ೬೮)

೧೪. ವೀರ ಎಂದರೆ : ವಿರೋಧ ರಹಿತನು. ಅಂಥ ಶೈವನು ವೀರಶೈವ. (ಆಗಮಾಂತರ)

೧೫. ವೀರ ಎಂದರೆ : ಷಟ್‌ಸ್ಥಲ ಸಿದ್ಧಾಂತದ ವಿಕಾಸ ಮತ್ತು ಪ್ರಭೇದಕ್ಕೆ ಮೂಲದ್ರವ್ಯ. ಇದುಳ್ಳದ್ದೇ ವೀರಶೈವ. (ಸಿ.ಶಿ. ಪರಿ: ೫, ಶ್ಲೋ. ೨೨)

೧೯. ವೀರ ಎಂದರೆ : ಸ್ವಯ ಚರ ಪರದ ಸುಮುದ್ರೆ. ಸ್ಮೃತಿ ತತ್ವದ ಶೋಧ: ಇದುಳ್ಳವನು ವೀರಶೈವ. (ಪ್ರಸಾದಿ ಭೋಗಣ್ಣ ವ.ಸಂ.೩೦ ಕರ್ನಾಟಕ ಸರ್ಕಾರ)

೧೭. ವೀರ ಎಂದರೆ : ವೀರಶ್ಚಾಸೌ ಶೈವಶ್ಚ ವೀರಶೈವಃ
ವಿಶಿಷ್ಟಂ ಈರ್ಯತೇ ಯಸ್ಮಾತ್ 'ವೀರ' ಇತ್ಯಭಿಧೀಯತೇ।
ಶಿವೇನ ಸಹ ಸಂಬಂಧಂ ಶೈವಮಿತ್ಯಾದೃತಂ ಬುಧೈಃ
ಉಭಯೋಃ ಸಂಪುಟೀಭಾವಾತ್ "ವೀರಶೈವ" ಇತಿ ಸ್ಮೃತಮ್॥
ವೀರನೂ ಶೈವನೂ ಆದವನು ವೀರಶೈವ.
ವೀರನೆಂದರೆ ಮೇಲೆ ಇದುವರೆವಿಗೆ ಹೇಳಿದ ವಿಶೇಷವಾದ ಗುಣವುಳ್ಳವನು. ಶೈವನೆಂದರೆ ಶಿವನೊಡನೆ ಸಂಬಂಧವುಳ್ಳವನು. ಇವೆರಡೂ ಕೂಡಿದರೆ ವೀರಶೈವನೆಂದಾಗುತ್ತದೆ. (ವಾ.ಆ. ೧೦-೩೦,೩೧)

ಹೀಗೆ ವೀರಶಬ್ದಕ್ಕೆ ಶಾಸ್ತ್ರ ಸಮ್ಮತವಾದ ನೂರಾರು ಅರ್ಥಗಳಿದ್ದರೂ ಇಲ್ಲಿ ವಿಸ್ತಾರದ ಭಯದಿಂದ ಕೆಲವು ಅರ್ಥಗಳನ್ನು ಮಾತ್ರ ನಿರ್ವಚಿಸಲಾಗಿದೆ. ವೀರಶೈವನು ಪಾಲಿಸಬೇಕಾದ ವಿಧಿನಿಷೇಧಗಳೆಲ್ಲವೂ ವೀರಶಬ್ದದೊಳಗೆ ಅಡಗಿವೆ.

ವೀರಶಬ್ದನಿರ್ವಚನಕ್ಕೆ ಆಧಾರ ಶ್ಲೋಕಗಳು (ಅನುಕ್ರಣಿಕೆಯಲ್ಲಿ)

೧. ಭಕ್ತ್ಯುತ್ಸಾಹವಿಶೇಷೋಽಪಿ ವೀರತ್ವಮಿತಿಕಥ್ಯತೇ।
ವೀರವ್ರತಸಮಾಯೋಗಾತ್ ವೀರಶೈವಂ ಪ್ರಕೀರ್ತಿತಂ॥

೨. ವಿಶಿಷ್ಟಂ ಈರ್ಯತೇ ಯಸ್ಮಾತ್ ವೀರ ಇತ್ಯಭಿಧೀಯತೇ।
ಶಿವೇನ ಸಹ ಸಂಬಂಧಂ ಶೈವಮಿತ್ಯಾದೃತಂ ಬುಧೈಃ॥
(ವಾ.ಆ. ೧೦-೩೧, ೩೨)

೩. ಗ್ರಂಥಾಂತರ

೪. ವೀರತ್ವಂ ನಾಮ ದೇವೇಶಿ ಯಥಾ ವೀರೋ ರಣೇ ಭಟಃ।
ತಥಾ ಮತೇ ಚ ಮದ್ಭಕ್ತ್ಯಾ ವೀರೋ ವೈರಾಗ್ಯತೋ ದೃಢಾತ್॥
(ಪಾ.ಆ. ೮-೭) (ಅದೇ ಆಗಮದ ೮ ರಿಂದ ೧೪ ಶ್ಲೋ).

೫. ವೀರತ್ವಂ ನಾಮ ವಿಶ್ವೇಶಿ ತುರೀಯಾ ಯತ್ರ ಯತ್ರ ವೈ।
ಗುರೂಕ್ತಮಾರ್ಗನಿರತಾ ಮತೇ ವೀರಪದಾಭಿಧೇ॥ (ಪಾ. ಆ. ೧-೬೬)

೬. ವಿಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿಕಾ।
ತಸ್ಯಾಂ ರಮಂತೇ ಯೇ ಶೈವಾಃ ವೀರಶೈವಾಸ್ತು ತೇ ಮತಾಃ॥
(ಸಿ.ಶಿ. ೫-೧೫, ೧೬,೧೭)

೭. ವಿಶಬ್ದೋಽತ್ರ ವಿಕಲ್ಪಾರ್ಥೋ ರಶಬ್ದೋ ರಹಿತಾರ್ಥಕಃ।
ವಿಕಲ್ಪರಹಿತಂ ಶೈವಂ ವೀರಶೈವಮಿತಿ ಸ್ಮೃತಮ್॥ (ವಿ.ಪ್ರ. ೨-೩೦)

ವೀತರಾಗಾದಿದೋಷತ್ವಾತ್ ಆತ್ಮತತ್ತ್ವವಿಚಾರಣಾತ್।
ವಿಕಲ್ಪಾಕಲ್ಪಶೂನ್ಯತ್ವಾತ್ ವೀರಶೈವಮಿತಿ ಸ್ಮೃತಮ್॥ (ಸೂ. ೮-೨೯)

೮. ವ್ರತಂ ಶಿವೈಕವಿಷಯಂ ನಿಯಮಶ್ಚ ಸನಾತನಃ।
ಶೀಲಂ ಇತ್ಯುಚ್ಯತೇ ಸದ್ಭಿಃ ಯೇನ ಶೀಲೀ ಭವೇತ್ಪುನಃ॥ (ಶಿವಪುರಾಣ)

೯. ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ ವಿನ್ಯಸ್ಯ ತಲ್ಲೀನಮನಃಪ್ರಚಾರಃ।
ಬಾಹ್ಯಕ್ರಿಯಾಸಂಕುಲನಿಸ್ಪೃಹಾತ್ಮಾ ಸಂಪೂಜಯತ್ಯಂಗ ಸ ವೀರಶೈವಃ॥
(ಶಂಕರಸಂಹಿತಾ)

೧೦. ಏವಂ ಸಮರಸಾದ್ಭಾವಾತ್ ಅಂಗಷಟ್‌ಸ್ಥಲಯೋಗತಃ।
ಯಃ ಪೂಜಯತಿ ಮಾಂ ದೇವಿ ವೀರಶೈವಃ ಸ ಉಚ್ಯತೇ॥
(ಸೂ. ಆ. ೬-೫೭)

೧೧. ಇಷ್ಟಲಿಂಗವಿಯೋಗೇ ವಾ ವ್ರತಾನಾಂ ವಾ ಪರಿಚ್ಯುತೌ।
ತೃಣವತ್ ಪ್ರಾಣಸಂತ್ಯಾಗ ಇತಿ ವೀರವ್ರತಂ ಮತಮ್॥
ವೀರವ್ರತಸಮಾಯೋಗಾತ್ ವೀರಶೈವಂ ಪ್ರಕೀರ್ತಿತಮ್॥
(ಚ.ಆ. ೧೦-೩೩)

೧೨. ಅಪಿ ಪ್ರಾಣಾತ್ಯಯೇ ದೇವಿ ಸ್ವಾಚಾರಂ ನ ಪರಿತ್ಯಜೇತ್।
ಆಚಾರಲಿಂಗವೀರಃ ಸ್ಯಾತ್ ಆಚಾರೈಕಪರಾಯಣಃ॥
(ಸೂ.ಆ. ೮-೧೪ಮತ್ತು ೪೨, ೪೩, ೪೪)

೧೩. ಅವಧೂತಶ್ಚ ಸಂನ್ಯಾಸೀ ಯೋಗೀ ಪಾಶುಪತಃ ಶಿವಃ।
ಲಿಂಗೀ ವೀರೋ ವೀರಶೈವೋ ಮಹಾಮಾಹೇಶ್ವರೋ ಯತಿಃ॥
ಪರ್ಯಾಯನಾಮಾನ್ಯೇತಾನಿ ವೀರಶೈವಸ್ಯ ಯೋಗಿನಃ॥ (ಪಾ.ಆ. ೧೦-೬೭)

೧೪. ಆಗಮಾಂತರ

೧೫. ವೀರಶೈವಾಸ್ತು ಷಡ್ಭೇದಾಃ ಸ್ಥಲಧರ್ಮವಿಭೇದತಃ।
ಭಕ್ತಾದಿವ್ಯವಹಾರೇಣ ಪ್ರೋಚ್ಯಂತೇ ಶಾಸ್ತ್ರಪಾರಗೈಃ॥ (ಸಿ.ಶಿ. ೫-೨೨)

೧೬. ಪ್ರಸಾದಿ ಭೋಗಣ್ಣನವಚನಃ ವಚನ ಸಂಪುಟ ೮ ವ.ಸಂ. ೩೦

೧೭. ಅಲ್ಲೇ ಬರೆದಿರುತ್ತೆ.

ಲಿಂಗಾಯತ : ಪದನಿರ್ವಚನ

ಲಿಂಗಾಯತ ಪದವು ಯಾವ ಶಿವಾಗಮಗಳಲ್ಲಾಗಲಿ ಯಾವ ವಚನಕಾರರ ವಚನಗಳಲ್ಲಿಯಾಗಲೀ ಕಂಡುಬರದ ಕಾರಣ ವಚನಾಗಮಗಳನ್ನಾಧರಿಸಿ ಪದವನ್ನು ನಿರ್ವಚಿಸಲಾಗದು. ಆದರೂ ಶಬ್ದಶಾಸ್ತ್ರವನ್ನು ಅವಲಂಬಿಸಿ ಯಥಾ ಕಥಂಚಿತ್ತಾಗಿ ನಿರ್ವಚನಗೈಯಲಾಗಿದೆ.

ಲಿಂಗಾಯತ ಎಂದರೆ : ಲಿಂಗ-ಪರವಸ್ತುವನ್ನು ಆಯತ-ಧಾರಣೆ ಮಾಡಿಕೊಂಡವನು. ಕೆಲವರು ಆಯತ ಎನ್ನುವುದಕ್ಕೆ ಬರಮಾಡಿಕೊಂಡ್ಡದು ಎಂದು ಹೇಳುತ್ತಾರೆ. ಆಗ 'ಆಯಾತ' ಎಂದಾಗಬೇಕು. ಆಗ ಲಿಂಗಾಯತ ಆಗುವುದಿಲ್ಲ, 'ಲಿಂಗಾಯಾತ' ಆಗಬೇಕು. ನಿರ್ಯಾತ ಇದ್ದ ಹಾಗೆ ಆಯಾತ.

ಲಿಂಗಾಯತ ಎಂದರೆ : ಲಿಂಗ-ಇಷ್ಟಲಿಂಗವನ್ನು ಕೊಡಲು, ಆಯತ- ಸ್ಥೂಲ ಶರೀರಕ್ಕೆ ಮಾಡುವ ದೀಕ್ಷೆ. ಮೂರೇಳು (೨೧) ದೀಕ್ಷೆಗಳಲ್ಲಿ ೬ನೆಯದು. ಅರ್ಥಾತ್ ಶ್ರೀ ಗುರುವು ಲಿಂಗವನ್ನು ಶಿಷ್ಯನ ವಾಮಹಸ್ತ ಪೀಠದಲ್ಲಿರಿಸಿ ನೋಡಿಸುವುದು. ಅಂಗದ ಮೇಲೆ ಆಯತವಾದುದೇ ಇಷ್ಟಲಿಂಗ ಎಂಬ ಹೇಳಿಕೆಗಳಿದ್ದರೂ, ಬಹು ಸಂಖ್ಯೆಯಲ್ಲಿ ಈ ಆಯತ ಶಬ್ದಕ್ಕೆ ಬದಲಾಗಿ ಈ ಧಾರಣಾರ್ಥದಲ್ಲಿ ಸ್ವಾಯತ ಶಬ್ದವನ್ನು ಬಳಸಿದ್ದಾರೆ. ಆಗ 'ಲಿಂಗಸ್ವಾಯತ' ಎನ್ನಬೇಕು. ಸನ್ನಿಹಿತ ಶಬ್ದವನ್ನೂ ಬಳಸಿದ್ದಾರೆ. ಆಗ ಲಿಂಗಸನ್ನಿಹಿತ ಎನ್ನಬೇಕು. ಲಿಂಗಾಯತಕ್ಕೆ ಪರ್ಯಾಯವಾಗಿ. ಯದ್ಯಪಿ ಅಲ್ಲಮಾದಿಗಳು ಇಷ್ಟ ಪ್ರಾಣ ಭಾವ ಲಿಂಗಗಳಿಗೆ ಪರ್ಯಾಯವಾಗಿ ಆಯತ ಸ್ವಾಯತ ಸನ್ನಿಹಿತ ಶಬ್ದಗಳನ್ನು ಬಳಸಿದ್ದರೂ ಬರಮಾಡಿಕೊಂಡದ್ದು ಎಂಬುದಕ್ಕಿಂತಲೂ ತನ್ನೊಳಗಿದ್ದುದನ್ನು ಸಾಕ್ಷಾತ್ಕರಿಸಿಕೊಂಡದ್ದು ಎಂಬ ಅರ್ಥದಲ್ಲಿ ಬಳಸಿದ್ದಾರೆ. (ಅಲ್ಲಮ ಪ್ರಭುವಿನ ವಚನ: ೯೦೬, ೯೦೮ ಮತ್ತು ೯೪೭)

ಲಿಂಗಾಯತ ಎಂದರೆ : ಲಿಂಗ ಪರಶಿವನೊಡನೆ ಆಯತ ಸಾಮರಸ್ಯವನ್ನು ಪಡೆಯಲು ಯತ್ನಿಸುವವನು. ಇಲ್ಲಿ ಆಯತ ಎಂಬ ಪದವು ಆಙ್ 'ಉಪಸರ್ಗ ಪೂರ್ವಕ' 'ಯತ' ಧಾತುವಿನ ಕೃದಂತ ರೂಪ. ಈ ಯತ ಧಾತುವಿಗೆ ಯತ್ನ (ಯತೀ ಪ್ರಯತ್ನೇ) ಸಾಧನ, ವ್ಯಾಪನ ಮುಂತಾದ ಅರ್ಥಗಳಿವೆ. ಆದರೆ ಧಾರಣೆ ಎಂಬ ಅರ್ಥವಾಗಲಿ ಬರಮಾಡಿಕೊಂಡದ್ದು ಎಂಬರ್ಥವಾಗಲಿ ಇರುವುದಿಲ್ಲ.

ಲಿಂಗಾಯತ ಎಂದರೆ : ಲಿಂಗ-ಪರಶಿವನೊಡನೆ, ಆಯತ-ಸಾಮರಸ್ಯವನ್ನು ಹೊಂದಲು ಬೇಕಾದ ಸಾಧನವನ್ನು ಪಡೆದಿರುವವನು. (ಯತಿ ಉಪಸ್ಕಾರೇ)

ಲಿಂಗಾಯತ ಎಂದರೆ : ಲಿಂಗ-ಪರಶಿವನೊಡನೆ, ಆಯತ-ವ್ಯಾಪ್ತಿಯನ್ನು ಹೊಂದುವವನು. (ಯಮ್ ಪರಿವೇಷಣೇ ಪರಿವೇಷ್ಟನೇ ಚ. ಯಮ್+ಕ್ತಃ=ಯತಃ)

ಲಿಂಗಾಯತ ಎಂದರೆ : ಲಿಂಗ-ಪರಶಿವನೊಡನೆ, ಆಯತ- ಸಾಮರಸ್ಯ ರೂಪ ವಿಸ್ತಾರವನ್ನು ಪಡೆಯುವವನು.

ಲಿಂಗಾಯತ್ತ : ಲಿಂಗ-ಲಿಂಗಕ್ಕೆ ಆಯತ್ತ- ಅಧೀನವಾಗಿ ಜೀವಿಸುವವನು. ಅಂದರೆ ಲಿಂಗದಾಣತಿಯಾದ ನಡೆನುಡಿಗಳನ್ನು ಪಾಲಿಸುತ್ತಾ ಲಿಂಗವಿರಿಸಿದಂತೆ ಇರ್ಪವನು. ಇದಕ್ಕೆ ಬಸವಣ್ಣನವರ

"ಲಿಂಗವಶದಿಂದ ಬಂದ ನಡೆಗಳು
ಲಿಂಗವಶದಿಂದ ಬಂದ ನುಡಿಗಳು
....
ಲಿಂಗವಿರಿಸಿದಂತಿಪ್ಪುದಲ್ಲದೆ
.... ಕೂ.ಸಂ. ದೇವಾ"

ಎಂಬ ವಚನವನ್ನೂ ನೋಡಬಹುದು. ಹಾಗೂ ಲಿಂಗಾಯತ್ತ > ಲಿಂಗಾಯತ ಎಂಬಲ್ಲಿ ಸೌಲಭ್ಯಾಕಾಂಕ್ಷಿತ್ವ ಎಂಬ ಭಾಷಾನಿಯಮದಂತೆ ಉಚ್ಚಾರಣೆಯಲ್ಲಿ ದ್ವಿತ್ವ ಹೋಗಿರುವುದನ್ನೂ ಊಹಿಸಬಹುದಾಗಿದೆ.

ಲಿಂಗಾಯ್ತ ಎಂದರೆ : ಲಿಂಗದ ಆಯ್ತ-ವ್ರತವನ್ನು ನಡೆಸುವವನು. ಇಲ್ಲಿ 'ಆಯ್ತ' ಎನ್ನುವುದು ನಡೆಸುವವನು ಎಂಬ ಅರ್ಥದಲ್ಲಿ ಬರುವ ಕನ್ನಡದ ತದ್ಧಿತ ಪ್ರತ್ಯಯ. "ನಡೆಯಿಸುವ ನೀತನಿದನೆಂಬೆಡೆಯೊಳ್, ವಳ ವಳ್ಳ [illegible] ಮಕ್ಕು ಆಯ್ತಮುಮಕ್ಕುಂ" (ಶ. ದರ್ಪಣ. ತದ್ದಿತ ಪ್ರಕರಣ ಸೂ: ೨೦೦) ಇದನ್ನೇ (ಆಯ್ತ) ವಿರಳಮಾಡಿದಾಗ ಆಯತ ಎಂದಾಗಿದೆ ಎಂದೂ ಭಾವಿಸುವಂತಿಲ್ಲ. ಏಕೆಂದರೆ ಕನ್ನಡ ವ್ಯಾಕರಣ ನಿಯಮದ ಪ್ರಕಾರ ತದ್ಭವೀಕರಣದಲ್ಲಿ ಸಂಸ್ಕೃತ ಸಂಯುಕ್ತ ಪದಗಳನ್ನು ವಿರಳ ಮಾಡಿಕೊಳ್ಳಬಹುದೇ ಹೊರತು (ಉದಾ: ರತ್ನ- ರತನ, ಯತ್ನ- ಯತನ, ಜತನ) ಕನ್ನಡದ ಪದಗಳನ್ನು ವಿರಳಗೈದು ಸಂಸ್ಕೃತ ಪದಗಳನ್ನಾಗಿ ಮಾಡಿಕೊಳ್ಳುವಂತಿಲ್ಲ. ಆದ್ದರಿಂದ ಆಯ್ತ- ಆಯತ ಇದು ತಪ್ಪು.

ಲಿಂಗವಂತ ಎಂದರೆ : ಲಿಂಗ- ಲಿಂಗವನ್ನು ವಂತ-ಉಳ್ಳವನು. ವಂತ ಎನ್ನುವುದು ಉಳ್ಳವನು ಎಂಬ ಅರ್ಥವನ್ನು ಕೊಡುವ ಕನ್ನಡ ತದ್ಧಿತ ಪ್ರತ್ಯಯ. 'ಇದರೊಳಿದುಂಟೆಂಬರ್ಥದೊಳುದಯಿಪುದು ಉಳ್ಳ ಒಡೆಯ ವಂತ ಶಬ್ದಮಕ್ಕುಂ' (ಶ. ಸೂತ್ರ: ೨೦೦). ಇದು ಸರಿಯಾದ ಕನ್ನಡ ರೂಪ. ಬಸವಾದಿ ಶರಣರೂ ಈ ಶಬ್ದವನ್ನು ಈ ಅರ್ಥದಲ್ಲಿ ಪ್ರಚುರವಾಗಿ ಬಳಸಿದ್ದಾರೆ. ಉರಿಲಿಂಗಪೆದ್ದಿಯಂತೂ ಎಲ್ಲಿಯೂ ವೀರಶೈವ ಪದವನ್ನು ಬಳಸದೆ ಅದಕ್ಕೆ ಸಂವಾದಿಯೆಂಬಂತೆ ಈ ಲಿಂಗವಂತ ಶಬ್ದವನ್ನು ಬಳಸಿದ್ದಾನೆ. (ನೋಡಿರಿ: ಸಂ. ೬) ಉರಿಲಿಂಗಪೆದ್ದಿ ವಚನಗಳು: ೧೪೬೮. ೧೫೧೦ ರಿಂದ ೧೫೧೯ ಹಾಗೂ ೧೫೨೨)

ಆಯತ ಶಬ್ದಕ್ಕೆ ಆಧಾರ ಶ್ಲೋಕ-ವಚನಗಳು

* ಇಷ್ಟಲಿಂಗಂ ಸಮಾಧಾಯ ವಾಮಹಸ್ತೇ ಅಭಿಪೂಜ್ಯ ಚ।
ಸೌಮ್ಯೇತಲ್ಲಿಂಗಮೀಕ್ಷಸ್ವೇತೀಷ್ಟಲಿಂಗಂ ಪ್ರದರ್ಶಯೇತ್॥ (ಕಾ.ಆ.೧-೮೯)

* ಅಂಗದ ಮೇಲೆ ಆಯತವಾದುದೇ ಇಷ್ಟಲಿಂಗ
ಇಷ್ಟಲಿಂಗವಿಡಿದು ಪ್ರಾಣಲಿಂಗ ಸ್ವಾಯತ
ಪ್ರಾಣಲಿಂಗ ಉದಿಸಿದಲ್ಲದೆ ಇಷ್ಟಲಿಂಗವ ಕಾಣಬಾರದು
ಈ ಭೇದವ ಭೇದಿಸಬಲ್ಲಡೆ ಕೂ.ಚ.ಸಂ. ನಲ್ಲಿ ಲಿಂಗೈಕ್ಯವು.
(ಚ.ಬ. ೧೦೫೩ ಆರ್.ಸಿ. ಹಿರೇಮಠ ಸಂಪಾದನೆ)

* ಭಕ್ತಕಾಯ ಮಮಕಾಯ ಕಂಡಾ ಲಿಂಗವು....
........ಅಂಗದ ಮೇಲೆ ಲಿಂಗ ಸ್ವಾಯತವಾಗಿ ನಿರಂತರ ಇಪ್ಪರುನೋಡಾ.........
ಲಿಂಗವಂತರು ಲಿಂಗವನೇ ಚಿಂತಿಸುವುದು.....
ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ (ಉರಿಲಿಂಗಪೆದ್ದಿ)

ಸಂಕೇತಗಳು:

ಪಾ.ಆ : ಪಾರಮೇಶ್ವರಾಗಮ ⎤ ಇಷ್ಟೂ ಆಗಮಗಳು ವೀರಶೈವಾನುಸಂಧಾನ ಸಂಸ್ಥೆ,
ಚ.ಆ : ಚಂದ್ರಜ್ಞಾನಾಗಮ ⎦ ಬೆಂಗಳೂರು ಇದರ ಪ್ರಕಟಣೆಗಳು

ಸೂ.ಆ : ಸೂಕ್ಷ್ಮಾಗಮ

ವಾ.ಆ : ವಾತುಲಶುದ್ಧಾಗಮ, ಪ್ರಾಚ್ಯವಿದ್ಯಾಸಂಶೋಧನಾಲಯ, ಮೈಸೂರು.

ವಿ.ಪ್ರ : ವಿಶೈಷಾರ್ಥ ಪ್ರಕಾಶಿಕೆ, ಮಾಯಿದೇವರು, ಹುಬ್ಬಳ್ಳಿ ಮೂರು ಸಾವಿರ ಮಠ.

ಸಿ.ಶಿ : ಸಿದ್ಧಾಂತ ಶಿಖಾಮಣಿ, ಕಾಶೀನಾಥಗ್ರಂಥಮಾಲಾ ಪ್ರಕಟಣೆ.

ವ.ಸಂ. : ವಚನ ಸಂಪುಟ, ಕರ್ನಾಟಕ ಸರ್ಕಾರದ ಪ್ರಕಟಣೆ.

ಭಾಗ-೨ : ಪದದ ಮೂಲ ಮತ್ತು ಬೆಳವಣಿಗೆ

ವೀರಶೈವದ ಮೂಲವು ಪಾಶುಪತ ಶೈವ ಮತ್ತು ಆಗಮಿಕ ಶೈವಗಳ ಸಮಾಯೋಗದಲ್ಲಿದೆ. (ಪಾಶುಪತ ಶೈವ-ವೇದ ಪೂರ್ವದಲ್ಲಿದ್ದ ಶೈವ. ಆಗಮಿಕ ಶೈವ-ವೇದಾಗಮಗಳ ಕಾಲದಲ್ಲಿ ವಿಕಾಸಗೊಂಡ ಶೈವ)

ವೇದಪೂರ್ವಕಾಲದಲ್ಲಿದ್ದ ಪಾಶುಪತಶೈವಸಂಸ್ಕೃತಿಯು ವೇದಗಳ ಕಾಲಕ್ಕೆ ವೈದಿಕಶೈವಸಂಸ್ಕೃತಿಯಾಗಿ ರೂಪುಗೊಂಡಿತು. ಆರ್ಯರಲ್ಲಿದ್ದ ಹಿಂಸಾತ್ಮಕವಾದ ಯಜ್ಞಯಾಗಾದಿಗಳನ್ನು (ದಕ್ಷನ ಯಜ್ಞಧ್ವಂಸ) ಪ್ರತಿಭಟಿಸಿದ ವೀರಭದ್ರನು ವೀರಶೈವ ಸಂಸ್ಕೃತಿಗೆ ಮೂಲಿಗನಾದ. ವೀರನಿಂದ (ವೀರಭದ್ರನಿಂದ) ವೀರಶೈವ ಎಂಬುವುದು ಬಂದು ಮುಂದೆ ಶತರುದ್ರೀಯ, ತೈತ್ತರೀಯಾರಣ್ಯಕ, ಶ್ವೇತಾಶ್ವತರ, ಮುಂಡಕಾದಿ ಉಪನಿಶತ್ತುಗಳಲ್ಲಿ ಶಿವಲಿಂಗ (ಇಷ್ಟಲಿಂಗ) ಧಾರಣ, ಉಪಾಸನಾದಿ ವಿಧಿ ವಿಧಾನಗಳು ವಿಹಿತವಾಗಿ ವೀರಶೈವ ಸಂಸ್ಕೃತಿ ಬೆಳೆದು ಬಂತು.

ವೀರಶೈವದ ಮೂಲವು ವೇದಶಾಸ್ತ್ರಪುರಾಣಗಳಲ್ಲಿದೆ. ನಂದಿಕೇಶ್ವರನು (ಕ್ರಿ.ಶ. ೨೦೦) ತನ್ನ ಲಿಂಗಧಾರಣೆಯಲ್ಲಿ ಹೀಗೆ ಹೇಳಿದ್ದಾನೆ:

ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷುಚ।
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್॥

ಋಗ್ವೇದೇ : 'ಇಮಾ ರುದ್ರಾಯ ತವಸೇ ಕಪರ್ದಿನೇಽಕ್ಷಯದ್ವೀರಾಯ ಪ್ರಭರಾಮಹೇ...' ಇತ್ಯಾದಿ'

ಶಾಸ್ತ್ರೇ : ಶ್ರೀಕಂಠಭಾಷ್ಯದಿಗಳಲ್ಲಿ.

ಪುರಾಣೇ : 'ಯೋ ಹಸ್ತಪೀಠೇ.....' ಇತ್ಯಾದಿ (ಇದೇ ಪ್ರಬಂಧದ ಪು. ೯ ನೋ)

ಇತಿಹಾಸೇ : ಮಹಾ ಭಾರತದ ಅನುಶಾಸನ ಪರ್ವದಲ್ಲಿ ಬರುವ

ಯುಧಿಷ್ಠಿರ-ಭೀಷ್ಮರ ಸಂಭಾಷಣೆ ಇತ್ಯಾದಿ.

ಯುಧಿಷ್ಠಿರ - ಕಿಮಾಹುರ್ಭರತಶ್ರೇಷ್ಠ ಪಾತ್ರಂ ವಿಪ್ರಾಃ ಸನಾತನಾಃ।
ಬ್ರಾಹ್ಮಣಂ ಲಿಂಗಿನಂ ಚೈವ ಬ್ರಾಹ್ಮಣಂ ವಾಪ್ಯಲಿಂಗಿನಮ್॥

ಭೀಷ್ಮ - ಸ್ವವೃತ್ತಿಮಭಿಪನ್ನಾಯ ಲಿಂಗಿನೇ ಚೇತರಾಯ ಚ।
ದೇಯಮಾಹುರ್ಮಹಾರಾಜ ಉಭಾವೇತೌ ತಪಸ್ವಿನೌ॥

ಆಗಮೇ : ಪದನಿರ್ವಚನ ಸಂದರ್ಭದಲ್ಲಿ ಹೇಳಿದೆ.

ವೀರಶೈವದ ಬೆಳವಣಿಗೆ: ವೀರಶೈವದ ಮೂಲವು ವೇದ ಮತ್ತು ವೇದಪೂರ್ವಕಾಲದಿಂದ ಕಂಡುಬಂದರೂ ಅದರ ಬೆಳವಣಿಗೆಯು ಪ್ರಾರಂಭವಾದದ್ದು ತಾಂತ್ರಿಕ ದರ್ಶನಗಳ ಕಾಲದಲ್ಲಿ, ಮತ್ತು ಪೂರ್ಣವಾಗಿ ಬೆಳೆದು ನಿಂತದ್ದು ಶಿವಾಗಮಗಳ ಕಾಲದಲ್ಲಿ, ಇದು ವೀರಶೈವ ವೈಷ್ಣವ ಶಾಕ್ತ ಸೌರ ವಿನಾಯಕ ಕಾಪಾಲಿಕ ಎಂಬ ಆಗಮ ಸಂಪ್ರದಾಯದ ಷಡ್ದರ್ಶನಗಳಲ್ಲಿ ವೀರಶೈವವೂ ಒಂದು ಮತ್ತು ಮೊದಲನೆಯದು.

'ವೀರಶೈವಂ ವೈಷ್ಣವಂ ಚ ಶಾಕ್ತಂ ಸೌರಂ ವಿನಾಯಕಂ।
ಕಾಪಾಲಿಕಮಿತಿ ವಿಜ್ಞೇಯಂ ದರ್ಶನಾನಿ ಷಡೇವ ಹಿ॥'

(ಪರಮೇಶ್ವರಾಗಮ ೧ನೇ ಪಟಲ ಶ್ಲೋ ೨೨)

ಇದನ್ನೇ ಕೆಳದಿ ಬಸವಪ್ಪ ನಾಯಕನ ಪ್ರಧಾನಾಮಾತ್ಯನಾದ ಷಡಕ್ಷರ ಮಂತ್ರಿಯು (೧೭೪೯-೧೭೫೫) ತನ್ನ 'ವೀರಶೈವ ಧರ್ಮ ಶಿರೋಮಣಿ', ಎಂಬ ಗ್ರಂಥದಲ್ಲಿ ಉದ್ಧೃತ ಮಾಡಿದ್ದಾನೆ. ಮತ್ತು ಈ ವೀರಶೈವವು ಎಲ್ಲ ದರ್ಶನಗಳಿಗಿಂತಲೂ ಮೊದಲನೆಯದು ಮತ್ತು ಎಲ್ಲಾ ಶೈವಶಾಖೆಗಳಿಗೂ ಮೂಲವೆಂಬುದಾಗಿ ತಿಳಿಸಿದ್ದಾನೆ.

'ತೇಷ್ವಾದ್ಯದರ್ಶನಮಿದಂ ಕಿಲ ವೀರಶೈವಂ
ತತ್ಸಪ್ತಧಾ ಭವತಿ ತತ್ಪ್ರಮಶೋ ವದಾಮಿ॥
ಯತ್‌ಜ್ಞಾನತಃ ಪಶುಜನೋಽಪಿ ಭವೇದ್ವಿಮುಕ್ತಃ
ಪಾಶಾನ್ಮಹೇಶಪದಪಂಕಜಭಕ್ತಿಲಾಭಾತ್'॥

(ವೀ.ಧರ್ಮಶಿರೋಮಣಿ, ಪು.೧, ಶ್ಲೋ.೪)

ಅಡಿಟಿಪ್ಪಣಿ: ಈ ಎಲ್ಲಾದರ್ಶನಗಳಿಗೂ ಶಿವನೇ ಮೂಲಿಗ.

ಷಡ್‌ದರ್ಶನಾದಿದೇವೋ ಹಿ ಮಹಾದೇವೋ ನ ಸಂಶಯಃ।
ಮಂತ್ರಪೂಜಾದಿಭಿನ್ನಾನಾಂ ಮೂಲಂ ಪರಶಿವಸ್ತಥಾ।। (ಶಿವಧರ್ಮೇ)

ಅನಾದಿಶೈವ ಆದಿಶೈವ ಅನುಶೈವ ಮಹಾಶೈವ ಯೋಗಶೈವ ಜ್ಞಾನಶೈವ ವೀರಶೈವ ಇವೇ ಸಪ್ತವಿಧ ಶೈವಗಳು. ಶಿವಲಿಂಗಪೂಜೆ ಮತ್ತು ಜಂಗಮಾರ್ಚನೆಯೇ ಪ್ರಧಾನ ಕರ್ಮವುಳ್ಳ ಮೊದಲ ಆರು ಶೈವವು ಕ್ರಿಯಾಭೇದದಿಂದ ಕೊನೆಯದಾದ ವೀರಶೈವಕ್ಕಿಂತಲೂ ಭಿನ್ನವೆಂಬಂತೆ ತೋರಿದರೂ ಅವುಗಳು ವೀರಶೈವದ ಸೋಪಾನಗಳೇ. ಅಥವಾ ಅವಾರೂ ವೀರಶೈವವೆಂಬ ಮೇರು ಮಣಿಯೊಡನೆ ಪೋಣಿಸಿದ ಆರು ಮಣಿಗಳು. ಆದ್ದರಿಂದ ಆ ಆರನ್ನೂ ಸಾಧಿಸಿಯೇ ವೀರಶೈವನಾಗಬೇಕು. ಇನ್ನೂ ಒಂದು ವಿಶೇಷವೆಂದರೆ ಪರಿಸಂಖ್ಯೆಯಿಂದ ಈ ಆರೂ ಶೈವದ ಗುಣಗಳು ಭಕ್ತಾದಿ ಆರುಸ್ಥಲಗಳಲ್ಲಿ ಸಮಾಯೋಗಗೊಂಡಿವೆ. ಆದ್ದರಿಂದ ಆರೂ ಶೈವಗಳ ಸಮಾಯೋಗವೇ ವೀರಶೈವ.

ಏವಂ ಕ್ರಮೇಣ ಮತಭೇದಮಣಿಪ್ರಕ್ಲೃಪ್ತ
ಸೋಪಾನಪಂಕ್ತಿಮಧಿರುಹ್ಯ ಸ ವೀರಶೈವಃ।
ಅತ್ಯುನ್ನತೇ ಶಿವಮತೇ ಚ ಪದಂ ನಿಧಾಯ
ಕಿಂ ತುಚ್ಛಭೋಗಫಲದೇ ನಿಪತೇತ್ ಭವಾಬ್ಧೌ।।

(ವೀರಶೈವ ಧರ್ಮಶಿರೋಮಣಿ,
ಪರಿಚ್ಛೇದ. ೧. ಶ್ಲೋ ೩,೪)

ಈ ವಿಷಯವನ್ನೇ ಚನ್ನ ಬಸವಣ್ಣನವರೂ ನಿರೂಪಿಸಿದ್ದಾರೆ. ಅವರ ವಚನ ಸಂಖ್ಯೆ ೪೬೪ರಲ್ಲಿ (ಆರ್. ಸಿ. ಹಿರೇಮಠ ಅವರ ಸಂಪಾದನೆ). ಶೈವ ಶಾಕ್ತೇಯ ವೈಷ್ಣವ ಗಾಣಾಪತ್ಯ ಸೌರ ಕಾಪಾಲಿಕ ಮತಗಳ ವಿವರಣೆಕೊಟ್ಟು ವೀರಶೈವ ಅದಕ್ಕಿಂತಲೂ ಹೇಗೆ ಭಿನ್ನವೆಂಬುದನ್ನು ತೋರಿಸಿದ್ದಾರೆ. ಮತ್ತು ೫೨೮ ನೇ ವಚನದಲ್ಲಿ ಭಕ್ತಿಸ್ಥಲಕ್ಕೆ ಸಲ್ಲದ ಕಾರಣ ಶೈವದ ಶಾಖೆಗಳಾದ ಪಾಶುಪತ ಕಾಳಾಮುಖಾದಿಗಳು ವೀರಶೈವಧರ್ಮದ ಹೊರಗು ಎಂಬುದನ್ನೂ ತಿಳಿಸಿದ್ದಾರೆ.

ಶೈವ ಸ್ವೈವೆರಗಾದ ಪಾಶುಪತಿ ಪಥವನರಿಯ
ಕಾಳಾಮುಖಿ ಕಂಗೆಟ್ಟ ಮಹಾವ್ರತಿ ಮದವೇರಿದ
ಸಂನ್ಯಾಸಿ ಪಾಷಂಡಿಯಾದ ಕಾಪಾಲಿ ಮರುಳಾಗಿ ತಿರುಗಿದ
ಈ ಆರೂ ಭಕ್ತಿಪಥಕ್ಕೆ ಸಲ್ಲವು ಕೇಳಿರಣ್ಣಾ,
ಏಳೇಳು ಭವದಲ್ಲಿ ಭವಿಯಾಗಿ ಬಂದು
ಶ್ರೀಗುರುಕರುಣ ಕಟಾಕ್ಷನಿರೀಕ್ಷಣೆಯಿಂದ
ಪ್ರಾಣದಮೇಲೆ ಲಿಂಗಪ್ರತಿಷ್ಠೆಯ ಮಾಡಿಕೊಂಡು
ಆರರಿಂದ ವೀರಿದ ಸ್ಥಲವಿಟ್ಟು ವೀರಮಾಹೇಶ್ವರತ್ವವ ಪಡೆದು
..................ಕೂಡಲಚನ್ನಸಂಗಮದೇವಾ.

(ಇಲ್ಲಿ ಶೈವ=ತಮಿಳುಶೈವ, ಸಂನ್ಯಾಸೀ=ಕಾಶ್ಮೀರ ಶೈವ) ಈ ಮೇಲೆಹೇಳಿದ ಪಾಶುಪತಶೈವದ ಆರೂ ವಿಧಗಳಲ್ಲಿ ಯದ್ಯಪಿ ಭಕ್ತಿಯಿದ್ದರೂ ಅದು ಮುಗ್ಧಶೈವ ಭಕ್ತಿ

ಪ್ರೌಢಭಕ್ತಿಯಲ್ಲ ಅರ್ಥಾತ್ ಜ್ಞಾನ ಕ್ರಿಯಾತ್ಮಕವಾದ ಷಟ್ಸ್ಥಲ ಭಕ್ತಿಯಲ್ಲ. ಆದ್ದರಿಂದಲೇ ಆವು ವೀರಶೈವದ ಹೊರಗು. ಆದರೂ ಇಲ್ಲಿ ವೀರಶೈವದ ಸಮಾಯೋಗವು ಸೂಚ್ಯವಾಗಿ ಕಂಡುಬರುವುದನ್ನು ಕಡೆಗಣಿಸುವಂತಿಲ್ಲ).

ತೋಂಟದ ಸಿದ್ಧಲಿಂಗೇಶ್ವರರು ತಮ್ಮ ಷಟ್ಸ್ಥಲ ಜ್ಞಾನಾಮೃತ ಸಾರದಲ್ಲಿ ಶರಣರ ಆಚರಣೆಯು ವೀರಶೈವಾಚರಣೆಯೇ ಎಂಬುದನ್ನು ನಿರೂಪಿಸುವಾವಸರದಲ್ಲಿ ಹಿಂದೆ ಹೇಳಿದ ಆಗಮ ಸಂಪ್ರದಾಯದ ಷಡ್ದರ್ಶನಗಳನ್ನು ಅವುಗಳಾಚರಣೆಯನ್ನು ಅತಿಗಳೆದು ನಂತರ ಆದಿ ಮಹಾ ಅನು ಅಂತರ ಅಂತ್ಯ ಪ್ರವರಗಳೆಂಬ ಶೈವಗಳ ಆದ್ಯಂತವನ್ನು ತಿಳಿದುನೋಡಿ ಶೈವಭಾಗೆಯನ್ನು ನಿವೃತ್ತಿ ಮಾಡಿ ವೀರಶೈವವನ್ನು ಸಂಪಾದಿಸಬೇಕೆನ್ನುತ್ತಾರೆ. (ಷಟ್ಸ್ಥಲಜ್ಞಾನಾಮೃತಸಾರ: ವಚನ ೯)

ವೀರಶೈವದ ಬೆಳವಣಿಗೆಯು ಸಿದ್ಧಾಂತಶಿಖಾಮಣಿಯಲ್ಲಿ ಪೂರ್ಣತೆಯನ್ನು ಪಡೆದಿದೆ. ಷಟ್ಸ್ಥಲ ಸಿದ್ಧಾಂತಕ್ಕೆ ವೀರಶೈವವೇ ಮೂಲದ್ರವ್ಯವೆಂಬುದನ್ನು ಸಾಬೀತುಪಡಿಸಿದೆ. ಆರುಸ್ಥಲಗಳ ಭೇದಕ್ಕೆ ವೀರತ್ವವೇ ಕಾರಣವೆಂಬುದನ್ನು ತೋರಿಸಿ ಕೊಟ್ಟಿದೆ. 'ವೀರಶೈವಾಸ್ತು ಷಡ್ಭೇದಾಃ' ಎಂಬ ಸಿದ್ಧಾಂತ ಶಿಖಾಮಣಿಯ ವಚನವೇ ಇದಕ್ಕೆ ಸಾಕ್ಷಿ. ಈ ವೀರಶೈವ ಎಂಬುದು ರೇಣುಕಾಗಸ್ತ್ಯರಷ್ಟು (ಕ್ರಿ.ಪೂ. ೨೦೦) ಪ್ರಾಚೀನ. ಅಷ್ಟು ಹಿಂದೆಯೇ ವೀರಶೈವದ ಪೂರ್ಣ ವಿಕಾಸವನ್ನು ನೋಡಬಹುದಾಗಿದೆ.

ವೀರಶೈವವು ವಿಷಯದ ಸಾಕ್ಷಿಗಾಗಿ ಆಗಮದ ಶ್ಲೋಕಗಳನ್ನು ಉದಾಹರಿಸುವುದನ್ನು ಶಿಷ್ಟಸಂಪ್ರದಾಯವೆಂದು ಭಾವಿಸಿರುವ ವಚನಕಾರರಿಗಿಂತಲೂ ಸು. ೩೦೦-೪೦೦ ವರ್ಷಗಳಷ್ಟು ಹಿಂದೆಯೇ ವಿಕಾಸವಾಗಿತ್ತೆಂದು ಭಾವಿಸಬಹುದಾದರೂ ಅದು ಢಾಳವಾಗಿ ಪ್ರಕಾಶಿಸಿದ್ದು ಶಿವಶರಣರ ವಚನಗಳಲ್ಲಿ. ಬಸವಾದಿ ಶರಣರು ಈ ವೀರಶೈವ ಎಂಬುದನ್ನು ಸಾಮಾನ್ಯವಾಗಿ ಮೂರು ನೆಲೆಗಳಲ್ಲಿ ಬಳಸಿದ್ದಾರೆ. 'ವೀರ' ಅದೊಂದು ವ್ರತ ಎನ್ನುವುದು ಒಂದನೆಯ ನೆಲೆ. ಧರ್ಮ ಎನ್ನುವುದು ಎರಡನೆಯ ನೆಲೆ.ಆ ಧರ್ಮದ ಪ್ರಧಾನ ಲಕ್ಷಣವಾದ (ಚಿಹ್ನೆ) ಲಿಂಗ ಹಾಗೂ ಲಿಂಗವಂತ ಶಬ್ದದೊಡನೆಯಿರುವ ಸಂಬಂಧ ಮೂರನೆಯ ನೆಲೆ. ಇದಕ್ಕೆ ಬಸವಣ್ಣನವರ ವಚನ: ೯೬೬, ೯೭೨, ೧೦೯೮, ೧೩೬೬, ೧೧೪೮, ೪೪೫, ೯೭೭ ಮುಂತಾದವುಗಳನ್ನು ಚನ್ನಬಸವಣ್ಣನವರ ೧೫೦೪, ೪೫೩, ೩೬೫, ೬೦೬, ೧೬೩, ೮೦ ೨೨೮, ೧೨೧, ೩೯೧, ೬೭೧ ೧೬೩, ೧೦೪, ೧೦೫, ೫೨೮, ೪೩೨ ಸಂಖ್ಯೆಯ ವಚನಗಳನ್ನು, ಸಿದ್ಧರಾಮದೇವರ ೧೧೬೬, ೧೧೬೭ನೇ ವಚನಗಳನ್ನು ಮಡಿವಾಳ ಮಾಚಿದೇವರ ೨೦೯೨ ನೇ ವಚನಗಳನ್ನು ನೋಡಬಹುದು. (ಬಸವಣ್ಣ ಮತ್ತು ಚನ್ನಬಸವಣ್ಣನವರ ಸಂಪುಟಗಳು ಆರ್.ಸಿ. ಹಿರೇಮಠ ಸಂಪಾದಿತ, ಉಳಿದವು ಸರ್ಕಾರದ ಪ್ರಕಟಣೆ.)

ಶಿವಶರಣರ ವಚನಗಳಲ್ಲಿ ವೀರಶೈವದ ಸಮೃದ್ಧವಾದ ಬೆಳೆಯನ್ನು ಕಾಣಬಹುದು. ಆ ಬೆಳೆಯ ಸಮೃದ್ಧಿಯನ್ನು ಮನಗಾಣಿಸುವುದಕ್ಕಾಗಿ ಎಲ್ಲಾ ವಚನ ಸಂಪುಟಗಳಿಂದಾಯ್ದು ಆಧಾರದೊಡನೆ ಕೆಲವು ವಚನಗಳ ಸಾಲುಗಳನ್ನಿಲ್ಲಿ ಕೊಡಲಾಗಿದೆ.

ಸಂಪುಟ-೧ : 'ಸ್ವಯಲಿಂಗಾರ್ಚನೋಪಚಾರಾರ್ಪಿತ ಪ್ರಸಾದಭೋಗಿಯಾಗಿ ವೀರಶೈವ ಸಂಪನ್ನನೆನಿಸಿ ಲಿಂಗವಂತನಾದ ಬಳಿಕ.... ಕೂ. ಸಂಗಮದೇವಾ' (ಬ.ವ. ೯೬೬)

ಸಂಪುಟ-೨ : '...ನೀನು ಮರ್ತ್ಯದಲ್ಲಿ ಹೋಗಿ ಶ್ರೀ ವೀರಶೈವಾಚಾರಕ್ಕೆ ಪ್ರಥಮಾಚಾರ್ಯ ಪುರುಷನಪ್ಪೆ, ನಿನ್ನಿಂದ ಮರ್ತ್ಯಲೋಕದ ಮಹಾಗಣಂಗಳೆಲ್ಲರೂ ಕೃತಾರ್ಥರಾದಪ್ಪರು...'
(ಪ್ರಭುದೇವ ಪಿಂಡಸಂಭವಗದ್ಯ)

ಸಂಪುಟ-೩ : 'ವೀರಶೈವ ಸಂಪನ್ನರಾದ ಸದ್ಭಕ್ತಶರಣ ವೀರಮಾಹೇಶ್ವರರಾದೊಡೆಯೂ... ಕೂಡಲ ಚನ್ನಸಂಗಮದೇವಾ'
(ಚ.ಬಸವಣ್ಣ ೧೫೬೪)

ಸಂಪುಟ-೪ : ಚತುರ್ವರ್ಣಾತೀತನೇ ವೀರಶೈವನೋಡಾ .... ಕಪಿಲ ಸಿದ್ಧಮಲ್ಲಿಕಾರ್ಜನಾ'
(ಸಿದ್ಧರಾಮ ೧೭೦೧)

ಸಂಪುಟ-೫ : ಶಿವಶಿವಾ.... ನಮ್ಮ ಬಸವಣ್ಣನು ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಅವತರಿಸಿ ವೀರಶೈವ ಮಾರ್ಗವ ನರುಪುವುದಕೆ ಚೆನ್ನಮಲ್ಲಿಕಾರ್ಜುನಾ'
(ಅಕ್ಕಮಹಾದೇವಿ ೩೭೮)

ಸಂಪುಟ-೬ : ಪ್ರಾಣಲಿಂಗಾರ್ಚಕನಾದ ಲಿಂಗಾಂಗ ಸಂಬಂಧಿಯೇ... ವೀರಶೈವನೆಂದರಿವುದು......'
(ಆದಯ್ಯ ೯೩)

ಸಂಪುಟ-೭ : '.....ಸದ್‌ವ್ರತವನಾಚರಿಸುತ್ತ ನಿಜವೀರಶೈವ ಸಂಪನ್ನರಪ್ಪ ಭಕ್ತಜಂಗಮಾರಾಧ್ಯ..... ಸಿಮ್ಮಲಿಗೆ ಚನ್ನರಾಮ'
(ಚಂದಿಮರಸ ೫೫೦)

ಸಂಪುಟ-೮ : 'ದ್ವೈತಾದ್ವೈತವೆಂಬ ಉಭಯಕರ್ಮವನತಿಗಳೆದ ಅಂಗಲಿಂಗಸಂಬಂಧವನುಳ್ಳ ನಿಜವೀರಶೈವ ಸಂಪನ್ನರು ....ಕಲಿದೇವರದೇವಾ'
(ಮಡಿವಾಳ ಮಾಚಿದೇವ ೭೩೪)

ಸಂಪುಟ-೯ : 'ವೀರಶೈವವೆಂಬ ಜಯಸ್ತಂಭವಂ ಚಿತ್ರದಲಿ ಬರೆದು ....ಜ್ಞಾನಜ್ಯೋತಿಯ ಬೆಳಕಿನಲ್ಲಿ ಸಂಚಾರ ಮಾಡುವಾತನೆ ಮಾಹೇಶ್ವರನಯ್ಯಾ ಮಹಾಲಿಂಗಶಶಿಮೌಳಿಸದಾಶಿವ'
(ಜ್ಞಾತ ಶರಣ ೧೩೪೯)

ಸಂಪುಟ-೧೦ : ಅಯ್ಯಾ... ವರವೀರಶೈವ ಷಟ್ಸ್ಥಲಾಚಾರ ಘನಚಕ್ರವರ್ತಿಶ್ರೀ ಗುರುದೇವನು... ....ಸಂಗಮಬಸವೇಶ್ವರ'
(ಗುರುಸಿದ್ಧದೇವರು ೭೧೫)

ಸಂಪುಟ-೧೧ : "ಇಂತು ವೀರಶೈವದ ಆದ್ಯಂತವನು ಸಂಪಾದಿಸಿ ....ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೆ'
(ತೋಂ.ಸಿ. ೩)

ಸಂಪುಟ-೧೨ : ಅಯ್ಯಾ..... ವೀರಶೈವೋತ್ತಮತೆಯೆಂಬ ಅನುಗ್ರಹವೇ ಇಷ್ಟಲಿಂಗವಾಗಿ... ನಿರಂಜನ ಚನ್ನಬಸವಲಿಂಗಾ'
(ದೇಶಿಕೇಂದ್ರ ಸಂಗನಬಸವಯ್ಯ ೪೯)

ಸಂಪುಟ-೧೩ : '.....ತನ್ನಂ ಮರೆತುಲಿಂಗವನರಿದಿಪ್ಪುದೇ
ವೀರಶೈವ ಮತವು... ಮಹಾಘನದೊಡ್ಡದೇಶಿಕಾರ್ಯ ಪ್ರಭುವೆ'
(ಮುಮ್ಮಡಿ ಕಾರ್ಯೇಂದ್ರ: ೧೧೦೫)

ಸಂಪುಟ-೧೪ : 'ಸದ್ಗುರು ಕಾರುಣ್ಯವ ಪಡೆದು ಲಿಂಗಾಂಗ ಸಮರಸವುಳ್ಳ
ವೀರಶೈವ ಭಕ್ತಮಾಹೇಶ್ವರನೆನಿಸಿಕೊಂಡ ಬಳಿಕ... ಅಖಂಡೇಶ್ವರಾ'
(ಷಣ್ಮುಖಸ್ವಾಮಿ ೮೦೯)

ಸು. ಒಟ್ಟು ೨೯ ಮಂದಿ ಶಿವಶರಣರು ತಮ್ಮ ಒಟ್ಟು ೧೬೧ ವಚನಗಳಲ್ಲಿ ೧೭೦ ಸಲ ವೀರಶೈವ ಪದವನ್ನು ಧರ್ಮವಾಚಕವಾಗಿ ಬಳಸಿದ್ದಾರೆ. ಆ ಎಲ್ಲಾ ವಚನಗಳನ್ನು ವಿಸ್ತಾರದ ಭಯದಿಂದ ಬರೆಯದೇ ಈ ಪಟ್ಟಿ ರೂಪದಲ್ಲಿ ಕೊಡಲಾಗಿದೆ.

ಸಂಪುಟ	ವಚನಕಾರರು	ವಚನಸಂಖ್ಯೆ
೧.	ಬಸವಣ್ಣನವರು	೯೬೬, ೧೦೯೮, ೧೧೯೬, ೧೨೦೨= ೪
೨.	ಅಲ್ಲಮಪ್ರಭು	೬೯೪, ೭೭೨, ೭೯೭, ೧೩೧೧, ೧೩೫೨, ೮೧೪=೬
೩.	ಚನ್ನಬಸವಣ್ಣ	೨೩೯, ೮೫೯, ೮೬೩, ೮೭೮, ೮೭೯, ೮೮೦, ೯೩೧, ೯೩೫, ೯೫೦, ೯೫೨, ೧೧೯೧, ೧೪೪೦, ೧೩೯೫, ೧೧೨೨, ೧೫೪೪, ೧೬೧೨, ೧೬೨೭, ೧೬೩೧, ೧೬೮೮=೧೯
೪.	ಸಿದ್ಧರಾಮಶಿವಯೋಗಿ	೩೬೬,೯೧೪, ೧೧೬೭, ೧೪೯೮, ೧೩೫೪=೫
೫.	೧. ಅಕ್ಕಮಹಾದೇವಿ	೩೦, ೨೫೮, ೩೦೯
	೨. ಅಮುಗೆ ರಾಯಮ್ಮ	೬೦೫=೪
೬.	೧. ಅಂಬಿಗರಚೌಡಯ್ಯ	೮೫, ೬೨೬, ೨೨೫
	೨. ಅರಿವಿನ ಮಾರಿತಂದೆ	೩೯೦, ೩೯೧
	೩. ಆದಯ್ಯ	೯೯೪, ೧೦೮೮, ೧೧೧೧, ೧೧೧೨=೯
೭.	೧. ಕೋಲಶಾಂತಯ್ಯ	೧೪೭,
	೨. ಘಟ್ಟಿವಾಳಯ್ಯ	೫೨೭, ೫೪೨
	೩. ಚಂದಿಮರಸ	೫೫೪=೪
೮.	೧. ಪ್ರಸಾದಿಭೋಗಣ್ಣ	೧೩,೧೦೩
	೨. ಬಹುರೂಪಿಚೌಡಯ್ಯ	೧೪೭
	೩. ಮಡಿವಾಳ ಮಾಚಿದೇವ	೪೬೩, ೪೬೪, ೪೬೭,೫೫೬, ೬೦೯, ೬೩೮, ೭೩೧
	೪. ಮೆರೆಮಿಂಡಯ್ಯ	೧೩೯
	೫. ಮೋಳಿಗೆ ಮಾರಯ್ಯ	೧೪೮೬, ೩೦೯೨=೧೩

೯.	೧. ಶಾಂತವೀರೇಶ್ವರಾ (ಅಂಕಿತ)	೧೩೮೬, ೧೪೦೦ ರಿಂದ ೧೪೩೩= ೩೫
೧೦.	೧. ಅಜ್ಞಾತ ಶರಣರು	೨,೧೧,೧೧೧
	೨. ಕಾಡ ಸಿದ್ಧೇಶ್ವರರು	೨೮೧, ೩೪೧
	೩. ಗುರುಸಿದ್ಧದೇವರು	೬೮೪, ೬೯೦,೬೯೧, ೬೯೨, ೭೦೫, ೭೦೬, ೭೩೭, ೭೩೮=೧೩
೧೧.	೧. ತೋಂಟದ ಸಿದ್ಧಲಿಂಗೇಶ್ವರರು	೮,೯, ೫೭,೭೧
	೨. ಇಮ್ಮಡಿಗುರು ಸಿದ್ಧಸ್ವಾಮಿ	೧೪೨೩= ೫
೧೨.	ದೇಶೀಕೇಂದ್ರ ಸಂಗನಬಸವಯ್ಯ	೪೯, ೨೧೮, ೨೨೯, ೨೭೫= ೫
೧೩.	ಮುಮ್ಮಡಿ ಕಾರ್ಯೇಂದ್ರ	೨೩೭೬, ೨೪೦೬=೨
೧೪.	೧. ಮೂರುಸಾವಿರ ಮುಕ್ತಿಮುನಿ	೨೪೧೬, ೨೪೨೪, ೨೪೨೬, ೨೪೩೧, ೨೪೩೨, ೨೪೪೬, ೨೪೪೮, ೨೪೪೯, ೨೪೫೬, ೨೪೫೭, ೨೪೫೯, ೨೪೬೫, ೨೪೬೩, ೨೪೬೬, ೨೪೬೮, ೨೪೭೦, ೨೪೭೭, ೨೪೭೮, ೨೪೮೧, ೨೪೮೫, ೨೪೮೭, ೨೪೯೮, ೨೫೧೧
	೨. ಷಣ್ಮುಖ ಶಿವಯೋಗಿ	೩೨೦೪, ೨೮೬೬, ೩೦೮೬
	೩. ಸಂಗನಬಸವೇಶ್ವರ ದೇವರು	೩೨೪೦
	೪. ಹೇಮಗಲ್ಲ ಹಂಪ	೩೫೫೨= ೨೮

ಇದರ ಅಂದಾಜು ಮೂರನೆಯ ಒಂದು ಭಾಗದಷ್ಟು ಜಾತಿಸೂಚಕವಾಗಿ ಲಿಂಗವಂತ ಶಬ್ದವನ್ನು ಬಳಸಿದ್ದಾರೆ. 'ಲಿಂಗಾಯತ' ಶಬ್ದ ಮಾತ್ರ ಕೇವಲ ಒಂದೇ ಒಂದು ವಚನದಲ್ಲಿದ್ದು ದೀಕ್ಷೆಯಲ್ಲಿ ಒಂದು ವಿಧ ಎಂಬ ಅರ್ಥದಲ್ಲಿ ಬಳಸಲಾಗಿದೆ.

ಲಿಂಗವಂತ ಶಬ್ದ ಮುಲ:

ಲಿಂಗವಂತ ಶಬ್ದವು ವೇದಾಗಮಗಳಲ್ಲಿ ಕಂಡು ಬರುವ ಲಿಂಗಿ ಶಬ್ದದ ಸಂವಾದಿಯಾಗಿದೆ. ಲಿಂಗೀ ಎಂದರೂ ಲಿಂಗವುಳ್ಳವನು ಅಥವಾ ಲಿಂಗವಂತ ಎಂದೇ ಅರ್ಥ.

> ಲಿಂಗೀ ಲಿಂಗಿಸಹವಾಸೀ ಲಿಂಗಿನಾ ಸಹ ವರ್ತಯೇತ್
> ಲಿಂಗಿನಾ ಸಹಭುಂಜೀತ ಲಿಂಗಯೋಗೋ ನ ಸಂಶಯಃ
> 'ಲಿಂಗವಂತರು ಲಿಂಗವಂತರಲ್ಲಿಯೇ ಸಂಗವ ಮಾಡುವುದು
> ಲಿಂಗ ಬಾಹ್ಯರ ಸಂಗವ ಮಾಡಲಾಗದು' (ಉರಿಲಿಂಗಪೆದ್ದಿ)

ಲಿಂಗವಂತ ಶಬ್ದದ ಬೆಳವಣಿಗೆ (ವಿಕಾಸ) ಬಸವಾದಿ ಶರಣರ ವಚನಗಳಲ್ಲಿ ಸಮೃದ್ಧವಾಗಿದೆ. ಬಸವಣ್ಣನವರು:

ಲಿಂಗ ವಶದಿಂದ ಬಂದ ನಡೆಗಳು
ಲಿಂಗ ವಶದಿಂದ ಬಂದ ನುಡಿಗಳು
ಲಿಂಗವಂತರು ನಾವು ಅಂಜಲದೇಕೋ
ಲಿಂಗವಿರಿಸಿದಂತಿಪ್ಪುದಲ್ಲದೆ
ಕೂಡಲಸಂಗಮದೇವ ಭಕ್ತರಭಿಮಾನ ತನ್ನದೆಂಬುದಾಗಿ (೯೮೫)

ಮತ್ತು ೧೧೪೮, ೬೮೫, ೧೫೫೧, ೬೦೯, ೬೫೩, ೭೬೩, ೧೦೯೮, ೯೯೯, ೧೧೪೪, ೮೯೮, ೯೪೬, ೯೬೧ ಮುಂತಾದ ವಚನಗಳನ್ನು ನೋಡಬಹುದು. ಚನ್ನಬಸವಣ್ಣನವರ ೨೦೭, ೪೯೬, ೧೧೨೯, ೮೦೦, ೫೯೫, ૩೭೬ ಮುಂತಾದ ವಚನಗಳನ್ನು ಮಡಿವಾಳ ಮಾಚಿದೇವನ ೪೪೦, ೬೪೧ ಮುಂತಾದ ವಚನಗಳನ್ನು ನೋಡಬಹುದಾಗಿದೆ.

ಲಿಂಗಶಬ್ದದ ಪೂರ್ಣಬೆಳವಣಿಗೆಯನ್ನು ಉರಿಲಿಂಗಿಪೆದ್ದಿಯ ಹತ್ತಾರು ವಚನಗಳಲ್ಲಿ ಸ್ಪಷ್ಟವಾಗಿ ನೋಡಬಹುದು. ಉರುಲಿಂಗಿಪೆದ್ದಿಯ ವಚನಗಳು ೧೪೬೮, ೧೫೧೦ ರಿಂದ ೧೫೫೯ ಮತ್ತು ೧೫೨೨.

ಲಿಂಗಾಯತ: ಶಬ್ದದ ಮೂಲವಾಗಲೀ ಬೆಳವಣಿಗೆಯಾಗಲೀ ವೇದಾಗಮ ವಚನಗಳಲ್ಲೆಲ್ಲಿಯೂ ಕಂಡುಬರುವುದಿಲ್ಲ. ಬಹುಶಃ ಈ ಲಿಂಗಾಯತ ಪದ ಆಡಳಿತ ಭಾಷೆಯಾಗಿದ್ದ ಉರ್ದುವಿನ ಪ್ರಭಾವದಿಂದ ಬಂದಿರಬಹುದು. (ತತ್ರಾಪಿ ಬಹುಮನೀ ರಾಜ್ಯವೆನಿಸಿದ್ದ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಆಡಳಿತ ಭಾಷೆಯಾಗಿದ್ದ ಉರ್ದುವಿನ ಪ್ರಭಾವದ ಗಾಢತೆ ಹೆಚ್ಚೆಂಬುದು ಸರ್ವವಿದಿತ). ಉದಾ. ಪಂಚಾಯತ್ ಭಾಗಾಯತ್ ಇದ್ದಹಾಗೆ. ಇಂಥ ಶಬ್ದಗಳ ತಪ್ಪು ಸಾಹಚರ್ಯ (False Association) ಎಂಬ ಭಾಷಾಶಾಸ್ತ್ರ ನಿಯಮದಂತೆ ಹುಟ್ಟಿಬಂದ ಶಬ್ದವಿರಬಹುದು. ಲಿಂಗಾಯತ್ ಲಿಂಗಾಯತ ಹೀಗೆ.

ಭಾಗ-೩ : ಯಾವುದು ಸರಿ?

ಶಿವಧರ್ಮವನ್ನು ನಿರ್ದೇಶಿಸುವ ಈ ಪದಗಳಲ್ಲಿ ಯಾವುದು ಸರಿ? ವೀರಶೈವವೋ? ಲಿಂಗಾಯತವೋ? ಲಿಂಗವಂತವೋ? ಅಥವಾ ವಿವಾದದೊಡನೆ ಇತ್ತೀಚೆಗೆ ಹುಟ್ಟಿಬಂದ ಬಸವ ಧರ್ಮವೋ? ಇದು ಈ ಭಾಗದ ವಿವಿಚ್ಯ ವಿಷಯ.

ಈ ಕೆಳಗಿನ ಕಾರಣಗಳಿಂದ ಧರ್ಮದ ಹೆಸರು ವೀರಶೈವ ಎಂಬುದೇ ಸರಿ.

೧. ಶ್ರೇಷ್ಠ ಪರಂಪರೆ ಮತ್ತು ಸನಾತನತ್ವವನ್ನು ಪ್ರತಿನಿಧಿಸುವುದರಿಂದ.
(ಶ್ರೇಷ್ಠ ಪರಂಪರೆ-ವೇದಾಗಮಗಳ ಪರಂಪರೆ
ಸನಾತನತ್ವ-ಶಿವನೇ ಮೂಲಿಗನಾದ್ದರಿಂದ)

೨. ಒಂದು ನಿರ್ದಿಷ್ಟವಾದ ಭೌತಿಕ ಸ್ವರೂಪವನ್ನು, ಆಚಾರ ವಿಚಾರಗಳ ಮೊತ್ತವನ್ನು ಹಾಗೂ ಭಾವನೆಗಳ ಕಟ್ಟನ್ನು ಪ್ರತಿನಿಧಿಸುವುದರಿಂದ. (ಇದು ಶಿವಾಗಮಗಳಲ್ಲಿ ಸ್ಪಷ್ಟವಾಗಿ ಉಕ್ತವಾಗಿದೆ)

೩. ತಾತ್ವಿಕಾಂಗ ಧಾರ್ಮಿಕಾಂಗ ಸಾಮಾಜಿಕಾಂಗ (ನೈತಿಕಾಂಗ) ವೆಂಬ ಧರ್ಮದ ತ್ರಿವಿಧಾಂಗದಲ್ಲಿಯೂ ಸಮಾಶ್ರಯಗೊಂಡಿರುವುದರಿಂದ. (ತಾತ್ವಿಕಾಂಗ ૩೬ ತತ್ವಗಳು, ಧಾರ್ಮಿಕಾಂಗ ಅಷ್ಟಾವರಣಗಳು, ಸಾಮಾಜಿಕಾಂಗ ಪಂಚಾಚಾರಗಳು)

೪. ಆಗಮಸಂಪ್ರದಾಯದ ಷಡ್ದರ್ಶನಗಳಲ್ಲಿ ಒಂದು ಮತ್ತು ಎಲ್ಲಾ ದರ್ಶನಗಳಿಗಿಂತಲೂ ಮೊದಲನೆಯದಾದ್ದರಿಂದ. (ಈ ಪ್ರಬಂಧದ ಭಾಗ ೨ ವೀರಶೈವದ ಬೆಳವಣಿಗೆಯಲ್ಲಿ ನೋಡಿ)

೫. ಇತರ ಧರ್ಮಾಪೇಕ್ಷಯಾ ವ್ಯಾವರ್ತಕ ಧರ್ಮವುಳ್ಳದ್ದಾಗಿರುವುದರಿಂದ. (ವೀರಶ್ಚಾಸೌ ಶೈವಶ್ಚ ವೀರಶೈವಃ ಎಂಬಂತೆ 'ವೀರ' ಎಂಬ ವಿಶೇಷಣವೇ ಇತರ ಶೈವಧರ್ಮಕ್ಕಿಂತಲೂ ವಿಶಿಷ್ಟವಾದದ್ದೆಂಬುದನ್ನು ತಿಳಿಸುತ್ತದೆ')

೬. ಷಟ್ಸ್ಥಲ ಸಿದ್ಧಾಂತಕ್ಕೆ ಮೂಲವಾಗಿರುವುದರಿಂದ.

('ವೀರಶೈವಾಸ್ತುಷಡ್ಭೇದಾಃ ಸ್ಥಲಧರ್ಮವಿಭೇದತಃ
ಭಕ್ತಾದಿವ್ಯವಹಾರೇಣ ಪ್ರೋಚ್ಯಂತೇ ಶಾಸ್ತ್ರಪಾರಗೈಃ।
ಶಾಸ್ತ್ರಂತು ವೀರಶೈವಾನಾಂ ಷಡ್ವಿಧಂ ಸ್ಥಲಭೇದತಃ
ಧರ್ಮಭೇದಸಮಾಯೋಗಾತ್ ಅಧಿಕಾರಿವಿಭೇದತಃ॥')
ಸಿದ್ಧಾಂತಶಿಖಾಮಣಿ : ಪ. ೫ ಶ್ಲೋ. ೨೨,೨೪)

(ತೋಂಟದ ಸಿದ್ಧಲಿಂಗೇಶ್ವರರು ಇದನ್ನೇ ಹೇಳಿದ್ದಾರೆ.
ಶುದ್ಧವೀರಶೈವ- ಭಕ್ತ, ಮಹೇಶ
ವಿಶೇಷವೀರಶೈವ- ಶರಣ, ಐಕ್ಯಸ್ಥಲ
(ನಿರ್ವಾಣವೀರಶೈವ- ಶರಣ, ಐಕ್ಯಸ್ಥಲ)
(ಷಟ್ಸ್ಥಲಜ್ಞಾನಾಮೃತಸಾರ: ವಚನ: ೯)

೭. ಬಸವಾದಿ ಶರಣರೆಲ್ಲರೂ ವೀರಶೈವವನ್ನು ಒಪ್ಪಿ ಬೆಳಸಿರುವುದರಿಂದ. (ಹಿಂದಿನ ವೀರಶೈವ ಬೆಳವಣಿಗೆ ಎಂಬ ಭಾಗದಲ್ಲಿ ವಚನೋದಾಹರಣಾ ಸಂಖ್ಯೆಗಳನ್ನು ಕೊಟ್ಟಿರುತ್ತೆ)

೮. ಈ ಪದವು ಮೂಲದವರಿಗೂ ಆಗಂತುಕ-ಲಿಂಗವಂತರಿಬ್ಬರಿಗೂ ಉಭಯ ಸಾಧಾರಣನಾಮವಾಗಿರುವುದರಿಂದ.

೯. ಇದು ಲಿಂಗವನ್ನು ಧರಿಸಿದ ಸರ್ವವರ್ಣಾಶ್ರಮದವರಿಗೂ ಅನ್ವಯಿಸುವುದರಿಂದ.

೧೦. ಈ ಶಬ್ದವು ಮತಕ್ಕೂ ಮತಾವಲಂಬಿಗಳಿಗೂ ಅನ್ವಯಿಸುವುದರಿಂದ.

೧೧. ವಿಶಿಷ್ಟತೆಯ ಜೊತೆಗೆ ಸಾಮಾನ್ಯ ಲಕ್ಷಣಗಳನ್ನೊಳಗೊಂಡಿರುವುದರಿಂದ.
ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾ ಕ್ಷಮಾ।
ದಾನಂ ಪೂಜಾ ಜಪೋ ಧ್ಯಾನಂ ಇತಿ ಧರ್ಮಸ್ಯ ಸಂಗ್ರಹಃ॥
(ಸಿ. ಶಿಖಾಮಣಿ ೧೯ನೇ ಪರಿಚ್ಛೇದ ಶ್ಲೋ. ೫೯)
ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಂ ಇಂದ್ರಿಯ ನಿಗ್ರಹಃ।
ಧೀಃ ವಿದ್ಯಾ ಸತ್ಯಮಕ್ರೋಧಃ ದಶಕಂ ಧರ್ಮಲಕ್ಷಣಮ್॥) ಧರ್ಮಶಾಸ್ತ್ರ.

೧೨. ಒಂದು ಧರ್ಮಕ್ಕಿರಬೇಕಾದ ವಿಧಿನಿಷೇಧಗಳ ಕಟ್ಟಳೆಯಿರುವುದರಿಂದ. ವೀರಶೈವಧರ್ಮದಲ್ಲಿ ಮನೋನೈರ್ಮಲ್ಯಕ್ಕೆ ಕಾರಣವಾದ ಪ್ರಸಾದ ನಿಷ್ಠೆಗೆ ಹೆಚ್ಚು ಒತ್ತುಕೊಟ್ಟಿದೆ. (ಶಿವಶರಣರಭಿಪ್ರಾಯವೂ ಇದೇ ಆಗಿರುತ್ತದೆ) 'ಆಹಾರ ಶುದ್ಧೌ ಸತ್ವಶುದ್ಧಿಃ ಸತ್ವಶುದ್ಧೌ ಮನಃಶುದ್ಧಿಃ' ಎಂಬಂತೆ ತನು ಮನ ಭಾವಗಳ ಶುದ್ಧಿಗೆ

ಕಾರಣವಾದ ಆಹಾರಾದಿ ವಿಷಯಗಳಲ್ಲಿ ವ್ಯಜ್ರ್ಯಾವರ್ಜ್ಯಗಳನ್ನು ವಿಧಿಸಿದೆ. ಮದ್ಯ ಮಾಂಸ ಕುಡಿಯಬಾರದು, ತಿನ್ನಬಾರದು, ಪ್ರಾಣಿಹಿಂಸೆ ಮಾಡಬಾರದು ಎಂದು,

ವೀರಶೈವವ್ರತಂ ಪ್ರಾಪ್ಯ ಯಃ ಕುರ್ಯಾತ್ ಪರಪೀಡನಂ।
ಭೋಗಾರ್ಥಂ ಸಂಗ್ರಹಂ ಮದ್ಯಂ ಮಾಂಸಂ ಸ್ತ್ರೀಂ ಚ ಕಲಂಜನಂ।
ಶ್ವಾನಯೋನಿಶತಂ ಗತ್ವಾ ಚಾಂಡಾಲೋ ಭುವಿ ಜಾಯತೇ
(ಪಾ.ಆ. ೯೨೫)

ಇದು ಕಟ್ಟಳೆ, ಶಾಸ್ತ್ರ. ಇದನ್ನು ಮೀರಿ ನಡೆದವನಿಗೆ ಸಿದ್ಧಿಯಿಲ್ಲ ಬುದ್ಧಿಯಿಲ್ಲ, ಗತಿಯಿಲ್ಲ ಮತಿಯಿಲ್ಲ. ಈ ವಿಷಯದಲ್ಲಿ ಶಾಸ್ತ್ರವೇ ಪ್ರಮಾಣ).

ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಚಾರತಃ।
ನ ಸಃ ಸಿದ್ಧಿಮಾಪ್ನೋತಿ ನ ಸುಖಂ ನ ಪರಾಂ ಗತಿಮ್॥
ತಸ್ಮಾಚ್ಛಾಸ್ತ್ರಂ ಪ್ರಮಾಣಂ ಹಿ ಕಾರ್ಯಾಕಾರ್ಯವ್ಯವಸ್ಥಿತೌ।
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ತತ್ತ್ವಂ ಕುರ್ಯಾತ್ ಗುರೋರ್ಮುಖಂ॥
(ಪಾ. ಆ.೭-೧೦೪, ೧೦-೫)

ಮತ್ತು ಶಾಸ್ತ್ರ ನಿಯಮವನ್ನೂ ಮೀರಿ ಮದ್ಯಪಾನ ಮಾಡುವವನ್ನು ಮಾಂಸ ತಿನ್ನುವವನನ್ನು ಹಾಗೂ ತತ್ಸಂಗಿಯನ್ನು

'ಭವಿ' ಎಂಬುದಾಗಿ ಶಾಸ್ತ್ರ ಶಾಸನ ಮಾಡಿದೆ.
ಮದ್ಯಪಾನೀ ಮಾಂಸಭಕ್ಷೀ ಚಾನ್ಯದೇವಸ್ಯ ಪೂಜಕಃ।
ಲಿಂಗ್ಯಪಿ ಚ ತತ್ಸಂಗೀ ಪಂಚೈತೇ ಭವಿನಃ ಸ್ಮೃತಾಃ॥ (ಕ್ರಿಯಾಸಾರ)

೧೩. ಕೊನೆಯದಾಗಿ: ಶಿವ ವಚನವೇ ಪರಮಾಪ್ತ ಪ್ರಮಾಣವಾಗಿರುವುದರಿಂದಲೂ ಅದನ್ನೇ ಋಷಿ ಸದೃಶರಾದ ಶಿವಾಚಾರ್ಯರು ಮತ್ತು ಶಿವಶರಣರೂ ನೋಡಿ ನಿಶ್ಚಯಿಸಿರುವುದರಿಂದಲೂ ನಮ್ಮ ಮತ ಅಥವಾ ಧರ್ಮದ ಹೆಸರು ವೀರಶೈವ ಎಂಬುದರಲ್ಲಿ ಮತಾಭಿಮಾನಿಗಳಾದ ಮಹಾತ್ಮರುಗಳಿಗೆ ಅನುಮಾನವೇ ಇಲ್ಲ.

'ಋಷಿಭಿರ್ನಿಶ್ಚಿತೇ ತಸ್ಮಿನ್ ಕಾ ಶಂಕಾ ಸ್ಯಾನ್ಮಮಾಹಾತ್ಮನಾಮ್'

ಈ ಮುಂದಿನ ಕಾರಣಗಳಿಂದ ಲಿಂಗಾಯತ/ಲಿಂಗವಂತ ಶಬ್ದವು ಧರ್ಮವಾಚಕವಲ್ಲ:

೧. ಈ ಹಿಂದೆ ಹೇಳಿದ ರೀತಿಯಲ್ಲಿ ಆಚಾರ ವಿಚಾರಗಳ ಮೊತ್ತವನ್ನು ಪ್ರತಿನಿಧಿಸದಿರುವುದು, ಧರ್ಮದ ಅಂಗತ್ರಯದಲ್ಲಿ ಸಮಾವೇಶವಿಲ್ಲದಿರುವುದು ದರ್ಶನಗಳಲ್ಲಿ ಸೇರ್ಪಡೆಯಿಲ್ಲದಿರುವುದು, ವ್ಯಾವರ್ತಕಗುಣದ ಅಭಾವ, ಮುಂತಾದ ಕಾರಣಗಳಿಂದ.

೨. ಲಿಂಗಧಾರಣೆಯು ಕೇವಲ ಭಸ್ಮಧಾರಣೆ ರುದ್ರಾಕ್ಷಧಾರಣೆಗಳಂತೆ ವೀರಶೈವಮತದ ಬಾಹ್ಯಚಿಹ್ನೆಯಾಗಿದ್ದು ಮತ ಸಿದ್ಧಾಂತವಲ್ಲದುದರಿಂದ. ಜನಿವಾರಧಾರಣೆ ಮಾಡಿಕೊಂಡವನನ್ನು 'ಜನಿವಾರವಂತ' ಎಂದು ಕರೆಯುತ್ತಾರೆಯೆ?

೩. ಶಿಲಾಶಾಸನ ತಾಮ್ರಶಾಸನಾದಿಗಳಲ್ಲಿ ಈ ಶಬ್ದವು ಮತ ಅಥವಾ ಧರ್ಮವನ್ನು ನಿರ್ದೇಶಿಸುವ ಪದವಾಗಿ ಉಲ್ಲಿಖಿತಗೊಳ್ಳದಿರುವುದರಿಂದ.

೪. ಕೇವಲ ವೀರಶೈವರಿಗಿಂತಲೂ ಭಿನ್ನತೆಯನ್ನು ತೋರಿಸುವುದಕ್ಕಾಗಿ ಕೆಲವರಿಂದ ಹುಟ್ಟಿಕೊಂಡದ್ದರಿಂದ. ಮತಿಯಲ್ಲಿ ಭ್ರಮೆಯುಳ್ಳ ಕೆಲವರು ಮತದಲ್ಲಿಯೂ ಭ್ರಮೆಯನ್ನು ತಂದಿಡುತ್ತಾರೆ. ಅಂಥವರಿಗೆ ವೀರಶೈವ ಎಂದ ತಕ್ಷಣ ಅದು ಸಂಸ್ಕೃತ ಪದ, ವೈದಿಕಮೂಲ ಆಚಾರ್ಯಪರಂಪರೆಯುಳ್ಳದ್ದು ಎಂಬ ಆಗ್ರಹ. ಲಿಂಗಾಯತ ಎಂದಾಕ್ಷಣ ಅದು ಕನ್ನಡಪದ ಅವೈದಿಕ ಶರಣಪರಂಪರೆಯುಳ್ಳದ್ದು ಎಂಬ ಒಲವು.

೫. ಕೇವಲ ರೂಢಿಮಾತ್ರದಲ್ಲಿದ್ದು ಅಶಾಸ್ತ್ರಿಯವಾಗಿರುವುದರಿಂದ. (ಲಿಂಗಾಯತ ಪದದ ನಿರ್ವಚನ ಭಾಗವನ್ನು ನೋಡಿ)

೬. ಕೇವಲ ಕೆಲವರು ಮಾತ್ರ ಇಚ್ಛಾನುಶಾಸನದಿಂದ ಮಾಡಿಕೊಂಡ ವ್ಯವಸ್ಥೆಯಾದ್ದರಿಂದ. (ಯಾವಾಗಲೂ) ಒಂದು ಧರ್ಮ ಎನ್ನುವುದು ಶಾಸ್ತ್ರದ ನಿಯಮಗಳನ್ನು ರೂಪಿಸಿಕೊಂಡುಸಿದ್ಧವಾಗುವಂತಹುದು)

ಆದರೆ, ಕೆಲವರು ಇದನ್ನು ರೂಢಿಯಿಂದ ವೀರಶೈವದ ಪರ್ಯಾಯವೆಂದು ಹೇಳುತ್ತಾರೆ.

'ಲಿಂಗಾಯತರು ತಮ್ಮನ್ನು ವೀರಶೈವರೆಂದೂ ಕರೆದುಕೊಳ್ಳುತ್ತಾರೆ. ಶಿವನೊಬ್ಬನೇ ದೇವರೆಂದು ನಂಬಿರುವ ಇವರು ಶಿವನ ಸಂಕೇತರೂಪವಾದ ಲಿಂಗವನ್ನು ಕ್ರಿಶ್ಚಿಯನ್ನರು ಶಿಲುಬೆಯ ಕುರುಹನ್ನು ಧರಿಸುವಂತೆ ಸದಾಕಾಲವೂ ತಮ್ಮ ಕೊರಳಲ್ಲಿ ಅಥವಾ ಎದೆಯ ಮೇಲೆ ಧರಿಸುತ್ತಾರೆ. ಸರ್ವವ್ಯಾಪಿಯೂ ದಯಾಮಯನೂ ಲಿಂಗಸ್ವರೂಪಿಯೂ ಆದ ಶಿವನಲ್ಲಿ ಲಿಂಗಾಯತರು ತೋರುವ ಕಡು ನಿಷ್ಠೆ ಮತ್ತು ಅಚಲ ಶ್ರದ್ಧೆಗಳೇ ಅವರಿಗೆ ವೀರಶೈವ ಎಂಬ ಹೆಸರನ್ನು ತಂದುಕೊಟ್ಟಿದೆ. (ಸುರೇಂದ್ರನಾಥ ದಾಸಗುಪ್ತ. History of Indian Phylosophy, Part-5, page-45)

'ವಿಶ್ವ ರೂಪಿಯಾದ ಶಿವನನ್ನು ಇಷ್ಟಲಿಂಗವನ್ನಾಗಿ (Personal Linga) ರೂಪಿಸಿಕೊಂಡು' ಅದನ್ನು ಸದಾಕಾಲವೂ ತಮ್ಮ ಎದೆಯ ಮೇಲೆ ಧರಿಸುವುದರಿಂದ ವರನ್ನು ಲಿಂಗಾಯತರು (Linga wearers)ಎಂದು ಕರೆಯುತ್ತಾರೆ. ಅವರ ಧರ್ಮಕ್ಕೆ ವೀರಶೈವ ಧರ್ಮ ಶರಣ ಧರ್ಮ ಎಂದು ಪರ್ಯಾಯ ಪದಗಳುಂಟು' (ಹಿರೇಮಲ್ಲೂರು ಈಶ್ವರನ್ 'ಬಸವಣ್ಣ ಹಾಗೂ ಲಿಂಗಾಯತ ಧರ್ಮ ಭಾಗ ೧, ಪುಟ ೩')

(ಈ ಮೇಲಿನ ಎರಡೂ ಉಲ್ಲೇಖನಗಳನ್ನು 'ಬಸವಣ್ಣ ಹಾಗೂ ಲಿಂಗಾಯತ ಧರ್ಮ' ಎಂಬ ಗ್ರಂಥದಿಂದ ಉದ್ಧೃತ ಮಾಡಲಾಗಿದೆ). ಆದರೆ ಇಲ್ಲಿ ಲಿಂಗಾಯತ ಪದದ ಮೂಲದ ಬಗ್ಗೆಯಾಗಲೀ ಅರ್ಥದ ಬಗ್ಗೆಯಾಗಲೀ ಚಿಂತಿಸದಿರುವುದು ಚಿಂತನೀಯವಾಗಿದೆ. ಇನ್ನೂ ವಿವಾದದ ಹುಯಿಲೆಬ್ಬಿಸಿರುವ ಬಸವಧರ್ಮ ಎನ್ನುವುದರ ಬಗ್ಗೆ ಇರುವ ತೊಡಕುಗಳನ್ನು ಹೇಳಲೇಬೇಕು:

೧. ಪರಂಪರೆ, ಸನಾತನತ್ವ, ಷಡ್ದರ್ಶನಗಳಲ್ಲಿ ಪರಿಗಣಿಸುವಿಕೆ ವ್ಯಾವರ್ತಕಗುಣ ಸಿದ್ಧಾಂತಕ್ಕೆ ಮೂಲದ್ರವ್ಯತ್ವ, ಇವಾವೂ ಆಗದಿರುವುದು.

೨. 'ಬಸವಧರ್ಮ' ಎಂದು ಯಾವ ವಚನಕಾರರೂ ತಮ್ಮ ಯಾವ ವಚನಗಳಲ್ಲಿಯೂ ಹೇಳದಿರುವುದು. ಬಸವಧರ್ಮ ಎಂದರೇನು ? ಬಸವ ಧರ್ಮ ಎಂದರೆ ಬಸವಣ್ಣನ ಬೋಧಿಸಿದ ಧರ್ಮ, ಬಸವಣ್ಣ ಸ್ಥಾಪಿಸಿದ ಸ್ಥಾಪನೆ ಎಂದರೆ ಒಬ್ಬ ವ್ಯಕ್ತಿ ತನ್ನ ಭಿಪ್ರಾಯಗಳನ್ನು ಅಥವಾ ನಿಲವುಗಳನ್ನು ಯುಕ್ತಿಪೂರ್ವಕವಾಗಿ ಚೆನ್ನಾಗಿ

ನೆಲೆಗೊಳಿಸುವುದು ಅಥವಾ ನಿರ್ಣಯಿಸುವುದು ಎಂದು ಅರ್ಥವೇ ಹೊರತು ಇಲ್ಲದುದನ್ನು ಹೊಸದಾಗಿ ಹುಟ್ಟುಹಾಕುವುದಲ್ಲ. ಸಂಸ್ಕರಿಸಿದ ಲಿಂಗವೊಂದನ್ನು ಶುದ್ಧದೇಶದಲ್ಲಿ ಸ್ಥಾಪಿಸುವಂತೆ (ಶಿವ) ಶುದ್ಧ ಸಮಾಜದಲ್ಲಿ ಹಿಂದೆ ಇದ್ದ ವೀರಶೈವಧರ್ಮವನ್ನು ಸಂಸ್ಕರಿಸಿದರು, ಪಾಲಿಸಿ ಬೋಧಿಸಿದರು. ಈ ಅರ್ಥದಲ್ಲಿಯೇ ಬಸವಣ್ಣನವರನ್ನು ಗುರುಕಲ್ಪಭಾವನೆಯಿಂದ ಕಂಡ ವೀರಶೈವ ಶಾಸ್ತ್ರಜ್ಞರು (ಮೊಗ್ಗೆಯ ಮಾಯಿದೇವರಂತಹವರು) 'ವೀರಶೈವಧರ್ಮ ನಿರ್ಣಯ ಪರಮಾವತಾರ' ರೆಂದು ಕರೆದಿದ್ದಾರೆ. (ಯಾರೂ ಬಸವ ಧರ್ಮ ನಿರ್ಣಯ ಪರಮಾವತಾರನೆಂದು ಕರೆದಿರುವುದಿಲ್ಲ).

೩. ಬಸವ ಪೂರ್ವದಲ್ಲಿದ್ದು ಧರ್ಮ ಪ್ರಸಾರಮಾಡಿದವರನ್ನು ಕಡೆಗಣಿಸಿದಂತಾಗುವುದು. ಬಸವಣ್ಣನವರಿಗಿಂತ ಪೂರ್ವದಲ್ಲಿದ್ದ ಕೊಂಡುಗುಳಿ ಕೇಶಿರಾಜ. ದೇವರ ದಾಸಿಮಯ್ಯನಂಥವರು ಈ ಧರ್ಮವನ್ನು ಸ್ಥಾಪಿಸುವಲ್ಲಿ ಪ್ರಸಾರ ಮಾಡುವಲ್ಲಿ ಯತ್ನಶೀಲರಾಗಿದ್ದರು. ಮತ್ತು ಸಮಕಾಲೀನರಾಗಿ ಧರ್ಮದ ಪ್ರಸಾರಕಾರ್ಯದಲ್ಲಿ ಶ್ರೀ ರೇವಣ್ಣಸಿದ್ಧರು. ರುದ್ರಮುನಿಶಿವಾಚಾರ್ಯರಂಥ ಆಚಾರ್ಯ ಪರಂಪರೆಯವರು ಸಕ್ರಿಯವಾಗಿ ಭಾಗಿಗಳಾಗಿದ್ದರು. ಇಂತಹವರ ಪ್ರೇರಣೆ ಹಾಗೂ ಸಹಭಾಗಿತ್ವವನ್ನು ಕಡೆಗಣಿಸಿದಂತಾಗುತ್ತದೆ. ಹಾಗೂ ಇದರಿಂದ ಶರಣರ ಮೇಲಾದ ಕಾಶ್ಮೀರ ಶೈವ ಮತ್ತು ತಮಿಳು ಶೈವದ ಭಕ್ತಿ ಪ್ರಭಾವವನ್ನೂ ತಿರಸ್ಕರಿಸಿದಂತಾಗುತ್ತದೆ. ಇದು ಸಮಾಜದ ಪ್ರಗತಿ ಪ್ರತಿಷ್ಠೆಗಳು ಒಬ್ಬರಿಂದ ಸಾಧ್ಯವಿಲ್ಲವೆಂಬುದನ್ನು ಚೆನ್ನಾಗಿ ಅರಿತಿದ್ದ ಸುಬ್ಭೃತ್ಯಾಚಾರಿಯಾದ ಬಸವಣ್ಣನವರು ಒಪ್ಪದ ಮಾತು.

೪. ಬಸವಯುಗದಲ್ಲಿ ಶಿವಾಗಮಯುಗವು ಮತ್ತೆ ಕನ್ನಡ ಭಾಷೆಯಲ್ಲಿ ಆವರ್ತನವಾಯಿತು. ಈ ಆವರ್ತನವನ್ನೇ ಹೊಸದೆಂದು ಭ್ರಮಿಸಿದುದು. ಸಂಸ್ಕೃತದಲ್ಲಿದ್ದ ವೀರಶೈವದ ಗುಟ್ಟು ಗುರಿ ಗರಿಮೆಗಳು ಶರಣರ ಕಾಲದಲ್ಲಿ ಕನ್ನಡ ನಾಡಿನಲ್ಲಿ ಕನ್ನಡ ಭಾಷೆಯಲ್ಲಿ ಪ್ರಕಟಗೊಂಡವು.

> ವೇದಾಗಮಂಗಳು ಹೇಳಿದ ಹಾಗೆ ನಡೆವುವು
> ವೇದಾಗಮಂಗಳು ಹೇಳಿದಂತೆ ನುಡಿವುದು
> ಮೀರಿನಡೆಯಲಾಗದು ಮೀರಿ ನುಡಿಯಲಾಗದು
> ಮುಕ್ತಿಪದವೈದುವಾತ.........
> ಕೂಡಲಸಂಗಮದೇವಾ (ಬ.ವಚನ. ೧೩೬೬)

> ಆಗಮಜ್ಞಾನಕ್ಕೆ ನೀನೇ ಕರ್ತನು ಬಸವಾ
> ಆಗಮವಿಡಿದ ಶಿವಭಕ್ತಿಗೆ ನೀನೇ ಕರ್ತನು ಬಸವಾ
> ಕರುಣಿ ಕಪಿಲಸಿದ್ಧಮಲ್ಲಿನಾಥಯ್ಯ ಬಸವಾ
> (ಸಿದ್ಧರಾಮನ ವಚನ: ೧೨೧)

> ಶಿವನಕೀರ್ತಿ ಬಸವಣ್ಣನ ಧರ್ಮವಯ್ಯಾ
> ಶಿವನಸ್ತೋತ್ರಬಸವಣ್ಣನ ಸ್ತೋತ್ರವಯ್ಯಾ
> ಶಿವನ ಮಂತ್ರೋಚ್ಚಾರಣೆ ಶಿವಧರ್ಮವಯ್ಯಾ
> ಕಪಿಲ ಸಿದ್ಧಮಲ್ಲಿನಾಥಯ್ಯಾ (ಸಿ. ವಚನ:)

'ಕಲಿಯುಗದಲ್ಲಿ ಶಿವಭಕ್ತಿಯನ್ನು ಪ್ರಬಲ ಮಾಡಬೇಕೆಂದು ಶಿವಾಗಮಾಚಾರ್ಯ ಮಂಡಿಗೆಯ ಮಾದಿರಾಜನ ಸತಿ ಮಾದಲಾಂಬಿಕೆಯ ಗರ್ಭದಲ್ಲಿ ಅವತರಿಸಿದ ಬಸವಣ್ಣ ವೀರಶೈವವನ್ನು ಶೈವ ಮಾರ್ಗದಿಂದ ಬಿಡಿಸಿ ಷಟ್ಸ್ಥಲಸಿದ್ಧಾಂತ ರೂಪದಲ್ಲಿ ಪ್ರಸಾರ ಮಾಡಿದ' ಮ. ಮಾಚಿದೇವ ೫೨೦).

೫. ಅನವಸ್ಥಾದೋಷ ಬರುತ್ತದೆ: ವೀರಶೈವ ಧರ್ಮಕ್ಕೆ ವ್ಯಕ್ತಿಯೊಬ್ಬರ ಹೆಸರಿಟ್ಟು ಬಸವಧರ್ಮ ಎಂದು ಕರೆದರೆ ಆಗ ಅದನ್ನು ರೇಣುಕಧರ್ಮ ಎಂದು ಕರೆಯಬಾರದೇಕೆ? ಪ್ರಭುಧರ್ಮವೆನ್ನಬಾರದೆ? ಸಿದ್ಧರಾಮಧರ್ಮ ಎಂದು ಏಕೆ ಕರೆಯಬಾರದು? ಚನ್ನಯ್ಯ ಧರ್ಮ ಅನ್ನಬಾರದೇ? ಎಂಬ ಶಂಕೆಗಳುದಿಸಿ ಅನವಸ್ಥಾ ಎಂಬ ದೋಷ ಬರುತ್ತದೆ. ಈದೋಷ ಎಲ್ಲಿವರೆಗೆ ಹೋಗುತ್ತದೆ ಎಂದರೆ ಒಂದೊಂದು ಸಮಯವನ್ನೂ ಒಂದೊಂದು ಪ್ರತ್ಯೇಕ ಧರ್ಮ ಎಂದು ಕರೆಯಬೇಕಾಗುತ್ತದೆ. ಚೀಲಾಳಧರ್ಮ, ಸಂಪಾದನೆಧರ್ಮ, ಕೆಂಪಿನದರ್ಮ, ಕುಮಾರಧರ್ಮ ಕೊನೆಗೆ ಮರುಗಧರ್ಮ ಹೀಗೆ. ಹೀಗೆ ವೀರಶೈವದಲ್ಲಿ ನೂರಾರು ಉಪಧರ್ಮಗಳು ಅಥವಾ ವ್ಯಕ್ತಿಧರ್ಮಗಳು ಹುಟ್ಟಿಕೊಂಡು ಒಂದು ವ್ಯವಸ್ಥೆಯೇ ಇಲ್ಲದಂತಾಗುತ್ತದೆ.

ಅಷ್ಟೇ ಅಲ್ಲ, ಹೇಗೆ, ಯಾವುದೇ ಒಂದು ಶ್ರುತಿಯಲ್ಲಿ ಯಾವುದೇ ಒಂದು ಮತಸಿದ್ಧಾಂತವು ಸ್ಫುಟವಿಲ್ಲದ ಕಾರಣ ಅನೇಕ ಶ್ರುತಿಗಳ ಬಲದಿಂದ ಶಂಕರಾದಿ ಆಯಾಯಾ ಮತ ಪ್ರವರ್ತಕರು ಅಲ್ಲಿ ಸೂಕ್ಷ್ಮರೂಪದಿಂದಿರುವ ಮತ ಸಿದ್ಧಾಂತಗಳನ್ನೇ ತಮ್ಮ ತಮ್ಮ ಮತ ಗ್ರಂಥಗಳಲ್ಲಿ ಸ್ಫುಟಗೊಳಿಸಿದ್ದಾರೆಯೋ ಮತ್ತು ನಷ್ಟವಾಗಿರುವ ಶ್ರುತಿಗಳ ಪ್ರಾಮಣ್ಯಕ್ಕಾಗಿ ಸ್ಮೃತಿ ಇತಿಹಾಸ ಗೀತಾಶಾಸ್ತ್ರ ಪುರಾಣಾದಿಗಳನ್ನು ಉಪ ಬೃಂಹಣವಾಕ್ಯಗಳನ್ನಾಗಿ ಬಳಸಿ ಕೊಂಡಿದ್ದಾರೆಯೋ ಹಾಗೆಯೇ ಶಿವಾಚಾರ್ಯರು ಮತ್ತು ಶಿವಶರಣರು ಶಿವಾಗಮಗಳಲ್ಲಿ ಸ್ಫುಟವಾಗಿರುವ ಶಿವಸಿದ್ಧಾಂತವನ್ನು (ವೀರಶೈವ ಸಿದ್ಧಾಂತವನ್ನು) ಸಂಸ್ಕೃತಶಾಸ್ತ್ರ ಗ್ರಂಥಗಳಲ್ಲಿ ಹಾಗೂ ವಚನಗಳಲ್ಲಿ ಇನ್ನೂ ಸ್ಫುಟಗೊಳಿಸಿದ್ದಾರೆ. ಮತ್ತು ಶಿವಸ್ಕಾಂದಾದಿ ಪುರಾಣ, ಶಿವಧರ್ಮ, ಶಿವಗೀತಾದಿ ಉಪಬೃಂಹಣ ವಾಕ್ಯಗಳನ್ನು ಬಳಸಿಕೊಂಡಿದ್ದಾರೆ. ಹೀಗೆ ಎಲ್ಲಾ ಶಿವಾಚಾರ್ಯರು ಶಿವಶರಣರು ಸೇರಿ ವೀರಶೈವವನ್ನು ಸ್ಫುಟಗೊಳಿಸಿದ್ದಾರೆ. ಯಾರೊಬ್ಬರೇ ಪ್ರವರ್ತಕರಲ್ಲ.

೬. ಪರಪ್ರತ್ಯಯನೇಯಬುದ್ಧಿಗಳಾಗಿ ಬುದ್ಧಿಕರುಡರಾಗಬೇಕಾಗುತ್ತದೆ: ಏನಕೇನ ತಂತ್ರದಿಂದ ಪ್ರಭಾವಶಾಲಿಯಾದ ಒಬ್ಬ ವ್ಯಕ್ತಿ ತನ್ನ ಭಾಷಣಗಳಲ್ಲಿಯೋ, ಲೇಖನಗಳಲ್ಲಿಯೋ ಹೊಸಶಬ್ದವನ್ನ ಪ್ರಯೋಗದಲ್ಲಿ ತರುತ್ತಾನೆ. ಅಂಥ ವ್ಯಕ್ತಿಯು ಇಷ್ಟವೂ ಅಪ್ಯಾಯಮಾನವೂ ಯಾರಿಗೆ ಆಗುತ್ತಾನೆಯೋ ಅಂಥ ಜನ ಅದನ್ನು ಕಣ್ಮುಚ್ಚಿಕೊಂಡು ಒಪ್ಪಿಕೊಳ್ಳುತ್ತಾರೆ. ಅಂಥವನಿಂದ ಬುದ್ಧಿಯನ್ನು ಬಾಡಿಗೆಗೆ ಪಡೆದು ರೂಢಿಗೆ ತರುತ್ತಾರೆ. ಬಸವಧರ್ಮ ಎನ್ನುವಲ್ಲಿಯೂ ಇದೇ ನ್ಯಾಯ ಅನ್ವಯಿಸುತ್ತದೆ. ಆದರೆ, ಸಮಾಜದಲ್ಲಿ ಉನ್ನತ ಸ್ಥಾನಮಾನಗಳನ್ನು ಹಾಗೂ ಸ್ಥಿತಿಗತಿಗಳನ್ನು ಹೊಂದಿದ ಆ ವ್ಯಕ್ತಿ ಬಹಳ ಎಚ್ಚರಿಕೆಯಿಂದ ಹೆಜ್ಜೆಯನ್ನಿಡಬೇಕು. ಸಾವಧಾನ ತಪ್ಪಿ ಒಂದು ವೇಳೆ ಅವನಿಗೆ ಪದವಿಪಿತ್ತ ನೆತ್ತಿಗೇರಿ ನೀಚವೃತ್ತಿಯನ್ನಾಶ್ರಯಿಸಿದ್ದೇ ಆದರೆ ಪದಭ್ರಷ್ಟನಾಗಿ ಸರ್ವಕರ್ಮಗಳಿಂದಲೂ ಬಹಿಷ್ಕೃತನಾಗುತ್ತಾನೆ. ಅದರಿಂದ ಸಮಾಜಕ್ಕೆ ದೊಡ್ಡಹಾನಿಯುಂಟಾಗುತ್ತದೆ.

ಉತ್ತಮಾಂ ಗತಿಮಾಶ್ರಿತ್ಯ ನೀಚಾಂ ವೃತ್ತಿಂ ಸಮಾಶ್ರಿತಃ।
ಆರೂಢಪತಿತೋ ಜ್ಞೇಯಃ ಸರ್ವಕರ್ಮಬಹಿಷ್ಕೃತಃ॥
(ಸಿ.ಶಿ. ೯-೪೦)

ವೀರಶೈವ ಮೂಲ ಹಾಗೂ ಬೆಳವಣಿಗೆಯನ್ನು ಒಂದೇ ವಾಕ್ಯದಲ್ಲಿ ಹೀಗೆ ಹೇಳಬಹುದು. ಈ ವೀರಶೈವವು ವೇದಪೂರ್ವ ಕಾಲದಲ್ಲಿಯೇ ಅಂಕುರಿಸಿ, ವೇದೋಪನಿಷತ್ಕಾಲದಲ್ಲಿ ಪಲ್ಲವಿಸಿ ಪುರಾಣೇತಿಹಾಸಗಳ ಕಾಲದಲ್ಲಿ ಗಿಡವಾಗಿ ಶಿವಾಗಮಗಳ ಕಾಲದಲ್ಲಿ ಸಪ್ತಶಾಖೆಗಳುಳ್ಳ ಹೆಮ್ಮರವಾಗಿ ಬೆಳೆದು ಹೂ ಬಿಟ್ಟು ಶಿವಶರಣರ ಕಾಲದಲ್ಲಿ ಸಮೃದ್ಧವಾದ ಫಲವನ್ನು ಕೊಟ್ಟಿದೆ. ಈ ಕೈವಲ್ಯತರು ಬಹುಸನಾತನ, ಪುರಾತನವಾದದ್ದು. ದಿವ್ಯ- ಭವ್ಯವಾದದ್ದು. ಇಂಥ ಮೋಕ್ಷವೃಕ್ಷವನ್ನು ಕಡಿಮೆ ಬುಡಕ್ಕೆ ಸುಣ್ಣ ಹಚ್ಚುವ ಘನಕಾರ್ಯವನ್ನು ಸಮಾಜದ ಘಟಕಗಳು ಮಾಡುತ್ತಿರುವುದು ಹೇಯಕರ ಹಾಗೂ ಹಾನಿಕರ. ಸಲ್ಲಕ್ಷಣವಾದ ವೀಣೆಯು ಸರಿಯಾದ ಅಭ್ಯಾಸವಿಲ್ಲದವನ ಕೈಗೆ ಸಿಕ್ಕಿ ಅಪಸ್ವರ ನುಡಿದು ಶ್ರೋತೃಗಳಿಗೆ ಜುಗುಪ್ಸೆಯನ್ನುಂಟು ಮಾಡುವಂತೆ ಈ ವೀರಶೈವ ಮತವು ತಲಸ್ಪರ್ಶಿಯಾದ ಅಭ್ಯಾಸವಿಲ್ಲದವರ ಕೈಗೆ ಸಿಕ್ಕಿ ಇಂದು ವೈಕಲ್ಯ ಹೊಂದಿದೆ. ಮತ್ತು ಶಬ್ದಾರ್ಥ ಸೌಂದರ್ಯದಿಂದ ಕೂಡಿದ ಸಂಸ್ಕೃತ ಪದ್ಯವೊಂದು 'ಶಕಾರ' ನಂತಹವನ ಬಾಯ್ಗೆ ಸಿಕ್ಕಿ ವಿರೂಪಹೊಂದುವಂತೆ 'ಅಸಂಸ್ಕೃತರ' ಕೈಗೆ ಸಿಕ್ಕಿ ಈ ಮತಕ್ಕೆ ಸ್ವರೂಪಹಾನಿಯುಂಟಾಗಿದೆ. ಅಷ್ಟೇ ಅಲ್ಲ ಶಿವಾಗಮಗಳನ್ನಾಗಲಿ ಶಿವಶರಣರ ವಚನಗಳನ್ನಾಗಲಿ ಶಾಸ್ತ್ರ ದೃಷ್ಟಿಯಿಂದ ಅಧ್ಯಯನ ಮಾಡಲಸಮರ್ಥರಾದ ಶಾಸ್ತ್ರಾಂಧರು 'ಕುರುಡನೊಬ್ಬನು ನಾ ನೋಡಲಾಗದ ಜಗತ್ತನ್ನು ಬೇರೆ ಯಾರೂ ನೋಡಕೂಡದು' ಎಂದಂತೆ ವೀರಶೈವ ಎನ್ನುವುದು ಬೇಡ ಎನ್ನುತ್ತಾರೆ. ಆದರೆ ಅವರ ಮಾತನ್ನು ಶಾಸ್ತ್ರಲೋಚನರು ಒಪ್ಪುವುದಿಲ್ಲ.

ಆದ್ದರಿಂದ ವೀರಶೈವ ಎನ್ನುವುದೇ ನಮ್ಮ ಮತದ ಮತ್ತು ಧರ್ಮದ ನಿಜವಾದ ಹೆಸರು.

"ಋಷಿಭಿರ್ನಿಶ್ಚಿತೇ ತಸ್ಮಿನ್ ಕಾ ಶಂಕಾ ಸ್ಯಾತ್ ಮತಾಭಿಮಾನಿನಾಮ್?" ಮತ್ತು ಪಾರಂಪರಿಕವಾಗಿ ಹಾಗೂ ಸೈದ್ಧಾಂತಿಕವಾಗಿಯಲ್ಲದಿದ್ದರೂ ವ್ಯಾಹಾರಿಕ ದೃಷ್ಟಿಯಿಂದ ರೂಢಿಗತವಾಗಿ ಬಂದಿರುವ ಲಿಂಗಾಯತ ಪದವನ್ನು ಸಮಾನಾಂತರವಾಗಿ ಬಳಸಬಹುದು.

ಆಧಾರ ಗ್ರಂಥಗಳು

೧. ವೀರಶೈವಧರ್ಮಶಿರೋಮಣಿ- ಷಡಕ್ಷರಮಂತ್ರಿ ,ಸಂ: ಪಿ.ಆರ್., ಕರಿಬಸವಶಾಸ್ತ್ರಿ ಎಸ್. ಆರ್. ಕರಿಬಸವಶಾಸ್ತ್ರಿ ೧೯೦೪, ಎಂ. ಬಸವಲಿಂಗಶಾಸ್ತ್ರಿ

೨. ಲಿಂಗಧಾರಣ ಚಂದ್ರಿಕೆ - ನಂದೀಕೇಶ್ವರ ಸಂ: ಸಿರ್ಸಿಗುರು ಶಾಂತಶಾಸ್ತ್ರೀ

೩. ವಚನ ಸಂಪುಟ- ೧೪ಪ್ರಧಾನ ಸಂಪಾದಕ: ಎಂ.ಎಂ. ಕಲಬುರ್ಗಿ ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಣೆ

೪. ಬಸವಣ್ಣನವರ ಷಟ್‌ಸ್ಥಲ ವಚನಗಳು, ಸಂ. ಡಾ. ಆರ್.ಸಿ. ಹಿರೇಮಠ ಕ.ವಿ.ವಿಯ

೫. ಚನ್ನಬಸವಣ್ಣನವರ ವಚನಗಳು, ಸಂ: ಡಾ. ಆರ್.ಸಿ. ಹಿರೇಮಠ , ಕ.ವಿ.ವಿ

೬. ವಚನಗಳಲ್ಲಿ ವೀರಶೈವ- ಡಾ. ಹೆಚ್. ತಿಪ್ಪೇರುದ್ರಸ್ವಾಮಿ
೭. ಪಾರಮೇಶ್ವರಾಗಮ, ಸಂ: ಡಾ.ಎಂ. ಶಿವಕುಮಾರಸ್ವಾಮಿ, ವೀರಶೈವ ಅನುಸಂಧಾನ ಸಂಸ್ಥೆ, ಬೆಂಗಳೂರು.
೮. ಉಪನ್ಯಾಸ ಮಾಲೆ, ಶ್ರೀ ವೀರಶೈವಮತಸಂವರ್ಧಿನೀ ಸಭಾ, ಮುಡುಕುತೊರೆ, ಸಭಾಧ್ಯಕ್ಷರು: ಪಿ.ಆರ್. ಕರಿಬಸವಶಾಸ್ತ್ರಿ
೯. ಮೈಸೂರ್ ಸ್ಟಾರ್ ಪತ್ರಿಕೆ (ರಿಪೋರ್ಟ್ ಸಂಗ್ರಹ)- ೧೮೮೨- ರಿಂದ ೧೮೮೪ ಸಂ. ವೈ. ವೀರಸಂಗಪ್ಪಾ, ಮೈಸೂರು- ೧೮೮೪

ಪ್ರಶ್ನೆ-ಉತ್ತರ

ಪ್ರಶ್ನೆ-೧ : ಶರಣರು ವೇದ. ಅಗಮ, ಉಪನಿಷತ್ತು, ಶಾಸ್ತ್ರಗಳನ್ನು ತಿರಸ್ಕರಿಸಿ ಸ್ವಾನುಭಾವದ ಪ್ರಮಾಣದ ಸ್ವತಂತ್ರ ಧರ್ಮ ಲಿಂಗವಂತ ಧರ್ಮ ಅಂತ ಅಂದ್ರು?

ಉತ್ತರ : ಪೂಜ್ಯರ ಸಾನಿಧ್ಯದಿಂದ ವೇದಾಗಮಗಳು ಶಿವಶರಣರೂಂತ ಎರಡು ಸಾರಿ ವಿದ್ವಾಂಸರುಗಳಿಂದ ಚರ್ಚೆಯನ್ನು, ಇಂತಹ ಗೋಷ್ಠಿಯನ್ನು ವ್ಯವಸ್ಥೆಯನ್ನು ಮಾಡಿ ಎಲ್ಲಿಯೂ ಕೂಡ ಶರಣರು ವೇದವನ್ನಾಗಲಿ ಅಗಮವನ್ನಾಗಲಿ, ಉಪನಿಷತ್ತನ್ನಾಗಲಿ, ಶಾಸ್ತ್ರವನ್ನಾಗಲಿ ತಿರಸ್ಕರಿಸಿಲ್ಲ. ಸಾಕ್ಷಿ ಎಂದರೆ ಶರಣರ ವಚನಕಾರರ ವಚನಗಳ ಸಾಕ್ಷಿಗಾಗಿ ವಚನಗಳನ್ನು ಬರೆಯುವಾಗ ಅವರವರ ವಿಷಯವನ್ನು ಸ್ಥಿರಗೊಳಿಸುವುದಕ್ಕಾಗಿ ಸಾಕ್ಷೀಂತ ಮೇಲೆ ಬರೆದು ಅಗಮದ ಉಪನಿಷತ್ತಿನ ವಾಕ್ಯಗಳನ್ನು ಉಲ್ಲೇಖ ಮಾಡಿರುವುದು ಹೇರಳವಾಗಿ ಕಂಡು ಬರುತ್ತದೆ. ಬೇಕಾದಷ್ಟು ವಿಚಾರ ಸಂಕಿರಣಗಳಲ್ಲಿ ಇದರ ಬಗ್ಗೆ ವಿಚಾರ ಮಂಡನೆ ಅಗಿ ವಿಚಾರ ಮಂಡನೆಯು ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ.

ಪ್ರಶ್ನೆ-೨ : ೮ನೇ ತಿಂಗಳಿನಲ್ಲಿ ಗರ್ಭಕ್ಕೆ ಲಿಂಗ ಧಾರಣವನ್ನು ಮಾಡುತ್ತೇವೆ. ಅದು ಒಂದು. ಅಗರ್ಭದಲ್ಲಿ ಮಗು ಮೂರು ಇದ್ದರೆ. ಲಿಂಗವನ್ನು ಯಾವ ಮಗುವಿಗೆ ಲಿಂಗಧಾರಣೆ ಮಾಡಬೇಕು?

ಉತ್ತರ : ಕಾಶೀ ಜಗದುರುಗಳ ಮಾರ್ಗದರ್ಶನದಲ್ಲಿ ಇದಕ್ಕೆ ಉತ್ತರ ಕೊಡಲಾಗಿದೆ.

ಪ್ರಶ್ನೆ-೩ : ವೀರಶೈವ ಅಥವಾ ಲಿಂಗಾಯತ ಈ ಶಬ್ದಗಳ ಬಗ್ಗೆ ವಾದ ವಿವಾದ ಬೇರೆಲ್ಲ ನಮಗೆ ಬೇಕಾಗಿರುವುದು ಲಿಂಗಾಯಿತರಲ್ಲಿ ಐಕ್ಯತೆ. ಬಸವಣ್ಣನವರು ವೀರಶೈವ ಧರ್ಮವನ್ನೇ ಒಪ್ಪಿದ್ದರೆ ವೇದಗಳನ್ನೇಕೆ ಕಟುವಾಗಿ ವಚನಗಳಲ್ಲಿ ಟೀಕಿಸಿದ್ದರು?

ಉತ್ತರ : ಯಾವ ಸಂದರ್ಭದಲ್ಲಿ ಈ ವಚನವನ್ನ ಬಳಸಿದ್ದಾರೆ? ಅದು ಬಹಳ ಮುಖ್ಯ ವೇದದಲ್ಲಿ ಏನು ಯಜ್ಞಯಾಗಾದಿಗಳ ಕರ್ಮ ಭಾಗ ಬರುತ್ತೋ, ಮೀಮಾಂಸೆ ಬರುತ್ತೋ, ಅದರ ಬಗ್ಗೆ ಟೀಕೆಯನ್ನು ಮಾಡಿದ್ದಾರೆ ಹೊರತು ವೇದದಲ್ಲಿ ಜ್ಞಾನ ಕಾಂಡ ಏನಿದೆ ಅದರ ವಿಷಯದಲ್ಲಿ, ಸಮಾಜ ಚಿಂತನ ಅಂಶಗಳು ಯಾವಿವೆಯೋ ಅವುಗಳ ಬಗ್ಗೆ ಅವರು ಟೀಕೆ ಮಾಡಿಲ್ಲ. ಶಬ್ದಾರ್ಥದಲ್ಲಿ ವ್ಯತ್ಯಾಸವಿದೆ. ವೇದಕ್ಕೆ ಒರೆಯ ಕಟ್ಟಿದೆ ಅಂದ್ರೆ ಚಿನ್ನವನ್ನು

ಹೇಗೆ ಉಜ್ಜಿ ನೋಡ್ತೇವೋ ವೇದವನ್ನ ಉಜ್ಜಿನೋಡೀನಿ. ವೇದದಲ್ಲಿ ಸಮಾಜಕ್ಕೆ ಅನುಪಯುಕ್ತವಾದ ಯಜ್ಞಯಾಗಾದಿಗಳ ಹಿಂಸಾ ಪ್ರದಾನವಾದ ಕರ್ಮಗಳು ಏನುಂಟು? ಯಾವುದೂ ಜನಾಂಗಕ್ಕೆ ಪ್ರೀತಿ ಪರವಾದ ಕರ್ಮ ಕ್ರಿಯೆಗಳು ಏನುಂಟೋ ಅದಕ್ಕೆ ಒರೆಯ ಹಚ್ಚುವೆ. ಅಲ್ಲಿರುವಂತ ಜ್ಞಾನದ ಬೆಳಕನ್ನ ಒರೆಹಚ್ಚಿ ಚಿನ್ನವನ್ನ ಪುಟ ಗೊಳಿಸುವಂತೆ ಅಲ್ಲಿರುವ ಜ್ಞಾನಾಂಶವನ್ನ ನಾನು ವಚನಗಳು ಮುಖಾಂತರ ಸಾಕ್ಷಿ ಕೊಟ್ಟೆ ನುಡೀತೇನೆ ಅಂತ ಹೇಳಿ ಬಸವಣ್ಣನವರು ಹೇಳಿದರೇ ಹೊರತು ಸಾರಾ ಸಗಟಾಗಿ ವೇದಾಗಮಗಳನ್ನ ಟೀಕಿಸಿಲ್ಲ.

ಪ್ರಶ್ನೆ-೪ : ವೀರಶೈವಧರ್ಮ ಭತ್ತದ ಕಾಳು. ಲಿಂಗಾಯತಧರ್ಮ ಅಕ್ಕಿಕಾಳು ಇದ್ದಹಾಗೆ ಆದ್ದರಿಂದ ಸುಸಂಸ್ಕಾರ ಗೊಂಡ ಧರ್ಮ ಲಿಂಗಾಯತ ಧರ್ಮ.

ಉತ್ತರ : ಇದಕ್ಕೂ ಉತ್ತರ ಶ್ರೀಕಾಶೀ ಜಗದ್ಗುರುಗಳ ಮಾರ್ಗದರ್ಶನದಲ್ಲಿದೆ.

□□

೨. ಬಸವಪೂರ್ವಯುಗದ ಶಿವಶರಣರು

-ಡಾ. ಬಸವಲಿಂಗ ಸೊಪ್ಪಿಮಠ

ಕನ್ನಡ ಸಾಹಿತ್ಯ ಚರಿತ್ರೆಯನ್ನು ಅಧ್ಯಯನದ ಅನುಕೂಲಕ್ಕಾಗಿ ಪಂಪಪೂರ್ವ ಯುಗ, ಪಂಪ ಯುಗ, ಬಸವಪೂರ್ವ ಯುಗ, ಬಸವ ಯುಗ ಎಂದು ಮುಂತಾಗಿ ವಿಭಜಿಸಿಕೊಳ್ಳುವುದು ವಾಡಿಕೆ. ಪಂಪನಿಗೆ ಹಿಂದಿನದು, ಬಸವಣ್ಣನಿಗೆ ಹಿಂದಿನದು ಎಂಬ ಅರ್ಥ ಈ ಯುಗ ವಿಂಗಡಣೆಯಲ್ಲಿ ಇದ್ದರೂ ಪಂಪನಿಗೆ ಹಿನ್ನೆಲೆಯಾಗಿದ್ದ, ಬಸವಣ್ಣನಿಗೆ ಹಿನ್ನೆಲೆಯಾಗಿದ್ದ ಎಂಬ ಅರ್ಥವೂ ಅಲ್ಲಿ ಅಡಕವಾಗಿದೆ. ಹಾಗೂ ಆ ಹಿನ್ನೆಲೆಗಳೇ ಯುಗನಿರ್ಮಾಪಕರಾದ ಪಂಪ ಬಸವಾದಿಗಳನ್ನು ರೂಪಿಸಿರುವುದು ಅಷ್ಟೇ ನಿಜ. ಸೂರ್ಯೋದಯದ ಮುಂಚಿನ ಅರುಣೋದಯದಂತೆ ಎಂಬ ಉಪಮೆ ಇಲ್ಲಿ ಸಲ್ಲುತ್ತದೆ. ಈ ನಿಟ್ಟಿನಲ್ಲಿ ಬಸವಣ್ಣನಿಗೆ ಹಿನ್ನೆಲೆಯಾಗಿದ್ದ ಶಿವಶರಣರು ಯಾರು ಎಂದು ಗಮನಿಸುವುದು ಈ ಲೇಖನದ ಉದ್ದೇಶ. ವಿಚಾರ ಸಂಕಿರಣದ ಶೀರ್ಷಿಕೆ 'ವೀರಶೈವ ಧರ್ಮದ ಪುನರವಲೋಕನ' ಎಂದು ಇರುವುದರಿಂದ ಬಸವಪೂರ್ವ ಯುಗದ ಶಿವಶರಣರ ವೀರಶೈವದ ಚಟುವಟಿಕೆಗಳನ್ನು ಗಮನಿಸುವುದು ಮುಖ್ಯವಾಗುತ್ತದೆ.

ಧರ್ಮವಾಗಿ ವೀರಶೈವ ಎಂದಾಗ ಇಷ್ಟಲಿಂಗ ಸಂಸ್ಕೃತಿ ಅದರ ಪ್ರಾಣವಾಗಿರುವುದು [illegible]ವಿಗೆ ಬರುತ್ತದೆ. ದೇವಾಲಯ ಸಂಸ್ಕೃತಿಯ ನಿರಾಕರಣೆ, ದೇಹದೇಗುಲವಾಗಿ ಇಷ್ಟಲಿಂಗಪಿಡಿದು ಪ್ರಾಣಲಿಂಗದ ಅನುಸಂಧಾನ, ಗುರುಲಿಂಗ ಜಂಗಮ ಒಂದೆಂಬ [illegible]. [illegible] ಮೂಲಕ ಗಳಿಸುವ ಅನುಭಾವ, ಅನುಭಾವದ ಗೋಷ್ಠಿ, [illegible]. [illegible]-ಲಿಂಗಭೇದ- ವರ್ಗಭೇದಗಳ ಸ್ಪಷ್ಟ [illegible] [illegible]ದಲ್ಲಿ ಸಂಪಾದನೆಯನ್ನು [illegible]ಗಳನ್ನು ಹೇಳಬಹುದು.

[illegible]ರ್ವ ಯುಗ ಎಂದಾಗ ಅಲ್ಲಿ

ಈ ಲಕ್ಷಣಗಳ ಸುಳಿವು ಸಿಗುತ್ತದೆಯೇ ವಿನಾ ಈ ಪ್ರಮಾಣದ ವಿಸ್ತಾರ ಹಾಗೂ ಸೂಕ್ಷ್ಮತೆಯನ್ನು ಅಲ್ಲಿ ಕಾಣಲಾರೆವು. ದೇಹ-ದೇವಾಲಯ ಭಾವನೆ ಇದ್ದರೂ ಅದು ಕಠೋರ ನಿಷ್ಠೆಯಾಗಿ ಆಳವಟ್ಟಿಲ್ಲ. ಜಾತಿ ನಿರಾಕರಣೆ ಇದ್ದರೂ ವೈಯಕ್ತಿಕ ನೆಲೆಯಲ್ಲಿ; ಸಾಮಾಜಿಕ ಚಳುವಳಿಯಾಗಿ ಅಲ್ಲ. ಧಾರ್ಮಿಕತೆಯೇ ಪ್ರಧಾನವಾದ ಆ ಯುಗದಲ್ಲಿ ಇದನ್ನು ನಿರೀಕ್ಷಿಸುವುದೂ ಅತಿಯಾಗಬಹುದು. ಆದರೆ ಶಿವನ ಸರ್ವೋತ್ತಮತೆಯ ಜೊತೆಜೊತೆಗೆ ಶಿವಭಕ್ತರಲ್ಲಿ ಜಾತಿ ಎಣಿಸದ ನಡಾವಳಿ ಬಸವಪೂರ್ವಯುಗದ ಎಲ್ಲ ಶರಣರಲ್ಲಿ ಸಮಾನವಾಗಿ ಇದೆ. ಅನುಭಾವಕ್ಕೆ ಗೋಷ್ಠಿಯನ್ನು ಅವಲಂಬಿಸುವ ಉತ್ಕಟತೆಯನ್ನು, ಶರಣಸಂಗದ ಮುಂದೆ ಸಂಪತ್ತಿನ ತೀವ್ರ ನಿರಾಕರಣೆಯನ್ನು ಬಸವಪೂರ್ವ ಯುಗದ ಎಲ್ಲ ಶರಣರು ತೋರಿದ್ದಾರೆ. ಇವೆಲ್ಲ ಮುಂದೆ ಬಸವಾದಿಗಳನ್ನು ಕೈಹಿಡಿದು ನಡೆಸಿವೆ. ಇದನ್ನು ಮನದಂದರೆ, ಬಸವ ಯುಗಕ್ಕೆ ಹಿನ್ನೆಲೆಯಾಗಿದ್ದ ಈ ಘಟ್ಟವನ್ನು ಬಸವಪೂರ್ವ ಯುಗದ ವೀರಶೈವ ಎಂದು ಇಟ್ಟುಕೊಳ್ಳಬಹುದು. ಖಚಿತ ನುಡಿಯುವುದಾದರೆ ಬಸವಪೂರ್ವ ಯುಗದಲ್ಲಿ ಅಷ್ಟಾವರಣ ವೀರಶೈವ ಇದ್ದರೆ, ಬಸವ ಯುಗದಲ್ಲಿ ಷಟ್ಸ್ಥಲ ವೀರಶೈವ ಇದೆ. ಎರಡೂ ಯುಗದಲ್ಲಿ ಇರುವುದು ಶಿವಸರ್ವೋತ್ತಮತೆಯ ಭಕ್ತಿಮಾರ್ಗವೇ.

ಬಸವಣ್ಣ ಮೊದಲಾದ ಶರಣರ ಭಕ್ತಿಪರಂಪರೆಯನ್ನು ಹೇಳುವಾಗ ಪುರಾತನರು ಪ್ರಮಥರು ನೂತನರು ಎಂದು ಮೂರು ಹಂತಗಳಲ್ಲಿ ಗುರುತಿಸುವುದು ರೂಢಿ; ಹಾಗೆಯೇ ಇವರೊಂದಿಗೆ ಇತರ ಕೆಲವರನ್ನು ಷೋಡಶಗಣ-ತೇರಸಗಣ-ದಶಗಣ ಎಂದು ಮೂರುಗುಂಪುಗಳಲ್ಲಿ ಸೇರಿಸಿ ಹೇಳುವುದೂ ಇದೆ. ಇಷ್ಟಾದರೂ ಯಾವ ಶಿವಭಕ್ತರು ಯಾವ ಗುಂಪು ಎಂಬುದು ಇನ್ನೂ ಸ್ಪಷ್ಟವಿಲ್ಲ. ಆದರೆ ಪುರಾತನರು- ಪ್ರಮಥರು-ನೂತನರು ಎಂಬಲ್ಲಿ ಪುರಾತನರು ತಮಿಳು ನಾಯನ್ಮಾರರು ಎಂದೂ, ಪ್ರಮಥರು ಬಸವಾದಿ ಶಿವಶರಣರು ಎಂದೂ, ನೂತನರು ಬಸವೋತ್ತರ ಕಾಲದವರು ಎಂದೂ ಸರಿಯಾಗಿಯೇ ಅರ್ಥೈಸಿಕೊಂಡುಬರಲಾಗಿದೆ. ಬಸವಾದಿ ಪ್ರಮಥರು ಮತ್ತು ಪುರಾತರ ನಡುವೆ ಬರುವ, ಬಸವಾದಿ ಶಿವಶರಣರ ವಚನಗಳಲ್ಲಿ 'ಆದ್ಯರು'. 'ಪುರಾತರು' ಎಂಬುದಾಗಿ ಸ್ಮರಣೆಗೊಳ್ಳುವ ಬಸವ ಪೂರ್ವದ ಶಿವಶರಣರನ್ನು ಪುರಾತನರಲ್ಲಿಯೇ ಸಮಾವೇಶಗೊಳಿಸಬಹುದಾಗಿದೆ.

ಬಸವಪೂರ್ವ ಯುಗದ ಶಿವಶರಣರಲ್ಲಿ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ದೇವರ ದಾಸಿಮಯ್ಯ, ಕೊಂಡಗುಳಿ ಕೇಶಿರಾಜ, ತೆಲುಗು ಜೊಮ್ಮಯ್ಯ, ಜೇಡರ ದಾಸಿಮಯ್ಯ, ಶಂಕರದಾಸಿಮಯ್ಯ, ಡಕ್ಕೆಯ ಮಾರಯ್ಯ ಮೊದಲಾದ ಶಿವಶರಣರು ಬರುತ್ತಾರೆ. ಇವರಲ್ಲಿ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ ಇವರನ್ನು ಬಸವಪೂರ್ವ ಯುಗದಲ್ಲಿ ಸೇರಿಸುವುದು ವಾಡಿಕೆಯಾಗಿದ್ದರೂ ಇದೇ ಹೆಸರಿನ ಇಬ್ಬರು ಬಸವಣ್ಣನ ಕಾಲದಲ್ಲೂ ಕಂಡುಬರುತ್ತಾರೆ. "ಕಯ್ಯುಳಿಗತ್ತಿ ಅಡಿಗೂಂಟಕ್ಕೆಡೆಯಾಗಬೇಡ ಅರಿ ನಿಜಾತ್ಮ ರಾಮರಾಮನಾ' ಎಂಬ ವಚನಾಂಕಿತದ "ಅಭಿನವ ಮಲ್ಲಿಕಾರ್ಜುನಾ" ಅಂಕಿತದ ಡೋಹರ ಕಕ್ಕಯ್ಯ ಇಬ್ಬರೂ ಬಸವಣ್ಣನವರನ್ನು ಸ್ಮರಿಸುವುದರಿಂದ ಇವರು ಬಸವಕಾಲೀನರೇ ಆಗುತ್ತಾರೆ ಎಂದು ಭಾವಿಸಲಾಗಿದೆ. ಹಾಗೂ ತಮಿಳುನಾಡಿನಲ್ಲಿ ಚೋಳ ಅರಸನ ಕುದುರೆ ಲಾಯದಲ್ಲಿದ್ದು ಹುಲ್ಲು ತರುವ ಕಾಯಕ ಮಾಡುತ್ತಿದ್ದ ಮಾದಾರ ಚನ್ನಯ್ಯ, ಆಂಧ್ರದಲ್ಲಿ (ಬೆಜವಾಡ) ಶ್ರೀಪತಿಪಂಡಿತನ ಅಗ್ನಿಪವಾಡ ಸಂದರ್ಭದಲ್ಲಿ ಕೇಳಿಬರುವ ಡೋಹರ ಕಕ್ಕಯ್ಯ ಇಬ್ಬರೂ ಬಸವಣ್ಣನನ್ನು ಭಕ್ತಿಯಿಂದ ಮತ್ತ ಮತ್ತೆ ಸ್ಮರಿಸುವ ಬಸವಪೂರ್ವಯುಗದವರೇ ಎಂದು ತಿಳಿಯುವುದು ಸರಿಯಾಗುತ್ತದೆ. ಇವರಲ್ಲಿ ಡೋಹರ ಕಕ್ಕಯ್ಯ ಒಬ್ಬನೇ ವ್ಯಕ್ತಿಯೆಂದು, ಬಸವಕಾಲದಲ್ಲೂ ಈತ ಬದುಕಿದ್ದನೆಂದು ಹೇಳುವ ವಿದ್ವಾಂಸರೂ ಇದ್ದಾರೆ. ಹಾಗೆಯೇ

ವಿದ್ವಾಂಸರು ಒಪ್ಪಿರುವಂತೆ ಪೊಟ್ಟಲಕೆರೆ ಪವಾಡದ ದೇವರ ದಾಸಿಮಯ್ಯ ಮುದನೂರು ತವನಿಧಿ ಪವಾಡದ ಜೇಡರ ದಾಸಿಮಯ್ಯ ಭಿನ್ನ ವ್ಯಕ್ತಿಗಳಾಗಿದ್ದು, ಜೇಡರ ದಾಸಿಮಯ್ಯ ಬಸವಪೂರ್ವ ಯುಗದ ಶರಣನೆಂಬುದನ್ನು ಒಪ್ಪಲಾಗಿದೆ.

ಬಸವಾದಿ ಶಿವಶರಣರಿಗೆ ಹಿನ್ನೆಲೆಯಾಗಿದ್ದದ್ದು ತಮಿಳು ೬೩ ಪುರಾತನರ ಶಿವಭಕ್ತಿ ಮತ್ತು ಕರ್ನಾಟಕದ ಉತ್ತರ-ಆಂಧ್ರದ ದಕ್ಷಿಣಭಾಗದಲ್ಲಿ ಪ್ರಚಲಿತವಿದ್ದ ದೇವರ ದಾಸಿಮಯ್ಯ, ತೆಲುಗು ಜೊಮ್ಮಯ್ಯ, ಕೊಂಡಗುಳಿ ಕೇಶಿರಾಜ, ಜೇಡರ ದಾಸಿಮಯ್ಯ ಮೊದಲಾದ ಶರಣರ ಭಕ್ತಿಮಾರ್ಗ. ಪುರಾತನರಿಗೆ ಹೋಲಿಸಿದರೆ ಈ ಶರಣಮಾರ್ಗ ವೈಯಕ್ತಿಕ ನೆಲೆಯಲ್ಲಿಯೇ ಹೆಚ್ಚು ಸಾಮಾಜಿಕವೂ ವೈಚಾರಿಕವೂ ಆಗಿತ್ತು ಎನ್ನಬಹುದು. ಮುಂದೆ ಬಸವಾದಿಗಳಲ್ಲಿ ಕಾಣುವ ನಡೆ-ನುಡಿಗಳಿಗೆ ಇವರ ಬದುಕು ಬರಹಗಳೇ ಆದರ್ಶವಾಗಿ ನಿಂತಿದ್ದರಲ್ಲಿ ಯಾವ ಸಂಶಯವೂ ಇಲ್ಲ. ಸ್ವತಃ ಬಸವಣ್ಣನವರೇ ತಮ್ಮ ಬಹುತೇಕ ವಚನಗಳಲ್ಲಿ ಇವರನ್ನು ಸ್ಮರಿಸಿ ಮುಂದೆ ಹೋಗಿದ್ದಾರೆ. ಮಾದರಿಗೆ ಈ ವಚನಗಳು:

ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ
ಬಲ್ಲಾಳನ ವಧುವಿನೊಡನೆ ಸರಸವಾಡಿದಂದಿಂದ ಭಯ ಕಾಣಿರಣ್ಣಾ
ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣಾ
ದಾಸನ ವಸ್ತ್ರವ ಸೀಳಿದಂದಿಂದ ಭಯ ಕಾಣಿರಣ್ಣಾ
ಅಘಟಿತಘಟಿತರು ವಿಪರೀತ ಚರಿತರು
ಕೂಡಲ ಸಂಗನ ಶರಣರು ನಡೆದ ದಾರಿ ಭಯ ಕಾಣಿರಣ್ಣಾ

ಹೀಗೆ ಎಲ್ಲರಿಗೆ ಅಸಾಧ್ಯವಾಗಿದ್ದ ಭಕ್ತಿಕರಗಸದ ಹಾದಿಯಲ್ಲಿಯೇ ನಡೆದ ಬಸವಣ್ಣ ಸಿಂಧು ಬಲ್ಲಾಳ, ಭಕ್ತ ಸಿರಿಯಾಳ, ಜೇಡರ ದಾಸಿಮಯ್ಯಗಳ ಹಾಗೆ ತನ್ನೊಡವೆಯೆಂಬುದನ್ನು ಶಿವನಿಗೆ/ ಶಿವಭಕ್ತರಿಗೆ ಒಪ್ಪಿಸುವ ಭಾಷೆಯನ್ನು ತಾನಾದರೂ ತೊಟ್ಟುದನ್ನು ಈ ಮುಂದಿನ ವಚನ ಹೇಳುತ್ತದೆ:

ಅರ್ಥವನರ್ಥವ ಮಾಡಿ ಕೋಳಾಹಳಂಗೆಯ್ಯುತ್ತಿರಲಿ
ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿಯುತ್ತಿರಲಿ
ಮುಟ್ಟುವ ಸ್ತ್ರೀಯ ಕಣ್ಣ ಮುಂದೆ
ಅಭಿಮಾನಂಗೊಂಡು ನೆರೆವುತ್ತಿರಲಿ
ಇಂತೀ ತ್ರಿವಿಧವು ಹೊರಗಣವು
ಇನ್ನೆನ್ನಂಗದ ಮೇಲೆ ಬರಲಿ, ಹಿಡಿಖಂಡವ ಕೊಯ್ಯಲಿ
ಇಕ್ಕುವ ಶೂಲ ಪ್ರಾಪ್ತಿಸಲಿ
ಹಾಕೊಂದೆಸೆ ಹನ್ನೊಂದೆಸೆಯಾಗಿ ಮಾಡುತ್ತಿರಲಿ
ಮತ್ತೆಯೂ ಲಿಂಗಾರಾಧನೆಯ ಮಾಡುವೆ
ಜಂಗಮಾರಾಧನೆಯ ಮಾಡುವೆ, ಪ್ರಸಾದಕ್ಕೆ ತಪ್ಪೆ
ಇಂತಪ್ಪ ಭಾಷೆ ಹುಸಿಯಾದಡೆ
ನೀನಂದೆ ಮೂಗಕೊಯಿ, ಕೂಡಲ ಸಂಗಮದೇವಾ

ಹೆಂಡತಿ ಮಕ್ಕಳು, ಧನಕನಕ ಎಲ್ಲವನ್ನು ಶಿವನಿಗಾಗಿ ಈಡಾಡುವ ಬಸವಣ್ಣನ ಹಂಬಲದ ಹಿಂದೆ 'ಅಘಟಿಘಟಿತರು ವಿಪರೀತ ಚರಿತರು' ಎನಿಸಿದ, ಮೇಲೆ ಗಮನಿಸಿದಂತೆ

ತಮಿಳು ಪುರಾತರು ಕನ್ನಡಾಂಧ್ರದ ಆದ್ಯರು ಇರುವುದು ಸ್ಪಷ್ಟ. ಬಸವಭಕ್ತಿ ಪರಂಪರೆಗೆ ಈ ಹಿನ್ನೆಲೆ ಇದೆ. ಈ ಹಿನ್ನೆಲೆಯಲ್ಲಿಯೇ ಅವರು ಭಕ್ತಿಪಥವನ್ನು ಸ್ಪಷ್ಟಪಡಿಸಿಕೊಂಡಿದ್ದಾರೆ:

ಭಕ್ತಿ ಎಂತಹುದಯ್ಯ? ದಾಸಯ್ಯ ಮಾಡಿದಂತಹದು
ಭಕ್ತಿ ಎಂತಹುದಯ್ಯ? ಸಿರಿಯಾಳ ಮಾಡಿದಂತಹದು
ಭಕ್ತಿ ಎಂತಹುದಯ್ಯ? ಸಿಂಧು ಬಲ್ಲಾಳ ಮಾಡಿದಂತಹದು
ಭಕ್ತಿ ಎಂತಹುದಯ್ಯ? ಕೂಡಲ ಸಂಗಮದೇವಾ
ನೀ ಬಾಣನ ಬಾಗಿಲ ಕಾಯ್ದಂತಹದು

ಶಿವನಿಗೆ / ಶಿವಭಕ್ತರಿಗೆ ಸೂರೆಯಾಗುವ ಸಂಪತ್ತಿನ ನಷ್ಟದ ಭಕ್ತಿಮಾತ್ರವೇ ಅಲ್ಲ, ಕುಲದ ತರತಮವೆಣಿಸದ, ಕೀಳುಕುಲದ ಮುಂದೆ ಬಾಗಿನಿಲ್ಲುವ ಭಕ್ತಿಯೂ ಅವನದೇ:

ಭಕ್ತಿಯಿಲ್ಲದ ಬಡವ ನಾನಯ್ಯ
ಕಕ್ಕಯ್ಯನ ಮನೆಯಲೂ ಬೇಡಿದೆ
ಚೆನ್ನಯ್ಯನ ಮನೆಯಲೂ ಬೇಡಿದೆ
ದಾಸಯ್ಯನ ಮನೆಯಲೂ ಬೇಡಿದೆ
ಎಲ್ಲಾ ಪುರಾತನರು ನೆರೆದು ಭಕ್ತಿಭಿಕ್ಷವನಿಕ್ಕಿದರೆ
ಎನ್ನಪಾತ್ರೆ ತುಂಬಿತ್ತು ಕೂಡಲಸಂಗಮದೇವಾ

ಬಸವನ ಭಕ್ತಿಮಾರ್ಗದ ದಿಕ್ಕು ಯಾವುದು ಎಂಬುದು ಆತನ ಈ ವಚನದಲ್ಲಿ ಧೃಢವಾಗಿ ಬಂದಿದೆ; ಅಂತ್ಯಜರ ಭಕ್ತಿಶ್ರೇಷ್ಠತೆಯನ್ನು ಭಿಕ್ಷವಾಗಿ ತುಂಬಿಕೊಳ್ಳಲು ಬಸವಣ್ಣನಿಗೆ ಸಾಧ್ಯವಾಗಿರುವುದರಿಂದಲೇ 'ಗೋತ್ರ ಮಾದಾರ ಚನ್ನಯ್ಯ' ಎಂಬ ಉದ್ಘೋಷ ಆತನಿಂದ ಹೊರಬೀಳುತ್ತದೆ. ಈ ವಚನದಲ್ಲಿ ಕಕ್ಕಯ್ಯ ಚನ್ನಯ್ಯರ ಜೊತೆಗೆ ದಾಸಯ್ಯ ಅಂದರೆ ಜೇಡರ ದಾಸಿಮಯ್ಯನ್ನು ಸೇರಿಸಿ 'ಪುರಾತನರು' ಎಂದು ಕರೆದಿರುವುದನ್ನು ನೋಡಿದರೆ, ಬಸವನಿಗೆ ತನ್ನ ಮುನ್ನಿನವರೆಲ್ಲಾ ಪುರಾತನರೇ ಎಂಬುದು ವೇದ್ಯವಾಗುತ್ತದೆ; ನಾವಾದರೂ ಬಸವಪೂರ್ವ ಯುಗದ ಎಲ್ಲ ಶರಣರನ್ನು ಒಟ್ಟಾಗಿ ಪುರಾತನರೆಂದೇ ಗ್ರಹಿಸುವುದು ಸರಿಯಾಗುತ್ತದೆ. ಇವರಲ್ಲಿ ಸ್ಥಾವರಲಿಂಗಾರ್ಚಕ ತಮಿಳು ಪುರಾತನರೂ ಸ್ಥಾವರವನ್ನು ಹಿಂದಿಟ್ಟು ಇಷ್ಟಲಿಂಗ ಸಂಸ್ಕೃತಿಗೆ ಕ್ರಮೇಣ ಒಲಿಯುತ್ತಿದ್ದ ಜೇಡರ ದಾಸಿಮಯ್ಯಾದಿಗಳೂ ಬರುತ್ತಾರೆ.

ಬಸವಣ್ಣ ಮತ್ತೆ ಮತ್ತೆ ಸ್ಮರಿಸುವ ಪುರಾತನರಲ್ಲಿ ಜೇಡರ ದಾಸಿಮಯ್ಯ ಬಹು ದೊಡ್ಡ ಹೆಸರು. ಆದ್ಯ ವಚನಕಾರನೆಂದು ಗುರುತಿಸಲಾಗುವ ಈತ "ಸೊಳ್ನುಡಿ"ಯ ಶರಣರು, "ನುಡಿಗಡಣ"ದ ಮೃಡಶರಣರನ್ನು ಕುರಿತು ಪ್ರಸ್ತಾಪಿಸುವುದನ್ನು ವಚನಸಾಹಿತ್ಯದ ಪ್ರಾಚೀನತೆಗೆ ತಪ್ಪದೆ ಉದಾಹರಿಸುತ್ತೇವೆ. ಜಂಗಮವೇಷದ ಶಿವನಿಗೆ ತಾನು ನೇಯ್ದ ಬೆಲೆಬಾಳುವ ವಸ್ತ್ರವನ್ನು ಧಾನವಿತ್ತುದಕ್ಕೆ ಪ್ರತಿಯಾಗಿ ಶಿವನಿಂದ ತವನಿಧಿಯನ್ನು ಪಡೆದ ಮುದನೂರಿನ (ಗುಲಬರ್ಗಾ ಜಿಲ್ಲೆ) ಜೇಡರ ದಾಸಿಮಯ್ಯನ ಭಕ್ತಿ ಪ್ರಸಿದ್ಧವಾದುದು. ಮುಂದೆ ಈತನಲ್ಲಿ ತೋರಿದ ಸೂಕ್ಷ್ಮ ಅಹಂಕಾರವನ್ನು ಇನ್ನೊಬ್ಬ ಶರಣ ಶಂಕರದಾಸಿಮಯ್ಯ (ರಾಯಚೂರು ಜಿಲ್ಲೆಯ ನವಿಲೆ) ಅಳಿದುದನ್ನು ಚರಿತ್ರೆ ಹೇಳುತ್ತದೆ. ಶಂಕರ ದಾಸಿಮಯ್ಯನೂ ವಚನಕಾರ; ಶಂಕರ ದಾಸಿಮಯ್ಯನ ನೊಸಲಗಣ್ಣ ಹಮ್ಮನಳಿದನೆಂದು ಹೇಳಲಾಗುವ ಡಕ್ಕೆಯ ಬೊಮ್ಮಯ್ಯನೂ ವಚನಕಾರನಾಗಿದ್ದು 'ಕಾಲಾಂತಕ ಭೀಮೇಶ್ವರಾ' ಅಂಕಿತದ

ಆತನ ೬೦ ವಚನಗಳು ಪ್ರಕಟವಾಗಿವೆ. ಅಂತೆಯೇ ಜೇಡರ ದಾಸಿಮಯ್ಯನ ಪತ್ನಿ ದುಗ್ಗಳೆಯ ವಚನರಚನಾ ಪ್ರಯತ್ನವೂ ಕಣ್ಣಿಗೆ ಬೀಳುತ್ತದೆ. ಇವರೆಲ್ಲ ಬಸವಪೂರ್ವ ಯುಗಕ್ಕೆ ಸೇರಿದ್ದರೂ ಬಸವಣ್ಣನಿಗೆ ಹಿರಿಯ ಸಮಕಾಲೀನರೇ ಆಗಿದ್ದರೆಂದು ಭಾವಿಸಲು ಅವರ ವಚನಗಳಲ್ಲಿ ಬಸವಾದಿಗಳ ಸ್ಮರಣೆ ಇರುವುದು ಮುಖ್ಯ ಕಾರಣವಾಗಿದೆ. ಇದೇ ಕಾರಣಕ್ಕೆ ಜೇಡರ ದಾಸಿಮಯ್ಯನ ಜೊತೆಗೆ ತಳುಕು ಹಾಕಿಕೊಳ್ಳುವ ಶಂಕರ ದಾಸಿಮಯ್ಯನ ಕಾಲವು ಜೇಡರ ದಾಸಿಮಯ್ಯ ದೇವರ ದಾಸಿಮಯ್ಯ ಬೇರೆ ಬೇರೆ ವ್ಯಕ್ತಿಗಳು ಎನ್ನುವಂತೆ ಮಾಡಿದೆ. ಬಸವಪುರಾಣವಿಡಿದು ಮುಂದಿನ ಕಾವ್ಯಪುರಾಣಗಳು ಇವರು ಬೇರೆ ಬೇರೆ ಎಂಬ ಚಿತ್ರಣ ನೀಡುತ್ತಿರುವುದೂ ಮತ್ತೊಂದು ಪ್ರಬಲ ಕಾರಣವಾಗಿದೆ. ಅಂತಃಪ್ರಮಾಣಗಳಲ್ಲಿ ಸ್ವತಃ ಜೇಡರ ದಾಸಿಮಯ್ಯನೇ ಕೊಂಡಗುಳಿ ಕೇಶಿರಾಜ, ಕಂಭಾವಿ ಭೋಗಣ್ಣ ಮೊದಲಾದವರನ್ನು ಸ್ಮರಿಸುವುದರಿಂದ ಇವರಿಗೆಲ್ಲ ಪೂರ್ವದಲ್ಲಿದ್ದ ದೇವರ ದಾಸಿಮಯ್ಯನನ್ನು ಜೇಡರ ದಾಸಿಮಯ್ಯನೊಂದಿಗೆ ಏಕೀಕರಿಸಲು ಬಾರದು. ಸದ್ಯದ ಸ್ಥಿತಿಯಲ್ಲಿ ದೇವರ ದಾಸಿಮಯ್ಯನನ್ನು ಬಸವಪೂರ್ವಯುಗದ ಆ ತುದಿ ಎಂದೂ ಜೇಡರ ದಾಸಿಮಯ್ಯನನ್ನು ಈ ತುದಿ ಎಂದು ಭಾವಿಸುತ್ತ ಇವರ ಮಧ್ಯದ ಕಾಲದಲ್ಲಿ ಬರುವ ಮಾದಾರ ಚನ್ನಯ್ಯ, ಮಾರುಡಿಗೆಯ ನಾಚಯ್ಯ, ತೆಲುಗು ಜೊಮ್ಮಯ್ಯ, ಕೊಂಡಗುಳಿ ಕೇಶಿರಾಜ, ಬಾಹೂರ ಬೊಮ್ಮಯ್ಯ, ಕಂಭಾವಿ ಭೋಗಣ್ಣ, ಶಂಕರ ದಾಸಿಮಯ್ಯ, ಡಕ್ಕೆಯ ಬೊಮ್ಮಯ್ಯ ಇವರನ್ನು ಲಕ್ಷಿಸಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಇವರೆಲ್ಲರ ಇತಿವೃತ್ತಗಳಿಗೆ ಹೋಗುವುದಕ್ಕಿಂತ, ಇವರೆಲ್ಲರಿಗೆ ಸಮಾನವಾಗಿದ್ದ ಲಕ್ಷಣಗಳನ್ನು ಗಮನಿಸುವುದು ಸರಿ ಎಂದುಕೊಳ್ಳಲಾಗಿದೆ. ಈ ಲಕ್ಷಣಗಳು ಹೀಗಿದೆ:

೧. ಶಿವನ ಅಧಿಕ್ಯ ಸ್ಥಾಪನೆಗೆ ಜೈನ ಮತ್ತು ವೈಷ್ಣವರೊಂದಿಗೆ ಹೋರಾಟ

೨. ಶಿವಕುಲದವರಲ್ಲಿ ಪರಸ್ಪರ ಜಾತಿ-ಲಿಂಗ-ವರ್ಗ ಇತ್ಯಾದಿ ಭೇದವಿಲ್ಲ

೩. ಭವಿ ರಾಜನೇ ಇದ್ದರೂ ವಿರೋಧ

೪. ೬೪ ಶೀಲಗಳನ್ನು ಅರಿತು ಬಳಸುವುದು

೫. ಶಿವಭಕ್ತರು ತಪ್ಪಿದಲ್ಲೆಲ್ಲ ಪರಸ್ಪರ ತಿದ್ದಿಕೊಳ್ಳುವುದು

೬. ಲಿಂಗ ಜಾರಿದರೆ ಆತ್ಮಾರ್ಪಣೆ

೭. ಅನುಭಾವದ ಗೋಷ್ಠಿ ಮಾಡುವುದು

೮. ಸಾಹಿತ್ಯ ರಚನೆ

ಇವುಗಳನ್ನು ವಿವರಿಸಬಹುದು.

೧. ಶಿವನ ಅಧಿಕ್ಯ ಸ್ಥಾಪನೆಗೆ ಜೈನ ಮತ್ತು ವೈಷ್ಣವರೊಂದಿಗೆ ಹೋರಾಟ

ಬಸವಪೂರ್ವಯುಗದ ಮೊದಲ ಶಿವಭಕ್ತ ಎನ್ನಬಹುದಾದ ದೇವರ ದಾಸಿಮಯ್ಯನಲ್ಲಿಯೇ ಈ ಹೋರಾಟದ ಸೂಚನೆ ಕಂಡುಬರುತ್ತದೆ. ಪೊಟ್ಟಲಕೆರೆಯನ್ನು ಆಳುತ್ತಿದ್ದ ಜಯಸಿಂಹನ (ಕ್ರಿ.ಶ. ೧೦೪೦) ಹೆಂಡತಿ ಸುಗ್ಗಲೆಗೆ ಗುರುವಾಗಿದ್ದ ಈತ, ಜೈನರೊಂದಿಗೆ ವಾದಿಸಿ ಗೆಲಲೆಂದೇ ಅರಮನೆಯ ಅಮಂತ್ರಣದ ಮೇರೆಗೆ ಪೊಟ್ಟಲಕೆರೆಗೆ ಹೋಗುತ್ತಾನೆ. ಅಲ್ಲಿ ಘಟಸರ್ಪದ ಪವಾಡ ನಡೆದು ಜೈನರನ್ನು ಮಣಿಸುತ್ತಾನೆ. ಇವನ ಮಹಿಮೆಗೆ ಶರಣಾದ ಅರಸ ಜಯಸಿಂಹ ಇವನ ಶಿಷ್ಯತ್ವ ವಹಿಸುತ್ತಾನೆ.

ಜೇಡರ ದಾಸಿಮಯ್ಯನ ಸಮಕಾಲೀನ ಎನ್ನಬಹುದಾದ ಕೆಂಭಾವಿ ಭೋಗಣ್ಣ (ಸುರಪುರ ತಾಲೂಕು, ಗುಲಬರ್ಗಾ ಜಿಲ್ಲೆ) ಶಿವಭಕ್ತನಾಗಿ ಭಕ್ತರಲ್ಲಿ ಜಾತಿ ಎಣಿಸದಾತ. ಒಮ್ಮೆ ತನ್ನ ಮನೆಗೆ ಬಂದಿದ್ದ ಅಂತ್ಯಜನ್ನು ಮನೆಯೊಳಗೆ ಪ್ರಸಾದವಿತ್ತು ಸತ್ಕರಿಸಿದುದನ್ನು ಊರ ವಿಪ್ರರು ಅರಸ ಚಂದಿಮರಸಗೆ ದೂರಿದಾಗ, ಅರಸ ಈತನನ್ನು ಊರಿನಿಂದ ಹೊರಹಾಕುತ್ತಾನೆ. ಆದರೆ ಊರು ತೊರೆದ ಭೋಗಣ್ಣನೊಂದಿಗೆ ದೇಗುಲದ ಲಿಂಗಗಳೆಲ್ಲ ಹೊರಟಾಗ ತಪ್ಪನ್ನರಿತ ಅರಸ ಆತನನ್ನು ಮತ್ತೆ ಊರಿಗೆ ಬರಮಾಡಿಕೊಳ್ಳುತ್ತಾನೆ: ಲಿಂಗಗಳೆಲ್ಲ ಮರಳುತ್ತವೆ.

ಕಲಬುರ್ಗಿ ಜಿಲ್ಲೆಯ ಶಿವಪುರದಲ್ಲಿದ್ದ ನಾಚಯ್ಯನು, ಮಾರುಡಿಗೆಯ ಜೈನರು ಶಿವಭಕ್ತನನ್ನು ಥಳಿಸಿದ ಸಂಗತಿಯನ್ನು ಶಿವನಿಂದ ಕನಸಲ್ಲಿ ತಿಳಿದು, ಹದಿಮೂರು ಜನ ಶಿವಭಕ್ತರೊಂದಿಗೆ (ತೇರಸ ಗಣ) ಮಾರುಡಿಗೆಗೆ ಹೋಗಿ ಅಲ್ಲಿನ ಜಿನಪ್ರತಿಮೆ ಕಿತ್ತು ಲಿಂಗಸ್ಥಾಪನೆ ಮಾಡುತ್ತಾನೆ. ಆಗ ಜೈನರೊಂದಿಗೆ ದೊಡ್ಡ ಕದನವೇ ನಡೆದು ತೇರಸಗಣ ಮಡಿಯುತ್ತದೆ. ಸುದ್ದಿ ತಿಳಿದ ಶಿವಪುರದ ಶಿವಭಕ್ತರೆಲ್ಲ ಬಂಡಿತುಂಬ ಲಿಂಗಗಳನ್ನು ಹೇರಿ ತಂದು ಊರಿನ ಎಲ್ಲ ಬಸದಿಗಳಲ್ಲಿ ಸ್ಥಾಪಿಸುತ್ತಾರೆ.

ತ್ರಿಪುರಾಂತಕ ದೇವಾಲಯದಲ್ಲಿ ನರ್ತನ ನೋಡುತ್ತಿದ್ದ ಜನರು ಅಲ್ಲಿ ಹಾದುಹೋಗುತ್ತಿದ್ದ ಶರಣ ಬಾಹೂರು ಬೊಮ್ಮಯ್ಯ ದಾಟುವವರೆಗೆ ನರ್ತನ ನಿಲ್ಲಿಸಲು ಹೇಳಿದಾಗ ಅಲ್ಲಿದ್ದ ಜೈನನೊಬ್ಬ "ಇವನೇನು ಕಲ್ಲು ಬಸವಗೆ ಕಬ್ಬು ಮೇಯಿಸುವನ?" ಎಂದು ಕುಹಕವಾಡಿದುದಕ್ಕೆ ಬೊಮ್ಮಯ್ಯ ಹಾಗೆ ಮಾಡಿ ತೋರುತ್ತಾನೆ.

೨. ಶಿವಕುಲದವರಲ್ಲಿ ಪರಸ್ಪರ ಜಾತಿ-ಲಿಂಗ-ವರ್ಗ ಇತ್ಯಾದಿ ಭೇದವಿಲ್ಲ

ಜೇಡರ ದಾಸಿಮಯ್ಯ ಆದ್ಯ ವಚನಕಾರ ಎನಿಸಿರುವಂತೆ, ಇವನಿಗೆ ಪೂರ್ವದಲ್ಲಿದ್ದ ಕೊಂಡಗುಳಿ ಕೇಶಿರಾಜ ಕಂದ ವೃತ್ತಗಳಲ್ಲಿ ಕೃತಿರಚನೆ ಮಾಡಿ ಮೊದಲ ಶಿವಕವಿ ಎನಿಸಿದಾತ. ಜೇಡರ ದಾಸಿಮಯ್ಯನ ಕಾಲವನ್ನು ವಿದ್ವಾಂಸರು ಕ್ರಿ.ಶ. ೧೧೪೦ ಎಂದು ಗ್ರಹಿಸಿದ್ದಾರೆ. ಈ ದಾಸಿಮಯ್ಯ ತನ್ನ ವಚನದಲ್ಲಿ ಕೊಂಡಗುಳಿ ಕೇಶಿರಾಜನಿಗೆ ಸಂಬಂಧಿಸಿದ ಲಿಂಗಪವಾಡದ ಘಟನೆಯನ್ನು (ಜಗವೆಲ್ಲವರಿಯಲು ತೊರೆಯೊಳಗೆ ಬಿದ್ದ ಲಿಂಗ ಕರೆದರೆ ಬಂದುದು ಕರಸ್ಥಲಕ್ಕೆ) ಹೇಳುತ್ತಾನೆ.

ಆರನೆಯ ವಿಕ್ರಮಾದಿತ್ಯನ ದಂಡನಾಯಕನಾಗಿದ್ದ ಕೊಂಡಗುಳಿ ಕೇಶಿರಾಜ (ವಿಜಾಪುರ ಜಿಲ್ಲೆಯ ಕೊಂಡಗುಳಿ) ನ ಕಾಲ ಕ್ರಿ.ಶ. ೧೧೦೭-೧೧೩೨. ಆಗಲದ ಲಿಂಗನಿಷ್ಠೆಯಷ್ಟೇ ಶರಣಸಂಗಪ್ರೇಮಿಯಾಗಿದ್ದ ಈತ, ಹರಿಹರ ಹೇಳುವಂತೆ, ಒಮ್ಮೆ ಶಿವಗೋಷ್ಠಿಯಲ್ಲಿ ತಲ್ಲೀನನಾಗಿದ್ದಾಗ ಅರಸು ಪೆರ್ಮಾಡಿಯ (ವಿಕ್ರಮಾದಿತ್ಯ) ಕರೆ ಬಂದು "ಸಿರಿಯ ಸಂಗಂ ಶರಣಸಂಗಕ್ಕೆ ಪಗೆಯಾಯ್ತು ಎಂದು ಬೇಸರಿಸಿಕೊಂಡೇ ಹೊರಡುತ್ತಾನೆ. ಎಂದಿನಂತೆ ರಾಜನಿಗೆ ಬಾಗದೆ ತನ್ನ ಬೆರಳ ಗುರುಮುದ್ರಿಕೆಗೆ ಮಂದಿಸಿ ನಿಲ್ಲುತ್ತಾನೆ. ಇದು ತನ್ನ ಅಗೌರವ ಎಂದು ಬಗೆದ ಅರಸ" ಕಂಡಿರೇ ಎನ್ನಿಂದವೀ ಸಂಪದಂಬಡೆದು. ಅಂಡಲೆವ ದಾರಿದ್ರ್ಯವೆಲ್ಲವಂ ನೆರೆ ತೊಡೆದು. ಎನಗೆ ಪೊಡಮಡದುದಾಸೀನಮಂ ಮಾಳ್ಪರೇ" ಎಂದು ಹಂಗಿಸಿದ ಅರಸನ ಮಾತಿಗೆ ಸಿಡಿದು ಬಿದ್ದ ಕೇಶಿರಾಜ" ಕೇಳರಸ ನಿನ್ನ ಸಿರಿ ನಿನಗಕ್ಕೆ ನಿನಗಕ್ಕೆ, ಶೂಲಿಯಣುಗರ ಸಂಗಸಂಪದವದೆನಗಕ್ಕೆ ಎಂದು ತನಗೆ ಅರಸನಿತ್ತಿದ್ದ ಗೌರವಗಳನ್ನು ಅವನಿಗೆ ಹಿಂದಿರುಗಿಸಿ ಪತ್ನಿಯೊಂದಿಗೆ ಕಲ್ಯಾಣ ತೊರೆಯುತ್ತಾನೆ. ಆಗ ಈತನನ್ನು ಬರಮಾಡಿಕೊಂಡಾತ ಬಿದಿರು ಕಾಯಕದ ವಂಶವರ್ಧನ ಎಂಬ ಶಿವಭಕ್ತ.

ರಾಜಸೇವೆ ತಿರಸ್ಕರಿಸಿ ಶಿವಭಕ್ತಿಗೆ ಮರಳಿದ ಕೇಶಿರಾಜನನ್ನು ಶಿವಭಕ್ತನೇ ಎದುರುಗೊಂಡು ಸ್ವಾಗತಿಸಿ ಮನೆಗೆ ಕರೆತರುವುದನ್ನು ನೋಡಿದರೆ ಶಿವಭಕ್ತರು ಪರಸ್ಪರ ಒಂದೇ ಕುಟುಂಬದವರು ಎಂಬಂತೆ ತೋರುತ್ತಿದ್ದ ಪ್ರೀತಿ ವಿಶ್ವಾಸ ಉತ್ಸಾಹಗಳು ಅರಿವಿಗೆ ಬರುತ್ತವೆ. ವಂಶವರ್ಧನ ಕೆಳವರ್ಗದವನಾಗಿರುವುದು (ಮೇದಾರ), ಇವನೊಂದಿಗೆ ಮೇಲುವರ್ಗ ಮತ್ತು ವರ್ಣಗಳ ಕೇಶಿರಾಜ ಸಲುಗೆಯಿಂದ ನಡೆದುಕೊಳ್ಳುವುದು ಇದು ಶಿವಭಕ್ತರು ಜಾತಿಭೇದ ಇತ್ಯಾದಿ ನೋಡುತ್ತಿಥಲಿಲ್ಲ ಎಂಬುದಕ್ಕೆ ಸಾಕ್ಷಿ.

ವಂಶವರ್ಧನನ ಮನೆಯಲ್ಲಿ ಏಳುದಿನಗಳ ಕಾಲ ಹಸಿವು ನಿದ್ರೆಯ ಪರಿವೆಯಿಲ್ಲದೆ ಪುರಾತನ ಗೀತಗಳನ್ನು ಹಾಡುತ್ತ ಮೈಮರೆತ ಕೇಶಿರಾಜನ ಸುದ್ದಿ ತ್ರಿಪುರಾಂತಕ ದೇವಾಲಯದವರೆಗೆ ಮಂಟಪವೆದ್ದು ಜನ ನೆರೆದಾಗ ಕೇಶಿರಾಜನ ಶಿವಭಕ್ತಿ- ಜನಭಕ್ತಿ ಎರಡನ್ನೂ ನೋಡಿದ ಪೆರ್ಮಾಡಿರಾಯ ಮತ್ತೆ ಆತನನ್ನು ಮಂತ್ರಿಪದವಿಗೆ ತೆಗೆದುಕೊಳ್ಳುತ್ತಾನೆ. ಆಗ ಆತನಿಗೆ,ತೆಲುಗು ಜೊಮ್ಮಯ್ಯ ಎಂಬ ಶಿವಭಕ್ತನ ಸಂಪರ್ಕ ಬರುತ್ತದೆ.

ತೆಲುಗು ಜೊಮ್ಮಯ್ಯನದು ಬೇಟೆ ಕಾಯಕ. ಸೇವನೆ ಮಾಂಸಾಹಾರ. ಕೇಶಿರಾಜ ಒಮ್ಮೆ ಜೊಮ್ಮಯ್ಯನನ್ನು ಕಾಣಲು ಹೋದವನು ಮನೆ ತುಂಬ ಮಾಂಸ ನೋಡಿ ಜೊಮ್ಮಯ್ಯನನ್ನು ಕಾಣದೆ ತಿರುಗಿ ಬರುತ್ತಾನೆ. ಜೊಮ್ಮಯ್ಯ ತನ್ನ ಕಾಣಬಂದ ಕೇಶಿರಾಜನನ್ನು ಮನೆಗೆ ಕರೆತಂದು ಸತ್ಕರಿಸಲಿಚ್ಛಿಸಿ ಕರೆಯಹೋದರೆ ಕೇಶಿರಾಜ ಪೂಜೆಯ ನೆಪಹೇಳಿ ನಿರಾಕರಿಸುತ್ತಾನೆ. ಆದರೆ ಲಿಂಗದಾಣತಿಯಂತೆ ಪೂಜೆಗೆ ಜೊಮ್ಮಯ್ಯನ ಮನೆಗೇ ಹೋಗಬೇಕಾಗಿ ಬರುತ್ತದೆ. ಅಳುಕಿನಿಂದಲೇ ಹೋಗುತ್ತಾನೆ. ಪೂಜೆ ಮುಗಿದು ಪ್ರಸಾದಕ್ಕೆ ಕೈಇಟ್ಟರೆ ಮಾಂಸವೆಲ್ಲ ಪಕ್ವಾನ್ನವಾಗಿರುತ್ತದೆ.

ತೆಲುಗು ಜೊಮ್ಮಯ್ಯನೊಂದಿಗೆ ಕೇಶಿರಾಜನ ನಡತೆಯಲ್ಲಿ ಎರಡು ಅಂಶ ಸ್ಪಷ್ಟ ಇವೆ. ಪುನಃ ಅಧಿಕಾರಕ್ಕೆ ಮರಳಿದ ಕೇಶಿರಾಜ ತಾನೇ ಮುಂದಾಗಿ ಜೊಮ್ಮಯ್ಯನ ಮನೆಗೆ ಹೋಗುವಲ್ಲಿ ಶಿವಭಕ್ತರೊಂದಿಗೆ ಜಾತಿನೋಡದ, ಪದವಿಪ್ರತಿಷ್ಠೆ ಮುಂದೆ ಮಾಡಿಕೊಳ್ಳದ ಸಹಜಭಕ್ತಿಯ ಸರಳ ನಡೆ ಇದೆ. ಆದರೆ ಜೊಮ್ಮಯ್ಯನ ಮಾಂಸಾಹಾರ ಕಾರಣವಾಗಿ ಪೂಜೆ-ಸಹಭೋಜನಕ್ಕೆ ಹಿಂದೇಟು ಹಾಕುವಲ್ಲಿ ಮುಜುಗುರ ಕಾಡಿರುವುದೂ ಇದೆ. ಇದು ಸಹಜವೇ ಆಗಿದ್ದರೂ ಶಿವಭಕ್ತಿಗೂ ಅಹಾರಕ್ಕೂ ಸಂಬಂಧವಿಲ್ಲವೆನ್ನುವುದು ಜೊಮ್ಮಯ್ಯನ ಪವಾಡದ ಮೂಲಕ ಹರಿಹರ ಎತ್ತಿತೋರುವಲ್ಲಿ, ಈ ಪವಾಡ ಕೇಳಿಯೇ ಅರಸು ಪೆರ್ಮಾಡಿರಾಯ ಜೊಮ್ಮಯ್ಯನನ್ನು ಸಾವಿರ ಹೊನ್ನು ಸಂಬಳದ ಮೇಲೆ ಮಂತ್ರಿಯಾಗಿ ನೇಮಿಸಿಕೊಳ್ಳುವುದೂ ಸಹ ಭಕ್ತಿಗೆ ದೊರೆತ ಆತ್ಯಂತಿಕ ವಿಜಯವೇ ಆಗಿದೆ.

೩. ಭವಿ ರಾಜನೇ ಇದ್ದರೂ ವಿರೋಧ

ಶಿವನಿಗೆ ವೇಳೆವಾಳಿ, ರಾಜನಿಗೆ ಜೋಳವಾಳಿ- ಇದು ಈ ಯುಗದ ಶರಣರು ರಾಜರೊಂದಿಗೆ ನಡೆದುಕೊಂಡ ರೀತಿ. ಇದನ್ನೇ ಬಸವ ಯುಗದಲ್ಲೂ ಬಸವೋತ್ತರ ಯುಗದಲ್ಲೂ ನಾವು ಕಾಣುತ್ತೇವೆ. ಈ ಧೋರಣೆಯಲ್ಲಿ ಅವರು ಅಚಲರು. ಆದರೆ ಇನ್ನೊಬ್ಬರ ದೈನ್ಯದಲ್ಲಿ ತನ್ನ ಪ್ರತಿಷ್ಠೆ, ಪಟ್ಟದ ಸುಖ ಅನುಭವಿಸುವ ಅರಸರಿಗೆ ಶರಣರ ಈ ಆತ್ಮಾಭಿಮಾನದ ವರ್ತನೆ ಕಿರಿಕಿರಿ ತಂದುದು ಸಹಜವೇ ಆಗಿದೆ. ಈ ಕಾರಣಕ್ಕಾಗಿ ತೆಲುಗು ಜೊಮ್ಮಯ್ಯ. ಕೊಂಡಗುಳಿ ಕೇಶಿರಾಜರ ವಿರುದ್ಧ ಆರನೆಯ ವಿಕ್ರಮಾದಿತ್ಯ, ಕೆಂಭಾವಿ ಭೋಗಣ್ಣನ ವಿರುದ್ಧ ಚಂದಿಮರಸ ಮನಸ್ತಾಪದಲ್ಲಿ ಸೆಣಸುತ್ತಾರಾದರೂ ಈ ಶಿವಭಕ್ತರ ಬಿಡದ ಶಿವನಿಷ್ಠೆ-ಶಿವಮಹಿಮೆಗಳಿಂದ ಮನಸೋತು ರಾಜರೇ ತಮ್ಮ ತಪ್ಪು ತಿದ್ದಿಕೊಂಡಿದ್ದಾರೆ.

ರಾಜನೊಬ್ಬನು ಯೋಗ್ಯತೆಯ ಜೊತೆಗೆ ಜನಪ್ರಿಯತೆಯ ಎತ್ತರದಲ್ಲಿದ್ದ ವ್ಯಕ್ತಿಯನ್ನು ರಾಜ್ಯಾಧಿಕಾರಕ್ಕೆ ಆರಿಸುತ್ತಿದ್ದನೆಂದು ಕಾಣುತ್ತದೆ. ಜೊಮ್ಮಯ್ಯನ ಮಹಿಮೆ ತಿಳಿಯುತ್ತಲೇ ಪೆರ್ಮಾಡಿರಾಯ ಆತನನ್ನು ಮಂತ್ರಿಪದವಿತ್ತು ಗೌರವಿಸುವಲ್ಲಿ ಅಂಥ ರಾಜಕೀಯ ಇದೆ. ಕೊಂಡಗುಳಿ ಕೇಶಿರಾಜ, ಬಸವಣ್ಣನರನ್ನು ರಾಜಕೀಯಕ್ಕೆ ಸೆಳೆಯುವಲ್ಲಿ ಇದು ಎದ್ದು ಕಾಣುತ್ತದೆ. ಮತ್ತ ಮುಖ್ಯವಾಗಿ ರಾಜನ ಮೂಲಕ ರಾಜ್ಯಸೇವೆಗೆ ನಿಂತ ಇವರೆಲ್ಲ ಧಾರ್ಮಿಕ ಮುಖ್ಯರೇ ಆಗಿರುವುದು ಮಹತ್ವದ್ದಾಗಿದೆ. ಪ್ರಜೆಗಳು ತಮ್ಮ ವಿರುದ್ಧ ಬಂಡಾಯವೇಳದಿರಲು ಸಾತ್ವಿಕ ಮುಖಗಳು ಇರಲಿ ಎಂಬಂಥ ರಾಜತಂತ್ರವೂ ಇಲ್ಲಿ ಅಡಗಿರಬಹುದು. ಎಲ್ಲ ಸಂದರ್ಭದಲ್ಲಿ ಇದು ನಿಜವಲ್ಲದಿದ್ದರೂ ಬಿಜ್ಜಳ ಬಸವಣ್ಣನ ಕ್ರಾಂತಿಕಾರಕತೆಯನ್ನು ಸಹಿಸುವಲ್ಲಿ ತಾನು ಅಪಮಾರ್ಗದಿಂದ ಚಾಲುಕ್ಯ ಸಿಂಹಾಸನವೇರಿದ ಪಾಪಪ್ರಜ್ಞೆ ಆತನಿಗೆ ಕಾಡಿರುವುದು (ಇದನ್ನು ವಿದ್ವಾಂಸರು ಗುರುತಿಸಿದ್ದಾರೆ) ನಿಜವೆನಿಸುತ್ತದೆ.

ಧರ್ಮಕ್ಕೂ ರಾಜಕೀಯಕ್ಕೂ ನಂಟು ಇದ್ದೆ ಇದೆ. ಜನತೆ ಧಾರ್ಮಿಕರಾಗಿರುವುದರಿಂದ ಬಹುಸಂಖ್ಯಾತ ಜನದ ಒಲವಿನ ಧರ್ಮದ ವ್ಯಕ್ತಿತತ್ವ ಸಾಹಿತ್ಯ, ಕಲೆ ಆಯಾ ರಾಜರ ಕಾಲದಲ್ಲಿ ಮೇಲ್ಮೆಗೆ ಬಂದದ್ದಿದೆ. ಆದರೆ ಶಿವಧರ್ಮೀಯರು ಅದರಲ್ಲೂ ವೀರಶೈವರು ಶಿವನ ಮುಂದೆ ರಾಜನನ್ನು ಗೌಣವಾಗಿ ಕಂಡ ಉದಾಹರಣೆಗಳೇ ಇವೆ. ಆದರೂ ರಾಜನೇ ಸಂಘರ್ಷದ ಹಾದಿ ತೊರೆದು ಇವರ ವ್ಯಕ್ತಿತ್ವದ ಘನತೆ ಒಪ್ಪಿ ನಿರಪೇಕ್ಷದ ಇವರನ್ನು ಅಧಿಕಾರಕ್ಕೆ ತೆಗೆದುಕೊಂಡಿದ್ದಾನೆ ಇಲ್ಲವೆ ಕಸಿದುಕೊಂಡ ಅಧಿಕಾರವನ್ನು ಮರಳಿ ಇತ್ತು ಮುಂದುವರಿಸಿದ್ದಾನೆ ಇಲ್ಲವೆ ತನ್ನ ರಾಜ್ಯದಲ್ಲಿ ಗೌರವಪೂರ್ವಕ ಬಾಳಿಕೊಂಡಿರಲು ಅನುಕೂಲ ಮಾಡಿಕೊಟ್ಟಿದ್ದಾನೆ. ಒಂದು ಹೆಜ್ಜೆ ಮುಂದೆ ಹೋಗಿ ತಾನು ಅವರಿಗೆ ಬಾಗಿದ್ದಾನೆ, ಅವರ ಧರ್ಮ ಸ್ವೀಕರಿಸಿದ್ದಾನೆ. ದೇವರ ದಾಸಿಮಯ್ಯನನ್ನು ಒಳಗೊಂಡು ಮಾದಾರ ಚನ್ನಯ್ಯ, ಕೆಂಭಾವಿ ಭೋಗಣ್ಣ, ತೆಲುಗು ಜೊಮ್ಮಯ್ಯ, ಕೊಂಡಗುಳಿ ಕೇಶಿರಾಜ, ಬಾಹೂರ ಬೊಮ್ಮಯ್ಯ ಮೊದಲಾದವರಲ್ಲಿ ಅಯಾ ಕಾಲದ ಅರಸರು ನಡೆದುಕೊಂಡ ರೀತಿ ಅಂಥದು. ಹರಿಹರ ಬಣ್ಣಿಸುವಂತೆ, ಭಕ್ತಿಯ ಮುಂದೆ ಆತ ಮಾದಾರ ಎಂಬುದನ್ನೂ ಲೆಕ್ಕಿಸದೆ ಅರಸು ಕರಿಕಾಲ ಚೋಳ ಚನ್ನಯ್ಯನ ಪದತಲಕ್ಕೆರಗುವುದು ಈ ದೇಶದ ಚರಿತ್ರೆಯಲ್ಲಿಯೇ ಅಪರೂಪದ ಘಟನೆ. ಪೆರ್ಮಾಡಿರಾಯನ ಮದೋನ್ಮತ್ತ ಆನೆಯನ್ನು ನೂಕಿ ಕೊಂದ ಬಾಹೂರು ಬೊಮ್ಮಯ್ಯನಿಗೆ ಶರಣು ಬರುವುದು ರಾಜನು ಶರಣರ ಪ್ರತಾಪಕ್ಕೆ ಅಂಜುತ್ತಿದ್ದ ಎಂಬುದಕ್ಕೆ ನಿದರ್ಶನವಾಗಿದೆ.

ಅರಸು ಜಯಸಿಂಹನ ಸತಿ ಸುಗ್ಗಲೆ ದೇವರ ದಾಸಿಮಯ್ಯನ ಶಿಷ್ಯತ್ವ ವಹಿಸುವುದು ಮತ್ತು ದಾಸಿಮಯ್ಯನ ಮಹಿಮೆ ತಿಳಿದು ಅರಸು ಜಯಸಿಂಹನೂ ಆತನ ಶಿಷ್ಯನಾಗುವುದೂ ವೀರಶೈವ ಧರ್ಮದ ಪ್ರಭಾವ ಪ್ರತಿಷ್ಠೆಯನ್ನು ಸಾರುವ ಘಟನೆಗಳು. ಆರನೆಯ ವಿಕ್ರಮಾದಿತ್ಯನ ಪತ್ನಿ ಲಕುಮಾದೇವಿ ತೆಲುಗು ಜೊಮ್ಮಯ್ಯನಲ್ಲಿ ಎಂಥ ಭಕ್ತಿ ಗೌರವಗಳನ್ನು ಇಟ್ಟಿದ್ದಳೆಂದರೆ, ಆತ ಶಿವನನ್ನು ವಿಷ್ಣುವಿನ ಮಹಿಮೆಯಡಿ ಕೀಳು ಮಾಡಿದನೆಂದು ಪುರಾಣ ಭಟ್ಟನನ್ನು ಕೊಂದು ಹಾಕಿದಾಗ ಅರಸನ ಕೋಪ ಜೊಮ್ಮಯ್ಯನ ಮೇಲೆ ಹರಿಯದಿರಲಿ ಎಂದು ಅರಸನ ಸಿಂಹಾಸನದ ಹಿಂದೆ ಲಿಂಗವಿಡಿದು ನಿಲ್ಲುತ್ತಾಳೆ: ಜೊಮ್ಮಯ್ಯಲಿಂಗಕ್ಕೆ ನಮಸ್ಕರಿಸಲಿ; ಅರಸನಿಗೆ ತನಗೆ ನಮಸ್ಕರಿಸದನೆನಿಸಲಿ ಎಂದು ಉಪಾಯ ಮಾಡುತ್ತಾಳೆ.

ಅರಸನ ಸ್ವಾಭಿಮಾನಕ್ಕೆ ಪೆಟ್ಟಾಗದಿರಲಿ ಎಂದು ಅರಸನಲ್ಲಿ ಅಧಿಕಾರದಲ್ಲಿದ್ದ ಶಿವಭಕ್ತರು ತಮ್ಮ ಬೆರಳ ಮುದ್ರಿಕೆಗೆ ನಮಸ್ಕರಿಸುತ್ತಿದ್ದರೆಂದು ಕಾಣುತ್ತದೆ. ಕೊಂಡಗುಳಿ ಕೇಶಿರಾಜ, ತೆಲುಗು ಜೊಮ್ಮಯ್ಯ ಇಬ್ಬರೂ ಪೆರ್ಮಾಡಿರಾಯನ ವಿರುದ್ಧ ಹೀಗೆ ನಡೆದುಕೊಂಡಿದ್ದಾರೆ. ಬಸವಣ್ಣನ ಕುರಿತಾದ ಕಾವ್ಯಗಳಲ್ಲೂ ಇದು ಕಾಣಿಸಿಕೊಂಡಿದೆ.

೪. ೭೪ ಶೀಲಗಳನ್ನು ಅರಿತು ಬಳಸುವುದು

ಭವಿ-ಭಕ್ತ ಕುಲಭೇದ ಬಸವಪೂರ್ವ ಯುಗದಲ್ಲಿ ಇದ್ದುದಕ್ಕೆ ಶಿವಭಕ್ತನಲ್ಲದವನು ರಾಜನೇ ಆದರೂ ಭವಿ ಎಂದು ಕಾಣುವ ಭಕ್ತರ ದಿಟ್ಟತನದಲ್ಲಿ ಇದು ಸ್ಪಷ್ಟವಿದೆ. ಜೈನ ಮತ್ತು ವೈಷ್ಣವ ವಿರೋಧದಲ್ಲಿ ಜೈನರ ಅನಾತ್ಮವಾದ, ವೈದಿಕರ ಕರ್ಮಠತನದ ವಿರುದ್ಧ ಶಿವಭಕ್ತರ ಸೆಣಸಾಟ ಇದೆ. ಶಿವಭಕ್ತರು ಕುಲಭೇದವನ್ನು ನಿರಾಕರಿಸಿದುದು ಪ್ರತಿಷ್ಠಿತ ಧರ್ಮಗಳಿಗೆ ದೊಡ್ಡ ಕುತ್ತಾಗಿರಬೇಕು. ಆಗೆಲ್ಲ ವರ್ಣಾಶ್ರಮ ಧರ್ಮವನ್ನು ಉಳಿಸಿಕೊಳ್ಳಲು ಅರಸನೊಂದಿಗೆ ಸೇರಿ ಶಿವಭಕ್ತರೊಂದಿಗೆ ಅನ್ಯ ಮತೀಯರು ಹೋರಾಡಿದ್ದಿದೆ; ಶಿವನಿಂದನೆಯನ್ನು ಪ್ರತಿಭಟಿಸಿದ್ದಿದೆ; ಶಿವದ್ರೋಹಿಗಳನ್ನು ಕೊಂದುಹಾಕಿದ ಅನ್ಯ ಮತೀಯರು ಹೋರಾಡಿದ್ದಿದೆ; ಶಿವನಿಂದನೆಯನ್ನು ಪ್ರತಿಭಟಿಸಿದ್ದಿದೆ; ಶಿವದ್ರೋಹಿಗಳನ್ನು ಕೊಂದುಹಾಕಿದ ಘಟನೆಗಳೂ ಇವೆ. ಬಹುಶಃ ಪಾಲ್ಕುರಿಕೆ ಸೋಮನಾಥ ಉಲ್ಲೇಖಿಸುವ ಷೋಡಶ ಗಣ, ತೇರಸ ಗಣ, ದಶಗಣ ಇವು ಭವಿ ವಿರುದ್ಧ ರಚಿತವಾದ ವೀರಭಕ್ತರ ಸಂಘಟನೆಗಳಾಗಿರಬೇಕು. ಆದರೆ ಮಾರುಡಿಗೆ ನಾಚಯ್ಯನಂಥ ಧರ್ಮವೀರರ ಜೊತೆಗೆ ಬಸವಣ್ಣನಂಥ ಭಕ್ತಿವೀರನನ್ನು ತೇರಸಗಣದಲ್ಲಿ ಸೇರಿಸಿರುವುದಕ್ಕೆ ಸಮಾಧಾನ ಹೇಳುವುದು ಕಷ್ಟವಾಗುತ್ತದೆ.

ಇಲ್ಲಿ ಭವಿ ಎಂದರೆ ಭವವನ್ನೇ ಲಕ್ಷ್ಯವಾಗುಳ್ಳವನು ಎಂಬ ಶಬ್ದಶಃ ಅರ್ಥವಿದ್ದರೂ ಶಿವಭಕ್ತನಲ್ಲದವನು ಎಂಬ ಅರ್ಥವೇ ಪ್ರಧಾನವಾಗಿದೆ. ಜೇಡರ ದಾಸಿಮಯ್ಯ ಹೇಳುತ್ತಾನೆ:

'ದಾಸನ ಕುಲವಾದಾತ ಈಶಂಗಲ್ಲದೆ ಶರಣೆನ್ನ
ಆಸೆ ಮಾಡ ನೋಡ ಅನ್ಯ ದೈವಂಗಳಿಗೆ
ದೇಶದ ಪಿಶಾಚಗಳಿಗೆ ಆಸೆ ಮಾಡ ನೋಡ
ಆಸೆಮಾಡಿದನಾದಡೆ ಆವ ದಾಸನ ಕುಲವಲ್ಲ
ಅವನನ್ನ ಕುಲ ಕಾಣಾ ರಾಮನಾಥ'

ಎಂಬಲ್ಲಿ ದಾಸ ಪದ ಶಿವದಾಸ ಅರ್ಥಾತ್ ಶಿವಭಕ್ತನನ್ನು ಹೇಳುತ್ತಿದ್ದು, ಶಿವನಿಗೆ ಮಾತ್ರ ವಂದಿಸುವುದು, ಅನ್ಯ ದೈವಗಳಿಗೆ ಎರಗದಿರುವುದನ್ನು ಕಟ್ಟು ಮಾಡಿ ಹೇಳಲಾಗಿದೆ. ಹೀಗಾಗಿ ಶಿವದಾಸನ ಕುಲ ಭಕ್ತಕುಲವಾದರೆ ಅನ್ಯಕುಲ ಭವಿಕುಲ. ಭಕ್ತಕುಲದಲ್ಲಿ ಜಾತಿಭೇದ ಇತ್ಯಾದಿ ಭೇದಗಳಿಲ್ಲದಿರುವುದರಿಂದ ಭೇದಬುದ್ಧಿಯ ಮತಧರ್ಮಗಳೆಲ್ಲ ಭವಿ ಹೆಸರಿನಲ್ಲಿ ಶಿವಭಕ್ತರಿಂದ ಖಂಡನೆಗೆ ಒಳಗಾಗಿವೆ. ಹಾಗೆಯೇ ಭಕ್ತನ ನಡಾವಳಿಯನ್ನು ನಿರ್ದಿಷ್ಟಪಡಿಸುವ ಶೀಲಗಳ ಸೃಷ್ಟಿಗೂ ಕಾರಣವಾಗಿವೆ. ಮುಂದೆ ಈ ಶೀಲಗಳು ವಿಚಾರ ಮರೆತು ಆಚಾರ ಪ್ರಧಾನವಾಗಿ ಮಡಿವಂತಿಕೆಗಿಳಿದಾಗ ವಿಡಂಬನೆಯನ್ನೂ ಎದುರಿಸಿವೆ. ಕೊಂಡಗುಳಿ ಕೇಶಿರಾಜ ಈ ಶೀಲಗಳ ಕುರಿತಾಗಿಯೇ ಶೀಲಮಹತ್ವದ ಕಂದ ಎಂಬ ಕೃತಿಯನ್ನು ರಚಿಸಿದ್ದಾನೆ. ಇಲ್ಲಿ ಹೇಳಲಾದ ಶೀಲಗಳು ಬಸವಯುಗದಲ್ಲಿ ಮುಂದುವರಿದಿರುವುದೊಂದು ವಿಶೇಷ. ಇಲ್ಲಿನ ಶೀಲ ಅಲ್ಲಿನ "ಭಾಷೆ" ಎನಿಸಿದ. ಬಸವಣ್ಣ ಅಂಥ ಒಬ್ಬ ಭಾಷೆವಂತ.

"ಶೀಲಮಹತ್ವದ ಕಂದ" ಎಂಬ ತನ್ನ ಕೃತಿಯಲ್ಲಿ ಕೇಶಿರಾಜ ಹೇಳುತ್ತಾನೆ:

ಶಿವಭಕ್ತ ಶಿವನೆ ಘನವುಂ
ಶಿವಮಂತ್ರ ಶಿವಾನುಭಾವವೆ ಘನವೆಂದುಂ
ತವೆಶ್ರುತದೃಷ್ಟದಿ ತೋರಲು
ವಿವರಿಸಲರ್ಚಿತ್ತ ಐದನೆಯ ಶೀಲವದುಂ

ಜಾತಿಯ ಹೊಲೆ ಜನನದ ಹೊಲೆ
ಪ್ರೇತದ ಹೊಲೆ ಬಂಧನಂಗಳಿಹ ಹೊಲೆಯಳಿದುಂ
ನೀತಿ ಶಿವಪದವು ನಿಂದರೆ
ಓತಹುದಿಪ್ಪತ್ತ ಆರನೆಯ ಶೀಲವದಂ

ಹೀಗೆ ಶಿವಭಕ್ತನನ್ನು ಶಿವನೆಂದು ಭಾವಿಸುವುದು, ಶಿವಮಂತ್ರ ಶಿವಾನುಭಾವವೇ ಘನವೆಂದು ಭಾವಿಸುವುದು, ಕುಲಹೊಲೆಸೂತಕ ಆಚರಿಸದಿರುವುದು ಇತ್ಯಾದಿ ೬೪ ಶೀಲಗಳನ್ನು ಆತ ವಿವರಿಸಿದ್ದಾನೆ. ಇವುಗಳಲ್ಲಿ "ಕೂಪೋದಕ ಪೊಸಭಾಂಡಂ ಲೇಪಿಸಿ ವಸ್ತ್ರವನು..." ಎಂಬಂತಹ ಶೀಲಗಳನ್ನು ಮುಂದೆ ಬಂದ ಶರಣರು ಒಪ್ಪದೆ ಖಂಡಿಸಿದ್ದಾರೆ.

೫. ಶಿವಭಕ್ತರು ತಪ್ಪಿದಲ್ಲೆಲ್ಲ ಪರಸ್ಪರ ತಿದ್ದಿಕೊಳ್ಳುವುದು

ಶಿವಭಕ್ತರು ಪರಸ್ಪರ ಸಮಾನತೆ, ಪ್ರೀತಿ ವಿಶ್ವಾಸ, ಗೌರವಗಳನ್ನು ಹಂಚಿಕೊಂಡು ಬಾಳಿದವರಾಗಿದ್ದಾರೆ. ಭಕ್ತನೊಬ್ಬ ತನ್ನ ನಡತೆಯಲ್ಲಿ ಅರಿತೋ ಅರಿಯದೆಯೋ ತಪ್ಪಿದಾಗ ಮತ್ತೊಬ್ಬ ಭಕ್ತ ಅದನ್ನು ಸ್ಥೂಲ ಸೂಕ್ಷ್ಮ ಎರಡೂ ರೀತಿಯಲ್ಲಿ ತಿದ್ದುವ ಪ್ರಯತ್ನ ಮಾಡಿದ್ದಾರೆ. ಹೀಗೆ ತಿದ್ದುವಾಗ ತಪ್ಪಿದ ಭಕ್ತ ತನ್ನ ತಿದ್ದಿಕೊಳ್ಳುವ ಜೊತೆಗೆ ತನ್ನ ಉದ್ಧರಿಸಿದ ಆತನನ್ನು ಗೌರವದಿಂದ ಕಂಡು ಶರಣೆಂದಿದ್ದಾನೆ. ಅರಿವಿನಿದಿರು ಹಿರಿಯ-ಕಿರಿಯ ಭೇದವನ್ನು ಅವರು ಮನಕ್ಕೆ ತಾರದೆ ಇರುವುದು ವಿಶೇಷವಾಗಿದೆ. ಬಸವಪೂರ್ವ ಯುಗದ ಈ ಶರಣವರ್ತನೆ ಬಸವ ಯುಗದಲ್ಲಿ ಇನ್ನೂ ನಿಡಿದಾಗಿ ಮುಂದುವರಿದಿದೆ.

ತೆಲುಗು ಜೊಮ್ಮಯ್ಯನ ಮಾಂಸಾಹಾರ ಕಾರಣವಾಗಿ ಆತನ ಮನೆಯಲ್ಲಿ ಪೂಜೆಗೊಪ್ಪದ ಕೊಂಡಗುಳಿ ಕೇಶಿರಾಜ ಆಮೇಲೆ ತನ್ನ ತಾ ತಿಳಿದು (ಹರಿಹರ ಶಿವನು ತಿಳಿಸಿದ್ದರಿಂದ ಎಂಬ ಅರ್ಥ ಹೊರಡಿಸುತ್ತಾನೆ) ನೆಪಗಳನ್ನು ಹಿಂದಿಕ್ಕಿ ಪೂಜೆಗೆ ಬರುತ್ತಾನೆ; ಮಾಂಸವೆಂದುದನ್ನು ಪಕ್ವಾನ್ನ ಮಾಡಿದ ಜೊಮ್ಮಯ್ಯನ ಮಹಿಮಾತಿಶಯಕ್ಕೆ ಬೆರಗಾಗುತ್ತಾನೆ.

ಶಿವನಿಗೆ ವಸ್ತ್ರದಾನವಿತ್ತ ಜೇಡರ ದಾಸಿಮಯ್ಯ ಶಿವನಿಂದ ತವನಿಧಿ ಪಡೆದ ಹಮ್ಮಿನಲ್ಲಿರುವಾಗ ಶಂಕರ ದಾಸಿಮಯ್ಯ ಮುದನೂರಿಗೆ ಬರುತ್ತಾನೆ. ಹಾಗೆ ಬಂದವನು ಭಿಕ್ಷೆಗೆ ನಿಂತರೆ ತನ್ನಲ್ಲಿ ತವನಿಧಿ ಇದೆ, ಭಿಕ್ಷೆಯ ಶ್ರಮ ಬೇಡ ಎಂದು ಜೇಡರ ದಾಸಿಮಯ್ಯಗೆ ಮರುಮಾತುಗುಡದೆ ಆತನ ತವನಿಧಿಯನ್ನು ಬತ್ತಿಸುವ ಮೂಲಕ ಆತನ ಸೂಕ್ಷ್ಮ ಅಹಮ್ಮಿಗೆ ಪಾಠ ಕಲಿಸುತ್ತಾನೆ. ಇಂಥ ಶಂಕರ ದಾಸಿಮಯ್ಯನನ್ನೂ ಹಮ್ಮು ಸೋಂಕದೆ ಬಿಡಲಿಲ್ಲ. ಅನ್ಯ ದೈವಗಳನೆಲ್ಲ ತನ್ನ ನೊಸಲಗಣ್ಣಿನಿಂದ ಸುಟ್ಟುರುಹಿದ ಶಂಕರ ದಾಸಿಮಯ್ಯನ ಅಹಮ್ಮನ್ನು ಢಕ್ಕೆಯ ಬೊಮ್ಮಯ್ಯ ಎಂಬ ಶರಣ ನೀಗುತ್ತಾನೆ.

ಇಂಥ ಪ್ರಸಂಗಗಳಲ್ಲಿ ಯಾರು ಯಾರಿಗೆ ದೊಡ್ಡವರು ಎಂದು ಹೇಳಬರುವುದಿಲ್ಲ; ದೀಪಕ್ಕೆ ಕುಡಿ ಬರುವುದು ಸಹಜ, ಕುಡಿ ಕಂಡವರು ಅದನ್ನು ತೊಡೆಯುವುದು, ಬೆಳಕಿಗೆ ಇನ್ನಷ್ಟು ಪ್ರಕಾಶಮಾನವಾಗಿ ಉರಿಯಲು ಅವಕಾಶ ಮಾಡಿಕೊಡುವುದು ಅಷ್ಟೇ ಸಹಜ. ಇಂತಹ ಸಹಜ ವರ್ತನೆ ಶರಣರದಾಗಿತ್ತು. ಕಲ್ಯಾಣ ಸಂಘಟನೆಗೆ ನೇತಾರನಾಗಿದ್ದ ಬಸವಣ್ಣನೇ ಪ್ರಭುದೇವ, ಮಾಚಿದೇವ, ಚನ್ನಬಸವಣ್ಣ ಮೊದಲಾದ ಶರಣರ ಅನುಭವ ಬೆಳಕಿನಲ್ಲಿ ತನ್ನ ತಾ ಸರಿಪಡಿಸಿಕೊಂಡು ಮುಂದೆ ಹೋಗಿದ್ದಾನೆ.

ಹೀಗೆ ತಮ್ಮ ತಿದ್ದಿಕೊಳ್ಳುವುದು ಶಿವಭಕ್ತರಲ್ಲಿ ಮಾತ್ರವೇ ನಡೆಯಲಿಲ್ಲ; ಶಿವಭಕ್ತರ ಸಂಗಕ್ಕೆ ಬಂದ ರಾಜರು ಸಹ ತಮ್ಮನ್ನು ತಿದ್ದಿಕೊಂಡಿದ್ದಾರೆ ಎನ್ನಲು ಜಯಸಿಂಹ, ಆರನೆಯ ವಿಕ್ರಮಾದಿತ್ಯ, ಚಂದಿಮರಸ ಉದಾಹರಣೆಗಳಾಗಿದ್ದಾರೆ.

೬. ಲಿಂಗ ಕಳೆದರೆ ಆತ್ಮಾರ್ಪಣೆ

ಲಿಂಗವನ್ನು ಸ್ಥಾವರದೇಗುಲಕ್ಕಿಂತ ದೇಹದೇಗುಲದ ಚೈತನ್ಯವಾಗಿ ಕರಸ್ಥಲದಲ್ಲಿಟ್ಟು ಪೂಜಿಸುವ ಪರಿಪಾಠ ಬಸವಪೂರ್ವ ಯುಗದಲ್ಲಿ ಆಗಲೇ ಬೆಳವಣಿಗೆ ಹೊಂದುತ್ತಿತ್ತು ಎನ್ನಲು ಕೊಂಡಗುಳಿ ಕೇಶಿರಾಜ, ಜೇಡರ ದಾಸಿಮಯ್ಯನ ವಚನಗಳಲ್ಲಿ ಆಧಾರ ಉಂಟಾದರೂ ಅನುಗಾಲ ಅಗಲದ ಲಿಂಗಸಂಬಂಧವನ್ನು ವ್ರತವೆಂಬಂತೆ ತೆಗೆದುಕೊಂಡು ಹೋದವರು ಬಸವಾದಿ ಶಿವಶರಣರು. ಬಸವಪೂರ್ವ ಯುಗದಲ್ಲಿ ಅಂಗದ ಮೇಲೆ ಧರಿಸುವುದು ಇದ್ದಹಾಗೆ, ಪೀಠದ ಮೇಲಿಟ್ಟು ಪೂಜಿಸುವುದು, ಪೂಜಾಪೆಟ್ಟಿಗೆಯಲ್ಲಿಟ್ಟು ಜೊತೆಗೆ ಒಯ್ಯುವುದು ಇತ್ಯಾದಿ ಇತ್ತು. ಅಷ್ಟೇ ಮುಖ್ಯವಾಗಿ ಲಿಂಗ ಭಿನ್ನವಾದರೆ, ಲಿಂಗ ಕಳೆದರೆ, ಸಹಪಂಕ್ತಿಯಲ್ಲಿ ಸಮಶೀಲ ಜಂಗಮರ ಜೊತೆ ಉಣ್ಣುವಾಗ ಆತ ಸತ್ತರೆ ತಾನು ಆತ್ಮಾರ್ಪಣೆ ಮಾಡಿಕೊಳ್ಳುವ ನಿಯಮವಿತ್ತು. ಲಿಂಗ ಕಳೆದುದಕ್ಕೆ ಸಾಯಲು ಹೊರಟ ಕೊಂಡಗುಳಿ ಕೇಶಿರಾಜನೇ ಇದಕ್ಕೆ ನಿದರ್ಶನ.

ಹರಿಹರ ಹೇಳುವಂತೆ ಕೇಶಿರಾಜ ನದಿದಂಡೆಮೇಲೆ ಅಂಗೈಯ ಲಿಂಗದಲ್ಲಿ ಪೂಜಾತತ್ಪರನಾಗಿದ್ದ ಸಂದರ್ಭದಲ್ಲಿ ಹಕ್ಕಿಯೊಂದು ಲಿಂಗದ ಮೇಲೆ ಇರಿಸಿದ್ದ ದಾಸವಾಳದ ಹೂವನ್ನು ಮಾಂಸದತುಂಡು ಎಂದು ಭ್ರಮಿಸಿ ಲಿಂಗವನ್ನು ಎತ್ತಿ ಒಯ್ಯಲೆಳಸುತ್ತದೆ; ಲಿಂಗ ಜಾರಿ ನದಿಯಲ್ಲಿ ಬೀಳುತ್ತದೆ. ಹೌಹಾರಿದ ಕೇಶಿರಾಜ ಆತ್ಮಹತ್ಯೆಗೆ ಸಿದ್ಧನಾದಾಗ ಸೇರಿದ ಜನ ಆತನನ್ನು ತಡೆದು ಲಿಂಗ ಹುಡುಕಲೂ ಸಿಗದಿದ್ದರೆ ಆ ಮಾತು ಎಂದು ದಾರಿ ತೋರುತ್ತಾರೆ. ಆಗ ಹರಗೋಲು ಏರಿ ಭಕ್ತನಾಗಿ ತನ್ನ ಅಂತರಂಗವನ್ನು ಶೋಧಿಸಿಕೊಳ್ಳುತ್ತ ಶಿವನಲ್ಲಿ ಮೊರೆಯಿಡುತ್ತ ಮುಂಬರಿಯುವಾಗ ಲಿಂಗವೆದ್ದು ಮೇಲೆಬರುತ್ತದೆ. ಈ ಘಟನೆ ಲಿಂಗ ಕಳೆದರೆ ಶಿವಭಕ್ತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದುದನ್ನು ಸಮರ್ಥಿಸುತ್ತದೆ.

ಕೇಶಿರಾಜನ ಈ ಘಟನೆಯನ್ನು ಜೇಡರ ದಾಸಿಮಯ್ಯ ತನ್ನ ವಚನದಲ್ಲಿ "ಜಗವೆಲ್ಲವರಿಯಲು ತೊರೆಯೊಳಗೆ ಬಿದ್ದ ಲಿಂಗ ಕೆದರೆ ಬಂದುದು ಕರಸ್ಥಲಕ್ಕೆ" ಎಂಬುದಾಗಿ ಸೂಚಿಸಿದ್ದಾನೆ. ಲಿಂಗ ಕೈಗೆ ಎನ್ನದೆ ಕರಸ್ಥಲಕ್ಕೆ ಎಂದಿರುವುದು, ಇಷ್ಟಲಿಂಗ ಸಂಸ್ಕೃತಿಯಲ್ಲಿ ಅಂಗೈಗೆ ಕರಸ್ಥಲ ಎಂದೇ ಹೆಸರಿಟ್ಟು ಕರೆಯುವುದು ಇದು ಬಸವಪೂರ್ವ ಯುಗದ ಹೊತ್ತಿಗೆ ಇಷ್ಟಲಿಂಗ ಆಚರಣೆ ರೂಢವಾಗುತ್ತಿದ್ದುದರ ಸೂಚನೆಯಾಗುತ್ತದೆ.

೭. ಅನುಭಾವದ ಗೋಷ್ಠಿ ಮಾಡುವುದು

ಅರಿವು ಆಚಾರದಲ್ಲಿ ಅಳವಟ್ಟುದರ ಪರಿಣಾಮವನ್ನು ಅನುಭಾವ ಎಂದು ಕರೆಯಬಹುದು. ಅದನ್ನು ಆತ್ಮವಿದ್ಯೆ ಎಂದು ಕರೆಯಲಾಗಿದೆ. ಕಲ್ಯಾಣ ಶರಣರು ಒಂದೆಡೆ ಸೇರಿ ಅನುಭಾವ ಮಾಡುತ್ತಿದ್ದ ಸಂಗತಿ ಪ್ರಸಿದ್ಧವಾದುದು. ಅವರು ಸೇರುತ್ತಿದ್ದುದು ಅನುಭವ ಮಂಟಪ ಎಂದು ಕರೆದಿದ್ದರೂ ಇದು ಕಟ್ಟಡದ ಹೆಸರಾಗಿರದೆ ಗೋಷ್ಠಿಯ ಸೂಚಕವಾಗಿತ್ತು. ಶರಣರು ಸೇರಿದಲ್ಲೆಲ್ಲ ಅನುಭವ ಮಂಟಪ ಏಳುತ್ತಿತ್ತು. ಅದು ಬಸವಣ್ಣನವರ ಮಹಾಮನೆಯಾಗಿರಬಹುದು, ತ್ರಿಪುರಾಂತಕ ಕೆರೆಯ ದಂಡೆಯೇ ಆಗಿರಬಹುದು. ಬಸವಪೂರ್ವ ಯುಗದಲ್ಲೂ ಹಾಗೆಯೇ ಶಿವಭಕ್ತರೆಲ್ಲ ಒಂದೆಡೆ ಸೇರಿ ಪುರಾತನ ಗೀತಗಳ ಹಾಡುವಿಕೆ ಚಿಂತನೆ ನಡೆಸುತ್ತಿದ್ದರೆಂಬುದಕ್ಕೆ ಕೊಂಡಗುಳಿ ಕೇಶಿರಾಜ ಅತ್ಯುತ್ತಮ ನಿದರ್ಶನವಾಗಿದ್ದಾನೆ. ಆತ ಶಿವಗೋಷ್ಠಿಯಲ್ಲಿ ಮೈಮರೆತುದೇ ಮಂತ್ರಿಪದವಿ ತ್ಯಜಿಸಲು ಕಾರಣವಾಯಿತು ಎಂಬುದಾಗಿ ಹರಿಹರ ಹೇಳುತ್ತಾನೆ. ಅರಸ ಪೆರ್ಮಾಡಿಯ ಕರೆ ಬಂದಾಗ ಕೇಶಿರಾಜನ ಮುಖದಿಂದ ಆಡಿಸುವ ಈ ನುಡಿಗಳು.

ಸಿರಿಯ ಸಂಗಂ ಶರಣ ಸಂಗಕ್ಕೆ ಪಗೆಯಾಯ್ತು
ನರನೋಲಗದ ಪರಾಧೀನ ವಿರಿದಂತಾಯ್ತು
ಅಯ್ಯಯ್ಯ ಸೋಮನಾಥಯ್ಯ ನೀಂ ಕರುಣಿಪುದು
ಅಯ್ಯಲಾ ಶರಣ ಸದ್ಗೋಷ್ಠಿಯಂ ಕರುಣಿಪುದು

ಎಂದು ಕಳವಳಿಸುವ ಕೇಶಿರಾಜ ಕೊನೆಗೂ ಪರಾಧೀನತೆ ಕೊಡಪಿ, "ಸೇವಕಾವೃತ್ತಿಯಂ ಮನದ ಕಾಲಿಂದೊದೆದು" ಶರಣ ಸಂಗಕ್ಕೆ ಬರುತ್ತಾನೆ. ವಂಶವರ್ಧನನ ಮನೆಯಲ್ಲಿ ಭಕ್ತಸಮೂಹದೊಂದಿಗೆ 'ಮಾತುಮಾತಿಂ ಪುರಾತನರ ಗೀತದ ಮೇಲೆ ಶಿವಗೋಷ್ಠಿಯಂಕುರಿಸೆ' ಏಳು ದಿನ ಹಗಲಿರುಳೆನ್ನದೆ ಗೋಷ್ಠಿಯಲ್ಲಿ ಮುಳುಗಿ ಹೋಗುತ್ತಾನೆ.

ಹೀಗೆ ಶಿವಗೋಷ್ಠಿ ನಡೆಸಿ ಅನುಭಾವ ಮಾಡುವುದು ಶಿವಭಕ್ತಿಯ ಭಾಗವೇ ಆಗಿರಬೇಕು ಎನ್ನಲು ಜೇಡರ ದಾಸಿಮಯ್ಯನ ಈ ವಚನವನ್ನು ನೋಡಬೇಕು;

ಅನುಭಾವವಿಲ್ಲದವನ ಭಕ್ತಿ ತಲೆಕೆಳಗಾದುದಯ್ಯ
ಅನುಭಾವ ಭಕ್ತಿಗಾಧಾರ
ಅನುಭಾವ ಭಕ್ತಿಗೆ ನೆಲೆವನೆ
ಅನುಭಾವ ಉಳ್ಳವರ ಕಂಡು ತುರ್ಯ
ಸಂಭಾಷಣೆಯ ಬೆಸಗೊಳ್ಳದಿದ್ದರೆ ನರಕದಲ್ಲಿಕ್ಕಯ್ಯ ರಾಮನಾಥ.

ಅನುಭಾವ ಭಕ್ತಿಗಾಧಾರ ಎನ್ನುವ ದಾಸಿಮಯ್ಯ, ಅನುಭಾವಿಗಳನ್ನು ಕಂಡು ಅವರೊಂಡನೆ ತುರ್ಯ ಸಂಭಾಷಣೆ ನಡೆಸಬೇಕು ಎಂದಿರುವುದು ಲಕ್ಷಿಸುವಂತಿದೆ. ಹೀಗೆ ತುರೀಯದ ಮಾತು ಗೀತಗಳು ಈ ಶಿವಗೋಷ್ಠಿಯಲ್ಲಿ ನಡೆಯುತ್ತಿದ್ದವು ಎನ್ನಬಹುದು. ಈ ಗೋಷ್ಠಿಯನ್ನು ದಾಸಿಮಯ್ಯನೇ ಒಂದು ಕಡೆಗೆ "ವಚನಾನುಗಮನ ಪ್ರಸಂಗ" ಎಂದು ಕರೆದಿರುವುದು ಮಹತ್ವದ್ದಾಗಿದೆ. ಪ್ರಸಂಗ ಎಂಬುದು ಸಂಭಾಷಣೆಯನ್ನು ಆಧರಿಸುವುದರಿಂದ, ಭಕ್ತರೆಲ್ಲ ಸೇರಿ ಪುರಾತರ ಗೀತ ಹಾಗೂ ಶರಣರ ಸೂಳ್ನುಡಿಗಳನ್ನು ಎತ್ತಿಕೊಂಡು ಗೋಷ್ಠಿಯಲ್ಲಿ ಚಿಂತಿಸುತ್ತಿದ್ದರು ಎನ್ನಬಹುದು.

೮. ಸಾಹಿತ್ಯದ ರಚನೆ

ಅನುಭಾವವು ಭಕ್ತಿಗೆ ಆಧಾರವಾದರೆ, ಅನುಭಾವದ ಅಭಿವ್ಯಕ್ತಿ ಶರಣನ ಸೃಜನಶೀಲ ನಡತೆಯಾಗಿದೆ. ಈ ಸೃಜನಶೀಲತೆ ಮಾತಾಗಬಹುದು, ಗೀತವಾಗಬಹುದು, ಸಾಹಿತ್ಯ ಕೃತಿರೂಪವಾಗಬಹುದು. ಎಲ್ಲ ಶರಣರು ರಚನಕಾರರು ಎಂದಲ್ಲ; ಹಾಗೆ ನೋಡಿದರೆ ಸಾಹಿತ್ಯ ಅವರ ಇಷ್ಟದ ವಸ್ತುವಾಗಿರಲಿಲ್ಲ. ಸಾಹಿತ್ಯಕ್ಕೆ ಮನಸ್ಸು ಕೊಟ್ಟಾಗಲೂ ಅವರ ಗಮನ ಭಾಷೆಯ ಹೊರರೂಪಕ್ಕಿಂತ ವಸ್ತುವಿನ ಕಡೆಗೇ ಎಂಬುದನ್ನು ಮರೆಯುವಂತಿಲ್ಲ. ಬಸವಪೂರ್ವ ಯುಗದಲ್ಲಿ ಸಾಹಿತ್ಯ ರಚನೆಗೆ ಮನಸ್ಸು ಕೊಟ್ಟು ಹೆಸರು ಮಾಡಿದವರಲ್ಲಿ ಪ್ರಮುಖರೆಂದರೆ ಕೊಂಡಗುಳಿ ಕೇಶಿರಾಜ ಮತ್ತು ಜೇಡರ ದಾಸಿಮಯ್ಯ. ಕೇಶಿರಾಜ ಕನ್ನಡದ ಮೊದಲ ಶಿವಕವಿಯಾಗಿದ್ದರೆ, ದಾಸಿಮಯ್ಯ ಆದ್ಯ ವಚನಕಾರನೆನಿಸಿದ್ದಾನೆ.

ನಿಚ್ಚಲೆಂಟುಂ ಪದ್ಯಮಂ ಸೋಮನಾಥಂಗೆ
ಅಚ್ಚರಿ ಮಿಗಲ್ಕೆ ಪೇಳ್ವಂ ಶಿವಾನಾಥಂಗೆ
ಪಂಚಾಕ್ಷರಾನುಬಂಧಂ ಛಂಗವನುವಾಗೆ

ಪಂಚಮುಖನಾಮದಭಿದಾನ ಬುದ್ಧಿಯದಾಗೆ
ಶಿವವಾಕ್ಯಶಬ್ದಶುದ್ಧಿಯು ವ್ಯಾಕರಣಮಾಗೆ
ಶಿವಭಕ್ತಿ ವೃತ್ತಲಂಕಾರದಂತಾಗೆ
ಪದ್ಯಂಗಳಂ ಶಿವಂಗನುದಿನಂ ಪೇಳುತಂ
ಚೋದ್ಯವೆನೆ ಶಂಕರ ಸ್ತೋತ್ರದೊಳೆ ಬಾಳುತಂ

ಎಂದು ಹರಿಹರ ಬಣ್ಣಿಸುತ್ತಾನೆ. ತನ್ನ ಆರಾಧ್ಯದೈವ ಸೋಮನಾಥನಿಗೆ ಕೇಶಿರಾಜ ನಿತ್ಯ ಎಂಟು ಪದ್ಯ ರಚಿಸುತ್ತಿದ್ದುದು ನಿಜವೇ ಇರಬೇಕು. ಕೇಶಿರಾಜನ ಸಾಹಿತ್ಯಶಕ್ತಿಯನ್ನು ಸಮರ್ಥಿಸುವ ಹಾಗೆ ಕ್ರಿ.ಶ. ೧೧೦೭ ರ ಕೊಂಡಗುಳಿ ಶಾಸನದಲ್ಲಿ ಬರುವ ಸುಕವಿಶುಕಬಂಧುವನವಸಂತ, ಪಚಶ್ರೀವಧೂಕಾಂತ, ಸಾಹಿತ್ಯಸರೋರುಹಮಧುವ್ರತ' ಎಂಬ ವಿಶೇಷಣಗಳು ಆತನ ಸಾಹಿತ್ಯಯೋಗ್ಯತೆಯನ್ನು ಚೆನ್ನಾಗಿ ಪರಿಚಯಿಸುತ್ತವೆ. ಶಾಂತಲಿಂಗದೇಶಿಕ ಹೇಳುವಂತೆ, ಕೇಶಿರಾಜ ಕಂದ, ವೃತ್ತ, ಗ್ರಂಥ, ತ್ರಿವಿಧಿ, ರಗಳೆ, ವಚನ, ಪದ, ಪದ್ಯ, ಗದ್ಯದಂಡಕ, ಅಷ್ಟಕ ಇವುಗಳಿಂದ ಶಿವಪೂಜೆ ಮಾಡುತ್ತಿದ್ದ. ಆ ಮಾತಿಗೆ ಸಮರ್ಥನೆ ಎಂಬಂತೆ ಕೇಶಿರಾಜನ ಒಟ್ಟು ಐದು ಕೃತಿಗಳು ಸದ್ಯ ಉಪಲಬ್ಧ ಇವೆ. ಅವೆಂದರೆ, ಮಂತ್ರಮಹತ್ವದ ಕಂದ, ಲಿಂಗಸ್ತೋತ್ರದ ಕಂದ- ೧. ಲಿಂಗಸ್ತೋತ್ರದ ಕಂದ-೨, ಶೀಲಮಹತ್ವದ ಕಂದ ಮತ್ತು ನವರತ್ನಮಾಲೆ. ಇವುಗಳಲ್ಲಿ "ಶೀಲಮಹತ್ವದ ಕಂದ" ಬಸವಪೂರ್ವ ಯುಗದ ವೀರಶೈವವನ್ನು ಅರಿಯಲು ಇರುವ ಮಹತ್ವದ ಕಿರುಕೃತಿಯಾಗಿದೆ.

"ಕರಿಯನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ" ಎಂದು ವಚನ ಸಂಪತ್ತಿಗೆ ಮಾರುಹೋದ ಜೇಡರ ದಾಸಿಮಯ್ಯನ ಒಡಲ ಮರೆಯ ಪರಮಾತ್ಮನ ಕುರಿತಾದ ಚಿಂತನೆ ಅನುಭವಗಳು, ಆತನ ರಾಮನಾಥ ಅಂಕಿತದ ೧೭೬ ವಚನಗಳಲ್ಲಿ ಎಡೆಪಡೆದಿವೆ. ಆತ್ಮಶೋಧದಷ್ಟೇ ಭಕ್ತಿಯ ಡಂಭವನ್ನು ವಿಡಂಬಿಸುವ ದಾಸಿಮಯ್ಯ ವಚನಸಾಹಿತ್ಯಕ್ಕೆ ಬಹು ಎತ್ತರದ ಆರಂಭವನ್ನೇ ಒದಗಿಸಿಕೊಟ್ಟ. ಆತ ತನಗಿಂತ ಹಿಂದಿನ ಶರಣರನ್ನು ನೆನೆಯುವ ಮೂಲಕ ಬಸವಪೂರ್ವ ಯುಗದ ಭಕ್ತಿಪರಿಸರವನ್ನು ಅರಿಯಲು ಅನುಕೂಲವಾಗಿದ್ದಾನೆ:

ಕೀಳು ಡೋಹರ ಕಕ್ಕಕೀಳು ಮಾದರ ಚನ್ನ
ಕೀಳು ಓಹಿಲದೇವ ಕೀಳು ಉದ್ಭಟಯ್ಯ
ಕೀಳಿಂಗಲ್ಲದೆ ಹಯನು ಕರೆಯದು ಕಾಣಾ ರಾಮನಾಥ

ನಂಬಿದ ಚನ್ನನ ಅಂಬಲಿಯನುಂಡ
ಕೆಂಭಾವಿಯ ಭೋಗಯ್ಯನ ಹಿಂದಾಡಿ ಹೋದ
ಗುಂಡಯ್ಯನ ಕುಂಭದ ಗತಿಗೆ ಕುಕಿಲಿರಿದು ಕುಣಿದ
ನಂಬದೆ ಕರೆದವರ ಹಂಬಲನೊಲ್ಲನೆಮ್ಮ ರಾಮನಾಥ

ಕೀಳನ್ನು ಮೇಲೆಂದು ಅಪ್ಪಿಕೊಂಡ ಬಸವಣ್ಣನ ಹಾಗೆ, ಕೀಳುಕುಲದಲ್ಲಿ ಹುಟ್ಟಿ ಮೇಲಾದ ಸಾಧನೆ ಮಾಡಿದ ಡೋಹರ ಕಕ್ಕಯ್ಯ, ಮಾದಾರ ಚನ್ನಯ್ಯ, ಓಹಿಲಯ್ಯ, ಉದ್ಭಟಯ್ಯರನ್ನು ಸ್ಮರಿಸುತ್ತ "ಕೀಳಿಂಗಲ್ಲದೆ ಹಯನು ಕರೆಯದು' ಎಂದಿರುವುದು ಭಕ್ತಿಯ ಬೇರು ಎಲ್ಲಿ ಎಂಬುದನ್ನು ಸ್ಪಷ್ಟಸೂಚಿಸಿದಂತಾಗಿದೆ.

೧೧

೩. 'ಕೂಡಲಸಂಗಮ' ಮುದ್ರಿಕೆಯ ಔಚಿತ್ಯ

-ಶ್ರೀ ಗೌ.ಮ. ಉಮಾಪತಿ ಶಾಸ್ತ್ರಿ

ಕನ್ನಡ ನುಡಿಯ ಬೆಳವಣಿಗೆಯಲ್ಲಿ ಅಪಭ್ರಂಶ (ತದ್ಭವ)
ಶಬ್ದಗಳು ಬಹಳ ಮಹತ್ವ ಪಡೆದಿವೆ. ಸಂಸ್ಕೃತದ ಮೂಲಕ
ಶಬ್ದಗಳು ಸುಖಕರ, ಮಿಷ್ಟ ಮತ್ತು ಸಹಜ ಉಚ್ಚಾರಕ್ಕಾಗಿ
ಆದೇಶಗಳ ಬಗೆಯಲ್ಲಿ ರೂಪಾಂತರ ತಾಳುತ್ತವೆ.
ಅವುಗಳಲ್ಲಿ ಸಂಸ್ಕೃತದ ಶಂಕರ 'ಸಂಗಮ'ವಾದುದು
ಭಾಷಾಶಾಸ್ತ್ರದ ದೃಷ್ಟಿಯಿಂದ ಬಹಳ ಅನನ್ಯವೆನಿಸಿದೆ.

ಮೊದಲ ರೂಪಾಂತರ ಸಂಕರ:

೧) ಆಚಾರ್ಯ ಹೇಮಚಂದ್ರನ "ಪ್ರಾಕೃತ ವ್ಯಾಕರಣ"ದನ್ವಯ

"ಶಷೋಃ ಸಃ"

ಸೂತ್ರದಂತೆ (ಪಾದ ೧, ಸೂ ೨೬೦) ಶಕಾರ ಮತ್ತು ಸಕಾರಗಳಿಗೆ ಸಕಾರ ಆದೇಶವಾಗುತ್ತದೆ.

೨) ವರರುಚಿಯ 'ಪ್ರಾಕೃತ ಪ್ರಕಾಶ'ದಲ್ಲಿಯೂ ಅದೇ ಸೂತ್ರ ವಿವರಣೆಗೊಂಡಿದೆ (ಪರಿಚ್ಛೇದಸೂತ್ರ)

"ಶಷೋಃ ಸಃ"

"ಆಯುಕ್ತಯೋಃ ಶಷಯೋಃ ಸಕಾದಾದೇಶಃ ಸ್ಯಾತ್।
ಉದಾಹರಣೆಗೆ ಶೇಷ-ಮೇಷಃ ಸೇಸ-ಮೇಸ,
ಮಹಿಷ-ವೃಷಭಃ ಮಹಿಸ-ಬಸಹ ರೂಪಗಳು."

೩) ಕೇಶಿರಾಜನ 'ಶಬ್ದಮಣಿ ದರ್ಪಣ'ದಲ್ಲಿ (ಅಪಭ್ರಂಶ ಪ್ರಕರಣ, ಸೂತ್ರ ೨೯೭)

ಸಕ್ಕದದ ಶಷದ್ವಿತಯ
ಕ್ಕಕ್ಕುಂ ಸತ್ವಂ ಪ್ರಸಿದ್ಧಿಯಿಂದೆಲ್ಲೆಡೆಯೊಳ್

ಸಂಸ್ಕೃತದ ಶಬ್ದಗಳಲ್ಲಿಯ ಶ-ಷಗಳಿಗೆ ಎಲ್ಲ ಕಡೆ ಸಕಾರ ಆದೇಶ ಬರುವುದು. ಪ್ರಯೋಗ: ಶಶಿ-ಸಸಿ, ಶಂಕೆ-ಸಂಕೆ, ಗಿರಿಶ-ಗಿರಿಸ, ಶಿವ-ಸಿವೆ, ಶಾಲೆ-ಸಾಲೆ, ಶುದ್ಧಿ-ಸುದ್ದಿ ಮುಂತಾದವು.

ಎರಡನೆಯ ರೂಪಾಂತರ ಸಂಗಮ:

ಹೇಮಚಂದ್ರನ ಪ್ರಾಕೃತ ವ್ಯಾಕರಣದ ನಿಯಮದಂತೆ (ಪಾದ ೪, ಸೂತ್ರ ೭೨) ಸಂಕರದಲ್ಲಿಯ ಕೃ ಧಾತುಸಾಧಿತ (ಖು ಕ್ಕೆಅಿರ್ ಗುಣಕರ) ರೂಪಕ್ಕೆ ವಿಕಲ್ಪವಾಗಿ 'ಕಮ' ಆದೇಶವಾಗಲು 'ಸಂಕಮ' ರೂಪ ಸಿದ್ಧಿಸುತ್ತದೆ.

ಮೂರನೆಯ ಸಿದ್ಧರೂಪ ಸಂಗಮ:

ಹೇಮಚಂದ್ರನ ಪ್ರಾಕೃತ ವ್ಯಾಕರಣದಲ್ಲಿಯ (ಪಾದ ೪, ಸೂತ್ರ ೩೯೬) ಸೂತ್ರವಿದು:

"ಅನಾದೌ ಸ್ವರಸಂಯುಕ್ತಾನಾಂ ಕಖ, ತಥ,
ಪಫಾ ಗಘ, ದಧ, ಬಭಾಃ"

ಅಪಭ್ರಂಶದಲ್ಲಿ ಅನಾದಿಯಲ್ಲಿ (ಮಧ್ಯದಲ್ಲಿ) ಸ್ವರಗೂಡಿದ ಕಖ, ತಥ, ಪಫಗಳ ಸ್ಥಾನದಲ್ಲಿ, ಗಘ, ದಧ, ಬಭಗಳ ಆದೇಶವಾಗುತ್ತದೆ. ಹೀಗೆ ಪ್ರಸ್ತುತದಲ್ಲಿಯ 'ಸಂಕಮ' ಕಕಾರಕ್ಕೆ ಗಕಾರ ಆದೇಶ ಬರಲು 'ಸಂಗಮ' ಶಬ್ಧ ಸಿದ್ಧಿಸುತ್ತದೆ.

ಶಬ್ಧಮಣಿ ದರ್ಪಣದಲ್ಲಿ (ಅಪಭ್ರಂಶ ಪ್ರಕರಣ, ಸೂತ್ರ ೨೬೯)

"ವರ್ಗ ಪ್ರಥಮಂಗಳ್ ತ
ದ್ವರ್ಗ ತೃತೀಯಂಗಳಪ್ಪುವು"

ಈ ಸೂತ್ರದಂತೆ ವರ್ಗದ ಮೊದಲಕ್ಷರಗಳಾದ ಕ-ಚ-ಟ-ತ-ಪಗಳಿಗೆ ಮೂರನೆಯ ವರ್ಗಗಳಾದ ಗ-ಜ-ಡ-ದ-ಬ ಗಳ ಆದೇಶವಾಗುತ್ತದೆ. ಹೀಗೆ ಸಂಕರ 'ಸಂಗಮ' ರೂಪ ತಾಳುತ್ತದೆ. ಕೆಲವಡೆ ರ ಲೋಪವಾಗಿ 'ಸಂಗ' ರೂಪ ಉಳಿಯುತ್ತದೆ.

ಬಸವಣ್ಣನವರ ವಚನ ಮುದ್ರಿಕೆ 'ಕೂಡಲಸಂಗಮದೇವ'ದ ವ್ಯುತ್ಪತ್ತಿ ಇಲ್ಲಿ ಗಮನೀಯ. ಇದುವರೆಗೆ ನಾವೆಲ್ಲ 'ಕೂಡಲ-ಸಂಗಮ' ಇವೆರಡು ಒಂದೇ ಅರ್ಥ ಕೊಡುವ ಜೋಡು ಪದಗಳೆಂದು ತಿಳಿದು ಹಾಗೆಯೇ ಅವನ್ನು ಪ್ರಯೋಗಿಸುತ್ತ ಬಂದಿದ್ದೇವೆ. ದ್ವಾರ-ಬಾಗಿಲದಂತೆ ಲತೆ-ಬಳ್ಳಿಯಂತೆ ಇದು ಮೇಲು ನೋಟಕ್ಕೆ ಒಂದೇ ಅರ್ಥದಲ್ಲಿಯ ಜೋಡು ಪದವಾಗಿ ಕಾಣುತ್ತದೆ. ಆದರೆ ಇಲ್ಲಿ 'ಕೂಡಲ' ಮಲಪ್ರಹರಿ-ಕೃಷ್ಣ ನದಿಗಳ ಕೂಟದ ಸಂಕೇತ. ಸಂಗಮದ ಸಂಸ್ಕೃತ ಪ್ರಕೃತಿ ಶಂಕರ, ಇದನ್ನು ನಾವು ಗಮನಿಸಬೇಕು.

ಕೂಡಲ ಸಂಗಮವೆಂದರೆ ಎರಡು ನದಿಗಳ ಕೂಟ ಕೂಡಲಿಯಲ್ಲಿರುವ 'ಶಂಕರ' ಎಂದು ಅರ್ಥೈಸಿದಾಗಲೇ ಮುದ್ರಿಕೆಯ ಔಚಿತ್ಯ ನಮಗೆ ಗೋಚರಿಸುತ್ತದೆ. ಬಸವಣ್ಣನವರು ಕರ್ಮಲತೆಯಂತಿದ್ದ ಜನಿವಾರವನ್ನು ಕಳೆದು ಬೀಸಾಡಿ ನೈಷ್ಠಿಕ ಶಿವಭಕ್ತಿಯ ಆತುರದಿಂದ ಬಾಗವಾಡಿಯಿಂದ ಹೊರಟು ಕೂಡಲಸಂಗಮಕ್ಕೆ ಬಂದ ಸನ್ನಿವೇಶವನ್ನು ಮಹಾಕವಿ ಹರಿಹರ 'ಬಸವರಾಜ ದೇವರ ರಗಳೆ'ಯಲ್ಲಿ ಬಹಳ ಮನೋಜ್ಞವಾಗಿ ವರ್ಣಿಸಿರುವನು:

"ಮಲಪ್ರಹರಿ-ಕೃಷ್ಣವೇಣಿಗಳ ಸಂಗ ಸುಖಮಂ
ಎಂಗದ ಕೂಡಲ ಸಂಗಮೇಶ್ವರನಿಪ್ಪ ಕಪ್ಪಡಿಯ
ಸಂಗಮುಮಂ ಪೊಕ್ಕು ಕೇರಿ ಕೇರಿಯೊಳು ನಡೆ
ತಪ್ಪಾಗಳು, ಶಂಕರಾಲಯಮಂ ಭೋಂಕನೆ ಕಂಡ,
ಪೂರ್ವ ಸ್ಮರಣೆ ಕೈಗೂಡಿ ಕಣ್ ಬಂದಂತೆ, ಉಸಿರ್
ಬಂದಂತೆ ಪರಿತಂದು ರಂಗಮಂಟಪದೊಳು ದೊಪ್ಪನೆ
ಬಿಂದಂತಕ್ಕದ್ದು ನಿಂದು-ದೇವದೇವ ಅನಾಥನಾಥ
ಅನಿಮಿತ್ತ ಬಂಧುವೆ"

ಎಂದು ಗೋಗರೆದು ಬಸವ ಮೂರ್ಛೆ ಹೋದುದನ್ನು ಸ್ಥಾನಪತಿ ಈಶಾನ್ಯ ಗುರುಗಳು ಕಂಡು ಅವನು ಕಾರಣಿಕ ಪುರುಷನಾಗುವುದನ್ನು ತಿಳಿದು ಹತ್ತಿರ ಬಂದು-

> "ಎಲೈ ಭಕ್ತ ನೀನೆಲ್ಲಿಗಂ ಪೋಗಬೇಡ, ಆವುದುಂ
> ಚಿಂತೆ ಬೇಡ. ಸಂಗಮೇಶ್ವರಂಗೆ ಹೊಸ ಪುಷ್ಪಮಂ
> ತಿಳಿಯುಗ್ಘವಣಿಯಂ ತಂದು ಓಜೆಯಿಂ ಪೂಜೆಗೈದು
> ಪ್ರಸಾದ ಕಾಯನಾಗಿ ಸುಖದೊಳಿಪ್ಪುದು-ಎನಲಾ
> ಮಾತಂ ಕೈಕೊಂಡು ಸಂಗನ ಬಸವಂ ಬಸವಿ
> ದೇವಂ ಕಪ್ಪಡಿ ಸಂಗಮದೊಳು ಕೂಡಲಸಂಗ
> ಮೇಶ್ವರ ಶ್ರೀ ಪಾದ ಕಮಳ ಮಕರಂದ ಮಧು
> ಕರಾಯಮಾನನಾಗಿರ್ದಂ" (ಎರಡನೆಯ ಸ್ಥಲ)

ಇಲ್ಲಿ ಬರುವ ಸಂಗಮೇಶ್ವರ ಶಬ್ದ ಸಂಸ್ಕೃತ ಶಂಕರೇಶ್ವರದ ತದ್ಭವ, ಮಲಪ್ರಭ-ಕೃಷ್ಣ (ನೀಲಗಂಗೆ) ನದಿಗಳ ಕೂಡಲಿಯಲ್ಲಿಯ ಗ್ರಾಮ ಕಪ್ಪಡಿಯ ಸಂಗಮವೆನಿಸಿತ್ತು. ಇಲ್ಲಿಯ ಕಪ್ಪಡಿ ಶಬ್ಧ ಬಹಳ ಅರ್ಥವತ್ತಾದುದು.

ಅಮರ ಸಿಂಹ ರಗಟೆ-ಚಿಂದಿ-ಕಪ್ಪು ಬಟ್ಟೆಗೆ ಈ ಕೆಳಗಿನ ಪರ್ಯಾಯಗಳನ್ನು ಹೇಳಿರುವನು-

> "ಪಟಚ್ಚರಂ ಜೀರ್ಣವಸ್ತ್ರ ಸಮೌ ನಕ್ತಕ ಕರ್ಪಟೌ"

ಹಳೆಯ ಹರುಕು ಬಟ್ಟೆಗೆ ಜೀರ್ಣವಸ್ತ್ರ ಮತ್ತು ಪಟಚ್ಚರವೆಂದು ಎರಡು ಪರ್ಯಾಯಗಳು, ಕರಿ ಬಣ್ಣದ ಬಟ್ಟೆಗೆ ನಕ್ತಕವೆಂದು ಪರ್ಯಾಯ, ನಕ್ತವೆಂದರೆ ರಾತ್ರಿ ಅದು ಕಪ್ಪು ಬಣ್ಣದ ಸೂಚಕಕರ್ ಎಂದರೆ ಕಪ್ಪು. ಸಂಸ್ಕೃತ ಕರ್ಪಟ ಶಬ್ದದ ಪ್ರಾಕೃತ ಅಪಭ್ರಂಶ ರೂಪ ಕಪ್ಪಡ, ಕರಿಯ ಬಟ್ಟೆಗಳನ್ನು ಹೊದ್ದವರು ಕಾರ್ಪಟಿಕರು, ಕಪ್ಪು ತಾಮಸ ಗುಣಗಳ ದ್ಯೋತಕ. ಮದ-ಮತ್ಸರಾದಿ ತಾಮಸ ಗುಣಗಳನ್ನು ಬಿಟ್ಟುದರ ಪ್ರತೀಕ ಕಾರ್ಪಟ ಕಪ್ಪು ಶಾಟಿ-ಕಪನಿ ತಿಳಿ ಗೆಂಪು ಕಾವಿ ರಾಗವನ್ನು-ವಿಷಯಾಸಕ್ತಿಯನ್ನು ತೊರೆದ ವೀತರಾಗಿ ಸನ್ಯಾಸಿಯನ್ನು ಸೂಚಿಸುವಂತೆ ಕರ್ಪಟ-ಕಪ್ಪಟ ತಾಮಸ ಪ್ರವೃತ್ತಿಯನ್ನು ಮೆಟ್ಟಿ ತುಳಿದ 'ಮಯಾ ಕೋಲಾಹಲ' ವೀರ ವಿರಕ್ತನನ್ನು ಸಂಕೇತಿಸುತ್ತದೆ.

ಕೃಷ್ಣದ ಕರ್, ಕಾರ್, ಕಾಲ, ಕಾಳ ವಿಶೇಷಣಗಳನ್ನು ಹೊಂದಿದ ಕರ್ಪಟ, ಕರ್ಬುರ, ಕಾರ್ಬೊನ್ನು (ಕರಿ ಹೊನ್ನು), ಕಾಲಾಯಸ ವಿಶೇಷಣಗಳು ಗಮನಾರ್ಹ, ಕಬ್ಬಿಣ ಕಪ್ಪು ಚಿನ್ನವೆನಿಸಿದೆ.

ಶಬ್ದಮಣಿಕಾರನ ಅಪಭ್ರಂಶ ಶಬ್ದಗಳ ವ್ಯುತ್ಪತ್ತಿಯಂತೆ ಸಂಯುಕ್ತ ಕರ್ಪಟದಲ್ಲಿಯ ಮೇಲಿನ ರೇಫಕ್ಕೆ ಅದರೊಳಗಿನ-ಅದಕ್ಕೆ ಪರವಾದ ಪಕಾರದ ಆದೇಶವಾಗಿ ಪ ದ್ವಿತ್ವವಾಗಿ ಕಪ್ಪಡಿ ರೂಪ ಸಿದ್ಧಿಸುತ್ತದೆ.

ಕಪ್ಪು ವಸ್ತ್ರಧಾರಿ ಕಾರ್ಪಟಿಕ ಪಾಶುಪತ-ಕಾಳಾ ಮುಖಶೈವರು ಕೂಡಲ ಸಂಗಮದಲ್ಲಿ ಬಹು ಸಂಖ್ಯೆಯಲ್ಲಿ ಇದ್ದಿರಬೇಕು. ಕಪ್ಪಡಿಯ ಸಂಗಮವೆಂದೇ ಅದು ರೂಢಿಯಲ್ಲಿ ಬಂದಿತು.

ಹರ್ಷವರ್ಧನ ಚಕ್ರವರ್ತಿಯ ಕಾಲದಲ್ಲಿದ್ದ (ಕ್ರಿ.ಶ.೬೦೯-೬೪೮) ಬಾಣ ಕವಿಯು ಹರ್ಷ ಚರಿತೆಯಲ್ಲಿ ಈ ಕರ್ನಾಟಕದ ಉಲ್ಲೇಖ ಮಾಡಿರುವನು-

"ಅಥ ಮಹತಃ ಕಾರ್ಪಟಿಕವೃಂದಸ್ಯ ಮಧ್ಯೇ
ಪ್ರಾತರೇವ ಸ್ನಾತಂ ದತ್ತಾಷ್ಟಪುಷ್ಪಿಕಮ್"

ಈ ಕಾರ್ಪಟಿಕರು ಪವಿತ್ರ ನದಿಗಳು ನೀರಿನ ನೇಮದವರು, ಇವರು ಪ್ರತಿನಿತ್ಯ ಪ್ರಾತಃಕಾಲದಲ್ಲಿ ಎದ್ದು ಸ್ನಾನ ಮಾಡಿ, ನದಿಗಳಿಂದ ಕಾಪಡಿ-ಕಂಬಿಗಳಲ್ಲಿ ನೀರು ಹೊತ್ತು ತಂದು ನಂದಿ ಬಟ್ಟಲ ಮೊದಲಾದ ಅಚ್ಚ ಬಿಳಿಯ ಹೂಗಳನ್ನು ಪಶುಪತಿಗೆ ಅರ್ಪಿಸುವ ವ್ರತವನ್ನು ನಿಷ್ಠೆಯಿಂದ ಪಾಲಿಸುತ್ತಿದ್ದರು.

ಕಾರಣ, ಕೂಡಲಸಂಗಮ ಪದಗಳು ಏಕಾರ್ಥದ ಜೋಡು ಶಬ್ದಗಳಾಗಿರದೆ ಬೇರೆ ಬೇರೆ ಅರ್ಥ ಕೊಡುವ ವಿಶಿಷ್ಟ ನಾಮಗಳಾಗಿವೆ. ಕೂಡಲ ಮಲಪ್ರಭ-ಕೃಷ್ಣಾನದಿಗಳ ಕೂಡಲಿಯಾಗಿದೆ. ಸಂಗಮ ಶಂಕರ ಪದದ ಅಪಭ್ರಂಶವಾಗಿಗೆ ಎನ್ನುವುದನ್ನು ನಾವಿಲ್ಲಿ ಕಾಣುತ್ತೇವೆ. ಶಾಸನ ಸಾಹಿತ್ಯದಲ್ಲಿ ಸಂಕ, ಸಂಗಮ ಅಂಕಿತದ ಅನೇಕ ಹೆಸರುಗಳ ಮೂಲ ಶಂಕರವಾಗಿದೆ.

ಶಂಕರ ಶಿವನ ವಿಶಿಷ್ಟ ನಾಮಾಂತರ, ಲೋಕಗಳಿಗೆ ಶುಭವನ್ನುಂಟು ಮಾಡುವ ಅನುಗ್ರಹ ಮೂರ್ತಿ ಶಂಕರ, ಅದು ತಾಂಡವ ಮೂರ್ತಿಯ ವಿಗ್ರಹ, ಸಂಗಮೇಶ್ವರ ಗರ್ಭಗುಡಿಯ ಸ್ವಯಂಭು ಶಿವಲಿಂಗದ ಹಿಂಭಾಗದಲ್ಲಿ ಸದಾ ಕಾವಿಯ ಬಟ್ಟೆಯಿಂದ ಮುಚ್ಚಿದ ಮೂರ್ತಿ, ತಾಂಡವ ನಾಟ್ಯ ಲೀಲಾ ವಿಗ್ರಹ, ಅದನ್ನು ಪ್ರಭುದೇವರೆಂದೇ ಅರ್ಚಕರು ಕರೆಯುತ್ತಾರೆ. ಪಾಶುಪತರು ಸೃಷ್ಟಿಯ ಸ್ಥಿತಿ, ಲಯ, ತಿರೋಧಾನ ಮತ್ತು ಅನುಗ್ರಹಗಳಿಗೆ ಕಾರಣನಾದ ಈ ತಾಂಡವ ಮೂರ್ತಿಯ ಆರಾಧಕರು, ಶಿವ ತನ್ನ ನಿಷ್ಠಾವಂತ ಭಕ್ತರಿಗೆ ಸದಾ ಅನುಗ್ರಹಕಾರಿ ಶಂಕರ, ಈ ವಾಸ್ತವದ ಹಿನ್ನೆಲೆಯಲ್ಲಿ ಬಸವಣ್ಣನವರ ವಚನಗಳ ಮುದ್ರಿಕೆಯನ್ನು ಅರ್ಥೈಸಿಕೊಂಡರೆ ಚೆನ್ನ.

ವಿವೇಕ ಚಿಂತಾಮಣಿ (ನಿಜಗುಣ ಶಿವಯೋಗಿ ಕೃತ): ಸಂಪಾದಕ: ಗೌ.ಮ. ಉಮಾಪತಿ ಶಾಸ್ತ್ರ, ಜ (ಗಂಗಾಧರ ಧರ್ಮ ಪ್ರಚಾರಕ ಮಂಡಲ, ಮೂರುಸಾವಿರ, ಹುಬ್ಬಳ್ಳಿ ೧೯೮೬ (ದ್ವಿತೀಯ ಆವೃತ್ತಿ);

ಮುದ್ರಿಕೆಗಳೊಂದಿಗೆ ವಚನ ರಚನೆಯ ಪರಂಪರೆ ೧೧ನೆಯದಿಂದ ೧೮ನೆಯ ಶತಮಾನದವರೆಗೂ ನಡೆದು ಬಂದಿದೆ. ೧೯-೨೦ನೆಯ ಶತಮಾನದಲ್ಲಿಯೂ ಆಧುನಿಕ ಸಾಹಿತಿಗಳು ವಚನಗಳನ್ನು ಬರೆದಿರುವರು. ಶರಣ-ಶರಣೆಯರ ವಚನಗಳ ಮುದ್ರಿಕೆಗಳು ಬಹಳ ಅಧ್ಯಯನ ಯೋಗ್ಯವಾಗಿವೆ. ಅವುಗಳಲ್ಲಿ ವಚನಕಾರರ ಗುರು, ಇಷ್ಟಲಿಂಗ ಸಂಕೇತ, ಕಾಯಕ, ದೇಶ, ಸ್ಥಳ ಮೊದಲಾದ ವಿಷಯಗಳ ವಿವೇಚನೆ ರೋಚಕವಾಗಿದೆ. ಈ ದಿಶೆಯಲ್ಲಿ ಸಂಶೋಧನೆ ಸಮಗ್ರವಾಗಿ ನಡೆಯಬೇಕಾಗಿದೆ.

□□

೪. ವೀರಶೈವ ಪರಂಪರೆ ಮತ್ತು ದೇವಾಲಯ ಸಂಸ್ಕೃತಿ

-ಡಾ|| ಡಿ.ವಿ. ಪರಶಿವಮೂರ್ತಿ

ವೀರಶೈವ ಪರಂಪರೆ ಮತ್ತು ದೇವಾಲಯ ಸಂಸ್ಕೃತಿ ಬಹಳ ಗೊಂದಲವಾದ ವಿಷಯ. ಯಾವುದಕ್ಕೂ ನಮಗೆ ಆಧಾರಗಳು ಸಿಗುವುದಿಲ್ಲ. ಈ ಶೈವ, ವೀರಶೈವರ ಅನೇಕ ಗೊಂದಲಗಳು ಈ ವಿಷಯದಲ್ಲೂ ಕೂಡ ಅಂದರೆ ದೇವಾಲಯ ಸಂಸ್ಕೃತಿ ವಿಷಯದಲ್ಲೂ ಕೂಡ ಸೃಷ್ಟಿಯಾಗಿ ಅವು ಆತಂಕಕ್ಕೆ ಎಡೆ ಮಾಡಿದೆ. ಅವು ಒಂದಕ್ಕೊಂದು ಪೂರಕವು ಕೂಡ ಮತ್ತು ವಿರುದ್ಧವೂ ಕೂಡ. ಆದರೆ ಈ ಶೈವ ವೀರಶೈವ ಇದರ ಭೇದ ಅಥವಾ ವಾದ ವಿವಾದಗಳಿಗೆ ಹೋಗದೆ ಸ್ವಲ್ಪ ವಿಶಾಲವಾದ ಅರ್ಥದಲ್ಲಿ ಈವರೆಗೂ ಒಂದಕ್ಕೊಂದು ಪೂರಕವಾಗಿ ಬೆಳೆದು ಬಂದಂತಹವು ಅನ್ನೋದನ್ನ ಆಧಾರವಾಗಿ ಇಟ್ಟುಕೊಂಡಾಗ ಈ ಸಮಸ್ಯೆಗಳಲ್ಲಿ ಕೆಲವು ಸಮಸ್ಯೆಗಳನ್ನು ನಿವಾರಣೆ ಮಾಡಬಹುದು. ಈ ವೀರಶೈವ ಪರಂಪರೆ ದೇವಾಲಯ ಸಂಸ್ಕೃತಿಯ ಅಧ್ಯಯನಕ್ಕೆ ಹೊರಟಾಗ ಬಹಳ ಮುಖ್ಯವಾಗಿ ಕೆಲವು ಆಕರಗಳನ್ನು ನಾವು ಗಮನಿಸಬೇಕಾಗುತ್ತದೆ. ಅದರಲ್ಲಿ ಪುರಾತತ್ತ್ವ ಶೋಧನೆಗಳು, ಪ್ರಾಚೀನ ದೇಗುಲಗಳ ವಾಸ್ತುಶೈಲಿ ಮತ್ತು ಆಗಮಗಳು, ಪುರಾಣಗಳು, ಜೊತೆಗೆ ಶಾಸನಗಳು ಮತ್ತು ಸಂಸ್ಕೃತ ಮತ್ತು ಕನ್ನಡ ಕಾವ್ಯಗಳು, ಐತಿಹ್ಯಗಳು ಹಾಗೂ ಜನಪದ ಸಾಹಿತ್ಯ ಹೀಗೆ ಸುಮಾರು ಏಳು ಆಕರಗಳನ್ನು ನಾವು ಈ ಅಧ್ಯಯನದಲ್ಲಿ ಬಳಸಿಕೊಂಡಾಗ ಮಾತ್ರ ನಾವು ಏನಾದರು ನಾಲ್ಕು ಮಾತುಗಳನ್ನಾದರೂ ಈ ವಿಷಯದಲ್ಲಿ ಹೇಳೋದಿಕ್ಕೆ ಸಾಧ್ಯ ಆಗುತ್ತೆ. ಇವುಗಳಲ್ಲಿ ಯಥೇಚ್ಛವಾಗಿ ಸಿಗೋಂತ ಆಕರಗಳು ಶಾಸನಗಳು ಮತ್ತು ಕಾವ್ಯದ ಆಕರಗಳು ಅದರಲ್ಲೂ ಕಾವ್ಯಗಳಿಗಿಂತಲೂ ಘಟಿಕ ಕಾಲಕ್ಕೆ ಹತ್ತಿರವಾದಂತ ಶಾಸನಗಳು ಅವಕ್ಕಿಂತ ಸ್ವಲ್ಪ ವಿಶ್ವಾಸನೀಯವಾದಂತ ಮೂಲ ಆಕರಗಳಾಗ್ತವೆ. ಈ ಹಿನ್ನೆಲೆಯಲ್ಲಿ ವೀರಶೈವ ಪರಂಪರೆ ಮತ್ತು ದೇವಾಲಯ ಸಂಸ್ಕೃತಿಯ ಬಗೆಗೆ ಸಂಕ್ಷಿಪ್ತವಾಗಿ ಹೇಳ ಬಯಸುತ್ತೇನೆ.

ದೇವಾಲಯ ಸಂಸ್ಕೃತಿಯ ಹುಟ್ಟು ಬೆಳವಣಿಗೆ ಬಗ್ಗೆ ಈಗಾಗಲೆ ಸಾಕಷ್ಟು ಜನ ವಿದ್ವಾಂಸರು ಇಂಗ್ಲಿಷ್ ವಿದ್ವಾಂಸರಿಂದ ಮೊದಲ್ಗೊಂಡು ಇವತ್ತಿನವರೆಗೂ ಹಲವಾರು ಜನ ಸತತವಾಗಿ ಸಂಶೋಧನೆಯನ್ನು ನಡೆಸ್ತಾ ಬಂದಿದ್ದಾರೆ. ಅದರ ಫಲಿತಗಳನ್ನು ಗ್ರಂಥಗಳ ರೂಪದಲ್ಲಿ ಲೇಖನಗಳ ರೂಪದಲ್ಲಿ ನಮ್ಮ ಮುಂದೆ ಇಟ್ಟಿದ್ದಾರೆ. ಆದರೂ ಯಾವುದೇ ಒಮ್ಮತದ ನಿರ್ಧಾರಕ್ಕೆ ಇದುವರೆಗೆ ಬರೋದಕ್ಕೆ ಸಾಧ್ಯವಾಗಿಲ್ಲ. ಇದರ ಬಗ್ಗೆ ಹೆಚ್ಚು ಕೆಲಸ ಮಾಡಿರುವಂತಹ ಆರಂಭದ ಡಾ. ಅಲ್ಟೇಕರ್‌ರವರು ಏನು ಹೇಳ್ತರೆಂದ್ರೆ ಮೂರ್ತಿ

ಪೂಜೆ ಆರಂಭ ಯಾವಾಗಾಯ್ತು ಹೇಗಾಯ್ತು. ದೇವಾಲಯದ ಸಂಸ್ಕೃತಿ ಅದರಲ್ಲಿ ಹೇಗೆ ಸೇರಕೊಳ್ತು. ಅದಕ್ಕೆ ಹೇಳೋದು ಬಹಳ ಕಷ್ಟ ಅಂತ ಅವರು ಹೇಳ್ತಾರೆ. ನಿಜ ಎಲ್ಲ ವಿದ್ವಾಂಸರು ಇದನ್ನು ಒಪ್ಪಿದ್ದಾರೆ. ಆದರೆ ಕರ್ನಾಟಕದಲ್ಲಿ ಆರಂಭದಿಂದಲೂ ದೇವಾಲಯಗಳು ಜನಮಾನಸದ ಜೀವಂತ ಚಿಲುಮೆಗಳಾಗಿ ಬೆಳೆದು ಬಂದಿವೆ. ಕರ್ನಾಟಕ ಸಂಸ್ಕೃತಿಯನ್ನು ಪೋಷಿಸಿ ಬೆಳೆಸಿದ ಮುಂದಿನ ತಲೆಮಾರಿಗೆ ಹಸ್ತಾಂತರಿಸುವ ಜವಾಬ್ದಾರಿ ಹೊತ್ತ ಪ್ರಮುಖ ಸಾಂಸ್ಕೃತಿಕ ಕೇಂದ್ರಗಳಲ್ಲಿ ಈ ದೇವಾಲಯಗಳು ಬಹಳ ಮುಖ್ಯವಾದ ಪಾತ್ರಗಳನ್ನು ವಹಿಸಿವೆ. ಪ್ರಾಚೀನ ವೀರಶೈವ ದೇವಾಲಯ ಯಾವುದು? ಎಲ್ಲಿದೆ? ಎಂಬುದು ಇದುವರೆಗೂ ತಿಳಿದು ಬಂದಿಲ್ಲ. ಕಾರಣ ಕ್ರಿಸ್ತಶಕ ಆರಂಭದಲ್ಲಿ ಕಟ್ಟಿರಬಹುದಾದ ಯಾವ ದೇವಾಲಯಗಳೂ ಕರ್ನಾಟಕದಲ್ಲಿ ಈಗ ಉಳಿದು ಬಂದಿಲ್ಲ. ಆದರೆ ಆಗ ಶಿವ ದೇವಾಲಯಗಳು ಇದ್ದವೆಂದು ಅದಕ್ಕೆ ಅನೇಕ ರಾಜರುಗಳು, ಅಧಿಕಾರಿಗಳು ದಾನದತ್ತಿ ನೀಡಿದ್ದರೆಂದು ಅನೇಕ ಶಾಸನಗಳಿಂದ ತಿಳಿದು ಬರುತ್ತದೆ. ಕದಂಬರ ಅವಧಿಯ ಒಂದು ಶಾಸನದಲ್ಲಿ ಒಂದು ಶಿವದೇವಾಲಯವನ್ನ ನಿರ್ಮಿಸಿ ದಾನ ಬಿಟ್ಟ ಬಗ್ಗೆ ಉಲ್ಲೇಖ ಇದೆ. ಕರ್ನಾಟಕದಲ್ಲಿ ವೀರಶೈವ ದೇವಾಲಯ ಸಂಸ್ಕೃತಿ ಆರಂಭಗೊಂಡು ಪಸರಿಸಿದ್ದು ಲಕುಲೀಶ ಪಾಶುಪಶ ಸಂಪ್ರದಾಯದ ಶೈವ ಗುರುಗಳಿಂದ. ಆದರೆ ಇದೇ ಅವಧಿಯಲ್ಲಿ ವೈದಿಕರು ನೂರಾರು ದೇವಾಲಯಗಳನ್ನು ನಿರ್ಮಿಸಿ ಬೆಳೆಸಿರುವರು. ಈ ವೈದಿಕರಿಗಿಂತ ಭಿನ್ನವಾಗಿ ದೇವಾಲಯಗಳನ್ನ ಜನಸಾಮಾನ್ಯರಿಗೆ ತೆರೆದಿಟ್ಟರು. ಜನಸಾಮಾನ್ಯರ ಬದುಕಿಗೆ ಮಡುಪಾಗಿಟ್ಟವರು ಲಕುಲೀಶ ಪಾಶುಪತ ಪರಂಪರೆಯವರು. ವೀರಶೈವ ಪರಂಪರೆಗೆ ಈ ಲಕುಲೀಶ ಪಾಶಪತ ಲಾಕುಳೀಶ ಶೈವರವರ ಕೊಡುಗೆಗಳನ್ನು ಮುಖ್ಯವಾಗಿ ಎರಡು ಬಗೆಗಳಾಗಿ ಮಾಡಬಹುದು. ಒಂದು, ಇವರು ಹಳ್ಳಿ ಹಳ್ಳಿಗಳಲ್ಲಿ ಶಿವ ದೇವಾಲಯಗಳ ನಿರ್ಮಾಣವನ್ನು ಮಾಡಿದ್ದು; ಎರಡು, ಸಂಸ್ಕೃತ ಭಾಷೆಯಲ್ಲಿ ಬೆಳೆದು ಬಂದಿದ್ದ ಜ್ಞಾನವನ್ನ ಮುಂದಿನ ಪರಂಪರೆಗೆ ಉಳಿಸಿ ಬೆಳೆಸಿದ್ದು, ಇವರು ವ್ಯವಸ್ಥಿತವಾಗಿ ದೇವಸ್ಥಾನದ ನಿರ್ಮಾಪಕರಾಗಿದ್ರು ಅಂತ ಹೇಳಬಹುದು. ತಾವು ನಿರ್ಮಿಸಿದ ನಿರ್ಮಿಸಿಕೊಟ್ಟ ದೇವಾಲಯಗಳಲ್ಲಿ ವಾಸಮಾಡುತ್ತ ವೈಯಕ್ತಿಕ ಆಧ್ಯಾತ್ಮಿಕ ಸಾಧನೆಯೊಂದಿಗೆ ಧರ್ಮಪ್ರಸಾರ, ವಿದ್ಯಾಪ್ರಸಾರದ ಹೊಣೆಯನ್ನು ಹೊತ್ತರು. ಆ ಕಾಲದಲ್ಲಿ ದೇವಾಲಯಗಳೇ ಮಠ ಮಠಗಳೇ ಶಾಲೆಗಳಾಗಿದ್ದುವು ಎಂದು ಡಾ. ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ. ಕೋಲಾರ ಜಿಲ್ಲೆಯ ಆವನಿಯಲ್ಲಿ ಕ್ರಿ.ಶ. ೯೩೧ರ ಒಂದು ಶಾಸನದಲ್ಲಿ ತ್ರಿಭುವನ ಕರ್ತಾರ ದೇವರು ಎಂಬ ಯತಿಯು ೪೦ ವರ್ಷ ಆ ಕ್ಷೇತ್ರವಲ್ಲಿ ಅಧಿಪತಿಯಾಗಿ ೫೦ ದೇವಾಲಯಗಳನ್ನೂ, ಎರಡು ದೊಡ್ಡ ಕೆರೆಗಳನ್ನು ನಿರ್ಮಿಸಿದ್ದರೆಂಬ ವಿಷಯ ಆ ಶಾಸನದಿಂದ ತಿಳಿದುಬರುತ್ತದೆ. ಕ್ರಿ.ಶ. ೯ ರಿಂದ ೧೨ನೇ ಶತಮಾನದವರೆಗೆ ಈ ಯತಿಗಳು ಕರ್ನಾಟಕದ ಉದ್ದಗಲಕ್ಕೂ ಸಾವಿರಾರು ಶಿವದೇಗುಲಗಳನ್ನು ನಿರ್ಮಿಸಿದ ವಿಷಯಗಳು ಶಾಸನಗಳಲ್ಲಿ ದಂಡಿಯಾಗಿವೆ. ಕಾಳಾಮುಖರ ಇತಿಹಾಸದ ಬಗ್ಗೆ ಇನ್ನೂ ಒಮ್ಮತಕ್ಕೆ ಬರಲಾಗಿಲ್ಲ. ಸದ್ಯಕ್ಕೆ ಇವರು ಕಾಶ್ಮೀರ ಮೂಲದವರೆಂದುದಕ್ಕೆ ಸ್ವಲ್ಪ ಹೆಚ್ಚು ಒಮ್ಮತವಿದೆ. ಕರ್ನಾಟಕದಲ್ಲಿ ಲಾಕುಳಶೈವರು ನಿರ್ಮಿಸಿದ ಪ್ರಾಚೀನ ದೇವಾಲಯಗಳಲ್ಲಿ ಈಗ ಉಳಿದಿರುವುದು ಬಾದಾಮಿ ಬಳಿಯ ಮಹಾಕೂಟದಲ್ಲಿರುವ ಮಕುಟೇಶ್ವರ ಗುಡಿ. ಕ್ರಿ.ಶ. ೬೦೨ರ ಚಾಲುಕ್ಯರ ದೊರೆ ಮಂಗಳೇಶನ ಒಂದು ಶಾಸನದಲ್ಲಿ ಇವನ ತಾಯಿಯಂತಿದ್ದ ದುರ್ಲಭ ದೇವಿ ಎಂಬಾಕೆಯು

ಮಕುಟೇಶ್ವರನಾಥನಿಗೆ ದಾನ ನೀಡಿದ ವಿಷಯ ಇದೆ. ಪಂಚಮುಖಿಯವರು ಈ ಗುಡಿಯ ದ್ವಾರಪಾಲಕ ವಿಗ್ರಹಗಳು ಕಾಳಾಮುಖ ಭಕ್ತರವು ಇರಬೇಕೆಂದು ಅದರ ಲಕ್ಷಣಗಳನ್ನು ಸಾಧಿಸಿ ಹೇಳಿರುವರು. ಈ ಗುಡಿಯ ಹೊರಭಾಗದಲ್ಲಿ ಲಕುಲೀಶ್ವರನ ವಿವಿಧ ಭಂಗಿಯ ಚಿತ್ರಗಳೂ ಇವೆ ಎಂದು ವಾದಿಸುತ್ತಾರೆ. ಇದು ನಿಜವಾದದ್ದೇ ಆದರೆ ಇದರಿಂದ ಕರ್ನಾಟಕದಲ್ಲಿ ಲಾಕುಳ ಶೈವರ ಇತಿಹಾಸ ಕ್ರಿ.ಶ. ೬ಕ್ಕೂ ಹಿಂದಕ್ಕೆ ಹೋಗುತ್ತದೆಂದು ಹಲವಾರು ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಅಭಿಪ್ರಾಯಕ್ಕೆ ಸದ್ಯಕ್ಕೆ ಎಲ್ಲರ ಮನ್ನಣೆಯೂ ಇದೆ. ಈ ಲಾಕುಳ ಯತಿಗಳು ತಪಸ್ಸಿನಲ್ಲೂ, ವಿದ್ವತ್ತಿನಲ್ಲೂ ಅಪಾರ ನಿಷ್ಠೆಯುಳ್ಳವರು. ಹೇಗೆಂದರೆ ಈ ವರುಣ ಶಿವಬಟಾರರೆಂಬ ಸನ್ಯಾಸಿಯನ್ನ ಒಂದು ಶಾಸನ "ತಪೋವನಾನುರಾಗ" "ಭಗವತ್ ಪಾದೈಕಾಭರಣ" ಎಂದು ಎರಡು ರೀತಿ ಹೊಗಳಿದೆ. ಮುಳುಗುಂದದ ನಗರೇಶ್ವರ ದೇವಸ್ಥಾನದ ಸ್ಥಾನಪತಿಯಾಗಿದ್ದಂಥ ಗುಹೇಶ್ವರ ಪಂಡಿತ ದೇವನನ್ನಂತೂ ಒಂದು ಶಾಸನ ಬಹಳ ಆವೇಶಪೂರ್ಣವಾಗಿ ವರ್ಣಿಸಿದೆ. ಸಂಸಾರ ಸುಖದ ಕಡೆ ಮನಸನ್ನೆಳೆಯುವ ಇಂದ್ರಿಯಗಳನ್ನು ಗೆದ್ದು ಕಾಮಾರಿಯಾದ ಶಿವನನ್ನಾರಾಧಿಸುವ ಆ ಮುನಿಯು ತಪಸ್ಸಿನಲ್ಲಿ ವಸಿಷ್ಠ ಮತ್ತು ಅಗಸ್ತ್ಯರಿಗೆ ಸಮನೇ ಸರಿ. ಅವನಿಂದ ನಗರೇಶ್ವರ ಮಠವು ವಸುಧೆಗೆ ಪೂಜ್ಯವಾಯಿತು ಅಂತ ಶಾಸನದಲ್ಲಿ ಆ ಮುನಿಯ ನಿಷ್ಠೆಯನ್ನು, ಶಕ್ತಿಯನ್ನು ಹೊಗಳಿದೆ.

ಈ ಲಾಕುಳ ಶೈವರ ತಪಸ್ಸಿಗೆ ಸರಿ ಮತ್ತು ಮಿಗಿಲು ವಿದ್ಯಾ ಪ್ರತಿಷ್ಠೆ. ಈ ಶಾಸನಗಳಲ್ಲಂತು ನೂರಾರು ಯತಿಗಳ ವಿವರಗಳು ನಮಗೆ ದೊರಕುತ್ತದೆ. ಅವರು ಹೇಗೆ ಇಡೀ ತಮ್ಮ ತಪಸ್ ಶಕ್ತಿಯಿಂದ ತಮ್ಮ ವೈಯಕ್ತಿಕ ವರ್ಚಸ್ಸಿನಿಂದ ಎಲ್ಲರನ್ನು ಗೆದ್ದಿದ್ದರು ವಿದ್ವಾಂಸರಾಗಿದ್ದರು, ನಾನಾ ಶಾಸ್ತ್ರಗಳಲ್ಲಿ ಪಂಡಿತರಾಗಿದ್ದರು ಅನ್ನೊದನ್ನ ಶಾಸನಗಳು ದೀರ್ಘವಾಗಿ ವಿವರಿಸಿಕೊಂಡು ಹೋಗುತ್ತವೆ. ಈ ದೇವಾಲಯ ನಿರ್ಮಾಣದ ಕೆಲವು ಕಾರಣಗಳನ್ನು ಕುರಿತು ನಮಗೆ ಶಾಸನಗಳಲ್ಲಿ ಬಹಳ ಆಸಕ್ತಿಯಾದಂತ ವಿಷಯಗಳು ಕಂಡು ಬರುತ್ತವೆ. ಧರ್ಮವಳಲಿನ ಅಂದರೆ ಈಗಿನ ಡಂಬಳದ ಅಜ್ಜಮಯ್ಯ ಅಥವಾ ಅಜ್ಜಮನಾಯಕ ಎಂಬಾತನು ಕನಸಿನಲ್ಲಿ ಮುಕ್ಕಣ್ಣನ ಪಾದಗಳನ್ನು ಕಂಡು "ನಮಃ ಶಿವಾಯ" ಎಂದು ಕನವರಿಸುತ್ತಿದ್ದನಂತೆ. ಅವನು ತನ್ನ ತೋಳ್ಬಲದಿಂದ ಸಂಪಾದಿಸಿದ ಐಶ್ವರ್ಯವನ್ನು ಸಾರ್ಥಕಗೊಳಿಸಲು "ಅಚ್ಚಮೇಶ್ವರ" ಎಂಬ ಶಿವಭವನವನ್ನು ಕಟ್ಟಿಸುತ್ತಾನೆ. ಅಂದರೆ ಈ ರೀತಿ ನೂರಾರು ಪ್ರೇರಣೆಗಳು ದೊರಕುತ್ತವೆ. ತನ್ನ ತಾಯಿಯ ಕನಸಿನಲ್ಲಿ ಬಂದು ಮಗನಿಗೆ ಹೇಳಿದಾಗ ಮಗ ಶಿವದೇವಾಲಯಗಳನ್ನು ನಿರ್ಮಿಸುವುದು ಮತ್ತೆ ಯಾವುದಾದರೂ ದಂಡೆತ್ತಿ ಹೋಗಿ ಜಯಶೀಲರಾದಾಗ ತನ್ನ ಹೆಸರಲ್ಲಿ ದೇವಾಲಯಗಳನ್ನು ನಿರ್ಮಿಸುವುದು. ಹೆಂಡತಿಯರ ಹೆಸರಲ್ಲಿ, ತಾಯಿಯರ ಹೆಸರಲ್ಲಿ, ಮಕ್ಕಳ ಹೆಸರಲ್ಲಿ ಹೀಗೆ ಬೇರೆ ಬೇರೆ ಹೆಸರಲ್ಲಿ ಅದೇ ಹೆಸರನ್ನ ಆ ಶಿವನಿಗೆ ಇಟ್ಟು ದೇಗುಲಗಳನ್ನ ನಿರ್ಮಿಸಿದಂತ ದಾಖಲೆಗಳು ಶಾಸನಗಳಲ್ಲಿ ಕಂಡು ಬರುತ್ತವೆ. ಹಾಗೆ ವ್ಯಕ್ತಿಗಳ ಹೆಸರಲ್ಲಿ ದೇಗುಲಗಳನ್ನು ಕಟ್ಟಿಸಿದರೆ ನಾನು ಬಂದು ಶಿವನ ಸ್ವರೂಪವೇ ಆಗಿ ಬಿಡತ್ತೀನಿ ಎನ್ನುವ ನಂಬಿಕೆ ಅ ಜನಗಳಲ್ಲಿ ಇತ್ತೂಂತ ಹೇಳ್ತಾರೆ. ಆ ವಿಜಯಾದಿತ್ಯ ಸತ್ಯಾಶ್ರಯನು ಪ್ರತಿಷ್ಠಿಸಿದ ದೇವರು "ವಿಜಯಾಧಿತ್ಯ ಭಟ್ಟಾರಕ" ಲೋಕ ಮಹಾದೇವಿಯು ಕಟ್ಟಿಸಿದ ದೇವಸ್ಥಾನ "ಲೋಕೇಶ್ವರ ಭಟ್ಟಾರಕ" ದೇವಸ್ಥಾನ ಸಿಡಿಲಂಕರಾಮ ಎಂಬಾತನು ಪ್ರತಿಷ್ಠಿಸಿದ ದೇವರ ಸಿಡಿಲೇಶ್ವರ, ಕೋಟೇಗಾವುಂಡ ಮಾಡಿಸಿದ ದೇವರು ಕೋಟೇಶ್ವರ, ವದ್ದಿರಾಜನು ಮಾಡಿಸಿದ ದೇವರು ವದ್ದೇಶ್ವರ ಹೀಗೆ

ಇನ್ನೂ ಹತ್ತಾರು ಈ ರೀತಿಯ ಹೆಸರು. ಇನ್ನು ಮಂಕೇಶ್ವರ, ಮಲ್ಲೇಶ್ವರ, ಬಿಕ್ಕೇಶ್ವರ, ಕಲ್ಲೇಶ್ವರ ಇವೆಲ್ಲ ನಮಗೆ ಸಿಗುತ್ತವೆ. ವ್ಯಕ್ತಿ ಹೆಸರು ಆರಂಭದಲ್ಲಿದ್ದರೂ ಅವು ಕೊನೇಲಿ ಅಂತ್ಯವಾಗೋದು ಈಶ್ವರ ಅನ್ನೋ ಹೆಸರಿಂದ. ಜೊತೆಗೆ ಚಾಮರಾಜನಗರದಲ್ಲಿ ಚಾಮರಾಜ ಒಡೆಯರು ಈಶ್ವರ ಗುಡಿಯನ್ನು ನಿರ್ಮಿಸಿದ್ದರೆ ಚಾಮರಾಜ ಒಡೆಯೇಶ್ವರ ಅಂತಾನೆ ಹೆಸರನ್ನ ಇಟ್ಟಿದ್ದಾರೆ.

ಇನ್ನು ದೇವಸ್ಥಾನದ ನಿರ್ಮಾಣದಲ್ಲಿ ಎಷ್ಟು ಶ್ರದ್ಧೆ ನಿಷ್ಠೆಗಳು ಇತ್ತೆಂದರೆ ಒಂದು ರೀತಿ ಈ ದೇವಸ್ಥಾನದ ನಿರ್ಮಾಣ ವೀರವ್ರತವಾಗಿಯೂ ಕೂಡ ಪರಿಣಮಿಸಿದ್ದು ಉಂಟು. ಶ್ರೀಮಂತನಲ್ಲದ ಒಬ್ಬ ವ್ಯಕ್ತಿಗೆ ದೇವಸ್ಥಾನ ಕಟ್ಟಿಸುವ ಬಯಕೆ ಮೂಡಿದರೆ. ಆಗ ಆತ ಬಹಳ ಸಹಜವಾಗಿಯೇ ವೀರ ಪ್ರತಿಜ್ಞೆಯನ್ನು ಕೈಕೊಂಡವನಂತೆ ಕಾರ್ಯಶೀಲನಾಗ-ಬೇಕಾಗುತ್ತದೆ. ಇದಕ್ಕೆ ಕೆಲವು ನಿದರ್ಶನಗಳನ್ನು ಹೇಳಬಹುದು. ಕುಂಬಾರ ಜಾತಿಯ ಬಮ್ಮಣ ಎಂಬಾತನು ತಲೆಯನ್ನು ತೊಳೆಯದೆ, ಅನ್ನ ಉಣ್ಣದ ವೀರವ್ರತವನ್ನು ಕೈಗೊಂಡು ಕುಂಭೇಶ್ವರ ದೇವರನ್ನು ಪ್ರತಿಷ್ಠಿಸಿದ ವಿಷಯ ಒಂದು ಶಾಸನದಲ್ಲಿ ಇದೆ. ಲಿಂಗಶಿವಜೀಯ ಎಂಬುವರು ಭಿಕ್ಷಾವೃತ್ತಿಯಿಂದ ಹಣವನ್ನು ಸಂಪಾದಿಸಿ ಜಟಿಂಗರಾಮೇಶ್ವರದಲ್ಲಿದ್ದ ಇಟ್ಟಿಗೆಯ ರಾಮೇಶ್ವರ ದೇವಸ್ಥಾನವನ್ನು ಕೆಡವಿಸಿ ಅದನ್ನು ಶಿಲೆಯಲ್ಲಿ ಕಟ್ಟಿಸಿ ಕಲಶವನ್ನು ಇಡಿಸುವುದಲ್ಲದೆ ಇನ್ನು ಅನೇಕ ದೇವಸ್ಥಾನಗಳನ್ನು ಕೊಂಡಗಳನ್ನು ನಿರ್ಮಿಸಿದ ವಿಷಯ ಜಟಿಂಗರಾಮೇಶ್ವರದ ಶಾಸನದಿಂದ ತಿಳಿದು ಬರುತ್ತದೆ. ಹಾಗೆ ಶ್ರೀಮಂತರ ಮನೆಗಳಲ್ಲಿದ್ದ ಅಡಿಗೆಯವರು ದೇವಸ್ಥಾನದಲ್ಲಿದ್ದ ಪೂಜಾರಿಯವರು ದೇವಸ್ಥಾನಗಳನ್ನು ಕಟ್ಟಿಸಿದ ಅನೇಕ ಉದಾಹರಣೆಗಳು ನಮಗೆ ದೊರಕುತ್ತವೆ. ಇನ್ನು ದೇವಾಲಯ ನಿರ್ವಹಣೆ ಬಂದಾಗ ಶಿವದೇವಾಲಯಗಳ ನಿರ್ವಹಣೆಯ ಒಂದು ಅಂಶ ಬಹಳ ವಿಚಿತ್ರವಾದುದೇನೆಂದರೆ ಎಲ್ಲಾ ಗ್ರಾಮಸ್ಥರಲ್ಲಿ ಆಸಕ್ತಿ ಇರುವವರು ಒಂದಿಷ್ಟು ಪುದುವಟ್ಟನ್ನು ಒಂದಷ್ಟು ಹಣಾಂತ ಇಡುವಂತಹದು. ಅದನ್ನು ಕಷ್ಟ ಕಾಲದಲ್ಲಿರುವನಿಗೆ ಕೊಟ್ಟು ಆದರಿಂದ ಬಂದಂತ ಬಡ್ಡಿಯನ್ನು ತೆಗೆದುಕೊಂಡು ಆ ದೇವಸ್ಥಾನದ ದಿನನಿತ್ಯದ ಕಾರ್ಯಗಳನ್ನು ನಿರ್ವಹಿಸುವಂತದ್ದು. ಈ ಹಣವನ್ನು ತೆಗೆದುಕೊಂಡವನು ಯಾರಾದರೂ ವಾಪಸ್ ಕೊಡಲಿಲ್ಲಾಂದ್ರೆ ಅವರು ಸತ್ತ ಮೇಲೆ ಸ್ವರ್ಗಕ್ಕೆ ಹೋಗೋದಿಲ್ಲ ಅಂತ ಶಾಪದ ಆಶಯವನ್ನ ಕೂಡ ಆ ಶಾಸನದಲ್ಲಿ ಕಂಡು ಬರುತ್ತದೆ.

ತುಮಕೂರು ಜಿಲ್ಲೆಯ ಒಂದು ಗ್ರಾಮದಲ್ಲಿ ಕಲ್ಲೇಶ್ವರ ದೇವಸ್ಥಾನದ ಆವರಣದಲ್ಲೆ ಆ ಊರಿನ ಇತರರು ಹೆಣಗಳನ್ನು ಹೂಳುತ್ತಿದ್ದರಂತೆ. ೧೬೧೦ನೇ ಶಾಸನ ಇದು. ಅ ಊರಿನ ವೀರಶೈವರೆಲ್ಲ ಸೇರಿ ಇದನ್ನು ಹೇಗಾದರು ಮಾಡಿ ತಪ್ಪಿಸಬೇಕೆಂದು ಅಲ್ಲಿ ಶಾಸನವನ್ನು ನಡೆಸುತ್ತಾರೆ. ಈ ದೇವಸ್ಥಾನದಿಂದ ಬಾಣ ಬಿಟ್ಟ ಅಳತೆಯಲ್ಲಿ ಅದರ ಒಳಗೆ ಯಾರಾದರು ಹೆಣವನ್ನು ಹೂಳಿದ್ದೇ ಆದರೆ ಆ ಹೆಣ ಸ್ವರ್ಗಕ್ಕೆ ಹೋಗಲ್ಲ ಖಂಡಿತ ನರಕಕ್ಕೆ ಹೋಗುತ್ತೆ ಅಂತ ಹೇಳಿ ಶಾಸನವನ್ನು ನೆಡೆಸಿ ಅಲ್ಲಿ ಒಂದು ಬಾವಿಯನ್ನು ತೋಡಿಸಿ ಆ ದೇವಸ್ಥಾನದ ಪೂಜಾಕಾರ್ಯಗಳು ಪ್ರತಿ ದಿವಸ ಸಾಂಗವಾಗಿ ನೆರವೇರುವಂತೆ ಏರ್ಪಡಿಸಿರುತ್ತಾರೆ. ಇನ್ನು ಈ ತರಹದ ಉಲ್ಲೇಖಗಳು ಬಹಳ ಸಂಕ್ಷಿಪ್ತಗೊಳಿಸಿ ಹೇಳುತ್ತಿದ್ದೇನೆ. ಅನಂತರ ಪ್ರಮುಖವಾದಂತ ದೇವಾಲಯಗಳ ಸಂಸ್ಕೃತಿಯ ಪ್ರಸರಣದ ಕಾರ್ಯ ಅಂದರೆ

ಅವು ವಿದ್ಯಾಭ್ಯಾಸದ ಪ್ರಸರಣವನ್ನು ಮಾಡಿದ್ದು ಪ್ರಾಚೀನ ಕರ್ನಾಟಕದ ದೇವಾಲಯಗಳನ್ನ ಎರಡು ದೃಷ್ಟಿಯಿಂದ ಪ್ರಮುಖವಾಗಿ ಗುರುತಿಸುತ್ತೀವಿ; ಒಂದು ಧರ್ಮದ ಬೆಳವಣಿಗೆ ದೃಷ್ಟಿಯಿಂದ ಮತ್ತೊಂದು ವಿದ್ಯೆಯ ಬೆಳವಣಿಗೆ ದೃಷ್ಟಿಯಿಂದ. ಆ ಕಾಲದಲ್ಲಿ ವಿದ್ಯಾಭ್ಯಾಸ ಎಷ್ಟು ಕಷ್ಟ ಇತ್ತು ಅಂದರೆ ಎಲ್ಲರಿಗೂ ತಿಳಿದಿದ್ದೆ. ಅದಕ್ಕೆ ಅನೇಕ ಯತಿಗಳು ನೂರಾರು ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಹೇಳಿಕೊಡುತ್ತಿದ್ದುದು ಅಲ್ಲದೆ ಆ ಕಾರ್ಯಕ್ಕೆ ಬಂದಂತ ಅನೇಕ ಅರಸರಿಂದ ದಾನ ದತ್ತಿಗಳನ್ನು ಪಡೆದು ತಮ್ಮ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಗೆ ವೆಚ್ಚ ಮಾಡಿದ ಉದಾಹರಣೆಗಳು ಅನೇಕ ಶಾಸನಗಳಲ್ಲಿ ದೊರಕಿವೆ. ಅದರಲ್ಲಿ ಬೆಳ್ಳಿಗಾವಿಯ ಕೋಡಿಮಠ ಎಂಬುದು ಬಹಳ ಪ್ರಸಿದ್ಧವಾದುದು. ಬಿಜ್ಜಳ ಆ ಸ್ಥಳದ ಪರಿಶೀಲನೆಗಾಗಿ ಬಂದಾಗ ಅವನ ಸಾಮಂತ ಆ ಸಭೆಯಲ್ಲಿ ಕೈಮುಗಿದು ಈ ರೀತಿ ಒಂದು ಮಠ ಇದೆ. ಬಹು ವಿದ್ಯಾರ್ಥಿಗಳು ವಿದ್ಯೆಯನ್ನ ಕಲೀತಾ ಇದ್ದಾರೆ. ಇಲ್ಲಿಯ ಗುರುಗಳು ಮಹಾಮಹಿಮರು ಅಂತ ಹೇಳಿ ಹೊಗಳಿ ಬಿಜ್ಜಳನ ಹತ್ತಿರ ದಾನ ದತ್ತಿಗಳನ್ನು ಪಡೆದು ವಿದ್ಯಾಭ್ಯಾಸದ ಕಾರ್ಯ ಸುಸೂತ್ರವಾಗಿ ನಡೆಯೋ ಹಾಗೆ ಮಾಡುತ್ತಾನೆ. ಅದೇ ವೀರಶೈವ ದೇವಾಲಯಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ವಿವರ ಹೇಗಿತ್ತು ಅನ್ನುವುದಕ್ಕೆ ಹೆಚ್ಚು ಆಧಾರ ವಿವರ ಲಭ್ಯವಿಲ್ಲ. ಕೆಲವು ಶಾಸನಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ "ಕನ್ನಡಕ್ಷರ ಶಿಕ್ಷೆ" ಅನ್ನುವ ಅಂತ ವಿದ್ಯೆ ಹೇಳಿ ಕೊಡ್ತಾ ಇದ್ದರು. ಇದನ್ನ "ಬಾಲ ಶಿಕ್ಷೆ ಶಾಸ್ತ್ರ" ಅಂತನೂ ಕೂಡ ಕರೀತಾ ಇದ್ರು. ಹಾಗೆ "ಅಕ್ಷರ ಸ್ವೀಕರಣ ಶಾಸ್ತ್ರ" ಎಂದೂ ಕೂಡ ಶಾಸನದಲ್ಲಿ ಉಲ್ಲೇಖ ಇದೆ. ಇದಕ್ಕೆ ಪೂರಕವಾಗಿ ಈ ಕನ್ನಡಕ್ಷರ ಶಿಕ್ಷೆ, ಬಾಲ ಶಿಕ್ಷೆ ಶಾಸ್ತ್ರವನ್ನು ನೀಡುವವರಿಗೆ ಕನ್ನಡದುಪಾಧ್ಯಾಯರು ಇದ್ದರು ಅಂತ ಮೂರು ನಾಲ್ಕು ಶಾಸನದಲ್ಲಿ ದಾಖಲೆಗಳಿವೆ. ಈ ಕನ್ನಡದುಪಾಧ್ಯಾಯರಿಗೆ ವಿಶೇಷವಾಗಿ ದಾನ ದತ್ತಿಗಳನ್ನ ಬಿಡುತ್ತಾ ಇದ್ದಂತ ವಿಚಾರ ಶಾಸನಗಳಲ್ಲಿ ಸಿಗುತ್ತವೆ. ಈ ವೈದಿಕರ ಬಾಲ ಶಿಕ್ಷೆ ರೂಢಿಯಲ್ಲಿತ್ತು. ಇದಕ್ಕೆ ಸಂಬಂಧಪಟ್ಟ ಅನೇಕ ಶಾಸನಗಳು ಸಿಗುತ್ತವೆ. ಆ ಬಾಲ ಶಿಕ್ಷೆಯಲ್ಲಿ ವೈದಿಕರು ಪ್ರಮುಖವಾಗಿ ಬಾಲಕರಿಗೆ ಕಲಿಸ್ತಾ ಇದ್ದದ್ದು ಅಕ್ಷರಾಭ್ಯಾಸ, ಜೊತೆಗೆ ವೇದಗಳ ಬಗ್ಗೆ ಪ್ರಾಥಮಿಕವಾದಂತ ಮಾಹಿತಿ. ಆದರೆ ವೀರಶೈವರು ಏನು ಕಲಿಸ್ತಾ ಇದ್ದರು ಅನ್ನೋದಕ್ಕೆ ನಮಗೆ ಕನ್ನಡಕ್ಷರಶಿಕ್ಷೆಂತ ಮಾತ್ರ ಸಿಗುತ್ತೆ ಹೊರತು ಮತ್ತಿನ್ನೇನು ವಿವರಗಳು ಲಭ್ಯ ಇಲ್ಲ. ಇನ್ನು ಪ್ರೌಢ ಶಿಕ್ಷಣದ ವಿಷಯಕ್ಕೆ ಬಂದಾಗ ಅನೇಕ ಶಾಸನಗಳು ಮಾಹಿತಿಗಳನ್ನ ಕೊಡುತ್ತವೆ. ಅದರಲ್ಲಿ ವ್ಯಾಕರಣವನ್ನು ಕಲಿಸ್ತಾ ಇದ್ದರು, "ಕೌಮಾರ" "ರೂಪಾವತಾರ", ಪಾಣಿನೀಯ ಅಷ್ಟಾಧ್ಯಾಯಿ ಮುಂತಾದುವನ್ನು ಜ್ಯೋತಿಷ್ಯ, ಪುರಾಣ, ಕಾವ್ಯ, ನಾಟಕ, ಅರ್ಥಶಾಸ್ತ್ರ, ಭರತಶಾಸ್ತ್ರ, ಕಾಮಸೂತ್ರ, ೧೮ ಪುರಾಣಗಳು ಷಡ್ದರ್ಶನಗಳು ಹಾಗೆ ಒಂದು ಶಾಸನದಲ್ಲಿ ತಿಲು, ತಿವುಳು, ಕನ್ನಡ; ನಾಗರಿ, ಈ ನಾಲ್ಕು ರೀತಿಯ ಲಿಪಿಗಳನ್ನು ಮಕ್ಕಳಿಗೆ ಹೇಳಿ ಕೊಡ್ತಾ ಇದ್ರು ಅಂತ ದಾಖಲೆ ಸಿಗುತ್ತೆ. ತಿಲು ಅಂದರೆ ತೆಲುಗು, ತಿವುಳು ಅಂದರೆ ತಮಿಳು, ನಾಗರಿ ಅಂದ್ರೆ ನಂದಿನಾಗರಿ ಲಿಪಿ ಅಂತ ವಿದ್ವಾಂಸರು ಊಹೆ ಮಾಡಿದ್ದಾರೆ. ದೇವಾಲಯ ಸಂಸ್ಕೃತಿ ಒಂದು ರೀತಿ ಹೇಗೆ ವೀರಶೈವತ್ವದಲ್ಲಿ ವಿಲೀನವಾಯ್ತು. ಶೈವ ದೇವಾಲಯ ಸಂಸ್ಕೃತಿ ಅಂತ ನಮಗೆ ತಿಳಿದು ಬರುತ್ತೆ. ಒಂದು ರೀತಿ ಬಸವಣ್ಣನವರ ನೇತೃತ್ವದಲ್ಲಿ ಕಾಳಾಮುಖ ಶೈವಕ್ಕೆ ಏನು ಆಪತ್ತು ಒದಗಿತು ಮತ್ತು ಪ್ರೇರಣೆ ಎಷ್ಟರ ಮಟ್ಟಿಗೆ ಸಿಗ್ತು ಅನ್ನೋದಕ್ಕೆ ಜ್ಞಾನ ಇನ್ನೂ ಅಪೂರ್ಣವೇ.

ಒಂದು ರೀತಿ ಚೆನ್ನಬಸವಣ್ಣನವರು ಕಾಳಾಮುಖ ಮತ್ತು ಪಾಶುಪತರ ನೀತಿ ನಡವಳಿಕೆಯನ್ನು ಟೀಕಿಸುವುದರಿಂದ ಕಾಳಾಮುಖಶೈವಕ್ಕಿಂತ ವೀರಶೈವವು ಭಿನ್ನ ಎಂಬುದು ಸ್ಪಷ್ಟ ಎಂದು ಹೇಳಿ ಡಾ।। ಚಿದಾನಂದ ಮೂರ್ತಿಯವರು ಹೇಳ್ತಾರೆ. ವೀರಶೈವದ ಉದಯದೊಡನೆ ಕಾಳಾಮುಖದ ಅವನತಿಯು ಆರಂಭವಾಗಿರಬೇಕು. ಕಾಳಾಮುಖರು ಲಿಂಗ ಪ್ರತಿಷ್ಠೆಯನ್ನು ಒಪ್ಪಿ ದೇವಸ್ಥಾನಗಳ ನಿರ್ಮಾಣ ಕಾರ್ಯವನ್ನು ವೀರವ್ರತವೆಂದು ಅಂಗೀಕರಿಸಿದ್ದರು. ಇಷ್ಟಲಿಂಗಾರಾಧಕರಾದ ವೀರಶೈವರು ಕಾಳಾಮುಖರ ಆ ಎರಡು ತತ್ವಗಳನ್ನು ಪ್ರತಿಭಟಿಸಬೇಕೆಂಬ ಉದ್ದೇಶದಿಂದಲೋ ಏನೋ ಸ್ಥಾವರ ಲಿಂಗಪ್ರತಿಷ್ಠೆ ವಿರೋಧಿಸಿ ದೇವಸ್ಥಾನಗಳ ನಿರ್ಮಾಣವನ್ನು ಪ್ರತಿಭಟಿಸಿದರು ಅಂತ ವಿದ್ವಾಂಸರು ಹೇಳ್ತಾರೆ. ಆದರೆ ದೇವಸ್ಥಾನದ ನಿರ್ಮಾಣದ ಪ್ರತಿಭಟನೆ ತತ್ಕಾಲ ಅಷ್ಟೇ. ವಚನಕಾರರ ನಂತರ ಮತ್ತೆ ಪ್ರವಾಹದೋಪಾದಿಯಲ್ಲಿ ದೇವಾಲಯಗಳ ನಿರ್ಮಾಣ ಹಾಗೂ ಚಟುವಟಿಕೆಗಳು ನಡಿತಾ ಬರ್ತವೆ. ಒಂದು ರೀತಿ ವಿಲೀನ ಆಯ್ತೇನೊ. ಆದರಲ್ಲಿ ಬಹಳಷ್ಟು ವಿದ್ವಾಂಸರು ಹೇಳ್ತಾರೆ.

ಆದರೆ ಅದರ ಬಗ್ಗೆ ಯೋಚನೆ ಮಾಡ್ಬೇಕಾಗಿದೆ. ಯಾಕೆಂದರೆ ಲಕ್ಕಣ ದಂಡೇಶನ ಶಿವತತ್ವ ಚಿಂತಾಮಣಿಯಲ್ಲೂ ಕೂಡ ನಮಗೆ ಈ ಕಾಳಾಮುಖ ಯತಿಗಳು ಇನ್ನೂ ಇದ್ದರು ಅಂತ ಆಧಾರಗಳು ಸಿಗ್ತವೆ. ವಚನಕಾರರ ನಂತರವೂ ಕೂಡ ಕಾಳಾಮುಖರು ತಮ್ಮ ಪ್ರಭಾವವನ್ನು ಉಳಿಸಿಕೊಂಡಿದ್ದಾರೆ. ಆದರೆ ಮೊದಲಿನಷ್ಟು ಅವರು ವೈಭವದಿಂದ ಇರಲಿಲ್ಲಾನ್ನುವುದಂತು ಸತ್ಯ. ಪ್ರೌಢದೇವರಾಯನ ಅವಧಿ ಮತ್ತು ಎಡೆಯೂರು ಸಿದ್ಧಲಿಂಗ ಯತಿ ಮತ್ತು ಗೋಣೆ ಬಸವೇಶ್ವರರು ಇನ್ನಿತರರ ಪ್ರಭಾವದಿಂದ ದೇವಾಲಯದ ಸಂಸ್ಕೃತಿ ಮತ್ತೆ ಪ್ರಗತಿಯನ್ನೆ ಕಂಡಿತು. ಈಗ ಆಧುನಿಕ ಪ್ರಭಾವಕ್ಕೆ ಒಳಗಾಗಿ ವೀರಶೈವದಲ್ಲಿ ದೇವಾಲಯದ ಬಗೆಗೆ ಆಸಕ್ತಿ ಬಹಳ ಕಡಿಮೆ ಆಗ್ತಾ ಇದೆ. ಗುಡಿ ಸಂಸ್ಕೃತಿಯು ಕಿರಿದಾಗುತ್ತಿದೆ. ಅಥವಾ ಇಂದು ಗುಡಿಗಳು ಮೌಢ್ಯಗಳ ಪ್ರಸಾರ ಕೇಂದ್ರವಾಗುತ್ತಿವೆ. ಅನ್ಯ ದೇವತೆಗಳ ಪೈಪೋಟಿ ವೈಭೋಗದಲ್ಲಿ ನಮ್ಮ ಶಿವ ಸೊರಗಿ ಮೂಲೆ ಸೇರುತ್ತಿದ್ದಾನೆ. ಒಂದು ಕಾಲಕ್ಕೆ ಸಾಂಸ್ಕೃತಿಕ ಕೇಂದ್ರಗಳಾದರೂ ಶಿವನ ಗುಡಿಗಳು ಇಂದು ವಾರಕ್ಕೊಮ್ಮೆ ಪೂಜೆಗೊಳ್ಳುವ ಹಾಳು ಗುಡಿಗಳಾಗುತ್ತಿವೆ. ನಗರದ ಪ್ರದೇಶಕ್ಕಿಂತಲೂ ಗ್ರಾಮೀಣ ಪ್ರದೇಶದಲ್ಲಿ ಇದು ಸ್ಪಷ್ಟವಾಗಿ ಕಂಡು ಬರುತ್ತಿದೆ. ಸತತ ಬರಗಾಲ ಆರ್ಥಿಕ ದುಸ್ಥಿತಿ ರೈತರ ಅತಂತ್ರ ಬದುಕಿನಿಂದಾಗಿ ಇಂದು ದೇವಾಲಯ ಸಂಸ್ಕೃತಿ ನಶಿಸುತ್ತಿದೆ. ಈ ಸಂಸ್ಕೃತಿಯ ಅಡಿಯಲ್ಲಿ ಒಗ್ಗಟ್ಟಾಗಿ ಬದುಕಲು ಕಲಿಸಿದ್ದ ವೀರಶೈವ ಸಾಮಾನ್ಯನು ಇಂದು ಅತಂತ್ರನಾಗಿರುವುದರಿಂದ ಅವರಿಗೆ ದಾರಿ ತೋರುವ ಕಾರ್ಯ ಜರೂರಾಗಿ ಆಗಬೇಕಿದೆ. ಸಾಮಾನ್ಯರಷ್ಟೇ ಅಲ್ಲ ವಿದ್ಯಾವಂತ ವೀರಶೈವ ತರುಣರೂ ಕೂಡ ಇಂದು ಧರ್ಮನಿಷ್ಠೆಯನ್ನು ಹಾಗೂ ಅದರ ಪ್ರತಿಫಲವನ್ನೂ ಪ್ರಶ್ನಿಸಿ ತೊಡಗಿದ್ದಾರೆ. ಇದರ ಬಗ್ಗೆ ನಾವೆಲ್ಲ ಗಂಭೀರವಾಗಿ ಯೋಚಿಸಬೇಕಾಗಿದೆ.

□□

೫. ಶ್ರೀ ಸಿದ್ಧಾಂತ ಶಿಖಾಮಣಿ-ವೀರಶೈವ ಆಧಾರ ಗ್ರಂಥ

-ಡಾ|| ಸಿ. ಶಿವಕುಮಾರಸ್ವಾಮಿ

ಶಕ್ತಿವಿಶಿಷ್ಟಾದ್ವೈತವೆಂದು ಕರೆಯಲಾಗುವ ವೀರಶೈವದ ಮೂಲಗಳು ವೇದ, ಉಪನಿಷತ್ತು, ಆಗಮ, ಪುರಾಣ ಹಾಗೂ ಇತಿಹಾಸದಿ ಗ್ರಂಥಗಳಲ್ಲಿ ಹಂಚಿಹೋಗಿದ್ದವು. ಆ ಎಲ್ಲ ಗ್ರಂಥಗಳಲ್ಲಿದ್ದ ವೀರಶೈವ ಆಚಾರ-ವಿಚಾರಗಳನ್ನು ಸಂಗ್ರಹಿಸಿ, ಒಂದೆಡೆ ವ್ಯವಸ್ಥಿತವಾದ ರೀತಿಯಲ್ಲಿ ನಿರೂಪಿಸಿರುವ ಗ್ರಂಥವೇ ಶ್ರೀ ಸಿದ್ಧಾಂತ ಶಿಖಾಮಣಿ. ಗ್ರಂಥಕರ್ತರಾದ ಶಿವಯೋಗಿ ಶಿವಾಚಾರ್ಯರೇ ತಮ್ಮ ಗ್ರಂಥದ ಆಕರಗಳನ್ನು ಕುರಿತು ಮೊದಲನೆಯ ಪರಿಚ್ಛೇದದಲ್ಲಿಯೇ ಹೀಗೆ ಸ್ಪಷ್ಟಪಡಿಸಿದ್ದಾರೆ:

ಆಲೋಕ್ಯ ಶೈವತಂತ್ರಾಣಿ ಕಾಮಿಕಾದ್ಯಾನಿ ಸಾದರಮ್।
ವಾತುಲಾಂತಾನಿ ಶೈವಾನಿ ಪುರಾಣಾನ್ಯಖಿಲಾನಿ ತು॥
ವೇದಮಾರ್ಗಾವಿರೋಧೇನ ವಿಶಿಷ್ಟಾಚಾರಸಿದ್ಧಯೇ।
ಅಸನ್ಮಾರ್ಗನಿರಾಸಾಯ ಪ್ರಮೋದಾಯ ವಿವೇಕಿನಾಮ್॥
ಸರ್ವಸ್ವಂ ವೀರಶೈವಾನಾಂ ಸಕಲಾರ್ಥ ಪ್ರಕಾಶಕಮ್।
ಅಸ್ಪೃಷ್ಟಮುಖಿಲೈರ್ದೋಷೈರಾದ್ಯತಂ ಶುದ್ಧಮಾನಸೈಃ॥
ಶೈವಾಗಮೇಷು ಸರ್ವೇಷು ಪುರಾಣೇಷ್ವಖಿಲೇಷು ಚ।
ಪುರಾ ದೇವೇನ ಕಥಿತಂ ದೇವ್ಯೈ ತನ್ನಂದನಾಯ ಚ।
ವೀರಶೈವಮಹಾತಂತ್ರಮೇಕೋತ್ತರಶತಸ್ಥಲಮ್।
ಅನುಗ್ರಹಾಯ ಲೋಕಾನಾಮಭ್ಯಧಾತ್ ಸುಧಿಯಾಂ ವರಃ॥[೧]

ತಾತ್ಪರ್ಯವೇನೆಂದರೆ ಕಾಮಿಕಾದಿ ವಾತುಲಾಂತಗಳಾದ ೨೮ ಶಿವಾಗಮಗಳನ್ನೂ, ಶಿವಸಂಬಂಧಿಗಳಾದ ಎಲ್ಲ ಪುರಾಣಗಳನ್ನು ಮತ್ತು ವೇದಭಾಗವನ್ನು ಆದರ ಪೂರ್ವಕವಾಗಿ ಅಭ್ಯಸಿಸಿ, ವೈದಿಕ ಮಾರ್ಗಕ್ಕೆ ವಿರೋಧವಾಗದಂತೆ ಮತ್ತು ವೀರಶೈವರ ವಿಶಿಷ್ಟ ಆಚಾರಗಳನ್ನು ಪ್ರತಿಪಾದನೆ ಮಾಡುವುದಕ್ಕೋಸ್ಕರ ನೂರೊಂದು ಸ್ಥಲಗಳಿಂದ ಕೂಡಿರುವ ವೀರಶೈವ ಮಹಾಶಾಸ್ತ್ರವನ್ನು ಲೋಕಾನುಗ್ರಹಕ್ಕಾಗಿ ರಚಿಸಲಾಗಿದೆ.

ವೀರಶೈವ ಧರ್ಮಗ್ರಂಥವನ್ನು ರಚಿಸಲು ಹೊರಟ ಶಿವಯೋಗಿ ಶಿವಾಚಾರ್ಯರು ವೀರಶೈವ ಆಚಾರ-ವಿಚಾರ ಸಂಬಂಧಿ ವಿಷಯಗಳನ್ನು ನಾನಾ ಮೂಲಗಳಿಂದ ಸಂಗ್ರಹಿಸಿ,

---

೧. ಸಿದ್ಧಾಂತ ಶಿಖಾಮಣಿ, ೧-೨೩-೩೦.

ಕೂಲಂಕಷವಾಗಿ ಅಭ್ಯಸಿಸಿ ವೀರಶೈವಕ್ಕೆ ಸಂಬಂಧಿಸಿದ ಸಮಸ್ತ ವಿಷಯಗಳ ಪ್ರತಿಪಾದನೆಯನ್ನು ಸಮರ್ಥವಾಗಿ ಮಾಡಿದ್ದಾರೆ. ವೀರಶೈವ ಧರ್ಮದ ಆಚಾರ-ವಿಚಾರಗಳನ್ನು ತಿಳಿಯ ಬಯಸುವವರಿಗೆ ಸಿದ್ಧಾಂತ ಶಿಖಾಮಣಿಯು ಆಧಾರ ಗ್ರಂಥದೋಪಾದಿಯಲ್ಲಿರುವುದರಿಂದ ಅದನ್ನು ವೀರಶೈವದ ಆಧಾರ ಗ್ರಂಥವೆಂದು ಹೇಳಬಹುದು.

ವೀರಶೈವ ಸಿದ್ಧಾಂತವನ್ನು ವ್ಯವಸ್ಥಿತ ರೀತಿಯಲ್ಲಿ ಮೊಟ್ಟಮೊದಲಿಗೆ ಪ್ರತಿಪಾದನೆ ಮಾಡಿದ ಗ್ರಂಥವೇ ಸಿದ್ಧಾಂತ ಶಿಖಾಮಣಿ. ವೀರಶೈವ ಸಿದ್ಧಾಂತದ ಷಟ್‌ಸ್ಥಲ ಸಿದ್ಧಾಂತವನ್ನು ನೂರೊಂದು ಅವಾಂತರ ಸ್ಥಲಗಳ ರೂಪದಲ್ಲಿ ಮೊದಲಿಗೆ ನಿರೂಪಣೆ ಮಾಡಿದ ಗ್ರಂಥವೂ ಇದೇ ಆಗಿದೆ.

ಧರ್ಮವನ್ನು ಪ್ರತಿಪಾದಿಸುವ ಗ್ರಂಥಗಳಲ್ಲಿ ಆ ಧರ್ಮದ ಆಚಾರ-ವಿಚಾರ-ದರ್ಶನಗಳು ನಿರೂಪಿತವಾಗಿರುತ್ತವೆ. ಸಿದ್ಧಾಂತ ಶಿಖಾಮಣಿಯೂ ಇಂತಹ ಮಾತಿಗೆ ಅಪವಾದವಲ್ಲ. ಸಿದ್ಧಾಂತ ಶಿಖಾಮಣಿಯಲ್ಲಿ ನಿರೂಪಿತವಾಗಿರುವ ವೀರಶೈವರ ಆಚಾರ-ವಿಚಾರ-ದರ್ಶನಗಳು ಏಕೋತ್ತರ ಶತಸ್ಥಲಗಳ ವ್ಯಾಪ್ತಿಯಲ್ಲಿಯೇ ಪ್ರತಿಪಾದಿತವಾಗಿದೆ. ವೀರಶೈವದ ಸಮಸ್ತ ವಿಷಯಗಳನ್ನು ನಿರೂಪಿಸಿರುವ ಕಾರಣ ಸಿದ್ಧಾಂತ ಶಿಖಾಮಣಿಯು ವೀರಶೈವ ಧರ್ಮದ ಆಧಾರ ಗ್ರಂಥದೋಪಾದಿಯಲ್ಲಿದೆ. ಅದನ್ನು ಈಗ ಗಮನಿಸೋಣ:

ವೀರಶೈವ ಶಬ್ದದ ನಿರ್ವಚನ: ವೀರಶೈವ ಸಿದ್ಧಾಂತ ಪ್ರತಿಪಾದಕವಾದ ಗ್ರಂಥವನ್ನು ರಚಿಸಲು ಹೊರಟ ಗ್ರಂಥಕರ್ತರಾದ ಶಿವಯೋಗಿ ಶಿವಾಚಾರ್ಯರು ಮೊದಲಿಗೆ ಆ ಗ್ರಂಥದ ಆಕರಗಳ ಬಗ್ಗೆ ಪರಿಚಯಿಸಿ, ತರುವಾಯ "ವೀರಶೈವ" ಶಬ್ದದ ನಿರ್ವಚನವನ್ನು ಈ ರೀತಿಯಾಗಿ ಕೊಟ್ಟಿದ್ದಾರೆ:

ವಿಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿಕಾ।
ತಸ್ಯಾಂ ರಮಂತೇ ಯೇ ಶೈವಾ ವೀರಶೈವಾಸ್ತು ತೇ ಮತಾಃ॥
ವೇದಾಂತಜನ್ಯಂ ಯಜ್‌ಜ್ಞಾನಂ ವಿದ್ಯೇತಿ ಪರಿಕೀರ್ತ್ಯತೇ।
ವಿದ್ಯಾಯಾಂ ರಮತೇ ಯಃ ಸ ವೀರ ಇತ್ಯಭಿಧೀಯತೇ॥
ವಿದ್ಯಾಯಾಂ ಶಿವರೂಪಾಯಾಂ ರಮಂತೇ ಯೇ ವಿಶೇಷತಃ।
ತಸ್ಮಾದೇತೇ ಮಹಾಭಾಗಾ ವೀರಶೈವಾ ಇತಿ ಸ್ಮೃತಾಃ॥[೨]

"ವಿ ಎಂದರೆ ವಿದ್ಯೆ, ಶಿವ-ಜೀವರ ಐಕ್ಯವನ್ನು ಬೋಧಿಸುವ ವಿದ್ಯೆ. ಯಾವ ಶೈವರು ಅದರಲ್ಲಿ ಆನಂದವನ್ನು ಪಡೆಯುತ್ತಾರೆಯೋ ಅವರು ವೀರಶೈವರು. ಯಾವ ಜ್ಞಾನವು ವೇದಾಂತ ಜನ್ಯವಾದುದೋ ಅದು ವಿದ್ಯೆಯೆಂದು ಕರೆಯಲ್ಪಟ್ಟಿದೆ. ಅಂತಹ ವಿದ್ಯೆಯಲ್ಲಿ ರಮಿಸುವವನು 'ವೀರ' ಎನಿಸುತ್ತಾನೆ. 'ವೀರ' ಎಂಬ ಶಬ್ದದಲ್ಲಿ 'ವಿದ್ಯೆ' ಮತ್ತು 'ರತಿ' (ಆನಂದ) ಎಂಬ ಶಬ್ದಗಳು ಅಡಕವಾಗಿವೆ ಎಂಬುದನ್ನು ಈ ಶ್ಲೋಕದಲ್ಲಿ ಹೇಳಲಾಗಿದೆ. ಸಚ್ಚಿದಾನಂದ ರೂಪವಾದ ವಿದ್ಯೆಯಲ್ಲಿ ಯಾರಿಗೆ ವಿಶೇಷವಾದ ಆಸಕ್ತಿಯಿರುವುದೋ ಅವರು ವೀರಶೈವರೆನಿಸಿದ್ದಾರೆ."

---

೨. ಅದೇ; ೫. ೧೫-೧೭.

ಸಿದ್ಧಾಂತ ಶಿಖಾಮಣಿಯಲ್ಲಿ ನಿರೂಪಿತವಾದ 'ವೀರಶೈವ' ಶಬ್ದದ ನಿರ್ವಚನದಿಂದ ಶಿವ-ಜೀವರ ಸಾಮರಸ್ಯರೂಪವಾದ ಐಕ್ಯವನ್ನು ಗುರಿಯಾಗಿಟ್ಟುಕೊಂಡು ಪ್ರವೃತ್ತವಾದ ಧರ್ಮ 'ವೀರಶೈವ ಧರ್ಮ' ಎಂದು ಸ್ಪಷ್ಟವಾಗುತ್ತದೆ.

ಸಿದ್ಧಾಂತ ಶಿಖಾಮಣಿಯ ವೀರಶೈವ ಶಬ್ದದ ನಿರ್ವಚನವು ಶೈವಾಗಮೋತ್ತರ ಭಾಗಗಳಿಂದ ಪ್ರಭಾವಿತವಾದುದಾಗಿದೆ.[೩]

ಶಿವದೀಕ್ಷೆ: ಶಿವದೀಕ್ಷೆ ವೀರಶೈವದ ಪ್ರಮುಖವಾದ ಧಾರ್ಮಿಕ ವಿಧಿ. ವೀರಶೈವ ಧರ್ಮಾಚರಣೆಗೆ ಶಿವದೀಕ್ಷೆಯೇ ಸೋಪಾನ. ಅದಕ್ಕಾಗಿ ಸದ್ಗುರುವು ಶಿಷ್ಯನಿಗೆ ಶಿವದೀಕ್ಷೆಯನ್ನು ಅನುಗ್ರಹಿಸುತ್ತಾನೆ. ದೀಕ್ಷಾ ವಿಷಯವು ಶೈವಾಗಮೋತ್ತರ ಭಾಗಗಳಲ್ಲಿ, ವಿಶೇಷವಾಗಿ ಕಾರಣಾಗಮದಲ್ಲಿ ನಿರೂಪಿತವಾಗಿದೆ. ಸಿದ್ಧಾಂತ ಶಿಖಾಮಣಿಯು ಶೈವಾಗಮಗಳಲ್ಲಿ ನಿರೂಪಿತವಾಗಿರುವ ಅಭಿಪ್ರಾಯವನ್ನು ಗರ್ಭೀಕರಿಸಿ, 'ದೀಕ್ಷಾ' ಶಬ್ದದ ನಿರ್ವಚನವನ್ನು ಈ ರೀತಿಯನ್ನು ಕೊಟ್ಟಿದೆ:

ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಮ್।
ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ॥[೪]

"ಯಾವುದು ಶಿವಜ್ಞಾನವನ್ನು ನೀಡುತ್ತದೆಯೋ ಮತ್ತು ಪಾಶಬಂಧನವನ್ನು ನಾಶ ಮಾಡುತ್ತದೆಯೋ ಅದನ್ನು ಜ್ಞಾನಿಗಳು 'ದೀಕ್ಷಾ' ಎಂದು ಕರೆದಿದ್ದಾರೆ." ದೀಕ್ಷೆಯನ್ನು ಪಡೆಯುವುದರಿಂದ ಸಾಧಕನಿಗೆ ಎರಡು ಬಗೆಯ ಪ್ರಯೋಜನಗಳಾಗುತ್ತವೆ- ಒಂದು ಶಿವಜ್ಞಾನದ ಪ್ರಾಪ್ತಿ ಮತ್ತೊಂದು ಭವಬಂಧನದ ನಾಶ.

ಶೈವಾಗಮಗಳಂತೆಯೇ ಸಿದ್ಧಾಂತ ಶಿಖಾಮಣಿಯು ತ್ರಿವಿಧ ದೀಕ್ಷಾ ಪ್ರಭೇದಗಳನ್ನೂ, ದೀಕ್ಷಾ ವಿಧಾನವನ್ನು ನಿರೂಪಿಸುತ್ತದೆ. ದೀಕ್ಷೆಯು ವೇಧಾ, ಮನು ಮತ್ತು ಕ್ರಿಯಾ ಎಂದು ಮೂರು ವಿಧವಾಗಿದೆ.[೫] ಅವುಗಳ ಸ್ವರೂಪವನ್ನು ಸಿದ್ಧಾಂತ ಶಿಖಾಮಣಿ ಈ ರೀತಿಯಾಗಿ ನಿರೂಪಿಸಿದೆ.

ಗುರೋರಾಲೋಕಮಾತ್ರೇಣ ಹಸ್ತಮಸ್ತಕಯೋಗತಃ।
ಯಃ ಶಿವತ್ವಸಮಾವೇಶೋ ವೇಧಾದೀಕ್ಷೇತಿ ಸಾ ಮತಾ॥
ಮಂತ್ರದೀಕ್ಷೇತಿ ಸಾ ಪ್ರೋಕ್ತಾ ಮಂತ್ರಮಾತ್ರೋಪದೇಶಿನೀ।
ಕುಂಡಕುಂಡಲಿಕೋಪೇತಾ ಕ್ರಿಯಾದೀಕ್ಷಾ ಕ್ರಿಯೋತ್ತರಾ॥

---

೩. ಚಂದ್ರಜ್ಞಾನಾಗಮ, ಕ್ರಿ.ಪಾ. ೧೦, ೩೩-೩೪; ಸೂಕ್ಷ್ಮಾಗಮ, ಕ್ರಿ.ಪಾ. ೭.೨೯; ವಾತುಲಶುದ್ಧಾಗಮ, ೧೦.೨೯-೩೨.

೪. ಸಿದ್ಧಾಂತ ಶಿಖಾಮಣಿ (ಸಿ.ಶಿ.), ೬.೧೨

೫. ಸಾ ದೀಕ್ಷಾ ತ್ರಿವಿಧಾ ಪ್ರೋಕ್ತಾ ಶಿವಾಗಮವಿಶಾರದೈಃ।
ವೇಧಾರೂಪಾ ಕ್ರಿಯಾರೂಪಾ ಮಂತ್ರರೂಪಾ ಚ ತಾಪಸ॥ ಸಿ.ಶಿ. ೬.೧೨.
ಹೋಲಿಸಿ: ಕಾರಣಾಗಮ, ಕ್ರಿ.ಪಾ. ೧.೧೩; ಚಂದ್ರಜ್ಞಾನಾಗಮ, ಕ್ರಿ.ಪಾ. ೧.೭೪;
ಮಕುಟಾಗಮ, ಕ್ರಿ.ಪಾ, ೧.೧೧-೧೩.

೬. ಸಿ.ಶಿ, ೬. ೧೩-೧೪; ಹೋಲಿಸಿ: ಕಾರಣಾಗಮ, ಕ್ರಿ.ಪಾ. ೧.೧೪.

"ಗುರುವಿನ ದರ್ಶನ ಮಾತ್ರದಿಂದ ಹಾಗೂ ಗುರುವಿನ ಹಸ್ತ ಶಿಷ್ಯನ ಮಸ್ತಕದೊಂದಿಗೆ ಸಂಯೋಗ ಹೊಂದಿದಾಗ ಆತನಲ್ಲಿ ಶಿವಭಾವವು ಸಮಾವೇಶವಾಗುವುದೇ ವೇಧಾದೀಕ್ಷೆ. ಪಂಚಾಕ್ಷರೀ ಮಂತ್ರೋಪದೇಶವೇ ಮಂತ್ರದೀಕ್ಷೆ. ಕಲಶ ಸ್ಥಾಪನೆ, ಸ್ವಸ್ತಿಕ ರಚನೆ ಮೊದಲಾದ ದೀಕ್ಷಾಂಗಭೂತವಾದ ಕ್ರಿಯೆಗಳಿಂದ ಕೂಡಿದುದು ಕ್ರಿಯಾದೀಕ್ಷೆ."

ಈ ಪ್ರಕಾರ ಸಿದ್ಧಾಂತ ಶಿಖಾಮಣಿ ಶೈವಾಗಮಗಳ ಹೆಜ್ಜೆಯಲ್ಲಿಯೇ ದೀಕ್ಷೆಯ ಸ್ವರೂಪ ಹಾಗೂ ಪ್ರಭೇದಗಳನ್ನು ನಿರೂಪಿಸಿದೆ.

ಅಷ್ಟಾವರಣ: ಅಷ್ಟಾವರಣ ವೀರಶೈವದ ಪ್ರಮುಖವಾದ ಕಟ್ಟಳೆ. ಗುರುವಿನಿಂದ ದೀಕ್ಷಾ ಸಂಸ್ಕಾರದ ಮೂಲಕ ಇಷ್ಟಲಿಂಗವನ್ನು ಪಡೆಯುವ ಭಕ್ತನು ಅಷ್ಟಾವರಣ ಸಂಪನ್ನನಾಗುತ್ತಾನೆ. ಗುರು, ಲಿಂಗ, ಜಂಗಮ, ಭಸ್ಮ, ರುದ್ರಾಕ್ಷ, ಮಂತ್ರ, ಪಾದೋದಕ ಮತ್ತು ಪ್ರಸಾದ -ಇವು ಅಷ್ಟಾವರಣಗಳು. ಅವು ಭಕ್ತನ ಧರ್ಮಶ್ರದ್ಧೆಯನ್ನು ರಕ್ಷಿಸುವ ಕವಚಗಳೋಪಾದಿಯಲ್ಲಿರುವ ಕಾರಣ ಅಷ್ಟಾವರಣಗಳೆನಿಸಿವೆ. ವೀರಶೈವ ಸಿದ್ಧಾಂತದ 'ಅಷ್ಟಾವರಣ' ಎಂಬಲ್ಲಿ ಪ್ರಯೋಗವಾಗಿರುವ 'ಆವರಣ' ಶಬ್ದಕ್ಕೆ 'ರಕ್ಷಾಕವಚ' ಎಂಬರ್ಥ. ಶಿವಭಕ್ತನು ಜನನ-ಮರಣಗಳೆಂಬ ದೋಷಗಳಿಂದ ರಕ್ಷಿತನಾಗುವ ಕಾರಣ 'ಆವರಣ'ಗಳೆನಿಸಿವೆ. ಅದನ್ನು ಚಂದ್ರಜ್ಞಾನಾಗಮವು ಹೀಗೆ ನಿರೂಪಿಸಿದೆ:

ಇಮಾನಿ ಶಿವಭಕ್ತಾನಾಂ ಭವದೋಷತತೇಃ ಸದಾ।
ನಿವಾರಣೈಕಕಾರ್ಯಾಣಿ ಖ್ಯಾತಾನ್ಯಾವರಣಾಖ್ಯಯಾ॥[೭]

ವೀರಶೈವ ಸಿದ್ಧಾಂತದ ಪರಮಗುರಿ ಶಿವ-ಜೀವರ ಐಕ್ಯರೂಪದ ಲಿಂಗಾಂಗ ಸಾಮರಸ್ಯದ ನಿರೂಪಣೆಯೇ ಆಗಿದೆ. ಲಿಂಗಾಂಗ ಸಾಮರಸ್ಯದ ದಿಶೆಯಲ್ಲಿ ಪ್ರವೃತ್ತರಾದ ಸಾಧಕರಿಗೆ ಸಾಧನೆಯ ಹಂತದಲ್ಲಿ ಹಲವಾರು ಬಗೆಯ ವಿಘ್ನಗಳ ಬಾಧೆಯುಂಟಾಗುತ್ತವೆ. ಅಂತಹ ವಿಘ್ನಗಳ ಬಾಧೆಯು ಬಾರದಂತೆ ರಕ್ಷಾಕವಚರೂಪದಲ್ಲಿದ್ದು ತಡೆಯುವ ಕಾರಣದಿಂದ ಅವುಗಳನ್ನು ಅಷ್ಟಾವರಣಗಳೆಂದು ಕರೆಯಲಾಗಿದೆ.

ಅಷ್ಟಾವರಣ ಪರಿಕಲ್ಪನೆಯು ಶೈವಾಗಮೋತ್ತರ ಭಾಗಗಳಲ್ಲಿ ವಿಪುಲವಾಗಿ ಬೆಳೆದಿದೆ. ಅದರ ಮೂಲ ಸ್ಫೂರ್ತಿಯನ್ನು ಶೈವೋಪನಿಷತ್ತುಗಳಲ್ಲಿ ಕಾಣಬಹುದು. ಆದರೆ 'ಅಷ್ಟಾವರಣ' ಎಂಬ ಶಬ್ದದ ಬಳಕೆ ಮೊದಲಿಗೆ ಶೈವಾಗಮೋತ್ತರ ಭಾಗಗಳಲ್ಲಿ ಕಂಡು ಬರುತ್ತದೆ.[೮]

ಸಿದ್ಧಾಂತ ಶಿಖಾಮಣಿಯಲ್ಲಿ ಅಷ್ಟಾವರಣಗಳ ವಿಷಯವು ಭಕ್ತಸ್ಥಲಾಂತರ್ಗತ ಗುರುಕಾರುಣ್ಯ ಸ್ಥಲದಿಂದ (೬ನೇ ಪರಿಚ್ಛೇದ) ಆರಂಭವಾಗಿ ಪ್ರಸಾದ ಸ್ವೀಕಾರ ಸ್ಥಲ (೯ನೇ ಪರಿಚ್ಛೇದ)ದವರೆಗಿನ ನಾಲ್ಕು ಪರಿಚ್ಛೇದಗಳಲ್ಲಿ ಹೃದಯಂಗಮವಾಗಿ ನಿರೂಪಿತವಾಗಿದೆ. ವೀರಶೈವ ಸಿದ್ಧಾಂತದ ಸಮಸ್ತ ವಿಷಯವು ಸಿದ್ಧಾಂತ ಶಿಖಾಮಣಿಯಲ್ಲಿ ಏಕೋತ್ತರ ಶತಸ್ಥಲದ ಚೌಕಟ್ಟಿನಲ್ಲಿ ನಿರೂಪಿತವಾಗಿರುವ ಕಾರಣ ಅಲ್ಲಿ ಅಷ್ಟಾವರಣ, ಪಂಚಾಚಾರಗಳೆಂಬ ಪದ ಪ್ರಯೋಗವಾಗಲಿ, ಅವುಗಳ ಹೆಸರುಗಳನ್ನು ಒಟ್ಟಿಗೆ ಹೇಳುವ ಪಟ್ಟಿಯಾಗಲಿ ಆ ಗ್ರಂಥದಲ್ಲಿ ಕಂಡು ಬರದಿದ್ದರೂ ಅವುಗಳ ನಿರೂಪಣೆಯು

---

೭. ಚಂದ್ರಜ್ಞಾನಾಗಮ, ಕ್ರಿ.ಪಾ. ೨.೩.
೮. ಅದೇ, ಕ್ರಿ.ಪಾ. ೨.೨; ಪಾರಮೇಶ್ವರಾಗಮ, ೭.೫೪-೫೫.

ಸುವ್ಯವಸ್ಥಿತವಾಗಿ ಪ್ರತಿಪಾದಿತವಾಗಿದೆ. ಈಗ ಅಷ್ಟಾವರಣಗಳ ವಿಷಯವನ್ನು ಸಿದ್ಧಾಂತ ಶಿಖಾಮಣಿ ರೀತ್ಯಾ ಸಂಕ್ಷಿಪ್ತವಾಗಿ ಪರಿಚಯಿಸಲಾಗುವುದು.

೧. ಶ್ರೀಗುರು: ಅಷ್ಟಾವರಣಗಳಲ್ಲಿ ಗುರುವಿಗೆ ಮೊದಲ ಸ್ಥಾನವಿದೆ. ವೀರಶೈವದ ಆಚಾರ-ವಿಚಾರಗಳೆರಡಕ್ಕೂ ಶ್ರೀಗುರುವೇ ಮಾರ್ಗದರ್ಶಕನು. ಇಂತಹ ಗುರುವಿನ ಸ್ವರೂಪವನ್ನು ಸಿದ್ಧಾಂತ ಶಿಖಾಮಣಿ ಹೀಗೆ ನಿರೂಪಿಸಿದೆ:

ಗುಣಾತೀತಂ ಗುವರ್ಣಂ ಚ ರೂಪಾತೀತಂ ರುವರ್ಣಕಮ್।
ಗುಣಾತೀತಮರೂಪಂ ಚ ಯೋ ದದ್ಯಾತ್ ಸ ಗುರುಃ ಸ್ಮೃತಃ॥[೯]

"(ಗುರು ಎಂಬ ಪದದಲ್ಲಿನ) 'ಗು' ಎಂಬ ಪದವು ಸತ್ವಾದಿ ಗುಣರಾಹಿತ್ಯವನ್ನು, 'ರು' ಎಂಬ ಅಕ್ಷರವು ಅಶುದ್ಧ ಮಾಯಾರೂಪರಾಹಿತ್ಯವನ್ನು ಬೋಧಿಸುತ್ತದೆ. ಹೀಗೆ ನಿರ್ಗುಣ-ನಿರಾಕಾರನಾದ ಪರಶಿವಬ್ರಹ್ಮ ಸ್ವರೂಪವನ್ನು ಅನುಗ್ರಹಿಸುವವನು 'ಗುರು' ಎನಿಸುತ್ತಾನೆ."

ಗುರುವನ್ನು 'ಆಚಾರ್ಯ' ಎಂಬ ಅಭಿಧಾನದಿಂದ ಕರೆದಿರುವ ಸಿದ್ಧಾಂತ ಶಿಖಾಮಣಿ ಆಚಾರ್ಯನ ಲಕ್ಷಣವನ್ನು ಈ ರೀತಿಯಾಗಿ ಬೋಧಿಸಿದೆ:

ಆಚಿನೋತಿ ಹಿ ಶಾಸ್ತ್ರಾರ್ಥಾನಾಚಾರೇ ಸ್ಥಾಪಯತ್ಯಪಿ।
ಸ್ವಯಮಾಚರತೇ ಯಸ್ತು ಸ ಆಚಾರ್ಯ ಇತಿ ಸ್ಮೃತಃ॥[೧೦]

"ಶಿಷ್ಯರಿಗೆ (ವೀರಶೈವ) ಶಾಸ್ತ್ರಾರ್ಥವನ್ನು ಬೋಧಿಸಿ, ಅವರನ್ನು (ವೀರಶೈವ) ಆಚಾರದಲ್ಲಿ ನೆಲೆಯಾಗುವಂತೆ ಮಾಡುವುದರ ಜೊತೆಗೆ ತಾನೂ ಸಹ ಆಚಾರ ಸಂಪನ್ನನಾಗಿರುವವನು 'ಆಚಾರ್ಯ' ಎನಿಸುತ್ತಾನೆ."

ಗುರುವಾದವನು ಶಿಷ್ಯರಿಗೆ ಉಪದೇಶ ಮಾಡುವುದರ ಮೂಲಕ ಅವರನ್ನು ಆಚಾರ ಸಂಪನ್ನನಾಗುವಂತೆ ಮಾಡುವುದಲ್ಲದೆ, ತಾನೂ ಸಹ ಆಚಾರವಂತನಾಗಬೇಕೆಂಬ ಸಿದ್ಧಾಂತ ಶಿಖಾಮಣಿಯ ಕಳಕಳಿ ಇಂದಿನ ದಿನಗಳಲ್ಲಿ ಮಹತ್ವದ್ದಾಗಿರುತ್ತದೆ. ಗುರುವಾದವನು ಶಿಷ್ಯರಿಗೆ ಉಪದೇಶ ಮಾಡಿದರೆ ಸಾಲದು ತಾನೂ ಸಹ ಆಚಾರವಂತನಾಗಬೇಕೆಂಬ ಮಾರ್ಮಿಕವಾದ ಸಂದೇಶ ಇಲ್ಲಿದೆ.

ಈ ಪ್ರಕಾರವಾಗಿ 'ಗುರು' ಎಂಬ ಪದದಲ್ಲಿನ ಅಕ್ಷರಾರ್ಥ ಪ್ರತಿಪಾದನೆಯನ್ನು ಹಾಗೂ 'ಆಚಾರ್ಯ'ನ ಸ್ವರೂಪವನ್ನು ನಿರೂಪಿಸಿದ ಸಿದ್ಧಾಂತ ಶಿಖಾಮಣಿ ಗುರುಕಾರುಣ್ಯ ಸ್ಥಲದಲ್ಲಿ ವೀರಶೈವ ಗುರುವಿನ ಲಕ್ಷಣವನ್ನು ನಿರೂಪಿಸುತ್ತದೆ.[೧೧] ದೀಕ್ಷಾಗುರು,[೧೨] ಶಿಕ್ಷಾಗುರು[೧೩] ಮತ್ತು ಜ್ಞಾನಗುರು[೧೪] ಎಂಬ ತ್ರಿವಿಧ ಗುರು ಭೇದ ಸ್ವರೂಪಗಳನ್ನು ಹೇಳಿ,

---

೯. ಸಿದ್ಧಾಂತ ಶಿಖಾಮಣಿ, ೧೫.೮.

೧೦. ಅದೇ, ೧೫.೯.

೧೧. ಅದೇ, ೬.೧-೬.

೧೨. ಅದೇ, ೧೫.೭.

೧೩. ಅದೇ, ೧೫. ೧೨.

೧೪. ಅದೇ, ೧೫.೧೨.

ದೀಕ್ಷೆಯನ್ನು ಅನುಗ್ರಹಿಸುವುದರಿಂದ ದೀಕ್ಷಾಗುರು, ವೀರಶೈವ ಶಾಸ್ತ್ರಗಳನ್ನು ಬೋಧಿಸುವುದರಿಂದ ಶಿಕ್ಷಾಗುರು ಮತ್ತು ತತ್ತ್ವಜ್ಞಾನವನ್ನು ಬೋಧಿಸುವುದರಿಂದ ಜ್ಞಾನಗುರು ಎನಿಸುತ್ತಾನೆ.[೧೫] ಈ ತ್ರಿವಿಧ ಕಾರ್ಯವನ್ನು ನಿರ್ವಹಿಸುವ ಕಾರಣ ಗುರುವನ್ನು ಸಾಕ್ಷಾತ್ ಶಿವನೆಂದು ಸಾರಿದ ಸಿದ್ಧಾಂತ ಶಿಖಾಮಣಿ, ಶಿವನೇ ಗುರುರೂಪದಲ್ಲಿ ಪ್ರತ್ಯಕ್ಷನಾಗಿದ್ದನೆಂದು ಹೇಳುವುದರ ಮೂಲಕ ಅವರಿಬ್ಬರ ಅಭೇದವನ್ನು ಹೇಳಿದೆ:

ಅಪ್ರತ್ಯಕ್ಷೋ ಮಹಾದೇವಃ ಸರ್ವೇಷಾಮಾತ್ಮಮಾಯಯಾ।
ಪ್ರತ್ಯಕ್ಷೋ ಗುರುರೂಪೇಣ ವರ್ತತೇ ಭಕ್ತಿಸಿದ್ಧಯೇ॥
ಗುರೋರಭ್ಯರ್ಚನೇನಾಪಿ ಸಾಕ್ಷಾದಭ್ಯರ್ಚಿತಃ ಶಿವಃ।
ನಾಸ್ತಿ ಭೇದಸ್ತಯೋಃ ಕಶ್ಚಿದೇಕತ್ವಾತತ್ತ್ವರೂಪತಃ॥[೧೫]

ಇಲ್ಲಿ ನಿರೂಪಿತವಾಗಿರುವ ಗುರುವಿನ ಸ್ವರೂಪ-ಭೇದ-ಮಹತಿ ಇತ್ಯಾದಿ ವಿಷಯಗಳನ್ನು ರುದ್ರೋಪನಿಷತ್ತಿನ "ಓಂ ಆತ್ಮಾ ಪರಶಿವದ್ವಯೋ ಗುರುಃ ಶಿವಃ, ಗುರುಃ ಶಿವ ಏವ ಲಿಂಗಮ್"[೧೬] ಮುಂತಾದ ಉಪನಿಷದ್ವಾಕ್ಯಗಳಿಂದಲೂ, ಹಾಗೂ ಶೈವಾಗಮೋತ್ತರ[೧೭] ಭಾಗಗಳಲ್ಲಿ ನಿರೂಪಿತವಾಗಿರುವ 'ಗುರು'ವಿನ ಸ್ವರೂಪಾದಿ ವಿಷಯಗಳಿಂದ ಸ್ವೀಕರಿಸಿದ ಸಿದ್ಧಾಂತ ಶಿಖಾಮಣಿ ವ್ಯವಸ್ಥಿತವಾಗಿ ಗುರುವಿನ ಸ್ವರೂಪಾದಿಗಳನ್ನು ಬೋಧಿಸಿದೆ.

೨. ಲಿಂಗ: ಅಷ್ಟಾವರಣದಲ್ಲಿ ಲಿಂಗವು ಎರಡನೆಯ ಆವರಣವೆಂದು ಪರಿಗಣಿತವಾಗಿದೆ. 'ಲಿಂಗ' ಶಬ್ದದ ಲಕ್ಷಣವನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸಿದೆ:

ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಮ್।
ಪುನಃ ಪುನಃ ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮ ಶಾಶ್ವತಮ್॥[೧೮]

"ಯಾವ ವಸ್ತುವಿನಲ್ಲಿ ಚರಾಚರಾತ್ಮಕವಾದ ಜಗತ್ತು ಲಯವನ್ನು ಹೊಂದುವುದೋ, ಯಾವ ವಸ್ತುವಿನಲ್ಲಿ ಪುನಃ ಪುನಃ ಉತ್ಪತ್ತಿಯನ್ನು ಹೊಂದುವುದೋ ಆ ನಿತ್ಯವಾದ ಪರಬ್ರಹ್ಮವೇ ಲಿಂಗ." ಸಿದ್ಧಾಂತ ಶಿಖಾಮಣಿಯಲ್ಲಿ ಉಕ್ತವಾಗಿರುವ ಲಿಂಗ ಶಬ್ದದ ನಿರ್ವಚನಾನುಸಾರವಾಗಿ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣೀ ಭೂತವಾದ ಪರಶಿವಬ್ರಹ್ಮವನ್ನು ವೀರಶೈವ ಸಿದ್ಧಾಂತದಲ್ಲಿ 'ಲಿಂಗ'ವೆಂದು ಕರೆಯಲಾಗಿರುವುದು ಸ್ಪಷ್ಟವಾಗುತ್ತದೆ.

ತ್ರಿವಿಧ ಲಿಂಗಗಳು: ಲಿಂಗವು ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗವೆಂದು ಮೂರು ವಿಧವಾಗಿದ್ದು ಅವುಗಳನ್ನು ಕ್ರಮವಾಗಿ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರಗಳಲ್ಲಿ ಧರಿಸಬೇಕೆಂದು ಶೈವಾಗಮೋತ್ತರ ಭಾಗಗಳ[೧೯] ವಿಚಾರವನ್ನು ಪುನರುಕ್ತಿ ಮಾಡಿರುವ

---

೧೫. ಅದೇ, ೯, ೫೩, ೫೧.
೧೬. Unpublished Upanisads, Adyar, Madras, 1933, p. 308-309
೧೭. ಚಂದ್ರಜ್ಞಾನಾಗಮ, ಕ್ರಿ.ಪಾ. ೨ನೇ ಪಟಲ; ಸೂಕ್ಷ್ಮಾಗಮ, ಕ್ರಿ.ಪಾ. ೮ನೇ ಪಟಲ.
೧೮. ಸಿದ್ಧಾಂತ ಶಿಖಾಮಣಿ, ೬.೩೬.
೧೯. ಸೂಕ್ಷ್ಮಾಗಮ, ಕ್ರಿ.ಪಾ. ೬.೫; ೮.೧೪;
ಚಂದ್ರಜ್ಞಾನಾಗಮ, ಕ್ರಿ.ಪಾ. ೩.೮, ೪೫, ೪೮.

ಸಿದ್ಧಾಂತ ಶಿಖಾಮಣಿ,[೨೦] ಇಷ್ಟಲಿಂಗಧಾರಣೆ ಮಾಡುವ[೨೧] ಮಾಡಬಾರದ ಸ್ಥಾನಗಳನ್ನು ಕುರಿತು ಬೋಧಿಸಿದೆ.[೨೨] ಅನಂತರ ಲಿಂಗಧಾರಣೆಯು ಕೇವಲ ಆಗಮ ಸಂಮತವಾಗಿರದೆ ವೇದ, ಪುರಾಣ ಸಂಮತವೂ ಆಗಿದೆ[೨೩] ಎಂಬುದನ್ನು ವೇದೋಕ್ತ ಮಂತ್ರಗಳ ಉಲ್ಲೇಖಗಳಿಂದ ಪ್ರತಿಪಾದಿಸಿದೆ:

ಋಗಿತ್ಯಾಹ ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ।
ತಸ್ಮಾತ್ಪವಿತ್ರಂ ತಲ್ಲಿಂಗಂ ಧಾರ್ಯಂ ಶೈವಮನಾಮಯಮ್॥[೨೪]
ಬ್ರಹ್ಮೇತಿ ಲಿಂಗಮಾಖ್ಯಾತಂ ಬ್ರಹ್ಮಣಃ ಪತಿರೀಶ್ವರಃ।
ಪವಿತ್ರಂ ತದ್ಧಿ ವಿಖ್ಯಾತಂ ತತ್ಸಂಪರ್ಕಾತ್ತನುಃ ಶುಚಿಃ॥
ಅತಪ್ತತನುರಜ್ಞೋ ವೈ ಆಮಃ ಸಂಸ್ಕಾರವರ್ಜಿತಃ।
ದೀಕ್ಷಯಾ ರಹಿತಃ ಸಾಕ್ಷಾನ್ನಾಪ್ನುಯಾಲ್ಲಿಂಗಮುತ್ತಮಮ್॥[೨೫]
ಅಘೋರಾಽಪಾಪಕಾಶೀತಿ ಯಾ ತೇ ರುದ್ರ ಶಿವಾ ತನೂಃ।
ಯಜುಷಾ ಗೀಯತೇ ಯಸ್ಮಾತ್ತಸ್ಮಾಚ್ಛೈವೋಽಘವರ್ಜಿತಃ॥[೨೬]

ಸಿದ್ಧಾಂತ ಶಿಖಾಮಣಿ ನಿರೂಪಿಸಿರುವ ಲಿಂಗದ ಸ್ವರೂಪ, ಭೇದ, ಲಿಂಗಧಾರಣೆಯ ಸ್ಥಾನ ಇತ್ಯಾದಿ ವಿಷಯಗಳು ಸೂಕ್ಷ್ಮಾಗಮ (ಕ್ರಿ.ಪಾ. ೬.೫-೭, ೮.೧೪-೧೭); ಚಂದ್ರಜ್ಞಾನಾಗಮ (ಕ್ರಿ.ಪಾ.೩.೮-೪೮); ಪಾರಮೇಶ್ವರಾಗಮ (೨.೪); ವಾತುಲಶುದ್ಧಾಗಮ (೧೦.೩೬) ಮೊದಲಾದ ಶೈವಾಗಮಗಳಿಂದ ಸ್ವೀಕೃತವಾಗಿದೆ. ಇವಲ್ಲದೆ ಲಿಂಗವು ವ್ಯಾಪಕವಾದ ಸ್ವರೂಪವನ್ನು ಹೊಂದಿರುವ ಕಾರಣದಿಂದ ಅದನ್ನು ಬ್ರಹ್ಮವೆಂದು ಕರೆದಿದ್ದು, ಅದಕ್ಕೆ ಆಕರವು ಕೆಳಗಿನ ಆಗಮ-ಪುರಾಣ-ಉಪನಿಷತ್ತುಗಳ ವಾಕ್ಯಗಳೇ ಆಗಿವೆ:

"ಲಿಂಗಂ ತದ್ ಬ್ರಹ್ಮಸಂಜ್ಞಿತಮ್"[೨೭]

ಬ್ರಹ್ಮೇತಿ ಲಿಂಗಮಾಖ್ಯಾತಂ ಬ್ರಹ್ಮಣಃ ಪತಿರೀಶ್ವರಃ।
ಪವಿತ್ರಂ ತದ್ಧಿ ವಿಖ್ಯಾತಂ ತತ್ಸಂಪರ್ಕಾತ್ತನುಃ ಶುಚಿಃ॥[೨೮]

ಇವುಗಳಲ್ಲದೆ ಶೈವಾಗಮಗಳಲ್ಲಿ ಹಾಗೂ ಸಿದ್ಧಾಂತ ಶಿಖಾಮಣಿಯಲ್ಲಿ ನಿರೂಪಿತವಾಗಿರುವ ಲಿಂಗದ ಸ್ವರೂಪವು ಉಪನಿಷತ್ತುಗಳಲ್ಲಿ ನಿರೂಪಿತವಾಗಿರುವ ಬ್ರಹ್ಮಸ್ವರೂಪ ನಿರೂಪಣೆಗೆ ಸಮಾನವಾಗಿದೆ. ಉದಾಹರಣೆ-

---

೨೦. ಸಿದ್ಧಾಂತ ಶಿಖಾಮಣಿ, ೬.೪೮-೪೯;
೨೧. ಅದೇ, ೬. ೫೧; ಹೋಲಿಸಿ: ವಾತುಲಶುದ್ಧಾಗಮ, ೧೦.೩೬ (ಯಥಾವತ್ತಾಗಿದೆ).
೨೨. ಅದೇ, ೬. ೫೨.
೨೩. ಅದೇ, ೬. ೫೭.
೨೪. ಅದೇ, ೬. ೫೮; ಹೋಲಿಸಿ; ಋಗ್ವೇದ, ೯-೮೩-೧.
೨೫. ಸಿ.ಶಿ., ೬. ೫೯-೬೦; ಹೋಲಿಸಿ: ಋಗ್ವೇದ, ೯-೮೩-೧.
೨೬. ಸಿ.ಶಿ., ೬. ೬೧; ಹೋಲಿಸಿ: ಋಜುರ್ವೇದ, ತೈತ್ತಿರೀಯ ಸಂಹಿತೆ, iv. ೫-೧-೧.
೨೭. ಚಂದ್ರಜ್ಞಾನಾಗಮ, ಕ್ರಿ.ಪಾ. ೩.೧೬; ಲಿಂಗಧಾರಣಚಂದ್ರಿಕೆ, ಪು. ೧೧೮.
೨೮. ಲಿಂಗಪುರಾಣ, ಉ.ಭಾ. ಅಧ್ಯಾಯ ೨೧, ೯೮-೧೦೨.

ಯತೋ ವಾ ಇಮಾನಿ ಭೂತಾನಿ ಜಾಯಂತೇ ಯೇನ ಜಾತಾನಿ ಜೀವಂತಿ
ಯತ್ ಪ್ರಯಂತ್ಯಭಿಸಂವಿಶಂತಿ। ತದ್‌ವಿಜಿಜ್ಞಾಸಸ್ವ। ತದ್ ಬ್ರಹ್ಮ।[೨೯]
ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನ್ ಇತಿ ಶಾಂತ ಉಪಾಸೀತ।[೩೦]

ಒಟ್ಟಿನಲ್ಲಿ ಲಿಂಗಸ್ವರೂಪ ನಿರೂಪಣೆಗೆ ಸಂಬಂಧಿಸಿದಂತೆ ಸಿದ್ಧಾಂತ ಶಿಖಾಮಣಿಯು ವೇದ, ಉಪನಿಷತ್ತು, ಪುರಾಣ, ಆಗಮಗಳಿಂದ ಆಕರಗಳನ್ನು ಸ್ವೀಕರಿಸಿದೆ ಎಂಬುದು ಮೇಲಿನ ಉಲ್ಲೇಖಗಳಿಂದ ಸ್ಪಷ್ಟವಾಗುತ್ತದೆ.

೩. ಜಂಗಮ: ವೀರಶೈವ ಸಿದ್ಧಾಂತದ ಪ್ರಕಾರ 'ಜಂಗಮ' ಮೂರನೆಯ ಆವರಣ. ಸಿದ್ಧಾಂತ ಶಿಖಾಮಣಿಯ ಜಂಗಮನ ಸ್ವರೂಪವನ್ನು ಹೀಗೆ ನಿರೂಪಿಸಿ:

ಜಾನಂತ್ಯತಿಶಯಾದ್ ಯೇ ತು ಶಿವಂ ವಿಶ್ವಪ್ರಕಾಶಕಮ್।
ಸ್ವಸ್ವರೂಪತಯಾ ತೇ ತು ಜಂಗಮಾ ಇತಿ ಕೀರ್ತಿತಾಃ॥[೩೧]

"ಜಗತ್ತಿನ ಪ್ರಕಾಶಕನಾದ ಶಿವನನ್ನು ಯಾರು ತಮ್ಮ ಸ್ವರೂಪದಿಂದಲೂ ಅರ್ಥಾತ್ ತನ್ನನ್ನು ಶಿವನ ಅತಿಶಯವಾದ ರೂಪವೆಂದು ನಿಶ್ಚಯವಾಗಿ ತಿಳಿಯುತ್ತಾನೆಯೋ ಅವನೇ ಜಂಗಮ ಎನಿಸುತ್ತಾನೆ."

ಜಂಗಮನನ್ನು ಚರಲಿಂಗ (೯.೬೦), ಶಿವಯೋಗಿ (೯.೬೬) ಮುಂತಾದ ಹೆಸರುಗಳಿಂದ ಕರೆದಿರುವ ಸಿದ್ಧಾಂತ ಶಿಖಾಮಣಿ, ಗುರು-ಲಿಂಗಗಳನ್ನು ಆದರದಿಂದ ಪೂಜಿಸುವಂತೆ ಶಿವಯೋಗಿಯನ್ನು ಸಾಕ್ಷಾತ್ ಶಿವನೆಂದೇ ಭಾವಿಸಿ ಕಿಂಕರಭಾವದಿಂದ ಪೂಜಿಸಬೇಕೆಂದು ಬೋಧಿಸಿದೆ:

ಶಿವಯೋಗೀ ಶಿವಃ ಸಾಕ್ಷಾದಿತಿ ಕೈಂಕರ್ಯಭಕ್ತಿತಃ।
ಪೂಜಯೇದಾದರೇಣೈವ ಯಥಾ ಲಿಂಗಂ ಯಥಾ ಗುರುಮ್॥[೩೨]

ಆ ನಂತರ ಸ್ವಯಜಂಗಮ,[೩೩] ಚರಜಂಗಮ[೩೪] ಮತ್ತು ಪರಜಂಗಮ[೩೫] ಎಂದು ಜಂಗಮತ್ರೈವಿಧ್ಯವನ್ನು ನಿರೂಪಿಸಿ ಜಂಗಮನ ಶ್ರೇಷ್ಠತೆಯನ್ನು ನಿರೂಪಿಸಲಾಗಿದೆ:

ಅಜಂಗಮಂ ತು ಯಲ್ಲಿಂಗಂ ಮೃಚ್ಛಿಲಾದಿವಿನಿರ್ಮಿತಮ್।
ತದ್ವರಂ ಜಂಗಮಂ ಲಿಂಗಂ ಶಿವಯೋಗೀತಿ ವಿಶ್ರುತಮ್॥[೩೬]

ಶಿವಯೋಗಿನಿ ಸಂತೃಪ್ತೇ ತೃಪ್ತೋ ಭವತಿ ಶಂಕರಃ।
ತತ್‌ತೃಪ್ತ್ಯಾ ತನ್ಮಯಂ ವಿಶ್ವಂ ತೃಪ್ತಿಮೇತಿ ಚರಾಚರಮ್॥[೩೭]

---

೨೯. ತೈತ್ತಿರೀಯೋಪನಿಷತ್, ೩.೧.
೩೦. ಛಾಂದೋಗ್ಯೋಪನಿಷತ್, ೩-೧೪-೧.
೩೧. ಸಿದ್ಧಾಂತ ಶಿಖಾಮಣಿ, ೧೧. ೩೬.
೩೨. ಸಿದ್ಧಾಂತ ಶಿಖಾಮಣಿ, ೯.೬೬.
೩೩. ಅದೇ, ೧೫.೫೨-೫೬.
೩೪. ಅದೇ, ೧೫.೫೭-೬೧.
೩೫. ಅದೇ, ೧೫.೬೪-೭೦.
೩೬. ಅದೇ, ೯-೬೧.
೩೭. ಅದೇ, ೯. ೯೧.

ಸಿದ್ಧಾಂತ ಶಿಖಾಮಣಿಯು ಜಂಗಮನ ಸ್ವರೂಪ-ಭೇದ-ಶ್ರೇಷ್ಠತೆ ಇತ್ಯಾದಿಗಳನ್ನು ಚಂದ್ರಜ್ಞಾನಾಗಮ (ಕ್ರಿ.ಪಾ., ೪.೪-೩೭); ಸೂಕ್ಷ್ಮಾಗಮ (ಕ್ರಿ.ಪಾ., ೭.೬೪-೮೧ ೮.೧೮-೨೦) ಮತ್ತು ಪಾರಮೇಶ್ವರಾಗಮ (೯. ೫೪-೬೯)ಗಳಲ್ಲಿ ನಿರೂಪಿತವಾಗಿರುವ ಅಂಶಗಳಿಂದ ಪ್ರಭಾವಿತವಾಗಿರುವುದು ಸ್ಪಷ್ಟ. ತ್ರಿವಿಧ ಜಂಗಮನ ಸ್ವರೂಪಗಳ ಬಗ್ಗೆ ಸೂಕ್ಷ್ಮಾಗಮದಲ್ಲಿ ಸ್ವಯಜಂಗಮ, ಚರಜಂಗಮ ಮತ್ತು ಪರಜಂಗಮ[೩೮] ಎಂದು ಹೇಳಿರುವುದನ್ನು ಸಿದ್ಧಾಂತ ಶಿಖಾಮಣಿ ಸ್ವಸ್ಥಲ, ಚರಸ್ಥಲ ಮತ್ತು ಪರಸ್ಥಲವೆಂದು ಹೇಳಿ, ತ್ರಿವಿಧ ಜಂಗಮನ ಸ್ವರೂಪ ಹಾಗೂ ಮಹತಿಯನ್ನು ಕೊಂಡಾಡಿದೆ.

ಅಷ್ಟಾವರಣಗಳಲ್ಲಿ ಮೊದಲಿನ ಮೂರು ಆವರಣಗಳಾದ ಗುರು-ಲಿಂಗ-ಜಂಗಮ ಪೂಜ್ಯ ಆವರಣಗಳು. ಅದನ್ನು ಸಿದ್ಧಾಂತ ಶಿಖಾಮಣಿ ಈ ರೀತಿಯಾಗಿ ಸ್ಪಷ್ಟಪಡಿಸಿದೆ:

ಏಕ ಏವ ಶಿವಃ ಸಾಕ್ಷಾತ್ ಸರ್ವಾನುಗ್ರಹಕಾರಕಃ।
ಗುರುಜಂಗಮಲಿಂಗಾತ್ಮಾ ವರ್ತತೇ ಭುಕ್ತಿಮುಕ್ತಿದಃ॥[೩೯]

"ಸರ್ವಾನುಗ್ರಹಕಾರಕನಾದ ಶಿವಮೊಬ್ಬನೇ ಗುರು-ಲಿಂಗ-ಜಂಗಮ ರೂಪದಿಂದ ಅವತರಿಸಿ ತನ್ನ ಭಕ್ತರಿಗೆ ಭಕ್ತಿ-ಮುಕ್ತಿಗಳನ್ನು ನೀಡುತ್ತಾನೆ." ಸಿದ್ಧಾಂತ ಶಿಖಾಮಣಿಯ ಈ ಉಕ್ತಿಯು ಚಂದ್ರಜ್ಞಾನಾಗಮದ "ಏಕಮಾರ್ತೇಸ್ತ್ರಯೋ ಭಾಗಾ ಗುರುರ್ಲಿಂಗಂ ತು ಜಂಗಮಃ"[೪೦] ಎಂಬುದರ ಪುನರುಕ್ತಿಯೇ ಆಗಿದೆ.

೪ ಭಸ್ಮ: ಅಷ್ಟಾವರಣಗಳಲ್ಲಿ ಭಸ್ಮವು ನಾಲ್ಕನೆಯ ಆವರಣ. ವೀರಶೈವ ಸಾಧನ ಮಾರ್ಗದಲ್ಲಿ ತೊಡಗುವ ಭಕ್ತನಿಗೆ ಭಸ್ಮಧಾರಣೆಯು ತುಂಬಾ ಅವಶ್ಯಕವಾದದ್ದು. ಸಿದ್ಧಾಂತ ಶಿಖಾಮಣಿಯು ಭಸ್ಮದ ಪ್ರಯೋಜನವನ್ನು ಹೀಗೆ ನಿರೂಪಿಸಿದೆ:

ಯೋ ಲಿಂಗಧಾರೀ ನಿಯತಾಂತರಾತ್ಮಾ
ನಿತ್ಯಂ ಶಿವಾರಾಧನಬದ್ಧಚಿತ್ತಃ।
ಸ ಧಾರಯೇತ್ ಸರ್ವಮಲಾಪಹತ್ಯೈ
ಭಸ್ಮಾಮಲಂ ಚಾರು ಯಥಾಪ್ರಯೋಗಮ್॥[೪೧]

"ಲಿಂಗಧಾರಿಗಳಾದ ಸಮಸ್ತ ವೀರಶೈವರು ತಮ್ಮ ಎಲ್ಲ ಬಗೆಯ ದೋಷಗಳ ನಿವಾರಣೆಗಾಗಿ ಪವಿತ್ರ ಭಸ್ಮವನ್ನು ಧರಿಸಬೇಕು." "ಧಿಗ್ ಭಸ್ಮರಹಿತಂ ಫಾಲಂ ಧಿಗ್ ಗ್ರಾಮಮಶಿವಾಲಯಮ್" ಎಂಬ ವಾಕ್ಯದಂತೆ ಶಿವಾಲಯವಿಲ್ಲದ ಗ್ರಾಮ ಮತ್ತು ಭಸ್ಮವಿಲ್ಲದ ಹಣೆ -ಈ ಎರಡೂ ಅಮಂಗಲವೆಂದು ಪರಿಗಣಿಸಲಾಗಿದೆ. ಆದ್ದರಿಂದಲೇ ಬಸವಣ್ಣನವರೂ ಕೂಡ "ನಮ್ಮ ಕೂಡಲಸಂಗನ ಶರಣರಿಗೆ ನೊಸಲ ವಿಭೂತಿಯೇ ಶೃಂಗಾರ"[೪೨] ಎಂದಿದ್ದಾರೆ.

---

೩೮. ಚರಲಿಂಗಸ್ಥಲಸ್ಯಾಸ್ಯ ಸ್ವರೂಪಂ ಕಥಯಾಮಿ ತೇ।
ಸ್ವಯಂ ಚರಂ ಪರಂ ಚೇತಿ ತ್ರೈವಿಧ್ಯಂ ಸಮುಪಾಗತಮ್॥
-ಸೂಕ್ಷ್ಮಾಗಮ, ಕ್ರಿ.ಪಾ. ೮. ೧೮.

೩೯. ಸಿದ್ಧಾಂತ ಶಿಖಾಮಣಿ, ೯.೫೯

೪೦. ಚಂದ್ರಜ್ಞಾನಾಗಾಮ, ಕ್ರಿ.ಪಾ., ೫.೧೫

೪೧. ಸಿದ್ಧಾಂತ ಶಿಖಾಮಣಿ, ೬. ೪೧.

೪೨. ಬಸವಣ್ಣನವರ ವಚನ ಸಂಖ್ಯೆ, ೭೪.

ಹಸುವಿನ ಗೋಮಯವನ್ನು ಸಂಗ್ರಹಿಸಿ, ಅದನ್ನು ಬಿಸಿಲಿನಲ್ಲಿ ಒಣಗಿಸಿ ಅಗ್ನಿಯಿಂದ ಸುಟ್ಟು ಸಿದ್ಧಪಡಿಸಿದ್ದು ಭಸ್ಮ.

ವೀರಶೈವ ಸಿದ್ಧಾಂತದಲ್ಲಿ ಭಸ್ಮಧಾರಣ ವಿಧಿಯು ನಿರುಪಾಧಿಕ ಮತ್ತು ಸೋಪಾಧಿಕ ಎಂದು ಎರಡು ಬಗೆ. ಜ್ಯೋತಿರೂಪನಾದ ಮಹಾದೇವನನ್ನು 'ಮಹಾಭಸ್ಮ'ವೆಂದು ಭಾವಿಸುವುದೇ ನಿರುಪಾಧಿಕ ಭಸ್ಮ. ಪಂಚಬ್ರಹ್ಮಮಂತ್ರನ್ಯಾಸದಿಂದ ಕೂಡಿ ಶಿವಮಂತ್ರದಿಂದ ಸಂಸ್ಕಾರಗೊಂಡ ಅಗ್ನಿಯಿಂದ ಸುಟ್ಟು ತಯಾರಿಸಿದ ಭಸ್ಮವು ಸೋಪಾಧಿಕವೆನಿಸುತ್ತದೆ.[೪೩] ಇದು ಕಲ್ಪ, ಉಪಕಲ್ಪ, ಅನುಕಲ್ಪ, ಮತ್ತು ಅಕಲ್ಪ ಎಂಬ ನಾಲ್ಕು ಬಗೆಯ ಪ್ರಕ್ರಿಯೆಗಳಿಂದ ಸಿದ್ಧಪಡಿಸುವ ವಿಧಿಯು ಶಾಸ್ತ್ರಗಳಲ್ಲಿ ನಿರೂಪಿತವಾಗಿದೆ ಎಂದು ಸಿದ್ಧಾಂತ ಶಿಖಾಮಣಿ ಸ್ಪಷ್ಟಪಡಿಸಿ ಅವುಗಳ ತಯಾರಿಕಾ ವಿಧಾನವನ್ನು ವಿವರಿಸಿದೆ.[೪೪]

ಸಿದ್ಧಾಂತ ಶಿಖಾಮಣಿ ನಿರೂಪಿತವಾದ ಈ ಚತುರ್ವಿಧ ಭಸ್ಮಗಳ ಪರಿಕಲ್ಪನೆಯು ಬೃಹಜ್ಜಾಲೋಪನಿಷತ್ತಿನಿಂದ ಸ್ವೀಕೃತವಾಗಿದೆ. ಅಲ್ಲಿ ಹೆಸರುಗಳು ಈ ರೀತಿಯಾಗಿವೆ-೧ ಅನುಕಲ್ಪ, (೨) ಉಪಕಲ್ಪ, (೩) ಉಪೋಪಕಲ್ಪ, ಮತ್ತು (೪) ಅಕಲ್ಪ[೪೫] ಚಂದ್ರಜ್ಞಾನಾಗಮವು ಶಾಂತಿಕ, ಪೌಷ್ಟಿಕ ಮತ್ತು ಕಾಮದ[೪೬] ಎಂದು ಭಸ್ಮ ತ್ರೈವಿಧ್ಯವನ್ನು ನಿರೂಪಿಸಿದೆ.

ಸಿದ್ಧಾಂತ ಶಿಖಾಮಣಿಯು ಬೃಹಜ್ಜಾಬಾಲೋಪನಿಷತ್ತನ್ನು ಅನುಸರಿಸಿ ಭಸ್ಮದ ನಾಲ್ಕು ಪ್ರಕಾರಗಳನ್ನು ಹೇಳಿದ್ದರೂ, ಅವುಗಳ ಸ್ವರೂಪವನ್ನು ಹೇಳುವಾಗ ಚಂದ್ರಜ್ಞಾನಾಗಮವನ್ನು ಅನುಸರಿಸಿದೆ.

ಭಸ್ಮಪಂಚಕಗಳು: ಸಿದ್ಧಾಂತ ಶಿಖಾಮಣಿಯು ಚತುರ್ವಿಧ ಭಸ್ಮಕಲ್ಪವನ್ನು ತಯಾರಿಕಾ ಪ್ರಕ್ರಿಯೆಯ ಆಧಾರದಿಂದ ನಿರೂಪಿಸಿದ ನಂತರ ಪರಶಿವನ ಸದ್ಯೋಜಾತಾದಿ ಪಂಚಮುಖಗಳಿಂದ ಅವತರಿಸಿದ ನಂದಾದಿ ಪಂಚ ಗೋವುಗಳ ಗೋಮಯದಿಂದ ತಯಾರಿಸುವ ಭಸ್ಮವು ವಿಭೂತಿ, ಭಸಿತ, ಭಸ್ಮ, ಕ್ಷಾರ ಮತ್ತು ರಕ್ಷಾ ಎಂಬ ಭಸ್ಮ ಪಂಚಕಗಳ ಸ್ವರೂಪಾದಿಗಳನ್ನು ಹೇಳುತ್ತದೆ:

> ವಿಭೂತಿರ್ಭಸಿತಂ ಭಸ್ಮ ಕ್ಷಾರಂ ರಕ್ಷೇತಿ ಭಸ್ಮನಃ।
> ಏತಾನಿ ಪಂಚ ನಾಮಾನಿ ಹೇತುಭಿಃ ಪಂಚಭಿರ್ಭೃಶಮ್॥[೪೭]

---

೪೩. ಮಹಾಭಸ್ಮೇತಿ ಸಂಚಿಂತ್ಯ ಮಹಾದೇವಂ ಪ್ರಭಾಮಯಮ್।
ವರ್ತಂತೇ ಯೇ ಮಹಾಭಾಗಾ ಮುಖ್ಯಾಸ್ತೇ ಭಸ್ಮಧಾರಿಣಃ॥
ಶಿವಾಗ್ನ್ಯಾದಿಸಮುತ್ಪನ್ನಂ ಮಂತ್ರನ್ಯಾಸಾದಿಯೋಗತಃ।
ತತ್ಸೋಪಾಧಿಕಮಿತ್ಯಾಹುರ್ಭಸ್ಮತಂತ್ರವಿಶಾರದಾಃ॥ -ಸಿ.ಶಿ., ೭. ೨-೩

೪೪. ಭಸ್ಮೋತ್ಪಾದನಮುದ್ದಿಷ್ಟಂ ಚತುರ್ಧಾ ತಂತ್ರವೇದಿಭಿಃ।
ಕಲ್ಪಂ ಚೈವಾನುಕಲ್ಪಂ ಚ ಉಪಕಲ್ಪಮಕಲ್ಪಕಮ್॥ -ಅದೇ, ೭.೧೨-೧೭.

೪೫. ಬೃಹಜ್ಜಾಬಾಲೋಪನಿಷತ್, ೬.೩೬-೩೭.

೪೬. ಚಂದ್ರಜ್ಞಾನಾಗಮ, ಕ್ರಿ.ಪಾ. ೯.೩೧-೩೩.

೪೭. ಸಿದ್ಧಾಂತ ಶಿಖಾಮಣಿ, ೭.೪.
ಹೋಲಿಸಿ: ವಿಭೂತಿರ್ಭಸಿತಂ ಭಸ್ಮ ಕ್ಷಾರಂ ರಕ್ಷೇತಿ ಭಸ್ಮನೋ ಭವಂತಿ ಪಂಚನಾಮಾನಿ। (ಬೃಹಜ್ಜಾಬಾಲೋಪನಿಷತ್, ೧.೧೫).

ಭಸ್ಮಧಾರಣವಿಧಿ: ವೀರಶೈವ ಸಿದ್ಧಾಂತದಲ್ಲಿ ಭಸ್ಮಧಾರಣ ವಿಧಿಯು ಭಸ್ಮಸ್ನಾನ, ಭಸ್ಮೋದ್ಧೂಲನ ಮತ್ತು ಭಸ್ಮತ್ರಿಪುಂಡ್ರ ಧಾರಣವೆಂದು ಮೂರು ವಿಧವಾಗಿದೆ. ಸಿದ್ಧಾಂತ ಶಿಖಾಮಣಿಯು ತ್ರಿವಿಧ ಭಸ್ಮಧಾರಣವಿಧಿಯನ್ನು ನಿರೂಪಿಸಿ ಶರೀರದ ಹದಿನೈದು ಸ್ಥಾನಗಳಲ್ಲಿ[೪೮] ತ್ರಿಪುಂಡ್ರಧಾರಣೆ ಮಾಡಬೇಕೆಂದು ತಿಳಿಸಿ, ಆ ಹದಿನೈದು ಸ್ಥಾನಗಳ ಹೆಸರುಗಳನ್ನು ಕೊಟ್ಟಿದೆ.[೪೯]

ಭಸ್ಮಧಾರಣವಿಧಿಗೆ ಸಂಬಂಧಿಸಿದ ಸಮಸ್ತ ವಿಷಯಗಳನ್ನು ಸಿದ್ಧಾಂತ ಶಿಖಾಮಣಿಯು ಉಪನಿಷತ್ತು ಮತ್ತು ಆಗಮಗಳಿಂದ ಸ್ವೀಕರಿಸಿದೆ. ಬೃಹಜ್ಜಾಬಾಲೋಪನಿಷತ್ತಿನಲ್ಲಿ ತ್ರಿಪುಂಡ್ರಧಾರಣೆಯನ್ನು ೧೬,೮ ಅಥವಾ ೫ ಸ್ಥಾನಗಳಲ್ಲಿ ಮಾಡಬೇಕೆಂದು ಹೇಳಿದೆ.[೫೦] ಚಂದ್ರಜ್ಞಾನಾಗಮ, ಕಾರಣಾಗಮ ಮತ್ತು ಮಕುಟಾಗಮಗಳು ೩೨, ೧೬, ೮ ಅಥವಾ ೫ ಸ್ಥಾನಗಳಲ್ಲಿ ಭಸ್ಮತ್ರಿಪುಂಡ್ರಧಾರಣೆ ಮಾಡಬೇಕೆಂದು ನಿರೂಪಿಸಿವೆ.[೫೧] ಸಿದ್ಧಾಂತ ಶಿಖಾಮಣಿಯು ಪೂರ್ವೋಕ್ತ ಉಪನಿಷತ್ತು-ಆಗಮಗಳಿಂದ ಪ್ರಭಾವಿತವಾಗಿದ್ದರೂ ವಿಕಲ್ಪಕ್ಕೆ ಅವಕಾಶ ನೀಡದೆ ೧೫ ಸ್ಥಾನಗಳಲ್ಲಿ ತ್ರಿಪುಂಡ್ರಧಾರಣೆ ಮಾಡಬೇಕೆಂದು ಬೋಧಿಸಿದೆ. ಆ ನಂತರ ಬಲಗೈನ ಮಧ್ಯದ ಮೂರು ಬೆರಳುಗಳಿಂದ ಪ್ರಾತಃಕಾಲ, ಮಧ್ಯಾಹ್ನ ಹಾಗೂ ಸಾಯಂಕಾಲಗಳಲ್ಲಿ ಭಸ್ಮಧಾರಣೆ ಮಾಡಬೇಕು. ಬ್ರಹ್ಮ, ವಿಷ್ಣು, ರುದ್ರ, ಮೊದಲಾದ ದೇವತೆಗಳು, ವಸಿಷ್ಠಾದಿ ಮುನಿಗಳು ಯಾವಾಗಲೂ ಭಸ್ಮತ್ರಿಪುಂಡ್ರಧಾರಿಗಳಾಗಿರುತ್ತಾರೆ ಎಂದು ನಿರೂಪಿಸಿದ ಸಿದ್ಧಾಂತ ಶಿಖಾಮಣಿ[೫೨] ಭಸ್ಮಧಾರಣೆಯು ವೇದ, ಆಗಮ, ಪುರಾಣ ಸಂಮತವಾದದ್ದೆಂದು ನಿರೂಪಿಸಿದೆ:

ಶೈವಾಗಮೇಷು ವೇದೇಷು ಪುರಾಣೇಷ್ವಖಿಲೇಷು ಚ।
ಸ್ಮೃತೀತಿಹಾಸಕಲ್ಪೇಷು ವಿಹಿತಂ ಭಸ್ಮಪುಂಡ್ರಕಮ್॥[೫೩]

೫. ರುದ್ರಾಕ್ಷ: ಅಷ್ಟಾವರಣಗಳಲ್ಲಿ ರುದ್ರಾಕ್ಷವು ಐದನೆಯ ಆವರಣ. ಇದು ಒಂದು ವಿಶಿಷ್ಟ ಜಾತಿಯ ವೃಕ್ಷದ ಬೀಜ. ಸಿದ್ಧಾಂತ ಶಿಖಾಮಣಿಯು ರುದ್ರಾಕ್ಷಧಾರಣಸ್ಥಲದಲ್ಲಿ:

ಭಸ್ಮನಾ ವಿಹಿತಸ್ನಾನಸ್ತ್ರಿಪುಂಡ್ರಾಂಕಿತಮಸ್ತಕಃ।
ಶಿವಾರ್ಚನಪರೋ ನಿತ್ಯಂ ರುದ್ರಾಕ್ಷಮಪಿ ಧಾರಯೇತ್॥[೫೪]

"ಭಸ್ಮಸ್ನಾನ-ತ್ರಿಪುಂಡ್ರಧಾರಣೆಯ ನಂತರ ಶಿವಪೂಜೆಯಲ್ಲಿ ನಿರತನಾದವನು ಪ್ರತಿನಿತ್ಯವೂ ರುದ್ರಾಕ್ಷವನ್ನು ಧರಿಸಬೇಕು" ಎಂದು ಬೋಧಿಸಿದೆ. ಅನಂತರ ರುದ್ರಾಕ್ಷದ

---

೪೮. ತ್ರಿಪುಂಡ್ರಂ ಧಾರಯೇನ್ನಿತ್ಯಂ ಭಸ್ಮನಾ ಸಜಲೇನ ಹಿ।
ಸ್ಥಾನೇಷು ಪಂಚದಶಸು ಶರೀರೇ ಸಾಧಕೋತ್ತಮಃ॥ -ಸಿ.ಶಿ, ೭. ೩೦.

೪೯. ಅದೇ, ೭.೩೧-೩೨.

೫೦. ಬೃಹಜ್ಜಾಬಾಲೋಪನಿಷತ್, ೪. ೧೪, ೧೬.

೫೧. ಚಂದ್ರಜ್ಞಾನಾಗಮ, ಕ್ರಿ.ಪಾ. ೬.೪೫-೪೬.
ಕಾರಣಾಗಮ, ಕ್ರಿ.ಪಾ.೩. ೪೭-೪೯; ಮಕುಟಾಗಮ, ಕ್ರಿ.ಪಾ, ೨. ೧೩-೧೬.

೫೨. ಸಿದ್ಧಾಂತ ಶಿಖಾಮಣಿ, ೭.೩೫, ೩೮, ೪೦-೪೧.

೫೩. ಅದೇ, ೭.೪೨.

೫೪. ಅದೇ, ೭.೪೪.

ಉತ್ಪತ್ತಿ, ಪ್ರಕಾರಗಳು, ಧರಿಸುವ ಕ್ರಮ, ಮಹಿಮೆ ಇತ್ಯಾದಿ ವಿಷಯಗಳನ್ನು ವಿಸ್ತೃತವಾಗಿ ನಿರೂಪಿಸಿದೆ. ಅದರಂತೆ, ಹಿಂದೆ ತ್ರಿಪುರಸಂಹಾರ ಕಾಲದಲ್ಲಿ ಶಿವನ ಮೂರು ಕಣ್ಣುಗಳಿಂದ ಉದುರಿದ ಜಲಬಿಂದುಗಳೇ ರುದ್ರಾಕ್ಷಗಳಾದವು- "ರುದ್ರನೇತ್ರಸಮುತ್ಪನ್ನಾ ರುದ್ರಾಕ್ಷಾ ಲೋಕಪಾವನಾಃ"[೫೫] ಎಂಬ ಉಕ್ತಿಯಂತೆ ರುದ್ರನ ನೇತ್ರಗಳಿಂದ ಉತ್ಪನ್ನವಾದ ರುದ್ರಾಕ್ಷಗಳು ಲೋಕಪಾವನವಾದವುಗಳು ಎಂದು ಹೇಳುವ ಮೂಲಕ ರುದ್ರಾಕ್ಷಗಳ ಬಗ್ಗೆ ಭಕ್ತನ ಶ್ರದ್ಧೆ ಬಲವಾಗಬೇಕೆಂಬ ಅಭಿಪ್ರಾಯವೂ ಇದರಲ್ಲಿ ಅಡಗಿದೆ.

ಮೂವತ್ತೆಂಟು[೫೬] ಬಗೆಯ ರುದ್ರಾಕ್ಷಗಳಿರುವುದನ್ನು ಹೇಳುವ ಸಿದ್ಧಾಂತ ಶಿಖಾಮಣಿ ವೀರಶೈವರು ಎಂತಹ ರುದ್ರಾಕ್ಷಗಳನ್ನು ಧರಿಸಬೇಕೆಂಬುದನ್ನು ಈ ರೀತಿಯಾಗಿ ತಿಳಿಸಿದೆ:

ಅಚ್ಛಿದ್ರಂ ಕನಕಪ್ರಖ್ಯಮನನ್ಯಧೃತಮುತ್ತಮಮ್।
ರುದ್ರಾಕ್ಷಂ ಧಾರಯೇತ್ ಪ್ರಾಜ್ಞಃ ಶಿವಪೂಜಾಪರಾಯಣಃ॥[೫೭]

"ಶಿವಪೂಜಾ ನಿರತರಾದ ವೀರಶೈವರು ಛಿದ್ರವಾಗದ, ಚಿನ್ನದಂತೆ ಕಾಂತಿಯುತವಾದ, ಬೇರೆಯವರು ಧರಿಸದ ಉತ್ತಮವಾದ ರುದ್ರಾಕ್ಷಗಳನ್ನೇ ಧರಿಸಬೇಕು."

ರುದ್ರಾಕ್ಷಧಾರಣೆಯ ಫಲ: ರುದ್ರಾಕ್ಷಧಾರಣೆಯಿಂದ ಎಂತಹ ಫಲವುಂಟಾಗುತ್ತದೆ ಎಂಬುದನ್ನು ಸಿದ್ಧಾಂತ ಶಿಖಾಮಣಿ ಹೀಗೆ ನಿರೂಪಿಸಿದೆ:

ಬ್ರಾಹ್ಮಣೋವಾಂತ್ಯಜೋವಾಪಿ ಮುರ್ಖೋ ವಾ ಪಂಡಿತೋಽಪಿ ವಾ।
ರುದ್ರಾಕ್ಷಧಾರಣಾದೇವ ಮುಚ್ಯತೇ ಸರ್ವಪಾತಕೈಃ॥

....

ಮೃತ್ಯುಕಾಲೇ ತು ರುದ್ರಾಕ್ಷಂ ನಿಷ್ಪೀಡ್ಯ ಸಹ ವಾರಿಣಾ।
ಯಃ ಪಿಬೇಚ್ಚಿಂತಯನ್ ರುದ್ರಂ ರುದ್ರಲೋಕಂ ಸ ಗಚ್ಛತಿ॥[೫೮]

"ಬ್ರಾಹ್ಮಣನಾಗಿರಲಿ, ಅಂತ್ಯಜನಾಗಿರಲಿ, ಮೂರ್ಖನೇ ಆಗಿರಲಿ ಅಥವಾ ಪಂಡಿತನೇ ಆಗಿರಲಿ ಅವರೆಲ್ಲರೂ ರುದ್ರಾಕ್ಷ ಧರಿಸುವುದರಿಂದ ಎಲ್ಲ ಬಗೆಯ ಪಾತಕಗಳಿಂದ ಮುಕ್ತರಾಗುತ್ತಾರೆ. ಮೃತಕಾಲದಲ್ಲಿ ರುದ್ರಾಕ್ಷವನ್ನು ನೀರಿನಲ್ಲಿ ತೇಯ್ದು ಆ ನೀರನ್ನು ರುದ್ರನನ್ನು ಚಿಂತಿಸುತ್ತಾ ಕುಡಿದರೆ ಅಂತಹವನು ರುದ್ರಲೋಕಕ್ಕೆ ಹೋಗುತ್ತಾನೆ."

ಎಲ್ಲ ಬಗೆಯ ನಿತ್ಯಕರ್ಮ, ಕಾಮ್ಯಕರ್ಮ ಹಾಗೂ ನೈಮಿತ್ತಿಕ ಕರ್ಮಗಳನ್ನು ಸದಾ ಮಾಡುವ ಬ್ರಾಹ್ಮಣನು ಭಸ್ಮ-ರುದ್ರಾಕ್ಷಧಾರಣೆ ಮಾಡದಿದ್ದಲ್ಲಿ ಫಲಪ್ರಾಪ್ತಿಯಾಗದು ಎಂದು ವರ್ಣಿಸಿದೆ.[೫೯]

---

೫೫. ಅದೇ, ೭.೪೮.

೫೬. ಅದೇ, ೭.೪೮.

೫೭. ಅದೇ, ೭. ೫೧.

೫೮. ಅದೇ, ೭, ೬೦, ೬೨.

೫೯. ಅದೇ, ೭. ೬೫.

ಸಿದ್ಧಾಂತ ಶಿಖಾಮಣಿಯು ರುದ್ರಾಕ್ಷಗಳಿಗೆ ಸಂಬಂಧಿಸಿದ ವಿಷಯಗಳನ್ನು ರುದ್ರಾಕ್ಷಜಾಬಾಲೋನಿಷತ್,[೬೦] ಭಸ್ಮಜಾಬಾಲೋಪನಿಷತ್[೬೧] ಚಂದ್ರಜ್ಞಾನಾಗಮ[೬೨] ಮುಂತಾದವುಗಳಿಂದ ಸ್ವೀಕರಿಸಿ, ವ್ಯವಸ್ಥಿತ ರೀತಿಯಲ್ಲಿ ಪ್ರಸ್ತುತಪಡಿಸಿದೆ.

೬. ಮಂತ್ರ: ಅಷ್ಟಾವರಣದಲ್ಲಿ ಮಂತ್ರವು ಆರನೆಯ ಆವರಣ. ಭಸ್ಮ-ರುದ್ರಾಕ್ಷಧಾರಣೆಯ ನಂತರ ಶಿವಭಕ್ತನು ಪಂಚಾಕ್ಷರೀ ಮಂತ್ರವನ್ನು ಜಪಿಸಬೇಕೆಂದು ಸಿದ್ಧಾಂತ ಶಿಖಾಮಣಿ ಬೋಧಿಸಿದೆ:

ಧೃತಶ್ರೀಭೂತಿರುದ್ರಾಕ್ಷಃ ಪ್ರಯತೋ ಲಿಂಗಧಾರಕಃ।
ಜಪೇತ್ ಪಂಚಾಕ್ಷರೀವಿದ್ಯಾಂ ಶಿವತತ್ತ್ವಪ್ರಬೋಧಿನೀಮ್॥[೬೩]

ಮೂಲತಃ ಯಜುರ್ವೇದದ ರುದ್ರಾಧ್ಯಾಯದಲ್ಲಿ ಬರುವ ಪಂಚಾಕ್ಷರೀ ಮಂತ್ರವು ವೀರಶೈವರಿಗೆ ಮಾನ್ಯವಾಗಿದೆ. ಈ ಮಂತ್ರದಲ್ಲಿ 'ನಮಃ ಶಿವಾಯ' ಎಂಬ ಪಂಚಾಕ್ಷರಗಳಿರುವುದರಿಂದ ಪಂಚಾಕ್ಷರ ಮಂತ್ರವೆನಿಸಿದೆ. ಅದೇ ಮಂತ್ರವು ಪ್ರಣವ ಸಹಿತವಾದಾಗ ಷಡಕ್ಷರ ಮಂತ್ರವೆನಿಸುತ್ತದೆ. ಈ ಮಂತ್ರವು ಶಿವನ ನಾಮವನ್ನು ಬೋಧಿಸುವ ಕಾರಣ ಶಿವಜ್ಞಾನಕ್ಕೆ ಕಾರಣವಾಗುತ್ತದೆ ಎಂಬುದನ್ನು ಸಿದ್ಧಾಂತ ಶಿಖಾಮಣಿ ಮಾರ್ಮಿಕವಾಗಿ ಹೇಳಿದೆ:

ತಸ್ಯಾಭಿಧಾನಮಂತ್ರೋಽಯಮಭಿಧೇಯಶ್ಚ ಸ ಸ್ಮೃತಃ।
ಅಭಿದಾನಾಭಿದೇಯತ್ವಾನ್ಮಂತ್ರಾತ್ ಸಿದ್ಧಃ ಪರಃ ಶಿವಃ॥[೬೪]

ಸ್ತಪಕೋಟಿ ಮಹಾಮಂತ್ರಗಳಲ್ಲಿ ಪಂಚಾಕ್ಷರೀ ಮಂತ್ರವು ಶ್ರೇಷ್ಠವಾದುದೆಂದು ಸಿದ್ಧಾಂತ ಶಿಖಾಮಣಿ ಸಾರುತ್ತದೆ.[೬೫]

ಮಂತ್ರದ ಸ್ವರೂಪ: ಮಂತ್ರದ ಸ್ವರೂಪವೇನು? ಎಂಬ ಪ್ರಶ್ನೆ ಬಂದರೆ ಸಿದ್ಧಾಂತ ಶಿಖಾಮಣಿ ಉಪನಿಷತ್ತು-ಶೈವಾಗಮಗಳ ದಾಟಿಯಲ್ಲಿಯೇ ಉತ್ತರಿಸುತ್ತದೆ:

ನಮಃಶಬ್ದಂ ವದೇತ್ ಪೂರ್ವಂ ಶಿವಾಯೇತಿ ತತಃ ಪರಮ್।
ಮಂತ್ರಃ ಪಂಚಾಕ್ಷರೋ ಹ್ಯೇಷ ಸರ್ವಶ್ರುತಿಶಿರೋಗತಃ॥[೬೬]
ಓಂಕಾರಪೂರ್ವೋ ಮಂತ್ರೋಽಯಂ ಪಂಚಾಕ್ಷರಮಯಃ ಪರಃ।
ಶೈವಾಗಮೇಷು ವೇದೇಷು ಷಡಕ್ಷರ ಇತಿ ಸ್ಮೃತಃ॥[೬೭]

---

೬೦. ರುದ್ರಾಕ್ಷಜಾಬಾಲೋಪನಿಷತ್, ಅಧ್ಯಾಯ ೧೪-೧೭ರವರೆಗೆ.
೬೧. ಭಸ್ಮಜಾಬಾಲೋಪನಿಷತ್, ೨.೨.
೬೨. ಚಂದ್ರಜ್ಞಾನಾಗಮ, ಕ್ರಿ.ಪಾ. ೭. ೧೫-೨೯.
೬೩. ಸಿ.ಶಿ., ೮.೧.
೬೪. ಅದೇ, ೮.೬.
೬೫. ಸಪ್ತಕೋಟಿಷು ಮಂತ್ರೇಷು ಮಂತ್ರಃ ಪಂಚಾಕ್ಷರೋ ಮಹಾನ್।- ಅದೇ, ೮.೪.
೬೬. ಅದೇ, ೮.೭ ; ಹೋಲಿಸಿ: ಸೂ. ಆ, ಕ್ರಿ.ಪಾ. ೩.೧೩; ಚ.ಜ್ಞಾ.ಆ, ಕ್ರಿ.ಪಾ. ೮.೫; ಭಸ್ಮಜಾಬಾಲೋಪನಿಷತ್, ಉ. ೨೪.
೬೭. ಸಿ.ಶಿ., ೮.೧೭; ನೋಡಿ: ಚಂದ್ರಜ್ಞಾನಾಗಮ, ಕ್ರಿ.ಪಾ. ೮.೯.

"'ನಮಃ ಎಂಬ ಪದವನ್ನು ಮೊದಲು ಹೇಳಬೇಕು. ಅನಂತರ 'ಶಿವಾಯ' ಎಂದು ಹೇಳಬೇಕು. ಎಲ್ಲಾ ಶ್ರುತಿಗಳ ಶಿರೋಗತವಾದ ಪಂಚಾಕ್ಷರೀ ಮಂತ್ರವು ಇದೇ ಆಗಿದೆ. ಶ್ರೇಷ್ಠವಾದ ಈ ಪಂಚಾಕ್ಷರೀ ಮಂತ್ರವು ಓಂಕಾರ ಪೂರ್ವಕವಾಗಿ ಶೈವಾಗಮಗಳಲ್ಲಿ ಹಾಗೂ ವೇದಗಳಲ್ಲಿ ಷಡಕ್ಷರಮಂತ್ರವೆಂದು ಪ್ರಸಿದ್ಧವಾಗಿದೆ." ಶಿವಪೂಜಾಪರಾಯಣರಾದ ವೀರಶೈವರು ಏಕಾಗ್ರಚಿತ್ತದಿಂದ ಪ್ರಣವವು ಸೇರಿ ಷಡಕ್ಷರಿ ಮಂತ್ರವಾದ ಪಂಚಾಕ್ಷರೀ ಮಂತ್ರವನ್ನು ಜಪಿಸಬೇಕೆಂದು ಸಿದ್ಧಾಂತ ಶಿಖಾಮಣಿ ಬೋಧಿಸಿದೆ. ಅದಕ್ಕೆ ಕಾರಣವನ್ನು ಈ ರೀತಿಯಾಗಿ ಹೇಳಿದೆ:

ಪ್ರಣವೇನೈವ ಮಂತ್ರೇಣ ಬೋಧ್ಯತೇ ನಿಷ್ಕಲಃ ಶಿವಃ।
ಪಂಚಾಕ್ಷರೇಣ ಮಂತ್ರೇಣ ಪಂಚಬ್ರಹ್ಮತನುಸ್ತಥಾ।।
ನಿಷ್ಕಲಃ ಸಂವಿದಾಕಾರಃ ಸಕಲೋ ವಿಶ್ವಮೂರ್ತಿಕಃ।
ಉಭಯಾತ್ಮಾ ಶಿವೋ ಮಂತ್ರೇ ಷಡಕ್ಷರಮಯೇ ಸ್ಥಿತಃ।।[೬೮]

"ಓಂಕಾರ ಮಂತ್ರದಿಂದ ನಿಷ್ಕಲ ಶಿವನು ಬೋಧಿತನಾದರೆ, ಪಂಚಾಕ್ಷರ ಮಂತ್ರದಿಂದ ಪಂಚಬ್ರಹ್ಮರೂಪಿಯಾದ ಶಿವನು ಬೋಧಿತನಾಗುತ್ತಾನೆ. ನಿಷ್ಕಲ ಶಿವನು ಶುದ್ಧಜ್ಞಾನ ಸ್ವರೂಪನಾದರೆ, ಸಕಲ ಶಿವನು ಪ್ರಪಂಚದ ಸ್ವರೂಪನಾಗಿರುವನು. ಈ ರೀತಿಯಾಗಿ ಸಕಲ-ನಿಷ್ಕಲವೆಂಬ ಉಭಯ ಸ್ವರೂಪಿಯಾದ ಶಿವನು ಷಡಕ್ಷರ ಮಂತ್ರದಲ್ಲಿ ನೆಲೆಸಿದ್ದಾನೆ." ಆದ್ದರಿಂದ ಶಿವಪೂಜಾನಿರತನಾದ ವೀರಶೈವನು ಶಿವನ ಉಭಯ ರೂಪವಾದ ಷಡಕ್ಷರ ಮಂತ್ರವನ್ನೇ ಜಪಿಸಬೇಕೆಂದು ಸಿದ್ಧಾಂತ ಶಿಖಾಮಣಿ ಉಪದೇಶಿಸಿದೆ.

ತ್ರಿವಿಧ ಜಪ: ಪ್ರಣವ ಸಹಿತವಾದ ಪಂಚಾಕ್ಷರೀ ಮಂತ್ರಜಪವು ವಾಚಿಕ, ಉಪಾಂಶು ಮತ್ತು ಮಾನಸ ಎಂದು ಮೂರು ಬಗೆಯಾಗಿದೆ.[೬೯] ಪಕ್ಕದಲ್ಲಿರುವವರಿಗೆ ಸ್ಪಷ್ಟವಾಗಿ ಕೇಳಿಸುವಂತೆ ಉಚ್ಚ ಸ್ವರದಲ್ಲಿ ಜಪಿಸಿದರೆ ವಾಚಿಕ, ತುಟಿಯನ್ನು ಸ್ವಲ್ಪ ಅಲ್ಲಾಡಿಸುತ್ತಾ ಪಕ್ಕದಲ್ಲಿದ್ದವರಿಗೆ ಕೇಳಿಸದಂತೆ ಮಾಡುವ ಜಪವು ಉಪಾಂಶು ಮತ್ತು ತುಟಿ ಮತ್ತು ನಾಲಿಗೆಗಳನ್ನು ಸ್ವಲ್ಪವೂ ಚಲಿಸಿದೆ ಮಂತ್ರಾಕ್ಷರಗಳನ್ನು ಮನದಲ್ಲಿಯೇ ಧ್ಯಾನಿಸುತ್ತಾ ಜಪಿಸಿದರೆ ಮಾನಸಜಪವೆನಿಸುತ್ತದೆ.[೭೦] ಈ ತ್ರಿವಿಧ ಜಪಗಳಲ್ಲಿ ಉತ್ತರೋತ್ತರ ಜಪ ಶ್ರೇಷ್ಠವಾಗಿದೆ ಅರ್ಥಾತ್ ವಾಚಿಕಕ್ಕಿಂತ ಉಪಾಂಶು, ಉಪಾಂಶುಗಿಂತ ಮಾನಸಜಪವೇ ಶ್ರೇಷ್ಠ.[೭೧]

---

೬೮. ಅದೇ, ೮. ೨೧-೨೨.

೬೯. ಜಪಸ್ತು ತ್ರಿವಿಧಃ ಪ್ರೋಕ್ತೋ ವಾಚಿಕೋಪಾಂಶುಮಾನಸಃ।।
-ಸಿ.ಶಿ,೮. ೨೬; ಸೂ.ಆ, ಕ್ರಿ.ಪಾ ೩.೪೧.

೭೦. ಸಿ.ಶಿ, ೮.೨೭-೨೯; ಸೂ.ಆ, ಕ್ರಿ.ಪಾ. ೩.೪೧-೪೩;
ಚಂ.ಜ್ಞಾ.ಆ, ಕ್ರಿ.ಪಾ., ೮-೪೭-೪೯; ಪಾ.ಆ. ೧೧. ೮೫-೮೮
ಮಾಹಾತ್ಮ್ಯಂ ವಾಚಿಕಸ್ಯೈತಜ್ಜಪಯಜ್ಞಸ್ಯ ಕೀರ್ತಿತಮ್।
ತಸ್ಮಾಚ್ಛತಗುಣೋಪಾಂಶುಃ ಸಾಹಸ್ರೋ ಮಾನಸಃ ಸ್ಮೃತಃ।। -ಸಿ.ಶಿ.೮.೩೧

೭೧. ವಾಚಿಕಾತ್ತದುಪಾಂಶೋಶ್ಚ ಜಪಾದ್ಯಸ್ಯ ಮಹಾಮನೋಃ।
ಮಾನಸೋ ಹಿ ಜಪಃ ಶ್ರೇಷ್ಠೋ ಘೋರಸಂಸಾರನಾಶಕಃ।। -ಸಿ.ಶಿ., ೮.೩೨.
ಹೋಲಿಸಿ: ತ್ರಯಾಣಾಮಪಿ ಚೈತೇಷಾಂ ವರಂ ಸ್ಯಾದುತ್ತರೋತ್ತರಮ್।
-ಸೂಕ್ಷ್ಮಾಗಮ, ಕ್ರಿ.ಪಾ.೩.೪೩.

ಈ ರೀತಿಯಾಗಿ ಪಂಚಾಕ್ಷರ ಮಂತ್ರಜಪದ ಪ್ರಾಶಸ್ತ್ಯ, ಸ್ವರೂಪ, ಭೇದ ಮತ್ತು ವ್ಯತ್ಯಾಸಗಳನ್ನು ಬೋಧಿಸಿದ ತರುವಾಯ ಜಗತ್ತಿನಲ್ಲಿ ಐದನ್ನು ಪ್ರತಿನಿಧಿಸುವ (ಪಂಚಮಹಾಭೂತಗಳು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಪಂಚಬ್ರಹ್ಮರು, ಪಂಚಕೃತ್ಯಗಳು)[೭೨] ಎಲ್ಲವೂ ಪಂಚಾಕ್ಷರ ಮಂತ್ರದ ಸ್ವರೂಪವಾಗಿವೆ ಎಂದು ಸಿದ್ಧಾಂತ ಶಿಖಾಮಣಿ ನಿರೂಪಿಸಿದೆ:

ಪಂಚಧಾ ಪಂಚಧಾ ಯಾನಿ ಪ್ರಸಿದ್ಧಾನಿ ವಿಶೇಷತಃ।
ತಾನಿ ಸರ್ವಾಣಿ ವಸ್ತೂನಿ ಪಂಚಾಕ್ಷರಮಯಾನಿ ಹಿ॥[೭೩]

ಮಂತ್ರದ ಮಹಿಮೆ: ಶಿವಪೂಜಾನಿಷ್ಠನೂ, ಶುದ್ಧಾತ್ಮನೂ, ಶಿವಸ್ವರೂಪಿಯೂ ಆದ ವೀರಶೈವನು ಪ್ರತಿನಿತ್ಯವೂ ಈ ಷಡಕ್ಷರ ಮಂತ್ರದಿಂದಲೇ ಇಷ್ಟಲಿಂಗವನ್ನು ಪೂಜಿಸಬೇಕು. ಆ ಮಹಾಮಂತ್ರದ ಮಹಿಮೆಯಿಂದ ಅವನಿಗೆ ಮೋಕ್ಷಪ್ರಾಪ್ತವಾಗುತ್ತದೆ ಎಂದು ಸಿದ್ಧಾಂತ ಶಿಖಾಮಣಿ ಬೋಧಿಸಿದೆ:

ಅನೇನ ಮೂಲಮಂತ್ರೇಣ ಶಿವಲಿಂಗಂ ಪ್ರಪೂಜಯೇತ್।
ನಿತ್ಯಂ ನಿಯಮಸಂಪನ್ನಃ ಪ್ರಯತಾತ್ಮಾ ಶಿವಾತ್ಮಕಃ॥
ಭಕ್ತ್ಯಾ ಪಂಚಾಕ್ಷರೇಣೈವ ಯಃ ಶಿವಂ ಸಕೃದರ್ಚಯೇತ್।
ಸೋಽಪಿ ಗಚ್ಛೇಚ್ಛಿವಸ್ಥಾನಂ ಮಂತ್ರಸ್ಯಾಸ್ಯೈವ ಗೌರವಾತ್॥[೭೪]

ಮಂತ್ರದ ಫಲ: ಮಂತ್ರವನ್ನು ಜಪಿಸುವುದರಿಂದ ಆಗುವ ಪ್ರಯೋಜನವೇನು? ಎಂಬ ಪ್ರಶ್ನೆಗೆ ಸಿದ್ಧಾಂತ ಶಿಖಾಮಣಿಯು ೧೩ ಶ್ಲೋಕಗಳಲ್ಲಿ[೭೫] "ದೀರ್ಘವಾಗಿ ಮಂತ್ರಜಪದ ಪ್ರಯೋಜನವನ್ನು ನಿರೂಪಿಸಿ ಹೀಗೆ ಮುಕ್ತಾಯ ಮಾಡುತ್ತದೆ:

ಕಿಮಿಹಬಹುಭಿರುಕ್ತೈರ್ಮಂತ್ರಮೇನಂ ಮಹಾತ್ಮಾ
ಪ್ರಣವ ಸಹಿತಮಾದೌ ಯಸ್ತು ಪಂಚಾಕ್ಷರಾಖ್ಯಮ್।
ಜಪತಿ ಪರಮಭಕ್ತ್ಯಾ ಪೂಜಯನ್ ದೇವದೇವಂ
ಸ ಗತದುರಿತಬಂಧೋ ಮೋಕ್ಷಲಕ್ಷ್ಮೀಂ ಪ್ರಯಾತಿ॥[೭೬]

"(ಮಂತ್ರದ ಫಲವನ್ನು ಕುರಿತು) ಹೆಚ್ಚು ಹೇಳುವುದರಿಂದೇನು? ಯಾವ ಮಹಾತ್ಮನು ದೇವದೇವನಾದ ಪರಶಿವನನ್ನು ಪೂಜಿಸುತ್ತಾ, ಆದಿಯಲ್ಲಿ ಓಂಕಾರ ಸಹಿತವಾದ ಈ ಪಂಚಾಕ್ಷರ ಮಂತ್ರವನ್ನು ಪರಮಭಕ್ತಿಯಿಂದ ಜಪಿಸುವನೋ ಅವನು ಸಂಸಾರಪಾಶದಿಂದ ಮುಕ್ತನಾಗಿ ಮೋಕ್ಷಲಕ್ಷ್ಮಿಯನ್ನು ಪಡೆಯುತ್ತಾನೆ."

ವೀರಶೈವರ ಸಾಧನ ಮಾರ್ಗದ ಗುರಿ ಲಿಂಗಾಂಗ ಸಾಮರಸ್ಯರೂಪ ಮೋಕ್ಷವೇ ಆದ ಕಾರಣ. ಓಂಕಾರ ಯುಕ್ತವಾದ ಪಂಚಾಕ್ಷರಮಂತ್ರ ಜಪದಿಂದ ಜೀವಾತ್ಮನು

---

೭೨. ಸಿ.ಶಿ., ೮.೧೪-೧೫.
೭೩. ಅದೆ, ೮.೧೬.
೭೪. ಅದೇ, ೮.೩೪-೩೫.
೭೫. ಅದೇ, ೮: ೩೬-೪೮
೭೬. ಅದೇ, ೮-೪೯

ಈ ಅಭಿಪ್ರಾಯಗಳನ್ನು ಸಿ.ಶಿ.ಯು ಸೂಕ್ಷ್ಮಾಗಮ, ಕ್ರಿ.ಪಾ. ೪,೫೮-೬೧ರಿಂದ ಯಥಾವತ್ತಾಗಿ ಸ್ವೀಕರಿಸಿದೆ.

ಪರಮಾತ್ಮನೊಂದಿಗೆ ಸಮ್ಮಿಳಿತಗೊಳ್ಳುತ್ತಾನೆ ಎಂದು ಸಿದ್ಧಾಂತ ಶಿಖಾಮಣಿಯು ಉಪದೇಶಿಸಿದೆ.

ಮಂತ್ರ ಸಂಬಂಧಿ ವಿಷಯಗಳನ್ನು ಭಸ್ಮಜಾಬಾಲ್ಯುಪನಿಷತ್, ಸೂಕ್ಷ್ಮಾಗಮ, ಚಂದ್ರಜ್ಞಾನಾಗಮಗಳಿಂದ[೭೭] ಸ್ವೀಕರಿಸಿರುವ ಸಿದ್ಧಾಂತ ಶಿಖಾಮಣಿಯು ವ್ಯವಸ್ಥಿತ ರೀತಿಯಲ್ಲಿ ಅದನ್ನು ಪ್ರಸ್ತುತಪಡಿಸಿದೆ.

೭. ಪಾದೋದಕ: ವೀರಶೈವ ಅಷ್ಟಾವರಣಗಳಲ್ಲಿ ಕೊನೆಯ ಎರಡು ಆವರಣಗಳಾದ ಪಾದೋದಕ-ಪ್ರಸಾದಗಳು ಮೊದಲಿನ ಮೂರು ಆವರಣಗಳಾದ ಗುರು-ಲಿಂಗ-ಜಂಗಮರ ಪೂಜಾಫಲರೂಪ ಆವರಣಗಳು. ಗುರು-ಲಿಂಗ-ಜಂಗಮರ ಪಾದೋದಕ ಮತ್ತು ಪ್ರಸಾದಗಳನ್ನು ಸ್ವೀಕರಿಸುವುದು ವೀರಶೈವನ ಭಕ್ತಿಯ ಕೈಂಕರ್ಯದ ದ್ಯೋತಕ. "ಪಾದಸ್ಯ ಉದಕಮ್ ಪಾದೋದಕಮ್" ಎಂಬ ನಿರ್ವಚನದಂತೆ ಗುರು-ಲಿಂಗ-ಜಂಗಮರ ಪಾದಪೂಜೆಯಿಂದ ದೊರಕುವ ಪವಿತ್ರವಾದ ಉದಕವೇ ಪಾದೋದಕ. ಅಂತಹ ಪಾದೋದಕದ ವಿಷಯದಲ್ಲಿ ತಾರತಮ್ಯ ಮಾಡಬಾರದೆಂದು ಸಿದ್ಧಾಂತ ಶಿಖಾಮಣಿ ಬೋಧಿಸಿದೆ:

> ಪಾದೋದಕಂ ಯಥಾ ಭಕ್ತ್ಯಾ ಸ್ವೀಕರೋತಿ ಮಹೇಶಿತುಃ।
> ತಥಾ ಶಿವಾತ್ಮನೋರ್ನಿತ್ಯಂ ಗುರುಜಂಗಮಯೋರಪಿ॥[೭೮]

ಗುರು-ಲಿಂಗ-ಜಂಗಮರ ಪಾದಪೂಜೆಯಿಂದ ಲಭ್ಯವಾಗುವ ಪವಿತ್ರಜಲವೇ ಪಾದೋದಕ ಎಂಬ ಅರ್ಥವಿದ್ದರೂ, ಸಿದ್ಧಾಂತ ಶಿಖಾಮಣಿ ಪಾದೋದಕದ ಸ್ವರೂಪವನ್ನು ತಾತ್ವಿಕ ದೃಷ್ಟಿಯಿಂದ ನಿರೂಪಿಸಿದೆ:

> ಪರಮಾನಂದ ಏವೋಕ್ತಃ ಪಾದಶಬ್ದೇನ ನಿರ್ಮಲಃ।
> ಜ್ಞಾನಂ ಚೋದಕಶಬ್ದೇನ ಪಾದೋದಕಮಿತಿ ಸ್ಮೃತಮ್॥
> ಅಥವಾ ಪಾದಶಬ್ದೇನ ಗುರುರೇವ ನಿಗದ್ಯತೇ।
> ಶಿಷ್ಯಶ್ಚೋದಕಶಬ್ದೇನ ತಯೋರೈಕ್ಯಂ ತು ದೀಕ್ಷಯಾ॥[೭೯]

"ಪಾದೋದಕದಲ್ಲಿನ 'ಪಾದ' ಎಂಬ ಶಬ್ದವು ಪರಮಾನಂದವನ್ನು, 'ಉದಕ' ಶಬ್ದವು ಜ್ಞಾನವನ್ನು ಹೇಳುತ್ತವೆ. ಇವೆರಡರ ಐಕ್ಯವೇ ಪಾದೋದಕವೆನಿಸುತ್ತದೆ. ಅಥವಾ 'ಪಾದ' ಶಬ್ದವು ಗುರುವನ್ನು 'ಉದಕ' ಶಬ್ದವು ಶಿಷ್ಯನನ್ನೂ ಹೇಳುತ್ತವೆ. ದೀಕ್ಷೆಯ ಮೂಲಕ ಅವರಿಬ್ಬರ ಐಕ್ಯವನ್ನು ಹೇಳುವುದೇ ಪಾದೋದಕ."

---

೭೭. ಭಸ್ಮಜಾಬಾಲೋಪನಿಷತ್, ೨.೪; ಸೂಕ್ಷ್ಮಾಗಮ, ಕ್ರಿ.ಪಾ. ೩-೪ನೇ ಪಟಲಗಳು; ಚಂದ್ರಜ್ಞಾನಾಗಮ, ಕ್ರಿ.ಪಾ. ೮-೯ನೇ ಪಟಲಗಳು.

೭೮. ಸಿದ್ಧಾಂತ ಶಿಖಾಮಣಿ, ೯. ೬೭

ಹೋಲಿಸಿ: ಪಾದತೀರ್ಥಂ ಸದಾ ಪೇಯಂ ಭವಬಂಧಮುಮುಕ್ಷುಭಿಃ।
ಗುರೋರಪೀಷ್ಟಲಿಂಗಸ್ಯ ಚರಸ್ಯಾಪಿ ವಿಶೇಷತಃ॥
-ಚಂದ್ರಜ್ಞಾನಾಗಮ, ಕ್ರಿ.ಪಾ.೫.೫

೭೯. ಸಿದ್ಧಾಂತ ಶಿಖಾಮಣಿ, ೧೯.೭-೮.

ಕ್ರಿಯಾ ಪಾದೋದಕವನ್ನು ಸಿದ್ಧಗೊಳಿಸುವಾಗ ಗುರುವಿನ ಪಾದಕ್ಕೆ ಉದಕವನ್ನು ಸಮರ್ಪಿಸಲಾಗುತ್ತದೆ. ಪಾದಕ್ಕೆ ಉದಕವು ಸಮರ್ಪಿತವಾಗುವಂತೆ ಶಿಷ್ಯನೂ ಸಹ ಗುರುವಿಗೆ ಸಮರ್ಪಿತನಾಗಬೇಕಾಗುತ್ತದೆ. ಪಾದಕ್ಕೆ ಸಮರ್ಪಿತವಾದ ಉದಕವು ಪಾದದ ಮಹತ್ತ್ವವನ್ನು ಪಡೆಯುವಂತೆ ಸರ್ವತೋ ಭಾವೇನ ಗುರುವಿಗೆ ಸಮರ್ಪಿತನಾದ ಶಿಷ್ಯನು ಗುರುವಿನ ಸಮಾನಸ್ಥಿತಿಯನ್ನು ತಲುಪುತ್ತಾನೆ. ಆದ್ದರಿಂದ ಇಲ್ಲಿ ಪಾದಕ್ಕೆ ಗುರುವನ್ನು ಹಾಗೂ ಉದಕಕ್ಕೆ ಶಿಷ್ಯನನ್ನು ಹೋಲಿಸಲಾಗಿದೆ. ತನಗೆ ಶರಣಾಗತನಾದ ಶಿಷ್ಯನಿಗೆ ಸದ್ಗುರುವು ದೀಕ್ಷೆಯನ್ನು ಅನುಗ್ರಹಿಸಿ ಅವನಲ್ಲಿಯ ಮಲ, ಮಾಯಾ ಮತ್ತು ಆವರಣವನ್ನು ದೂರಮಾಡಿ ಅವನನ್ನು ತನ್ನಂತೆಯೇ ಮಾಡಿಕೊಳ್ಳುತ್ತಾನೆ. ಹೀಗೆ ಚಿನ್ಮಯ ದೀಕ್ಷೆಯ ಮುಖಾಂತರ ಗುರು-ಶಿಷ್ಯರ ಅಭೇದವನ್ನು ಬೋಧಿಸುವುದೆ ಪಾದೋದಕ.[೮೦]

ಸಿದ್ಧಾಂತ ಶಿಖಾಮಣಿಯು ದೀಕ್ಷಾ ಪಾದೋದಕ, ಶಿಕ್ಷಾ ಪಾದೋದಕ ಮತ್ತು ಜ್ಞಾನಪಾದೋದಕ[೮೧] ಎಂದು ತ್ರಿವಿಧ ಪಾದೋದಕಗಳನ್ನು ಶೈವಾಗಮಗಳ ಆಧಾರದಿಂದ ನಿರೂಪಿಸಿದ್ದು, ಅವುಗಳ ಸ್ವರೂಪಗಳನ್ನು ತಾತ್ತ್ವಿಕವಾಗಿ[೮೨] ವಿವರಿಸಿದೆ. ಹೀಗೆ ತ್ರಿವಿಧ ಪಾದೋದಕಗಳ ವಿಷಯದಲ್ಲಿ ಸಿದ್ಧಾಂತ ಶಿಖಾಮಣಿಯು ಶೈವಾಗಮಗಳಿಗಿಂತ ಒಂದು ಹೆಜ್ಜೆ ಮುಂದಿಟ್ಟಿದೆ ಎಂದು ಹೇಳಬಹುದು.

೮. ಪ್ರಸಾದ: ವೀರಶೈವ ಅಷ್ಟಾವರಣಗಳಲ್ಲಿ ಪ್ರಸಾದ ಕೊನೆಯ ಆವರಣ. "ಗುರುಲಿಂಗಜಂಗಮಾನಾಂ ಭುಕ್ತಶೇಷಃ ಪ್ರಸಾದಕಃ"[೮೩] ಎಂಬುದು ಶೈವಾಗಮಗಳಲ್ಲಿನ ಪ್ರಸಾದದ ಸ್ವರೂಪವಾದರೆ-

ನೈರ್ಮಲ್ಯಂ ಮನಸೋ ಲಿಂಗಂ ಪ್ರಸಾದ ಇತಿ ಕಥ್ಯತೇ।
ಶಿವಸ್ಯ ಲಿಂಗರೂಪಸ್ಯ ಪ್ರಸಾದಾದೇವ ಸಿಧ್ಯತಿ॥[೮೪]

(ಮನಸ್ಸಿನ ಪ್ರಸನ್ನತೆಯೇ ಪ್ರಸಾದ. ಅದು ಲಿಂಗರೂಪಿ ಶಿವಪ್ರಸಾದದಿಂದ ಸಿದ್ಧಿಸುತ್ತದೆ-) ಎಂಬುದು ಸಿದ್ಧಾಂತ ಶಿಖಾಮಣಿಯ ಪ್ರಸಾದ ಸ್ವರೂಪ. ಗುರು-ಲಿಂಗ-ಜಂಗಮರ ಪ್ರಸಾದದ ವಿಷಯದಲ್ಲಿ ತಾರತಮ್ಯ ಮಾಡಬಾರದೆಂಬುದು ಸಿದ್ಧಾಂತ ಶಿಖಾಮಣಿಯ ಬೋಧನೆ:

ಶಿವಲಿಂಗಪ್ರಸಾದಸ್ಯ ಸ್ವೀಕಾರಾದ್ಯತ್ಫಲಂ ಭವೇತ್।
ತಥಾ ಪ್ರಸಾದಸ್ವೀಕಾರಾದ್ಗುರುಜಂಗಮಯೋರಪಿ॥[೮೫]

---

೮೦. ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಸಿದ್ಧಾಂತ ಶಿಖಾಮಣಿ ಪ್ರವಚನ ಪ್ರಭೆ, ಸಂ.೨, ಪು. ೪೭೮-೪೮೩.

೮೧. ಸಿದ್ಧಾಂತ ಶಿಖಾಮಣಿ, ೧೯.೪
ಹೋಲಿಸಿ: ಪಾದತೀರ್ಥಂ ತ್ರಿಧಾ ಶಂಭೋರ್ಗುರುಜಂಗಮಯೋರಪಿ।
ದೀಕ್ಷಾ ಶಿಕ್ಷಾ ಜ್ಞಾನಮಿತಿ ತ್ರಿಸಂಜ್ಞಂ ತದ್ಭವತ್ಯಹೋ॥
-ಚಂದ್ರಜ್ಞಾನಾಗಮ, ಕ್ರಿ.ಪಾ. ೫.೫.

೮೨. ಸಿದ್ಧಾಂತ ಶಿಖಾಮಣಿ, ೧೯,೬,೧೨, ೧೯.

೮೩. ಚಂದ್ರಜ್ಞಾನಾಗಮ, ಕ್ರಿ.ಪಾ. ೫.೨೦

೮೪. ಸಿದ್ಧಾಂತ ಶಿಖಾಮಣಿ, ೧೧.೬

೮೫. ಅದೇ, ೯.೭೭

ಯಥಾ ಶಿವಪ್ರಸಾದಾನ್ನಂ ಸ್ವೀಕಾರ್ಯಂ ಲಿಂಗತತ್ಪರೈಃ।
ತಥಾ ಗುರೋಃ ಪ್ರಸಾದಾನ್ನಂ ತಥೈವ ಶಿವಯೋಗಿನಾಮ್॥[೬೬]

"ಇಷ್ಟಲಿಂಗಕ್ಕೆ ನೈವೇದ್ಯ ಮಾಡಿದ ವಸ್ತುವನ್ನು ಹೇಗೆ ಭಕ್ತಿಯಿಂದ ಸ್ವೀಕರಿಸಲಾಗುವುದೋ ಹಾಗೆಯೇ ಗುರು-ಜಂಗಮರ ಪ್ರಸಾದವನ್ನು ಸ್ವೀಕರಿಸಬೇಕು. ಶಿವಲಿಂಗ ಪ್ರಸಾದವನ್ನು ಸ್ವೀಕರಿಸುವುದರಿಂದ ಯಾವ ಫಲವು ದೊರೆಯುತ್ತದೆಯೋ ಅದೇ ಫಲವು ಗುರು-ಜಂಗಮರ ಪ್ರಸಾದ ಸ್ವೀಕಾರದಿಂದಲೂ ದೊರೆಯುತ್ತದೆ."

ಪತ್ರ, ಪುಷ್ಪ, ಫಲ, ಜಲ ಹೀಗೆ ಎಲ್ಲ ಭೋಜ್ಯ ವಸ್ತುಗಳನ್ನು ಶಿವನಿಗರ್ಪಿಸಿ ಭೋಜನಾದಿಗಳನ್ನು ಮಾಡಬೇಕೆಂದು ಹೇಳುವಾಗ ಸಿದ್ಧಾಂತ ಶಿಖಾಮಣಿಯು ಜಾಬಾಲಿಕೀ ಶ್ರುತಿಯ ಉಲ್ಲೇಖ ಮಾಡಿದೆ:

ಭುಂಜೀಯಾದ್ ರುದ್ರಭುಕ್ತಾನ್ನಂ ರುದ್ರಪೀತಂ ಜಲಂ ಪಿಬೇತ್।
ರುದ್ರಾಘ್ರಾತಂ ಸದಾ ಜಿಘ್ರೇದಿತಿ ಜಾಬಾಲಿಕೀ ಶ್ರುತಿಃ॥[೬೬(ಎ)]

ಅಷ್ಟಾವರಣಗಳಲ್ಲಿ ಮೊದಲ ಮೂರು ಆವರಣಗಳಾದ ಗುರು-ಲಿಂಗ-ಜಂಗಮಗಳು ಪೂಜಾರ್ಹವಾದ ಆವರಣಗಳಾದರೆ, ಭಸ್ಮ-ರುದ್ರಾಕ್ಷ-ಮಂತ್ರಗಳು ಪೂಜಾ ಸಾಮಗ್ರಿಗಳು. ಪಾದೋದಕ-ಪ್ರಸಾದಗಳು ಪೂಜಾಫಲರೂಪ ಆವರಣಗಳು.

ಈ ರೀತಿಯಾಗಿ ವೀರಶೈವದ ವಿಶಿಷ್ಟ ಕಟ್ಟಳೆಗಳಾದ ಅಷ್ಟಾವರಣಗಳನ್ನು ಸಿದ್ಧಾಂತ ಶಿಖಾಮಣಿಯು ವೇದ, ಉಪನಿಷತ್ತು, ಶೈವಾಗಮ, ಪುರಾಣಗಳಿಂದ ಪ್ರಭಾವಿತವಾಗಿ ತಾತ್ವಿಕ ನೆಲೆಯಲ್ಲಿ ನಿರೂಪಿಸಿದೆ. ಇವುಗಳ ಆಚರಣೆಯಿಂದ ವೀರಶೈವ ಸಾಧಕನ ವೈಯಕ್ತಿಕ ಹಾಗೂ ಸಾಮಾಜಿಕ ಸದಾಚಾರಗಳ ರಕ್ಷಣೆಯಾಗುತ್ತದೆ. ಇವುಗಳ ಕಟ್ಟುನಿಟ್ಟಿನ ಆಚರಣೆಯಿಂದ ಷಟ್‌ಸ್ಥಲ ಸೋಪಾನವನ್ನು ಕ್ರಮಿಸಲು ಬಯಸುವ ವೀರಶೈವ ಸಾಧಕನ ಮಾನಸಿಕ ದೃಢತೆಯುಂಟಾಗುತ್ತದೆ. ಹಾಗೂ ಈ ಎಂಟು ಸಾಧಕನನ್ನು ರಕ್ಷಾಕವಚದೋಪಾದಿಯಲ್ಲಿ ಕಾಮಕ್ರೋಧಾದಿ ಅರಿಷಡ್ವೈರಿಗಳಿಂದ ರಕ್ಷಿಸುವ ಕಾರಣ ಇವುಗಳನ್ನು ಅಷ್ಟಾವರಣಗಳೆಂದು ಕರೆಯಲಾಗಿದೆ.

ಅಷ್ಟಾವರಣಗಳ ಪ್ರಸ್ತುತತೆ ಇಂದಿಗೂ ಪ್ರಚಲಿತವಿರುವುದು ಸರ್ವವಿದಿತ. ಅಷ್ಟಾವರಣಗಳ ಸ್ವರೂಪವನ್ನು ಸರಿಯಾಗಿ ತಿಳಿದುಕೊಂಡು ಆಚರಣೆಯಲ್ಲಿ ತರಬೇಕಾಗುತ್ತದೆ. ಅವುಗಳ ವಿವೇಚನೆಯು ಶೈವಾಗಮೋತ್ತರ ಭಾಗಗಳಲ್ಲಿ ವಿಶೇಷವಾಗಿ ಚಂದ್ರಜ್ಞಾನಾಗಮದಲ್ಲಿ ಕಂಡುಬಂದರೂ ಸಹ ಕಾಲಾಂತರದಲ್ಲಿ ಆದ ಮಾರ್ಪಾಟುಗಳನ್ನು ಒಳಗೊಂಡು ಅನುಭವದಿಂದ ಪರಿಷ್ಕೃತವಾದ ಅಷ್ಟಾವರಣಗಳ ಸ್ವರೂಪ ಸಿದ್ಧಾಂತ ಶಿಖಾಮಣಿಯಲ್ಲಿ ಸಪ್ರಮಾಣವಾಗಿ ನಿರೂಪಿತವಾಗಿದೆ. ಇದರಿಂದ ಸಿದ್ಧಾಂತ ಶಿಖಾಮಣಿಯ ಪ್ರಸ್ತುತತೆ ಎಷ್ಟೆಂಬುದು ಸ್ಪಷ್ಟವಾಗುತ್ತದೆ.

ದೀಕ್ಷೆಯನ್ನು ಅನುಗ್ರಹ ಮಾಡುವವನು ಗುರು. ತ್ರಿವಿಧ ದೀಕ್ಷೆಗಳನ್ನು ಕೊಡುವುದರ ಮೂಲಕ ಭಕ್ತರನ್ನು ಅಷ್ಟಾವರಣ ಸಂಪನ್ನರಾಗುವಂತೆ ಮಾಡುವ ಕೆಲಸ ಗುರುವಿನದು.

---

೬೬. ಅದೇ, ೧೧.೧೮

೬೬(ಎ). ಸಿದ್ಧಾಂತ ಶಿಖಾಮಣಿ, ೯.೭೦

ಗುರುವು ತನ್ನ ಅನುಭಾವ ಶಕ್ತಿಯಿಂದ ಸ್ಥಾಪಿಸಿದ ಭಾವಲಿಂಗ, ಪ್ರಾಣಲಿಂಗಗಳ ಅನುಷ್ಠಾನದ ಮೂಲಕ ಇಷ್ಟಲಿಂಗವನ್ನು ಪೂಜಿಸಬೇಕು. ಇಷ್ಟಲಿಂಗದ ಪೂಜೆಯ ಕಾರಣ ಭಕ್ತರಿಗೆ ಅವರ ಇಷ್ಟಾರ್ಥ ಅರ್ಥಾತ್ ಮೋಕ್ಷರೂಪ ಇಷ್ಟಾರ್ಥ ಸಿದ್ಧಿಸುವ ಕಾರಣ ಅದನ್ನು ಇಷ್ಟಲಿಂಗವೆಂದು ಕರೆಯಲಾಗಿದೆ.

ಗುರು ವೀರಶೈವದ ಆಚಾರ-ವಿಚಾರಗಳ ವಿಷಯದಲ್ಲಿ ಭಕ್ತರಿಗೆ ಮಾರ್ಗದರ್ಶನ ಮಾಡಿದರೂ, ಆತನ ಜವಾಬ್ದಾರಿಗಳು ಹೆಚ್ಚಾಗಿರುವುದರಿಂದ ಜ್ಞಾನಸಂಪನ್ನನಾದ ಜಂಗಮ ಭೂಮಂಡಲದಲ್ಲಿ ಸಂಚರಿಸುತ್ತಾ ಶಿಷ್ಯರ-ಆಚಾರಗಳಲ್ಲಿನ ಓರೆಕೋರೆಗಳನ್ನು ತಿದ್ದುತ್ತಾ ಭಕ್ತರು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುತ್ತಾನೆ. ಈ ಕಾರಣದಿಂದಲೇ ಗುರು-ಲಿಂಗ-ಜಂಗಮ ಎಂಬ ಮೂರು ಆವರಣಗಳಿಗೆ ಪೂಜ್ಯತೆ ಬಂದಿದ್ದು, ಅವುಗಳನ್ನು ಪೂಜ್ಯ ಆವರಣಗಳೆಂದು ಕರೆಯಲಾಗಿದೆ.

ಶೈವರ ವಿಶಿಷ್ಟ ಲಕ್ಷಣಾನುಸಾರವಾಗಿ ಶಿವನಾಗಿ ಶಿವನನ್ನು ಪೂಜಿಸಬೇಕೆಂಬ ಕಾರಣ ಶೈವಲಕ್ಷಣಗಳನ್ನು ವೀರಶೈವನು ಹೊಂದಬೇಕಾಗುತ್ತದೆ. ಶೈವಲಕ್ಷಣಗಳು ಮೂರು. ಅವುಗಳಲ್ಲಿ ಎರಡು ಬಾಹ್ಯ ಲಕ್ಷಣಗಳು ಮತ್ತು ಒಂದು ಅಂತರಂಗದ್ದು, ಅವುಗಳೆಂದರೆ-ಭಸ್ಮ-ರುದ್ರಾಕ್ಷ-ಮಂತ್ರಗಳು. ಭಸ್ಮ-ರುದ್ರಾಕ್ಷಧಾರಣೆಗಳು ಬಾಹ್ಯವಾಗಿ ಧರಿಸುವಂತಹವುಗಳು. ಅವುಗಳ ಧಾರಣೆ ಮಾಡುವುದರಿಂದ ಭಕ್ತರು ಶಿವಸ್ವರೂಪಿಗಳೇ ಆಗುತ್ತಾರೆ. ಶಿವಭಕ್ತರಾದ ವೀರಶೈವರು ಶರೀರಕ್ಕೆ ಶಿವಲಾಂಛನರೂಪವಾದ ಭಸ್ಮಧಾರಣೆ ಮಾಡುವುದರ ಜೊತೆಗೆ ಕನಿಷ್ಠ ಒಂದಾದರೂ ರುದ್ರಾಕ್ಷವನ್ನು ಮೈಮೇಲೆ ಅವಶ್ಯವಾಗಿ ಧರಿಸಬೇಕು. ಹಸುವಿನ ಗೋಮಯದಿಂದ ಭಸ್ಮವನ್ನು ತಯಾರಿಸಲಾಗುತ್ತದೆ. ಹಸುವಿನ ಗೋಮಯದಲ್ಲಿ ಔಷಧಗಳಿರುವಂತೆ, ರುದ್ರಾಕ್ಷದಲ್ಲಿಯೂ ಔಷಧಸಂಬಂಧಿ ಗುಣಗಳಿವೆ ಎಂದು ಆಯುರ್ವೇದ ಸಿದ್ಧಾಂತದಲ್ಲಿ ನಿರೂಪಿತವಾಗಿದೆ. ಆ ಕಾರಣ ಭಸ್ಮ-ರುದ್ರಾಕ್ಷಧಾರಣೆಯಿಂದ ಚರ್ಮ ಸಂಬಂಧಿ ರೋಗಗಳು ನಿವಾರಣೆಯಾಗುತ್ತವೆ.

ಶಿವಧ್ಯಾನ-ಜಪಗಳಿಗೆ ಮಂತ್ರ ಅವಶ್ಯವಾಗಿ ಬೇಕು. ಮಂತ್ರದ ಮೂಲಕ ಅನುಸಂಧಾನ ಮಾಡುವ ಕಾರಣದಿಂದ ಪರಮಾತ್ಮನು ಮಂತ್ರರೂಪಿಯೇ ಆಗಿರುತ್ತಾನೆ. ಪಂಚಬ್ರಹ್ಮಮಂತ್ರದ ಎಲ್ಲ ರಹಸ್ಯವು ಪಂಚಾಕ್ಷರೀ ಮಂತ್ರದಲ್ಲಿ ಅಡಕವಾಗಿದೆ. ಆದ್ದರಿಂದ ಪ್ರಣವ ಸಹಿತ ಪಂಚಾಕ್ಷರೀ ಮಂತ್ರದ ಮೂಲಕ ಶಿವನನ್ನು ಜಪಿಸಬೇಕು. ಪೂರ್ವೋಕ್ತ ತ್ರಿವಿಧ ಜಪಗಳಲ್ಲಿ ಮಾನಸಜಪ ಶ್ರೇಷ್ಠವೆಂದು ಸಿದ್ಧಾಂತ ಶಿಖಾಮಣಿಯ ಉಕ್ತಿಯಿಂದ ಸ್ಪಷ್ಟ ಪಡಿಸಲಾಗಿದೆ. ಮಾನಸಜಪದಿಂದ ಮನಸ್ಸಿನ ಏಕಾಗ್ರತೆ ಉಂಟಾಗುತ್ತದೆ. ಮನಸ್ಸಿನ ಏಕಾಗ್ರತೆಯನ್ನು ಸಾಧಿಸಲಾಗದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ, ಆದ್ದರಿಂದ ಅದು ಶ್ರೇಷ್ಠವಾದ ಜಪ.

ಮಾನಸ ಜಪವನ್ನು ಸಾಧನೆ ಮಾಡುವ ಕಾರಣವೇನೆಂದರೆ ಅಂತರಂಗ ಪೂಜೆಯ ಸಂದರ್ಭದಲ್ಲಿ ಪ್ರಾಣವಾಯುಸ್ಥಂಭನ ಮಾಡುವಾಗ ವರ್ಣಗಳನ್ನು ಉಚ್ಚರಿಸಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಮಾನಸಜಪ ಅನಿವಾರ್ಯವಾಗುತ್ತದೆ.

ಗುರು-ಲಿಂಗ-ಜಂಗಮರ ವಿಷಯದಲ್ಲಿ ಕೈಂಕರ್ಯ ಭಾವನೆಯು ಪ್ರತಿಯೊಬ್ಬ ವೀರಶೈವನಿಗೂ ಆವಶ್ಯಕ. ಗುರು-ಲಿಂಗ-ಜಂಗಮರಲ್ಲಿನ ಕಿಂಕರದ ಮೂಲಕ ಲಿಂಗಕೈಂಕರ್ಯ ಅಳವಡುತ್ತದೆ. ಅವೆರಡರ ಕೈಂಕರ್ಯದಿಂದ ಲಿಂಗಕೈಂಕರ್ಯ ಬೆಳೆಯುತ್ತದೆ.

ಈ ಕೈಂಕರ್ಯದ ದ್ಯೋತಕವಾಗಿ, ಮನಸ್ಸಿನ ನಿರ್ಮಲತೆ ಪಡೆಯುವ ಸಲುವಾಗಿ ಪಾದೋದಕ-ಪ್ರಸಾದಗಳು ನಿರೂಪಿತವಾಗಿವೆ. ಇವುಗಳ ಸ್ವೀಕಾರದಿಂದ ಗುರು-ಲಿಂಗ-ಜಂಗಮರಲ್ಲಿ ಪೂಜ್ಯಭಾವನೆ, ಕೈಂಕರ್ಯ, ಮನಸ್ಸಿನ ನೈರ್ಮಲ್ಯತೆ ಸಾಧ್ಯವಾಗುತ್ತದೆ.

ಪಂಚಾಚಾರಗಳು: ವೀರಶೈವ ಸಿದ್ಧಾಂತದ ತತ್ತ್ವತ್ರಯಗಳಲ್ಲಿ ಅಂಗವೆಂದು ಪರಿಗಣಿತವಾಗಿರುವ ಅಷ್ಟಾವರಣಗಳು ವೀರಶೈವರ ಜೀವನದಲ್ಲಿ ಅವಿಭಾಜ್ಯವಾಗಿವೆ. ಅಷ್ಟಾವರಣಗಳು ವೀರಶೈವನ ಬಾಹ್ಯ ಶರೀರವನ್ನು ಮಾಗಿಸುವ ಸಂಕೇತಗಳಾದರೆ, ಪಂಚಪ್ರಾಣಗಳೆಂದೇ ಪರಿಗಣಿತವಾಗಿರುವ ಪಂಚಾಚಾರಗಳು ಅಂತರಂಗವನ್ನು ಪಕ್ವಗೊಳಿಸುವ ಸಾಧನಗಳಾಗಿವೆ. ಷಟ್‌ಸ್ಥಲಗಳನ್ನಂತೂ ಆತ್ಮಗಳೆಂದು ಕರೆಯಲಾಗಿದೆ. ಈ ತತ್ತ್ವತ್ರಯಗಳನ್ನು ವೀರಶೈವ ಸಿದ್ಧಾಂತದಲ್ಲಿ ಸರ್ವಾಚಾರ ಸಂಪತ್ತೆಂದು ಕರೆಯಲಾಗಿದ್ದು ಪಂಚಾಚಾರಗಳನ್ನು ನೈತಿಕ ವಿಭಾಗಕ್ಕೆ ಸೇರಿಸಲಾಗಿದೆ. ಇದರಿಂದ ವ್ಯಕ್ತಿ ಹಾಗೂ ಸಮಾಜದ ಸುಮಧುರ ಬಾಂಧವ್ಯ ಸಾಧ್ಯವಾಗುತ್ತದೆ. ವೀರಶೈವನೂ ಸಹ ಸಮಾಜದ ಅವಿಭಾಜ್ಯ ಅಂಗವಾಗಿರುವುದರಿಂದ ವೈಯಕ್ತಿಕ ಹಾಗೂ ಸಾಮಾಜಿಕ ಜೀವನದಲ್ಲಿ ಅವನು ಹೇಗೆ ನಡೆದರೆ ಪರಧರ್ಮ ಸಹಿಷ್ಣುತೆಯ ಜೊತೆಗೆ ಸ್ವಧರ್ಮ ನಿಷ್ಠೆಯಿಂದ ಕೂಡಿಕೊಂಡು ಲಿಂಗಾಂಗ ಸಾಮರಸ್ಯ ರೂಪದ ಮುಕ್ತಿಯನ್ನು ಪಡೆಯಲು ಸಮರ್ಥನಾಗುತ್ತಾನೆಂಬುದು ಪಂಚಾಚಾರಗಳಿಂದ ವ್ಯಕ್ತವಾಗುತ್ತದೆ.

ಶಿವದೀಕ್ಷೆಯಿಂದ ಇಷ್ಟಲಿಂಗಧಾರಿಯಾದ ವೀರಶೈವನು ಅಷ್ಟಾವರಣ ಸಂಪನ್ನನೂ, ಪಂಚಾಚಾರ ಪರಾಯಣನೂ ಆಗುತ್ತಾನೆ. ಅವುಗಳಲ್ಲಿ ಶ್ರದ್ಧೆಯನ್ನು ಬೆಳೆಸುವ ಕಾರ್ಯವನ್ನು ಗುರೂಪದೇಶ ಮಾಡುತ್ತದೆ.

ಪಂಚಾಚಾರಗಳ ವಿಷಯವು ಶೈವಾಗಮೋತ್ತರ ಭಾಗಗಳಲ್ಲಿ ವಿಶೇಷವಾಗಿ ಚಂದ್ರಜ್ಞಾನಾಗಮದಲ್ಲಿ[೮೭] ವ್ಯವಸ್ಥಿತ ರೀತಿಯಲ್ಲಿ ನಿರೂಪಿತವಾಗಿದೆ. ಏಕೋತ್ತರ ಶತಸ್ಥಲ ನಿರೂಪಣೆಯನ್ನು ಮಾಡುವ ಸಿದ್ಧಾಂತ ಶಿಖಾಮಣಿ ಸ್ವತಂತ್ರವಾಗಿ ಪಂಚಾಚಾರಗಳ ನಿರೂಪಣೆಯನ್ನು ಎಲ್ಲಿಯೂ ಮಾಡಿರುವುದಿಲ್ಲ. ಅಲ್ಲದೆ ಪಂಚಾಚಾರ ಎಂಬ ಪದ ಪ್ರಯೋಗವೂ ಕಂಡುಬರುವುದಿಲ್ಲ. ಈ ಪದಪ್ರಯೋಗ ಶೈವಾಗಮಗಳಲ್ಲಿ ಮೊದಲಿಗೆ ಕಂಡುಬರುತ್ತದೆ. ಆದರೂ ಸಂದರ್ಭವಶಾತ್ ಸ್ಥಲ ನಿರೂಪಣಾವಸರದಲ್ಲಿ ಆಚಾರಮೀಮಾಂಸೆಯು ಸಿದ್ಧಾಂತ ಶಿಖಾಮಣಿಯಲ್ಲಿ ಬರುತ್ತದೆ. ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರ-ಇವೇ ಪಂಚಾಚಾರಗಳು.

೧. ಲಿಂಗಾಚಾರ: ಗುರುವು ದೀಕ್ಷಾ ಕಾಲದಲ್ಲಿ ಅನುಗ್ರಹಿಸಿದ ಇಷ್ಟಲಿಂಗವನ್ನು ಹೊರತು ಪಡಿಸಿ ಭೂಮಿಯ ಮೇಲೆ ಬೇರೊಂದು ದೈವವಿಲ್ಲವೆಂಬ ಭಾವನೆಯೇ ಲಿಂಗಾಚಾರ[೮೮] ಎಂಬ ಶೈವಾಗಮದ ಲಿಂಗಾಚಾರದ ಸ್ವರೂಪದ ಆಧಾರದ ಮೇಲೆ ಸಿದ್ಧಾಂತ ಶಿಖಾಮಣಿಯು ಭಕ್ತಮಾರ್ಗಕ್ರಿಯಾಸ್ಥಲದಲ್ಲಿ ಲಿಂಗಾಚಾರದ ಸ್ವರೂಪವನ್ನು ನಿರೂಪಿಸಿದೆ.[೮೯] ಗುರು-ಲಿಂಗ-ಜಂಗಮರಲ್ಲಿ ನಿಷ್ಠೆಯನ್ನು ಬೆಳೆಸಲು ಏನೇನು ಬೇಕೋ

---

೮೭. ಚಂದ್ರಜ್ಞಾನಾಗಮ, ಕ್ರಿ.ಪಾ. ೯.೪

೮೮. ಅದೇ, ಕ್ರಿ.ಪಾ. ೯.೫

೮೯. ಸಿ.ಶಿ. ೯.೩೧-೩೩

ಅದೆಲ್ಲವನ್ನೂ ಅಳವಡಿಸಿಕೊಳ್ಳುವುದೇ ಲಿಂಗಾಚಾರ. ಅದಕ್ಕೆ ವಿರುದ್ಧವಾದ ಪದ್ಧತಿಯನ್ನು ತಪ್ಪಿಸಿ ಆಚರಿಸದಂತೆ ವೀರಶೈವನಾದವನು ಎಚ್ಚರವಹಿಸಬೇಕಾಗುತ್ತದೆ.

೨. ಸದಾಚಾರ: "ಲಿಂಗಧಾರೀ ಸದಾ ಶುದ್ಧಃ"[೯೦] ಎಂಬ ಸಿದ್ಧಾಂತ ಶಿಖಾಮಣಿಯ ಉಕ್ತಿಯ ಸಾರ್ಥಕತೆಯೇ ಸದಾಚಾರ. ಸದಾಚಾರವು ಪ್ರತಿಯೊಬ್ಬರಿಗೂ ಅಲಂಕಾರ ಪ್ರಾಯವಾಗಿದ್ದು, ಆಚಾರಹೀನವಾದ ಪುರುಷನು ಲೋಕದಲ್ಲಿ ನಿಂದಿತನಾಗುತ್ತಾನೆ. ಆಚಾರಯುಕ್ತವಾದ ಜ್ಞಾನದಿಂದ ಶಿವನು ಪ್ರಸನ್ನನಾಗುತ್ತಾನೆಂದು ಸಿದ್ಧಾಂತ ಶಿಖಾಮಣಿ ಸದಾಚಾರದ ಸ್ವರೂಪವನ್ನು ಹೇಳಿದೆ:

ಆಚಾರ ಏವ ಸರ್ವೇಷಾಂ ಅಲಂಕಾರಾಯ ಕಲ್ಪತೇ।
ಆಚಾರಹೀನಃ ಪುರುಷಃ ಲೋಕೇ ಭವತಿ ನಿಂದಿತಃ॥
ಸದಾಚಾರಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ।
ಸದಾಚಾರಂ ವಿನಾ ತಸ್ಯ ಪ್ರಸಾದೋ ನೈವ ಜಾಯತೇ॥[೯೧]

೩. ಶಿವಾಚಾರ: ಪಂಚಕೃತ್ಯ ಪರಾಯಣನೂ, ಪರಬ್ರಹ್ಮ ಸ್ವರೂಪಿಯೂ ಆದ ಶಿವನೇ ಭಕ್ತರ ರಕ್ಷಕ, ಮತ್ತಾರೂ ಇಲ್ಲ ಎಂಬುದೇ ಶಿವಾಚಾರವೆನಿಸುತ್ತದೆ.[೯೨] ಆದ್ದರಿಂದ ಸಿದ್ಧಾಂತ ಶಿಖಾಮಣಿಯು

ಶಿವಭಕ್ತೋ ಮಹಾತೇಜಾಃ ಶಿವಭಕ್ತಿಪರಾಙ್ಮುಖಾನ್।
ನ ಸ್ಪೃಶೇನ್ನೈವ ವೀಕ್ಷೇತ ನ ತೈಃ ಸಹ ವಸೇತ್ ಕ್ವಚಿತ್॥[೯೩]

"ಮಹಾತೇಜಸ್ವಿಗಳಾದ ಶಿವಭಕ್ತರು ಶಿವಭಕ್ತಿ ವಿಮುಖರಾದವರೊಂದಿಗೆ ಯಾವುದೇ ರೀತಿಯಾಗಿ ಸಂಪರ್ಕ ಹೊಂದಿರಬಾರದು." ಅಂತಹ ಜನಗಳ ಸಂಪರ್ಕದಿಂದ ನಮ್ಮ ಶ್ರದ್ಧೆ-ಭಾವನೆಗಳಿಗೆ ಭಂಗ ಬರುವುದರಿಂದ ಸಿದ್ಧಾಂತ ಶಿಖಾಮಣಿಯು ಸದಾಚಾರದ ಸ್ವರೂಪವನ್ನು ಪೂರ್ವೋಕ್ತ ರೀತಿಯಲ್ಲಿ ನಿರೂಪಿಸಿದೆ.

೪. ಗಣಾಚಾರ: ಶಿವನಿಂದೆ, ಶಿವಭಕ್ತರನಿಂದೆ, ಶಿವಧರ್ಮದ ನಿಂದನೆಯನ್ನು ಶ್ರವಣ ಮಾಡದಿರುವುದೇ ಗಣಾಚಾರವೆನಿಸುತ್ತದೆ.[೯೪]

ಆದ್ದರಿಂದಲೇ ಸಿದ್ಧಾಂತ ಶಿಖಾಮಣಿಯೂ ಕೂಡ-

ಯತ್ರ ಸ್ಥಾವರಲಿಂಗಾನಾಮಪಾಯಃ ಪರಿವರ್ತತೇ।
ಅಥವಾ ಶಿವಭಕ್ತಾನಾಂ ಶಿವಲಾಂಛನಧಾರಿಣಾಮ್॥

---

೯೦. ಅದೇ, ೬.೫೩

೯೧. ಅದೇ, ೧೬.೧೩, ೬೬

೯೨. ಶಿವ ಏವ ಪರಂ ಬ್ರಹ್ಮ ಪಂಚಕೃತ್ಯಪರಾಯಣಮ್।
ನ ತತೋಽನ್ಯಾ ಗತಿರಿತಿ ಶಿವಾಚಾರೋ ಹಿ ಕೀರ್ತಿತಃ।
-ಚಂ.ಜ್ಞಾ.ಆ, ಕ್ರಿ.ಪಾ.೯.೭

೯೩. ಸಿ.ಶಿ. ೯.೨೭

೯೪. ಚಂ.ಜ್ಞಾ.ಆ, ಕ್ರಿ.ಪಾ. ೯.೮

ತತ್ರ ಪ್ರಾಣಾನ್ ವಿಹಾಯಾಪಿ ಪರಿಹಾರಾನ್ ಸಮಾಚರೇತ್।
ಶಿವಾರ್ಥಂ ಮುಕ್ತಜೀವಶ್ಚೇಚ್ಛಿವಸಾಯುಜ್ಯಮಾಪ್ನುಯಾತ್।
ಯತ್ರ ಚಾಚಾರನಿಂದಾಽಸ್ತಿ ಕದಾಚಿತ್ತತ್ರ ನ ವ್ರಜೇತ್।
ಯದ್‌ಗೃಹೇ ಶಿವನಿಂದಾಸ್ತಿ ತದ್‌ಗೃಹಂ ಸಂಪರಿತ್ಯಜೇತ್॥
ಶಿವನಿಂದಾಕರಂ ದೃಷ್ಟ್ವಾ ಘಾತಮೇದಥವಾ ಶಪೇತ್।
ಸ್ಥಾನಂ ವಾ ತತ್ ಪರಿತ್ಯಜ್ಯ ಗಚ್ಛೇದ್ ಯದ್ಯಕ್ಷಮೋ ಭವೇತ್॥[೯೫]

ಎಂಬಲ್ಲಿ ಸ್ಥಾವರಲಿಂಗಗಳಿಗೆ, ಶಿವಲಾಂಛನಧಾರಿಗಳಾದ ಶಿವಭಕ್ತರಿಗೆ ಅ ಎಲ್ಲಿ ಅಪಾಯವು ಸಂಭವಿಸುತ್ತದೆಯೋ ಅಲ್ಲಿ ಪ್ರಾಣಾರ್ಪಣೆಯಿಂದಲಾದರೂ ಅಪಾಯವನ್ನು ತಪ್ಪಿಸಬೇಕು. ಎಲ್ಲಿ ಶಿವಧರ್ಮಾಚಾರಗಳ ನಿಂದೆ ಹಾಗೂ ಶಿವನಿಂದೆಯು ಕಂಡು ಬರುತ್ತದೋ ಅಂತಹ ಮನೆಯನ್ನು ಬಿಡಬೇಕು. ಶಿವನಿಂದಕರನ್ನು ಕಂಡರೆ ಹೊಡೆಯಬೇಕು ಅಥವಾ ಶಪಿಸಬೇಕು. ಒಂದು ವೇಳೆ ಆ ರೀತಿಯಾಗಿ ಮಾಡಲು ಅಸಮರ್ಥನಾದರೆ ಆ ಸ್ಥಾನವನ್ನು ಬಿಟ್ಟು ಹೋಗಬೇಕೆಂದು ಗಣಾಚಾರವನ್ನು ಪ್ರತಿಪಾದಿಸಲಾಗಿದೆ.

೫. ಭೃತ್ಯಾಚಾರ: ಲಿಂಗವನ್ನು, ಗುರುವನ್ನೂ ಆದರ ಪೂರ್ವಕವಾಗಿ ಪೂಜಿಸುವಂತೆ ಶಿವಯೋಗಿಯನ್ನು ಸಾಕ್ಷಾತ್ ಶಿವನೆಂದು ತಿಳಿದು ಕಿಂಕರಭಾವದಿಂದ ಪೂಜಿಸುವುದೇ ಭೃತ್ಯಾಚಾರ:

ಶಿವಯೋಗೀ ಶಿವಃ ಸಾಕ್ಷಾದಿತಿ ಕೈಂಕರ್ಯಭಕ್ತಿತಃ।
ಪೂಜಯೇದಾದರೇಣೈವ ಯಥಾ ಲಿಂಗಂ ತಥಾ ಗುರುಃ॥[೯೬]

ಅಷ್ಟಾವರಣಗಳೇ ಅಂಗವಾಗುಳ್ಳ ವೀರಶೈವರಿಗೆ ಪಂಚಪ್ರಾಣಗಳೋಪಾದಿ-ಯಲ್ಲಿರುವ ಪಂಚಾಚಾರಗಳೂ ಅಷ್ಟೇ ಮುಖ್ಯವಾಗಿವೆ.ಪಂಚಾಚಾರಗಳನ್ನು ಬಿಟ್ಟು ಬೇರೆ ಪ್ರಾಣಗಳಿಲ್ಲ, ಅವುಗಳನ್ನು ಬಿಟ್ಟರೆ ಅಷ್ಟಾವರಣವೆಂಬ ಅಂಗವು ನಿರ್ಜೀವವಾಗುತ್ತದೆ. ಹೀಗೆ ಅಷ್ಟಾವರಣಗಳಿಗೆ ಬೆಲೆ ಬರಬೇಕಾದರೆ ಪಂಚಾಚಾರಗಳ ಪಾಲನೆ ಬಹುಮುಖ್ಯವೆಂಬುದು ಸ್ಪಷ್ಟವಾಗುತ್ತದೆ.

ಪಂಚಾಚಾರಗಳ ವಿಷಯವು ಚಂದ್ರಜ್ಞಾನಾಗಮದಲ್ಲಿ ಮೊದಲಿಗೆ ವ್ಯವಸ್ಥಿತ ರೀತಿಯಲ್ಲಿ ನಿರೂಪಿತವಾಗಿದ್ದು, ಸಿದ್ಧಾಂತ ಶಿಖಾಮಣಿಯ ಆಚಾರಮೀಮಾಂಸೆಗೆ ಮೂಲ ಆಕರವಾಗಿದೆ. ಶೈವಾಗಮಗಳಲ್ಲಿ 'ಪಂಚಾಚಾರ' ಎಂಬ ಪದ ಪ್ರಯೋಗವು ಇದೆಯೇ ಹೊರತಾಗಿ ಸಿದ್ಧಾಂತ ಶಿಖಾಮಣಿಯಲ್ಲಿ ಆ ಪದ ಪ್ರಯೋಗವು ಕಂಡು ಬರುವುದಿಲ್ಲ.

ಷಟ್‌ಸ್ಥಲಗಳು: ವೀರಶೈವರ ಸಾಧನಮಾರ್ಗವು ಮೊಟ್ಟಮೊದಲಿಗೆ ಶೈವಾಗಮೋತ್ತರ ಭಾಗಗಳಲ್ಲಿ ನಿರೂಪಿತವಾಗಿದೆ. ಆ ಸಾಧನಮಾರ್ಗವು ಷಟ್‌ಸ್ಥಲಾತ್ಮಕವಾಗಿದ್ದು, ಭಕ್ತಿ-ಜ್ಞಾನ-ಕ್ರಿಯೆಗಳಿಂದ ಮುಪ್ಪುರಿಗೊಂಡ ಮಾರ್ಗ. ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯಗಳೆಂಬ ಆರು ಸ್ಥಲಗಳಿಂದ ವಿಶಿಷ್ಟವಾಗಿರುವುದರಿಂದ ಅದಕ್ಕೆ ಷಟ್‌ಸ್ಥಲಮಾರ್ಗವೆಂದು ಹೆಸರು.

---

೯೫. ಸಿ.ಶಿ, ೯.೩೪-೩೬, ೩೮

೯೬. ಅದೇ, ೯.೬೬

ಈ ಷಟ್‌ಸ್ಥಲ ವ್ಯವಸ್ಥೆ ಆಗಮೋಕ್ತವಾಗಿದ್ದು, ಅದನ್ನೇ ಸಿದ್ಧಾಂತ ಶಿಖಾಮಣಿ ಅಳವಡಿಸಿಕೊಂಡು ಅದರ ಅಂಗವಾಗಿ ಏಕೋತ್ತರ ಶತಸ್ಥಲಗಳ ನಿರೂಪಣೆಯನ್ನು ಮೊದಲಿಗೆ ಮಾಡಿದೆ. ಇದೇ ಈ ಗ್ರಂಥದ ವೈಶಿಷ್ಟ್ಯ.

ಸಿದ್ಧಾಂತ ಶಿಖಾಮಣಿಯ ರೀತ್ಯಾ ಸ್ಥಲವೆಂದರೆ 'ಪರಶಿವ', ಆ ಪರಶಿವನು ತನ್ನ ಲೀಲಾವಿನೋದಕ್ಕಾಗಿ ತಾನೇ ಪೂಜ್ಯ-ಪೂಜಕ ಭಾವದಿಂದ ಲಿಂಗ ಮತ್ತು ಅಂಗವೆಂದು ಎರಡು ರೀತಿಯಾಗಿ ವಿಭಾಗವಾಗುತ್ತಾನೆ. ಅವು ಮತ್ತೆ ತಲಾ ಆರು ಬಗೆಯಾಗುತ್ತವೆ. ಅವೇ ಅಂಗಷಟ್‌ಸ್ಥಲ ಮತ್ತು ಲಿಂಗಷಟ್‌ಸ್ಥಲಗಳು. ಈ ಎರಡೂ ಪ್ರಕಾರಗಳಲ್ಲಿ ಕ್ರಮವಾಗಿ ೪೪ ಮತ್ತು ೫೭ ಅವಾಂತರ ಸ್ಥಲಗಳಿದ್ದು, ಒಟ್ಟು ೧೦೧ ಸ್ಥಲಗಳಾಗುತ್ತವೆ.

ಜೀವಾತ್ಮನು ಆಚರಿಸಬೇಕಾದ ಷಟ್‌ಸ್ಥಲೋಕ್ತ ಸದಾಚಾರವನ್ನು ಹೇಳುವ ಸ್ಥಲಗಳೇ ಅಂಗಸ್ಥಲಗಳು. ಶಿವನೊಂದಿಗೆ ಐಕ್ಯಾನುಸಂಧಾನದಲ್ಲಿ ಇರುವ ಸಾಧಕನಿಗೆ ಜೀವನ್ಮುಕ್ತಿಯನ್ನು ಕೊಡುವಂತಹ ಸ್ಥಲಗಳೇ ಲಿಂಗಸ್ಥಲಗಳು.

ಲಿಂಗಷಟ್‌ಸ್ಥಲ ಮತ್ತು ಅಂಗಷಟ್‌ಸ್ಥಲಗಳ ಸಮನ್ವಯವನ್ನು ಹೀಗೆ ಹೇಳಲಾಗಿದೆ- "ಷಟ್‌ಸ್ಥಲಗಳು ಅಂಗನಿಗೆ ಅನ್ವಯಿಸುತ್ತವೆ. ಆಯಾಯ ಸ್ಥಲ ಧರ್ಮಗಳನ್ನು ಆಚರಿಸುವುದರಲ್ಲಿ ನಿರತನಾದ ಜೀವನು ಆಯಾಯ ಸ್ಥಲಾಂತರ್ಗತವಾದ ಲಿಂಗಸ್ಥಲಗಳ ಅರಿವನ್ನು ಪಡೆಯುತ್ತಾ ಹೋಗಬೇಕು. ಲಿಂಗಸ್ಥಲಗಳು ಮೇಲೆ ಹೇಳಿದಂತೆ ಜೀವನ್ಮುಕ್ತಿಯ ಪರವಾದವುಗಳು. ಅವು ಜೀವನ್ಮುಕ್ತನ ಅಂದರೆ ಶಿವಯೋಗಿಯ ಸದಾಚಾರಗಳನ್ನೂ, ಸ್ಥಿತಿಯನ್ನೂ ವರ್ಣಿಸುತ್ತವೆ. ಶಿವಯೋಗಿಯು ಶಿವನೇ ಆಗಿರುತ್ತಾನೆ. ಜೀವಿಸಿದ್ದರೂ ಮುಕ್ತನೇ ಆಗಿರುತ್ತಾನೆ. ಅವನ ನೈಜ ನೆಲೆಯನ್ನೇ ನಾವು ಲಿಂಗಸ್ಥಲಗಳ ನಿರೂಪಣೆಯಲ್ಲಿ ಕಾಣುತ್ತೇವೆ. ಹಿಂದಿನ ಸ್ಥಲಗಳ ಕ್ರಮದಲ್ಲಿ ಮೇಲೇರಿ ಶಿವಯೋಗವನ್ನು ಸಾಧಿಸುವ ಸಾಧಕನ ಸ್ಥಿತಿಯೂ ಲಿಂಗಸ್ಥಲವಾಗುತ್ತದೆ. ಲಿಂಗ-ಅಂಗ ಸಾಮರಸ್ಯವು ಷಟ್‌ಸ್ಥಲ ಮಾರ್ಗದ ಗುರಿ. ಲಿಂಗಸ್ಥಲ ಮತ್ತು ಅಂಗಸ್ಥಲಗಳ ಸಾಮರಸ್ಯವು ಸಾಧನೆಯ ಮಾರ್ಗ, ಇದೇ ಸಿದ್ಧಾಂತ ಶಿಖಾಮಣಿಯು ಬೋಧಿಸುವ ಮಾರ್ಗದ ರಹಸ್ಯ"[೬೭]

ವೀರಶೈವದ ತತ್ತ್ವ ವಿಚಾರಗಳು: ಇತರ ದರ್ಶನಗಳಂತೆ ವೀರಶೈವ ದರ್ಶನವೂ ತನ್ನದೇ ಆದ ತತ್ತ್ವ ವಿಚಾರಗಳನ್ನು ಹೊಂದಿದೆ. ಅವುಗಳೆಂದರೆ ಪತಿ, ಪಶು, ಪಾಶ, ಜಗತ್ತು ಮತ್ತು ಮೋಕ್ಷ. ಜ್ಞಾನಪ್ರಧಾನವಾದ ಈ ತತ್ತ್ವ ವಿಚಾರಗಳ ಮೂಲವು ಉಪನಿಷತ್ತುಗಳಲ್ಲಿಯೇ ಲಭ್ಯವಿದ್ದು, ಸಿದ್ಧಾಂತ ಶಿಖಾಮಣಿಯ ತತ್ತ್ವ ವಿಚಾರಗಳಿಗೂ ಮೂಲವಾಗಿವೆ.

ಶ್ರೀ ಸಿದ್ಧಾಂತ ಶಿಖಾಮಣಿ ಉಪದೇಶಿಸಿರುವ ಭಕ್ತಿ-ಜ್ಞಾನ-ಕ್ರಿಯಾ ಸಮುಚ್ಚಯಾತ್ಮಕವಾದ ಈ ಸಿದ್ಧಾಂತದಲ್ಲಿ ಸದಾಚಾರ ಮತ್ತು ತತ್ತ್ವ ವಿಚಾರಗಳ ಸಮನ್ವಯವನ್ನು ಸ್ಪಷ್ಟವಾಗಿ ಗುರುತಿಸಬಹುದು. ಈ ತತ್ತ್ವ ವಿಚಾರವು ಷಟ್‌ಸ್ಥಲ ಧರ್ಮಾಚರಣೆಗೆ ಹಿನ್ನೆಲೆಯಾಗಿ ಬಂದಿದೆ.

---

೬೭. ಡಾ|| ಎಂ. ಶಿವಕುಮಾರ ಸ್ವಾಮಿ, ಸಿದ್ಧಾಂತ ಶಿಖಾಮಣಿ -ಒಂದು ಅಧ್ಯಯನ, ಪು. ೨೪-೨೫

ಪತಿ: ವೀರಶೈವ ಸಿದ್ಧಾಂತದ ಪ್ರಕಾರ ಪರಶಿವನೇ ಸರ್ವೋತ್ಕೃಷ್ಟ ತತ್ತ್ವವಾಗಿದ್ದು, ಆತನೆ 'ಪತಿ' ಎನಿಸಿದ್ದು, ವೇದಾಂತಿಗಳ 'ಬ್ರಹ್ಮ' ಪದವಾಚ್ಯನಾಗಿದ್ದಾನೆ. ಆ ವಿಷಯವನ್ನು ಸಿದ್ಧಾಂತ ಶಿಖಾಮಣಿ ಹೀಗೆ ನಿರೂಪಿಸಿದೆ:

ಬ್ರಹ್ಮೇತಿ ವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ।
ವೇದಾಂತಿನೋ ಜಗನ್ಮೂಲಂ ತನ್ನಮಾಮಿ ಪರಂ ಶಿವಮ್॥[೯೮]

"ವೇದಾಂತ ಪ್ರತಿಪಾದಕರು ಬ್ರಹ್ಮ ಶಬ್ದಕ್ಕೆ ಯಾವುದು ವಿಷಯವೆಂದು ಹೇಳುತ್ತಾರೆಯೋ ಅಂತಹ ಸಮಸ್ತ ಜಗತ್ತಿಗೂ ಮೂಲ ಕಾರಣನಾದ ಪರಶಿವನನ್ನು ವಂದಿಸುತ್ತೇನೆ" ಎಂಬ ಶಿವಸ್ತುತಿಯಲ್ಲಿ ಸಿದ್ಧಾಂತ ಶಿಖಾಮಣಿಯು ಪರಶಿವನೇ ಬ್ರಹ್ಮನೆಂದು ಪ್ರತಿಪಾದಿಸಿದೆ. ಇವಲ್ಲದೆ

ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ॥[೯೯]
ಸಚ್ಚಿದಾನಂದರೂಪಾಯ ಸದಸದ್ವ್ಯಕ್ತಿಹೇತವೇ॥[೧೦೦]

ಸತ್-ಚಿತ್-ಆನಂದತ್ವಗಳು ಶಿವನ ಸ್ವರೂಪವೆಂದು ಸಿದ್ಧಾಂತ ಶಿಖಾಮಣಿ ಅನೇಕ ಸಂದರ್ಭಗಳಲ್ಲಿ ಹೇಳಿದೆ. ಲಿಂಗವೇ ಪರಶಿವ ಬ್ರಹ್ಮ ವಾಚಕವೆಂದು ಈ ವಾಕ್ಯದಲ್ಲಿ ಸ್ಪಷ್ಟಪಡಿಸಲಾಗಿದೆ:

ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಮ್।
ಪುನಃ ಪುನಃ ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮಶಾಶ್ವತಮ್॥
ತಸ್ಮಾಲ್ಲಿಂಗಮಿತಿ ಖ್ಯಾತಂ ಸತ್ತಾನಂದಚಿದಾತ್ಮಕಮ್।
ಬೃಹತ್ವಾದ್ಬೃಹ್ಮಣತ್ವಾಚ್ಚ ಬ್ರಹ್ಮಶಬ್ದಾಭಿಧೇಯಕಮ್॥[೧೦೧]

೨. ಪಶು: ವೀರಶೈವ ಸಿದ್ಧಾಂತದ ಪ್ರಕಾರ ಪರಶಿವನು 'ಪತಿ' ಎನಿಸಿದರೆ, ಜೀವಾತ್ಮನು 'ಪಶು' ಎನಿಸಿದ್ದಾನೆ. ಪರಮಾತ್ಮನೇ ತನ್ನ ಜ್ಞಾನರೂಪ ಮಾಯೆಯಿಂದ ಮೋಹಿತನಾಗಿ ಸ್ಥೂಲಶರೀರಧಾರಿಯಾಗಿದ್ದಾನೆ. ಪರಶಿವನ ಅನಾದ್ಯವಿದ್ಯೆಯ ಸಂಬಂಧದಿಂದ ಹೊರಹೊಮ್ಮಿದ ಜೀವನು ಪರಶಿವನ ಅಂಶವೇ ಆಗಿದ್ದಾನೆ.[೧೦೨] ಅದನ್ನು ಸಿದ್ಧಾಂತ ಶಿಖಾಮಣಿ ಹೀಗೆ ನಿರೂಪಿಸಿದೆ:

ಅನಾದ್ಯವಿದ್ಯಾ ಸಂಬಂಧಾತ್ತದಂಶೋ ಜೀವನಾಮಕಃ।
ದೇವತಿರ್ಯಙ್ಮನುಷ್ಯಾದಿಜಾತಿಭೇದೇ ವ್ಯವಸ್ಥಿತಃ॥
ಮಾಯೀ ಮಾಹೇಶ್ವರಸ್ತೇಷಾಂ ಪ್ರೇರಕೋ ಹೃದಿ ಸಂಸ್ಥಿತಃ॥[೧೦೩]

---

೯೮. ಸಿದ್ಧಾಂತ ಶಿಖಾಮಣಿ, ೧.೨
೯೯. ಅದೇ, ೧.೧
೧೦೦. ಅದೇ, ೨.೧
೧೦೧. ಅದೇ, ೬.೩೬.೩೭
೧೦೨. ಸ ಏವ ಮಾಯಾಪರಿಮೋಹಿತಾತ್ಮಾ ಶರೀರಮಾಸ್ಥಾಯ ಕರೋತಿ ಸರ್ವಮ್।
-ಕೈವಲ್ಯೋಪನಿಷತ್, ೧೨.೧೫
೧೦೩. ಸಿದ್ಧಾಂತ ಶಿಖಾಮಣಿ,೫.೩೪

"ತನ್ನಲ್ಲಿ ನಿತ್ಯ ಸಂಬಂಧದಿಂದಿದ್ದು ವಿಮರ್ಶ ಶಕ್ತಿಯಲ್ಲಿ ಅಡಕವಾಗಿರುವ ಅನಾದಿ ಮಾಯೆಯ ಸಂಬಂಧದಿಂದ ಆ ಪರಶಿವನ ಅಂಶವು 'ಜೀವ' ಎನಿಸಿಕೊಳ್ಳುತ್ತದೆ. ಆ ಜೀವನು ದೇವ, ಮನುಷ್ಯ, ಪಶು, ಪಕ್ಷಿ ಇತ್ಯಾದಿ ಭೇದಗಳಿಂದ ಕೂಡಿದ ಪ್ರಾಣಿವರ್ಗದಲ್ಲಿ ವಾಸಿಸುವನು. ಆ ಪರಶಿವನು ಮಾಯಾಶಕ್ತಿ (ವಿಮರ್ಶಶಕ್ತಿ)ಯಿಂದೊಡಗೂಡಿ ಪ್ರೇರಕನಾಗಿ ಸಮಸ್ತ ಪ್ರಾಣಿಗಳ ಹೃದಯದಲ್ಲಿ ವಾಸಿಸುವನು."

ಈ ರೀತಿಯಾಗಿ ಪ್ರೇರಕನಾದ ಶಿವನು ಜೀವನಲ್ಲಿ ಯಾವ ಸಂಬಂಧದಿಂದ ಹೇಗೆ ಇದ್ದಾನೆ ಎಂಬುದನ್ನು ಸಿದ್ಧಾಂತ ಶಿಖಾಮಣಿಯು ಹೃದಯಂಗಮವಾಗಿ ನಿರೂಪಿಸಿದೆ:

ಚಂದ್ರಕಾಂತೇ ಯಥಾ ತೋಯಂ ಸೂರ್ಯಕಾಂತೇ ಯಥಾನಲಃ।
ಬೀಜೇ ಯಥಾಂಕುರಃ ಸಿದ್ಧಃ ತಥಾತ್ಮನಿ ಶಿವಃ ಸ್ಥಿತಃ॥[೧೦೩(ಎ)]

"ಚಂದ್ರಕಾಂತ ಶಿಲೆಯಲ್ಲಿ ನೀರು, ಸೂರ್ಯಕಾಂತಮಣಿಯಲ್ಲಿ ಬೆಂಕಿ, ಬೀಜದಲ್ಲಿ ಮೊಳಕೆ ಹೇಗೆ ಅಡಗಿವೆಯೋ ಹಾಗೆ ಶಿವನು ತನ್ನ ಅಂಶನಾದ ಜೀವನಲ್ಲಿ ನೆಲೆಸಿದ್ದಾನೆ-" ಅರ್ಥಾತ್ ಶಿವನು ಜೀವನೊಂದಿಗೆ ತಾದಾತ್ಮ್ಯ ಸಂಬಂಧದಿಂದ ಇದ್ದಾನೆ ಎಂದು ಸ್ಪಷ್ಟವಾಗುತ್ತದೆ.

ಸಿದ್ಧಾಂತ ಶಿಖಾಮಣಿ ನಿರೂಪಿತವಾದ ಪತಿ-ಪಶು ತತ್ತ್ವಗಳಿಗೆ ವೇದ-ಉಪನಿಷನ್ಮಂತ್ರಗಳೇ ಆಧಾರವಾಗಿವೆ. ಉದಾಹರಣೆಗೆ ಒಂದೆರಡನ್ನು ಉಲ್ಲೇಖ ಮಾಡಲಾಗಿದೆ:

ನ ಮೃತ್ಯುರಾಸೀದಮೃತಂ ನ ತರ್ಹಿ ನ ರಾತ್ರ್ಯಾ ಅಹ್ನ ಆಸೀತ್ ಪ್ರತೀಕಃ।
ಆನೀದವಾತಂ ಸ್ವಧಮಾ ತದೇಕಂ ತಸ್ಮಾದ್ಧಾನ್ಯನ್ನ ಪರಃ ಕಿಂಚನಾಸ॥[೧೦೪]

ಯದಾ ತಮಸ್ತನ್ನ ದಿವಾ ನ ರಾತ್ರಿಃ ನ ಸತ್ ನ ಚಾಸತ್ ಪ್ರಸೃತಾ ಪುರಾಣೀ॥[೧೦೫]

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ।[೧೦೬]

ಕಾಮಸ್ತದಗ್ರೇ ಸಮವರ್ತತಾಧಿ, ಮನಸೋ ರೇತಃ ಪ್ರಥಮಂ ಯದಾಸೀತ್।[೧೦೭]

ಜೀವಾತ್ಮನು ಶಿವಾಂಶ ರೂಪನಾಗಿರುವನೆಂಬ ವೀರಶೈವ ಸಿದ್ಧಾಂತದ ಮೂಲವನ್ನು ಬ್ರಹ್ಮಸೂತ್ರದ "ಅಂಶೋ ನಾನಾ ವ್ಯಪದೇಶಾತ್" ಎಂಬ ಸೂತ್ರ ಹಾಗೂ ಮುಂಡಕೋಪನಿಷತ್ತಿನ ಈ ಮಂತ್ರದಲ್ಲಿ ಕಾಣಬಹುದು:

ಯಥಾ ಸುದೀಪ್ತಾತ್ಪಾವಕಾದ್ವಿಸ್ಫುಲಿಂಗಾಃ ಸಹಸ್ರಶಃ ಪ್ರಭವಂತೇ ಸರೂಪಾಃ।
ತಥಾಽಕ್ಷರಾದ್ವಿವಿಧಾಃ ಸೋಮ್ಯಭಾವಾಃ ಪ್ರಜಾಯಂತೇ ತತ್ರ ಚೈವಾಪಿ ಯಂತಿ॥[೧೦೮]

೧೦೩(ಎ). ಅದೇ, ೫. ೩೬

೧೦೪. ಋಗ್ವೇದ, ೧೦-೧೨೯-೨

೧೦೫. ಶ್ವೇತಾಶ್ವತರೋಪನಿಷತ್, ೪.೮

೧೦೬. ಅದೇ, ೪.೧೦

೧೦೭. ಋಗ್ವೇದ, ೧೦-೧೨೯-೪

೧೦೮. ಮುಂಡಕೋಪನಿಷತ್.

"ಅಗ್ನಿಯಿಂದ ಅದರ ಅಂಶಭೂತಗಳಾದ ಅಗ್ನಿಕಿಡಿಗಳು ಹೇಗೆ ಆವಿರ್ಭಸುವವೋ, ಹಾಗೆ ಪರಬ್ರಹ್ಮದಿಂದ ತದಂಶಭೂತರಾದ ಜೀವರು ಆವಿರ್ಭವಿಸಿ ಅಲ್ಲಿಯೇ ಲಯವನ್ನು ಹೊಂದುತ್ತಾರೆ."

ಈಗಾಗಲೇ ಪ್ರಸ್ತುತ ಪಡಿಸಿರುವಂತೆ ವೀರಶೈವ ಸಿದ್ಧಾಂತದ ರೀತ್ಯಾ ಜೀವನು ಪಶು, ಪರಮಾತ್ಮನು ಪತಿ. ಸಿದ್ಧಾಂತ ಶಿಖಾಮಣಿ ನಿರೂಪಿತವಾದ ಪಶು-ಪತಿತತ್ತ್ವವು ಜಾಬಾಲ್ಯುಪನಿಷತ್ತಿನಿಂದದ ಸ್ವೀಕೃತವಾಗಿದೆ. ಅದು ಈ ರೀತಿಯಾಗಿದೆ:

"ಪಶುಪತಿರಹಂಕಾರಾವಿಷ್ಟಃ ಸಂಸಾರೀ ಜೀವಃ। ಸ ಏವ ಪಶುಃ। ಸರ್ವಜ್ಞಃ ಪಂಚಕೃತ್ಯ ಸಂಪನ್ನಃ ಸರ್ವೇಶ್ವರ ಈಶಃ ಪಶುಪತಿಃ॥...... ಜೀವಾಃ ಪಶವ ಉಕ್ತಾಃ। ತತ್ಪತಿತ್ವಾತ್ ಪಶುಪತಿಃ।"[೧೦೯]

೩. ಜಗತ್ತು: ಚರಾಚರಾತ್ಮಕವಾದ ಜಗತ್ತು ಸೃಷ್ಟಿಗೂ ಮೊದಲು ಪರಶಿವಬ್ರಹ್ಮನಲ್ಲಿ ಲೀನವಾಗಿದ್ದು,[೧೧೦] ಪರಶಿವಬ್ರಹ್ಮನಲ್ಲಿರುವ ಇಚ್ಛಾದಿರೂಪ ಸ್ಪಂದದಿಂದ ಈ ಜಗತ್ತು ಸೃಷ್ಟಿಯಾಯಿತು. ಶಿವನಿಂದ ಸೃಷ್ಟಿಯಾದ ಈ ಜಗತ್ತು ೩೬ ತತ್ತ್ವಗಳಿಂದ ಕೂಡಿದ್ದು, ಶಿವಸ್ವರೂಪವೇ ಆಗಿದೆ ಎಂಬುದನ್ನು ಸಿದ್ಧಾಂತ ಶಿಖಾಮಣಿಯು ಹೀಗೆ ನಿರೂಪಿಸಿದೆ:

ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ।
ಕುಟೀಭಾವಾದ್‌ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್॥[೧೧೧]

ಬಟ್ಟೆಯು ತನ್ನಲ್ಲಿರುವ ಹರಡುವ ಶಕ್ತಿಯ ಕಾರಣದಿಂದ ಡೇರೆಯ ರೂಪವಾಗಿ ಕಂಗೊಳಿಸುವಂತೆ ಶಿವನು ತನ್ನ ಶಕ್ತಿಯ ವಿಕಾಸದಿಂದ ಜಗತ್ತಿನ ರೂಪದಲ್ಲಿ ನೆಲೆಸಿದ್ದಾನೆ. ಒಟ್ಟಿನಲ್ಲಿ ತನ್ನ ಶಕ್ತಿಯು ವಿಕಾಸದಿಂದ ಜಗತ್ತಿನ ರೂಪದಲ್ಲಿ ವ್ಯಾಪಿಸಿದ್ದಾನೆ ಎಂದರ್ಥವಾಗುತ್ತದೆ. ಅದನ್ನೇ ಸಿದ್ಧಾಂತ ಶಿಖಾಮಣಿ ಸುಂದರ ದೃಷ್ಟಾಂತಗಳಿಂದ ವಿವರಿಸಿದೆ- "ಮಣ್ಣಿನಿಂದ ತಯಾರಿಸಿದ ಘಟವು ಹೇಗೆ ಮಣ್ಣಿಗಿಂತ ಭಿನ್ನವಲ್ಲವೋ, ಸಮುದ್ರದಿಂದ ಹುಟ್ಟಿದ ನೊರೆ-ತೆರೆಗಳು ಹೇಗೆ ಸಮುದ್ರಕ್ಕಿಂತ ಭಿನ್ನವಲ್ಲವೋ, ತಂತುಗಳಿಂದ ಉತ್ಪನ್ನವಾದ ಪಟವು ಹೇಗೆ ತಂತುಗಳಿಗಿಂತ ಭಿನ್ನವಲ್ಲವೋ ಹಾಗೆಯೇ ಶಿವನಿಂದ ಉತ್ಪನ್ನವಾದ ಜಗತ್ತು ಶಿವನಿಗಿಂತ ಭಿನ್ನವಾಗಿರದೆ ಶಿವಮಯವೇ ಆಗಿದೆ."[೧೧೨] ಅಲ್ಲದೆ-

ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ॥[೧೧೩]

"ವೃಕ್ಷವು ಎಲೆ-ಕೊಂಬೆ ಮೊದಲಾದ ರೂಪದಿಂದ ಇರುವಂತೆ ಶಿವನು ಭೂಮಿ ಮುಂತಾದ ರೂಪದಿಂದ ವಿರಾಜಿಸುತ್ತಿರುವನು" -ಎಂದು ಹೇಳುವಲ್ಲಿ ಚರಾಚರಾತ್ಮಕವಾದ ಈ ಜಗತ್ತು ಸಾಕ್ಷಾತ್ ಶಿವನ ಸ್ವರೂಪವೆಂದು ಸಿದ್ಧಾಂತ ಶಿಖಾಮಣಿ ಬೋಧಿಸಿದೆ. ಮತ್ತು

---

೧೦೯. ಜಾಬಾಲ್ಯುಪನಿಷತ್, ೧೧.೧೫

೧೧೦. ತತ್ರ ಲೀನಮಭೂತ್ ಸರ್ವಂ ಚೇತನಾಚೇತನಂ ಜಗತ್। -ಸಿ.ಶಿ. ೨.೭

೧೧೧. ಸಿ.ಶಿ., ೧೦.೬೫

೧೧೨. ಅದೇ, ೧೦. ೬೨-೬೪

೧೧೩. ಸಿ.ಶಿ, ೧೦. ೬೭

ಪೀಠಿಕಾ ಪರಮಾ ಶಕ್ತಿರ್ಲಿಂಗಂ ಸಾಕ್ಷಾತ್ ಪರಃ ಶಿವಃ।
ಶಿವಶಕ್ತಿಸಮಾಯೋಗಂ ವಿಶ್ವಂ ಲಿಂಗಂ ತದುಚ್ಯತೇ॥[೧೧೪]

"ಪೀಠವೇ ಪರಾಶಕ್ತಿ, ಪರಶಿವನು ಲಿಂಗ. ಶಿವಶಕ್ತಿಯರ ಸಂಬಂಧವುಳ್ಳ ಈ ಲಿಂಗವನ್ನು ವಿಶ್ವವೆಂದು ಕರೆಯಲಾಗಿದೆ" ಎಂಬಲ್ಲಿ ಜಗತ್ತನ್ನು ಲಿಂಗವೆಂದು ಕರೆಯಲಾಗಿದೆ.

ಒಟ್ಟಿನಲ್ಲಿ ಶಿವನಿಂದುತ್ಪನ್ನವಾದ ಚರಾಚರಾತ್ಮಕವಾದ ಈ ಜಗತ್ತು ಸತ್ಯವಾದುದೆಂದೂ, ಶಿವನ ಸ್ವರೂಪವೆಂದೂ ಸಿದ್ಧಾಂತ ಶಿಖಾಮಣಿ ಸ್ಪಷ್ಟಪಡಿಸಿದೆ.

ಸಿದ್ಧಾಂತ ಶಿಖಾಮಣಿ ನಿರೂಪಿತವಾದ ಜಗತ್ತಿನ ವಿಷಯವು ಉಪನಿಷತ್ತುಗಳಲ್ಲಿ ಹೀಗೆ ನಿರೂಪಿತವಾಗಿದೆ: ಛಾಂದೋಗ್ಯೋಪನಿಷತ್ತಿನ "ಬಹು ಸ್ಯಾಂ ಪ್ರಜಾಯೇಯ"[೧೧೫] ಅರ್ಥಾತ್ ಒಬ್ಬನೇ ಇದ್ದ ಪರಶಿವಬ್ರಹ್ಮನು ಶಕ್ತಿಯ ಲೀಲಾವಿಲಾಸದಿಂದ ಅನೇಕವಾಗಲು ಬಯಸುತ್ತಾನೆ. ಶಕ್ತಿಯು ಮೊದಲಿಗೆ ಇಚ್ಛಾ, ಜ್ಞಾನ, ಕ್ರಿಯಾ ಮುಂತಾದ ರೂಪಗಳನ್ನು ತಾಳಿ, ಪರಶಿವನು ಜಗತ್ತಿನ ರೂಪವನ್ನು ತಾಳುವಂತೆ ಮಾಡುತ್ತಾಳೆ. ಈ ಅಭಿಪ್ರಾಯವು ಶ್ವೇತಾಶ್ವತರೋಪನಿಷತ್ತಿನಲ್ಲಿ ಹೀಗೆ ಸ್ಪಷ್ಟವಾಗಿದೆ:

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್।
ತಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್॥[೧೧೬]

"ಪ್ರಕೃತಿಯೇ ಮಾಯೆ, ಮಾಯೆಯುಳ್ಳವನೇ ಮಹೇಶ್ವರ, ಅವನ ಅವಯವಗಳಿಂದಲೇ ಈ ಜಗತ್ತು ವ್ಯಾಪಿಸಿದೆ."

ಮೋಕ್ಷ ವಿಚಾರ ಜಗತ್ತಿನ ಎಲ್ಲ ದರ್ಶನಗಳೂ ಮೋಕ್ಷವೇ ಮಾನವ ಜೀವನದ ಪರಮಗುರಿಯೆಂದು ಪ್ರತಿಪಾದಿಸುತ್ತವೆ. ಅಂತೆಯೇ ವೀರಶೈವ ಸಿದ್ಧಾಂತದಲ್ಲಿ ಮುಕ್ತಿಯನ್ನು ಶಿವ-ಜೀವರ ಸಾಮರಸ್ಯ, ಲಿಂಗಾಂಗ ಸಾಮರಸ್ಯವೆಂದು ಕರೆಯಲಾಗಿದೆ. ವೀರಶೈವ ಶಬ್ದದ ನಿರ್ವಚನ ಸಂದರ್ಭದಲ್ಲಿ ಸಿದ್ಧಾಂತ ಶಿಖಾಮಣಿಯ-

ವಿಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕಬೋಧಿಕಾ।
ತಸ್ಯಾಂ ರಮಂತೇ ಯೇ ಶೈವಾಃ ವೀರಶೈವಾಸ್ತು ತೇ ಮತಾಃ॥[೧೧೭]

"ಶಿವ-ಜೀವರ ಐಕ್ಯವನ್ನು ಬೋಧಿಸುವ ವಿದ್ಯೆಯಲ್ಲಿ ಆನಂದವನ್ನು ಪಡೆಯುವವರು ವೀರಶೈವರು" ಎಂದು ಹೇಳುವಲ್ಲಿ ವೀರಶೈವರ ಮುಕ್ತಿಯ ಸ್ವರೂಪವು ಸೂಚಿತವಾಗಿದೆ. ಆಣವಾದಿ ಮಲಸಂಬಂಧವನ್ನು ಕಳೆದುಕೊಂಡ, ಕಳಂಕವಿಲ್ಲದ ಮನೋವ್ಯಾಪಾರವುಳ್ಳ ಶಿವಯೋಗಿಗೆ, 'ಶಿವೋऽಹಂ' ಎಂಬ ಭಾವನೆಯುಂಟಾಗಿ ಶಿವೈಕ್ಯವು ಉಂಟಾಗುತ್ತದೆ. ಅದೇ ಮುಕ್ತಿ. ಸಿದ್ಧಾಂತ ಶಿಖಾಮಣಿಯು ಶಿವ-ಜೀವರ ಐಕ್ಯ ರೂಪವಾದ ಮುಕ್ತಿಯನ್ನು ಸುಂದರವಾದ ದೃಷ್ಟಾಂತದಿಂದ ನಿರೂಪಿಸಿದೆ:

---

೧೧೪. ಅದೇ, ೧೧. ೩೨

೧೧೫. ಛಾಂದೋಗ್ಯೋಪನಿಷತ್, ೬-೨-೩

೧೧೬. ಶ್ವೇತಾಶ್ವತರೋಪನಿಷತ್, ೪.೧೦

೧೧೭. ಸಿ.ಶಿ., ೫.೧೫

ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಮ್।
ಪರೇ ಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ॥[೧೧೮]

"ನೀರಿನಲ್ಲಿ ನೀರನ್ನು ಬೆರೆಸಿದಂತೆ, ಬೆಂಕಿಯಲ್ಲಿ ಬೆಂಕಿಯನ್ನು ಬೆರೆಸಿದಂತೆ ಪರಬ್ರಹ್ಮ ಸ್ವರೂಪ ಮಹಾಲಿಂಗದಲ್ಲಿ ಆತ್ಮವನ್ನು ಲಯಗೊಳಿಸಿದ ಶಿವಯೋಗಿಯು ಜೀವಭಾವದಿಂದ ದೂರವಾಗಿ ಪರಬ್ರಹ್ಮನಲ್ಲಿ ಸಮರಸಭಾವವನ್ನು ಹೊಂದಿದ ಮೇಲೆ ಪರಬ್ರಹ್ಮ ಸ್ವರೂಪಕ್ಕಿಂತ ಭಿನ್ನವಾಗಿ ತೋರುವುದಿಲ್ಲ." ಇದೇ ಪರಮ ಮುಕ್ತಿ. ಭೇದ ಜ್ಞಾನಕ್ಕೆ ಎಡೆಯಿಲ್ಲದ ಶಿವಾದ್ವೈತದಲ್ಲಿ ನೀರು-ಬೆಂಕಿಗಳ ದೃಷ್ಟಾಂತಗಳು ಧ್ವನಿಸುವಂತೆ ಶಿವೈಕ್ಯ ಭಾವವು ಸಮಾನ-ಸಮರಸರೂಪವಾಗಿವೆ.

ಸಿದ್ಧಾಂತ ಶಿಖಾಮಣಿಯಲ್ಲಿ ನಿರೂಪಿತವಾಗಿರುವ ಮೋಕ್ಷ ವಿಚಾರಗಳ ವಿಷಯವು ಉಪನಿಷತ್ತುಗಳಲ್ಲಿ ಅಡಗಿದೆ:

ಯದಾ ಸರ್ವೇ ಪ್ರಮುಚ್ಯಂತೇ ಕಾಮಾऽಸ್ಯ ಹೃದಿ ಸ್ಥಿತಾಃ।
ಅಥ ಮರ್ತ್ಯೋಽಮೃತೋಭವತ್ಯತ್ರ ಬ್ರಹ್ಮಸಮಶ್ನುತೇ॥
ಯದಾ ಸರ್ವೇ ಪ್ರಭಿದ್ಯಂತೇ ಹೃದಯಸ್ಯೇಹ ಗ್ರಂಥಯಃ।
ಅಥ ಮರ್ತ್ಯೋಽಮೃತೋಭವತ್ಯೇತಾವದನುಶಾಸನಮ್।
ಹೃದಾ ಮನೀಷೀ ಮನಸಾಭಿಕ್ಲಪ್ತೋ ಯ ಏತದ್ವಿದುರಮೃತಾಸ್ತೇ ಭವಂತಿ॥[೧೧೯]

ಈ ಮಂತ್ರಗಳ ತಾತ್ಪರ್ಯವೇನೆಂದರೆ ಮಾನವನ ಅಂತಃಕರಣದಲ್ಲಿರುವ ಕಾಮನೆಗಳು ಅಳಿದು ಹೋದವೆಂದರೆ ಅವನು ಅಮರನಾಗುವನು. ಅಲ್ಲಿಯೇ ಬ್ರಹ್ಮ ಪದವಿಯನ್ನು ಪಡೆಯುವನು. ಅಂತಃಕರಣದಲ್ಲಿರುವ ಮಿಥ್ಯ ಬಂಧನಗಳು ನಷ್ಟವಾದರೆ ಮಾನವನು ಅಮರನಾಗುತ್ತಾನೆ.

ಸಿದ್ಧಾಂತ ಶಿಖಾಮಣಿಯ ಜಲೇ ಜಲಮಿವ ನ್ಯಸ್ತಂ... ಇತ್ಯಾದಿ ಶ್ಲೋಕಕ್ಕೆ ಸ್ಫೂರ್ತಿಯು ಮುಂಡಕೋಪನಿಷತ್ತಿನ ಈ ಮಂತ್ರವೇ ಆಗಿದೆ:

ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇ ಅಸ್ತಂ ಗಚ್ಛಂತಿ ನಾಮರೂಪೇ ವಿಹಾಯ।
ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್॥[೧೨೦]

"ಯಾವ ರೀತಿಯಾಗಿ ನದಿಗಳು ಹರಿಯುತ್ತಾ, ತಮ್ಮ ಮೂಲರೂಪವನ್ನು ಬಿಟ್ಟು ಸಮುದ್ರದಲ್ಲಿ ಲೀನವಾಗುತ್ತವೆಯೋ ಹಾಗೆಯೇ ಪ್ರಾಜ್ಞನು ತನ್ನ ಜೀವಭಾವವನ್ನು ತ್ಯಜಿಸಿ ದಿವ್ಯವಾದ ಪರಾತ್ಪರ ಪುರುಷನಲ್ಲಿ ಲೀನವಾಗುತ್ತಾನೆ."

ವೀರಶೈವ ಸಿದ್ಧಾಂತದ ಲಿಂಗಾಂಗ ಸಾಮರಸ್ಯಾತ್ಮಕವಾದ ಮುಕ್ತಿಯ ರಹಸ್ಯವು ಈ ಉಪನಿಷನ್ಮಂತ್ರದಲ್ಲಡಗಿದೆ.

---

೧೧೮. ಅದೇ, ೨೦.೬೧

೧೧೯. ಕಠೋಪನಿಷತ್, ೨.೩.೧೪-೧೫; ೨.೬.೪
ಕೇನೋಪನಿಷತ್, ೨.೪

೧೨೦. ಮುಂಡಕೋಪನಿಷತ್, ೩-೨-೮

ವೀರಶೈವ ಸಿದ್ಧಾಂತವು ಲಿಂಗಾಂಗ ಸಾಮರಸ್ಯರೂಪ ಮೋಕ್ಷವನ್ನು ಶರಣಸತಿ-ಲಿಂಗಪತಿ ಎಂದು ವರ್ಣಿಸಿದ್ದು ಅದರ ಮೂಲವು ಬೃಹದಾರಣ್ಯಕೋಪನಿಷತ್ತಿನ ಈ ಮಂತ್ರವೇ ಆಗಿದೆ:

"ತದ್ಯಥಾ ಪ್ರಿಯಯಾ ಸ್ತ್ರಿಯಾ ಸಂಪರಿಷ್ವಕ್ತಃ ನ ಬಾಹ್ಯಂ ಕಿಂಚನ ವೇದನಾಂತರಂ।
ಏವಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ
ನ ಬಾಹ್ಯಂ ಕಿಂಚನ ವೇದನಾಂತರಂ। ತದ್ವಾ ಅಸ್ಯ ಏತದಾಪ್ತಕಾಮಂ
ಆತ್ಮಕಾಮಂ ಅಕಾಮಂ ರೂಪಂ।"[೨೧]

ಉಪಸಂಹಾರ: ಇಲ್ಲಿಯವರೆಗೆ ಸಿದ್ಧಾಂತ ಶಿಖಾಮಣಿಯಲ್ಲಿ ನಿರೂಪಿತವಾಗಿರುವ ವೀರಶೈವಕ್ಕೆ ಸಂಬಂಧಿಸಿದ ಆಚಾರ-ವಿಚಾರಗಳನ್ನು ಪ್ರಸ್ತುತಪಡಿಸಲಾಯಿತು. ವಿಚಾರವನ್ನು ಮಂಡಿಸುವಾಗ ಸಿದ್ಧಾಂತ ಶಿಖಾಮಣಿಯು ಆಶ್ರಯಿಸಿರುವ ವೇದ, ಉಪನಿಷತ್ತು, ಆಗಮ, ಪುರಾಣ ವಾಕ್ಯಗಳ ಉಲ್ಲೇಖಗಳನ್ನು ಅವಶ್ಯವೆನಿಸುವ ಕಡೆಗಳಲ್ಲಿ ಮಾಡಲಾಯಿತು. ಸಿದ್ಧಾಂತ ಶಿಖಾಮಣಿ ಗ್ರಂಥ ರಚನೆಯಲ್ಲಿ ತೊಡಗಿದ ಶ್ರೀ ಶಿವಯೋಗಿ ಶಿವಾಚಾರ್ಯರು ತಮಗೆ ಪೂರ್ವದಲ್ಲಿದ್ದ ವೇದ, ಉಪನಿಷತ್ತು, ಶೈವಾಗಮೋತ್ತರ ಭಾಗಗಳು, ಪುರಾಣ ಗ್ರಂಥಗಳಲ್ಲಿ ಚದುರಿ ಹೋಗಿದ್ದ ವೀರಶೈವದ ಆಚಾರ-ವಿಚಾರಗಳನ್ನು ಮೊಟ್ಟಮೊದಲಿಗೆ ಒಂದೆಡೆ ಸಂಗ್ರಹಿಸಿ, ಏಕೋತ್ತರಶತಸ್ಥಲದ ಚೌಕಟ್ಟಿನಲ್ಲಿ ವ್ಯವಸ್ಥಿತವಾಗಿ ಪ್ರಸ್ತುತಪಡಿಸಿದ್ದಾರೆ. ಈ ರೀತಿಯಾಗಿ ಮಾಡಿರುವ ಕಾರಣ ಶ್ರೀ ಸಿದ್ಧಾಂತ ಶಿಖಾಮಣಿ ಒಂದು ಸಂಕಲನ ಗ್ರಂಥವಲ್ಲವೆ? ಎಂಬ ಸಂದೇಹ ಕೆಲವರಿಗೆ ಉಂಟಾಗಬಹುದು. ಇದಕ್ಕೆ ಈ ರೀತಿಯಾಗಿ ಉತ್ತರಿಸಬಹುದು-ಶ್ರೀ ಸಿದ್ಧಾಂತ ಶಿಖಾಮಣಿಯು ಖಂಡಿತಾ ಸಂಕಲನ ಗ್ರಂಥವಲ್ಲ. ಗ್ರಂಥಕರ್ತರಾದ ಶಿವಯೋಗಿ ಶಿವಾಚಾರ್ಯರು ಆಕರಗಳನ್ನು ವಿವಿಧ ಮೂಲಗಳಿಂದ ತೆಗೆದುಕೊಂಡು ತಮ್ಮದೇ ಭಾಷೆಯಲ್ಲಿ ವಿಷಯವನ್ನು ಮಂಡಿಸುತ್ತಾ ಅವಶ್ಯವಿರುವಡೆಗಳಲ್ಲಿ ಮಾತ್ರ ಮೂಲ ಶ್ಲೋಕಗಳನ್ನು ಯಥಾವತ್ತಾಗಿ ತಮ್ಮ ಗ್ರಂಥದುದ್ದಕ್ಕೂ ಬಳಸಿದ್ದಾರೆ. ಈ ರೀತಿಯಾಗಿ ಮಾಡುವಾಗ ವಿಷಯದ ಅನುಸ್ಯೂತತೆಗೆ ಎಲ್ಲಿಯೂ ಭಂಗ ಬಂದಿರುವುದಿಲ್ಲ. ಸಂಕಲನ ಗ್ರಂಥಗಳಲ್ಲಿ ಸಂಕಲನಕಾರನ ಯಾವುದೇ ಬಗೆಯ ರಚನೆಯೂ ಸೇರ್ಪಡೆ-ಯಾಗಿರುವುದಿಲ್ಲ. ಅಲ್ಲದೆ ಸಂಕಲನ ಗ್ರಂಥಗಳಲ್ಲಿ ಅನುಸ್ಯೂತತೆ ಕಂಡು ಬರುವುದಿಲ್ಲ. ಶ್ರೀ ಸಿದ್ಧಾಂತ ಶಿಖಾಮಣಿಯು ಇಂತಹ ಮಾತಿಗೆ ಅಪವಾದವಾಗಿದ್ದು, ಇದೊಂದು ಸಂಕಲನ ಗ್ರಂಥವೆಂಬ ವಿತಂಡವಾದಿಗಳ ಅಭಿಪ್ರಾಯವು ಸಹಜವಾಗಿಯೇ ಬಿದ್ದು ಹೋಗುತ್ತದೆ.

ಸಿದ್ಧಾಂತ ಶಿಖಾಮಣಿಯು ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಗ್ರಂಥ. ಸಿದ್ಧಾಂತವಿಲ್ಲದ ಧರ್ಮ ಆತ್ಮವಿಲ್ಲದ ಶರೀರದಂತೆ ನಿಷ್ಪ್ರಯೋಜನವಾಗುತ್ತದೆ. ಧರ್ಮದ ತಳಹದಿ ಇರುವುದು ಆ ಧರ್ಮದ ಸಿದ್ಧಾಂತದಲ್ಲಿ. ಅಂತಹ ಧರ್ಮ ಸಿದ್ಧಾಂತವನ್ನು ಪ್ರತಿಪಾದಿಸುವ ಶ್ರೀ ಸಿದ್ಧಾಂತ ಶಿಖಾಮಣಿಯ ಅಧ್ಯಯನ ಮಾಡುವುದರಿಂದ ವೀರಶೈವಕ್ಕೆ ಸಂಬಂಧಿಸಿದ ಸಮಸ್ತ ವಿಷಯಗಳ ಪರಿಚಯ ನಮಗಾಗುತ್ತದೆ. ಆದ್ದರಿಂದ ಶ್ರೀ ಸಿದ್ಧಾಂತ ಶಿಖಾಮಣಿ ವೀರಶೈವದ ಆಧಾರ ಗ್ರಂಥ ಎಂದು ನಿಸ್ಸಂದೇಹವಾಗಿ ಹೇಳಬಹುದು.

---

೧೨೧. ಬೃಹದಾರಣ್ಯಕೋಪನಿಷತ್, ೪-೩-೨೧

ಪ್ರಶ್ನೆ-ಉತ್ತರ

ಪ್ರಶ್ನೆ-೧ : "ವೀರಶೈವ ಧರ್ಮದ ಕೈಪಿಡಿ" (ಶಿ.ಚೆ. ನಂದಿಮಠ; ಅನುವಾದ; ಶ್ರೀಮತಿ ಪ್ರೇಮಾ ಮಳಿಮಠ) ಪು.೧೭೩ರಲ್ಲಿ-

೧) ಸಿದ್ಧಾಂತ ಶಿಖಾಮಣಿ ವಿರೋಧಾಭಾಸಗಳ ಒಂದು ಕಂತೆಯಾಗಿದೆ;

೨) ೧೦೧ ಸ್ಥಲಗಳ ವಿಚಾರ ೧೨ನೇ ಶತಮಾನದ ಅನಂತರ ಬೆಳೆದು ಬಂದುದೆಂದು ಇಟ್ಟುಕೊಳ್ಳಬಹುದು.

-ಶ್ರೀ ಡಿ.ಎಮ್. ಧನ್ನೂರ, ತಾಳಿಕೋಟೆ

೩) ಏಕೋತ್ತರಶತಸ್ಥಲವನ್ನು ಶರಣರೇ ಮೊದಲು ರಚಿಸಿದ್ದು. ಇದನ್ನು ಜಕ್ಕಣಾರ್ಯನು ತನ್ನ ಏಕೋತ್ತರಶತಸ್ಥಲದಲ್ಲಿ ತಿಳಿಸಿದ್ದಾರೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

-ಶ್ರೀ ಎಚ್.ಎಂ. ಸ್ವಾಮಿ, ದಾವಣಗೆರೆ

ಉತ್ತರ : "ವಿರೋಧಾಭಾಸ" ಎಂದರೆ ವಿರೋಧದಂತೆ ಕಾಣುವುದು. ಆದರೆ ನಿಜವಾದ ವಿರೋಧ ಅಲ್ಲ. ಆ ಅರ್ಥದಲ್ಲಿ ಅನೇಕ ವಿರೋಧಾಭಾಸಗಳನ್ನು ಕಂಡಿರಬಹುದು ಡಾ|| ಶಿ.ಚೆ. ನಂದೀಮಠ ಅವರು. ಅಲ್ಲದೆ ಅವರ ಮಾತಿನಲ್ಲಿ "contradictions"ಎನ್ನುವ ಅರ್ಥವಿದ್ದರೆ ಆ ವಿದ್ವಾಂಸರು ಸಿದ್ಧಾಂತ ಶಿಖಾಮಣಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಹಾಗೆ ಬರೆದಿದ್ದಾರೆ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. -ಸಂ

೧೦೧ ಸ್ಥಲಗಳ ವಿಚಾರವು ವಚನಕಾರರಿಗಿಂತ ಮೊದಲಿನದು ಎಂಬುದು ಉಲ್ಲೇಖಗಳಿಂದ ಸಿದ್ಧವಾಗುತ್ತದೆ. ಚನ್ನಬಸವಣ್ಣನವರ ಒಂದು ವಚನದಲ್ಲಿ "ನಮ್ಮ ಆದ್ಯರ ವಚನ ನೂರೊಂದು ಸ್ಥಲವ ಮೀರಿದ ಮಹದಲ್ಲಿ ನೆಲೆಸಿತ್ತು" ಎಂದು ಹೇಳಿದ್ದಾರೆ. (ನೋಡಿ: ಚನ್ನಬಸವಣ್ಣನವರ ವಚನಗಳು, ಧಾರವಾಡ. ೧೯೭೧, ವ.ಸಂ. ೪೭೪). ಅಲ್ಲಮ ಪ್ರಭುಗಳ ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ: "ಅಯ್ಯಾ ಪೂರ್ವವಳಿದು ಪುನರ್ಜಾತನಾದ ಸತ್ಯಸದ್ಧರ್ಮ ಸಚ್ಛಿಷ್ಯನು ಶ್ರೀ ಗುರುಲಿಂಗ ಜಂಗಮದ ವೇಧಾ-ಮಂತ್ರ-ಕ್ರಿಯಾ ದೀಕ್ಷೆಯ ಪಡೆದು, ಅಷ್ಟಾವರಣದ ನೆಲೆ-ಕಲೆಗಳ ತಿಳಿದು, ಪಂಚಾಚಾರ ಮೊದಲಾಗಿ ಸರ್ವಾಚಾರ ಸಂಪತ್ತಿನ ವಿವರವ ತಿಳಿದು, ನೂರೊಂದು ಸ್ಥಲದ ಆಚರಣೆ, ಇನ್ನೂರ ಹದಿನಾರು ಸ್ಥಲದ ಸಂಬಂಧವನರಿದು, ಷಟ್‌ಸ್ಥಲ ಮಾರ್ಗವಿಡಿದು..." (ನೋಡಿ: ಅಲ್ಲಮಪ್ರಭು ದೇವರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩, ವ.ಸಂ. ೮೦೦), ಈ ಉಲ್ಲೇಖಗಳಿಂದ ೧೦೧ ಸ್ಥಲದ ಕಲ್ಪನೆ ಶರಣರ ಕಾಲಕ್ಕಿಂತಲೂ ಪೂರ್ವದಲ್ಲೇ ಇತ್ತು. ಅದರ ಮೂಲ ಆಕರ ಶ್ರೀ ಸಿದ್ಧಾಂತ ಶಿಖಾಮಣಿ.

ಚನ್ನಬಸವಣ್ಣನವರ ವಚನವೊಂದರಲ್ಲಿ (ವ.ಸಂ. ೧೦೪) ಮತ್ತು ಪ್ರಭುದೇವರ ವಚನವೊಂದರಲ್ಲಿ (ವ.ಸಂ. ೭೮೯) ಕೊಟ್ಟಿರುವ ೫೭ ಲಿಂಗಸ್ಥಲಗಳ ಹೆಸರುಗಳು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿನ ಅವೇ ಲಿಂಗಸ್ಥಲಗಳ ಹೆಸರುಗಳಿಗೆ ನಿಕಟ ಸಂವಾದಿಯಾಗಿವೆ. ಇದೂ ಕೂಡ ಶರಣರಿಗಿಂತ ಮೊದಲು ೧೦೧ ಸ್ಥಲಗಳ ಕಲ್ಪನೆಯಿತ್ತು ಎಂಬುದನ್ನು

ಸಿದ್ಧಪಡಿಸುತ್ತದೆ. ಶ್ರೀ ಸಿದ್ಧಾಂತ ಶಿಖಾಮಣಿಯೇ ಆ ೧೦೧ ಸ್ಥಲ ವ್ಯವಸ್ಥೆಯಲ್ಲಿ ವೀರಶೈವ ಸಿದ್ಧಾಂತವನ್ನು ಹೇಳಿದ ಮೊದಲನೆಯ ಗ್ರಂಥ ಎಂಬುದು ಸಂಶೋಧನೆಯಿಂದ ಸಿದ್ಧವಾಗಿದೆ.

ಪ್ರಶ್ನೆ-೨ : ಶರಣರ ಅಷ್ಟಾವರಣ ವಿವರಣೆ ಭಾವ, ಅರ್ಥ ಸಿದ್ಧಾಂತ ಶಿಖಾಮಣಿಗಿಂತ ಭಿನ್ನ ಇಲ್ಲವೇ?

-ಶ್ರೀ ಎಚ್.ಎಂ.ಸ್ವಾಮಿ, ದಾವಣಗೆರೆ

ಉತ್ತರ : ಭಿನ್ನ ಅಲ್ಲ. ಉಭಯರಿಗೂ ಅಷ್ಟಾವರಣ ಪಂಚಾಚಾರಗಳಿಗೆ ವೀರಶೈವಾಗಮಗಳೇ ಮೂಲ. ಆದ್ದರಿಂದ ಭಿನ್ನವೆಂಬುದಿಲ್ಲ. ಶರಣರ ವಚನಗಳಲ್ಲಿ ಇವುಗಳ ಮೇಲೆ ಅಧ್ಯಯನದ ಹಿಡಿತ ಸಿಕ್ಕುವುದಿಲ್ಲ, ಆದರೆ ಸಿದ್ಧಾಂತ ಶಿಖಾಮಣಿಯಲ್ಲಿ ನಿಖರತೆ, ಸ್ಪಷ್ಟತೆಯಿಂದಾಗಿ ಹಿಡಿತ ಸಿಕ್ಕಿದೆ.

ಪ್ರಶ್ನೆ-೩ : ಶೈವಾಗಮೋಕ್ತ ಪಂಚಾಚಾರಗಳಿಗೂ, ಶಿವಶರಣರ ಪಂಚಾಚಾರಗಳಿಗೂ ವ್ಯತ್ಯಾಸವೇನು?

-ಶ್ರೀ ಎಚ್.ಎಂ. ಸ್ವಾಮಿ, ದಾವಣಗೆರೆ

ಉತ್ತರ : ಐದು ಆಚಾರಗಳಲ್ಲಿ ಲಿಂಗಾಚಾರ, ಸದಾಚಾರ, ಭೃತ್ಯಾಚಾರ ಮತ್ತು ಗಣಾಚಾರ ಎಂಬ ನಾಲ್ಕು ಆಚಾರಗಳ ವಿಷಯದಲ್ಲಿ ಏನೂ ವ್ಯತ್ಯಾಸವಿಲ್ಲ. ಆದರೆ ಶಿವಾಚಾರದ ವಿಷಯದಲ್ಲಿ ಮಾತ್ರ ವ್ಯತ್ಯಾಸ ಕಾಣುತ್ತದೆ. ಶೈವಾಗಮದಲ್ಲಿ (ಚಂದ್ರಜ್ಞಾನಾಗಮ, ಕ್ರಿ.ಪಾ. ೯.೭) ಹೇಳಿದೆ: "ಶಿವ ಏವ ಪರಂ ಬ್ರಹ್ಮ ಪಂಚ ಕೃತ್ಯಪರಾಯಣಮ್। ನ ತತೋಽನ್ಯಾ ಗತಿರಿತಿ ಶಿವಾಚಾರೋ ಹಿ ಕೀರ್ತಿತಃ॥" (ಶಿವನೇ ಪಂಚಕೃತ್ಯಗಳಲ್ಲಿ ನಿರತನಾದ ಪರಬ್ರಹ್ಮ. ಅವನ ಹೊರತು ಬೇರೆ ಗತಿಯಲ್ಲ ಎಂಬುದೇ ಶಿವಾಚಾರ) ಎಂದು. ವಚನದಲ್ಲಿ (ಚನ್ನಬಸವಣ್ಣನವರ ವಚನಗಳು, ವ.ಸಂ. ೧೧೫೯)-"ಶಿವಭಕ್ತರಲ್ಲಿ ಕುಲಗೋತ್ರ ಜಾತಿ ವರ್ಣಾಶ್ರಯವನರಸದೆ ಅವರೊಕ್ಕುದ ಕೊಂಬುದೆ ಶಿವಾಚಾರ" ಎಂದು ಹೇಳಿದೆ.

ಪ್ರಶ್ನೆ-೪ : ಸಿದ್ಧಾಂತ ಶಿಖಾಮಣಿಯ ಕಾಲ ಯಾವುದು?

ಉತ್ತರ : ಶ್ರೀ ಸಿದ್ಧಾಂತ ಶಿಖಾಮಣಿಯ ಕಾಲ ಕ್ರಿ.ಶ.೮-೧೦ ಶತಮಾನಗಳ ಮಧ್ಯಭಾಗ. (ಶ್ರೀ ಸಿದ್ಧಾಂತ ಶಿಖಾಮಣಿ: ಮೂರು ಉಪನ್ಯಾಸಗಳು, ಕ.ವಿ. ೧೯೮೭ ನೋಡಿ)

ಪ್ರಶ್ನೆ-೫ : ಇಮ್ಮಡಿ ಶಿವಬಸವ ಸ್ವಾಮಿಗಳವರ ಪುಸ್ತಕ 'ನಿಜದ ನಿಲುವು' ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ : ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳ ಪುಸ್ತಕಕ್ಕೆ ಉತ್ತರವನ್ನು "ವೀರಶೈವ ಭವ್ಯ ಪರಂಪರೆ" -ಪ್ರಕಾಶನ: ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ, ವೀರಸಿಂಹಾಸನ ಮಹಾಪೀಠ, ಬಾಳೆ ಹೊನ್ನೂರು, ೨೦೦೪, ಪರಿಶಿಷ್ಟ-೨ರಲ್ಲಿ ನೋಡಿ.

ಪ್ರಶ್ನೆ-೬ : ಸಿದ್ಧಾಂತ ಶಿಖಾಮಣಿಯಲ್ಲಿ ಜಾತೀಯತೆ ಇದೆ. ಇದು ಶರಣರ ಚಿಂತನೆಗೆ ವಿರುದ್ಧ.

ಉತ್ತರ : ಇದು ತಪ್ಪು ಕಲ್ಪನೆ. ಶ್ರೀ ಸಿದ್ಧಾಂತ ಶಿಖಾಮಣಿಯ ಈ ಶ್ಲೋಕವನ್ನು ನೋಡಿ:

ಶಿವಭಕ್ತಿಸಮಾವೇಶೇ ಕ್ವ ಜಾತಿ ಪರಿಕಲ್ಪನಾ।
ಇಂಧನೇಷ್ವಗ್ನಿದಗ್ಧೇಷು ಕೋ ವಾ ಭೇದಃ ಪ್ರಕೀರ್ತ್ಯತೇ।। (೧೧.೫೫)

(ಶಿವಭಕ್ತಿಯ ಪ್ರವೇಶವಾದ ಮೇಲೆ ವ್ಯಕ್ತಿಗೆ ಜಾತಿಯ ಪರಿಕಲ್ಪನೆ ಎಲ್ಲಿಯದು? ಅಗ್ನಿಯಲ್ಲಿ ಸುಟ್ಟು ಬೂದಿಯಾದ ವಿವಿಧ ಕಟ್ಟಿಗೆಗಳಿಗೆ ಭೇದವೆಲ್ಲಿಯದು?)

ಪ್ರಶ್ನೆ-೭ : ತಮಿಳಿನಲ್ಲಿ ಸಿದ್ಧಾಂತ ಶಿಖಾಮಣಿ ಇದೆ, ಇದರ ಬಗ್ಗೆ ವಿವರಿಸಿ.

-ಡಾ।। ಶಿವಶಂಕರ

ಉತ್ತರ : ಕುಂಭಕೋಣಂ ಪೆರಿಯಮಠ ಶಿವಪ್ರಕಾಶ ಸ್ವಾಮಿಗಳು (೧೭ನೇ ಶತಮಾನ) ಶ್ರೀ ಸಿದ್ಧಾಂತ ಶಿಖಾಮಣಿಯನ್ನು ತಮಿಳಿಗೆ ಅನುವಾದಿಸಿದ್ದಾರೆ

ಪ್ರಶ್ನೆ-೮ : ಲಿಂಗ ದೀಕ್ಷೆಯನ್ನು ಪಡೆದು ಅಷ್ಟಾವರಣ ಪಂಚಾಚಾರ ನಿಷ್ಠರಾದ ಎಲ್ಲ ವ್ಯಕ್ತಿಗಳೂ ವೀರಶೈವರೆಂದು ಪ್ರತಿಪಾದಿಸುವ ನೀವು ಗುರು ಪೀಠಕ್ಕೆ ಕೇವಲ ಮಠಸ್ಥರನ್ನು ಮಾತ್ರವೇ ನೇಮಿಸುತ್ತೀರಿ. ಇದು ಜಾತೀಯತೆಯಲ್ಲವೆ? ಕೇವಲ ಮಠಸ್ಥರು ಮಾತ್ರ ಗುರುಪೀಠಕ್ಕೆ ಅರ್ಹರೆಂಬ ನಿಮ್ಮ ನಿಲವು ವರ್ಣಾಶ್ರಮಗಳನ್ನು ಪುರಸ್ಕರಿಸಿದಂತೆ ಆಗುವುದಿಲ್ಲವೆ? ನಿಮ್ಮ ಈ ಆಚರಣೆ ವೀರಶೈವಕ್ಕೆ ಸೂಕ್ತವೇ?

-ಶ್ರೀ ವಿ.ಜಿ. ಹೊಸಮನಿ, ಧಾರವಾಡ

ಉತ್ತರ : ನಿಮ್ಮ ವಿಚಾರ ಪೂರ್ಣ ಸರಿಯಲ್ಲ, ಬಬಲಾದಿ ಶ್ರೀಗಳು ಮುಂತಾದವರು ಮಠಸ್ಥ (ಜಂಗಮ)ರಲ್ಲ, ಅವರನ್ನು ಎಲ್ಲಾ ಸ್ವಾಮಿಗಳು ಗೌರವದಿಂದ ಕಾಣ್ತಾರೆ.

ಪ್ರಶ್ನೆ-೯ : ಸಿದ್ಧಾಂತ ಶಿಖಾಮಣಿಯಲ್ಲಿ- ಮಾಟ-ಕೂಟ ಎಂಬ ಕನ್ನಡ ಪದಗಳು ಬಂದಿರುವುದನ್ನು ಕನ್ನಡ ಸಾಹಿತಿಗಳು, ಇದು ಇತ್ತೀಚಿನ ಗ್ರಂಥವೆಂದು ಹೇಳುತ್ತಾರೆ. ನಿಮ್ಮ ಅಭಿಪ್ರಾಯವೇನು?

ಉತ್ತರ : ಮಾಟ, ಕೂಟ ಮುಂತಾದ ಕನ್ನಡ ಪದಗಳು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಎಲ್ಲಿಯೂ ಬಂದಿಲ್ಲ. ಅವು ಬಂದಿರುವುದು ಶ್ರೀ ಮರಿತೋಂಟದಾರ್ಯರು ಮುಂತಾದವರ ವ್ಯಾಖ್ಯಾನಗಳಲ್ಲಿ. ಉದಾಹರಣೆಗೆ: ಉಪಾಧಿ ಮಾಟಸ್ಥಲ ಮುಂತಾದ ಪದಗಳು ಮರಿತೋಂಟದಾರ್ಯರ (ಗದ್ಯ) ವ್ಯಾಖ್ಯಾನದಲ್ಲಿ ಬಂದಿವೆ. ಆದರೆ ಶ್ಲೋಕಗಳಲ್ಲಿ ಉಪಾಧಿ ದಾನಸ್ಥಲ ಮುಂತಾದ ಪದಗಳು ಬಂದಿವೆ.

ಪ್ರಶ್ನೆ-೧೦: ವಿವಿಧ ಮೂಲಗಳಿಂದ ಶ್ಲೋಕಗಳನ್ನು ಸಂಗ್ರಹಿಸಿರುವುದರಿಂದ ಸಿದ್ಧಾಂತ ಶಿಖಾಮಣಿ ಒಂದು ಸಂಕಲನ ಗ್ರಂಥವಲ್ಲವೇ?

ಉತ್ತರ : ಗೀತೆಯು ಸರ್ವೋಪನಿಷತ್ ಸಾರ. ವ್ಯಾಸರೇ ಅದನ್ನು ಬರೆದದ್ದು. ಅದು ಉಪನಿಷತ್ ಸಾರದ ಸಂಕಲನ. ಹಾಗೆಯೇ ಸಿದ್ಧಾಂತ ಶಿಖಾಮಣಿಯು ವೀರಶೈವಾಗಮ ಸಾರ. ರೇಣುಕರ ಮತವಿಡಿದು ಶಿವಯೋಗಿ ಶಿವಚಾರ್ಯರೇ ಇದನ್ನು ಬರೆದದ್ದು. ವೀರಶೈವದ ಸಕಲ ಸ್ಥಲಗಳನ್ನು ಸಂಕಲಿಸಿರುವ ಗ್ರಂಥ ಸಿದ್ಧಾಂತ ಶಿಖಾಮಣಿ ಒಂದು ಸಂಕಲನ ಗ್ರಂಥ ಎಂದು ಒಬ್ಬರು ಹೇಳಿದಾಗ ಒಬ್ಬ ವಿದ್ವಾಂಸರು ಹೌದು ಅಂತ ಹೇಳಿದರು. ಅದು ಅನೇಕ ಮೂಲಗಳಿಂದ ವಿಷಯ ಸಂಗ್ರಹ ಮಾಡಿರಬಹುದು. ಅದಕ್ಕೆ ತಮ್ಮದೇ ಅದಂಥ ವ್ಯವಸ್ಥೆಯನ್ನು ಕೊಟ್ಟು ತಮ್ಮದೇ ಶೈಲಿಯಲ್ಲಿ ನಿರೂಪಣೆ ಮಾಡಿರುವಂಥ ಗ್ರಂಥ. ಆದ್ದರಿಂದ ಅದನ್ನು ಸಂಕಲನಗ್ರಂಥವೆಂದು ಕರೆಯುವುದು ಸರಿಯಲ್ಲ. ಸಂಕಲನ ಗ್ರಂಥ ಅಂದ್ರೆ ವಿವಿಧ ಮೂಲಗಳಿಂದ ಒಂದಿರುವಂಥ ಶ್ಲೋಕಗಳನ್ನು ಹಾಗೆ ಇಟ್ಟು ಅದಕ್ಕೇನೂ ಟಿಪ್ಪಣಿ ಮಾಡದೆ ತಮ್ಮದನ್ನು ಸೇರಿಸದೆ ಇದ್ದಾಗ ಮಾತ್ರ ಅದು ಸಂಕಲನ ಗ್ರಂಥ. ಎಲ್ಲ ಶೋಕಗಳನ್ನು ಬೇರೆ ಬೇರೆ ಗ್ರಂಥಗಳಿಂದಲೇ ತೆಗೆದು ಕೊಂಡಿದ್ದಾರೆ ಎನ್ನುವಂತಿಲ್ಲ. ಯಾವುದೋ ಗ್ರಂಥದಿಂದ ತೆಗೆದು ಕೊಂಡಾದ್ದಾರೆ ಅಂತ ಪ್ರೂವ್ ಮಾಡಿ ತೋರಿಸುವುದಕ್ಕೂ ಆಗುವುದಿಲ್ಲ. ನಿರೂಪಣೇನು ಅವರದೇ ಆಗಿದೆ, ವರ್ಣನೇನು ಅವರದೇ ಆಗಿದೆ. ಅದಕ್ಕೊಂದು ಸಮಂಜಸವಾದ ಸೂತ್ರಬದ್ಧತೆಯನ್ನು ನಿರ್ಮಾಣ ಮಾಡಿದ್ದಾರೆ. ವಿವಿಧ ಗ್ರಂಥಗಳಿಂದ ತೆಗೆದುಕೊಂಡ ಕೆಲವು ಶ್ಲೋಕಗಳು ಹಾಗೆ ಉಳಿಸಿಕೊಂಡಿದ್ದಾರೆ. ಕೆಲವನ್ನು ಸಂಗ್ರಹಮಾಡಿಕೊಂಡು ತಮ್ಮ ಭಾಷೆಯಲ್ಲಿ ಹೇಳಿದಾರೆ. ಹೀಗೆ ಇರೋದ್ರಿಂದ ಅದನ್ನು ಸಂಕಲನ ಗ್ರಂಥ ಅಂತ ಕರೆಯೋದು ಉಚಿತ ಅಲ್ಲ. ಅದೊಂದು ಸ್ವತಂತ್ರಕೃತಿ ಅಂತಲೇ ಕರೆಯಬೇಕು. ಇಂತಹ ಆಕ್ಷೇಪವನ್ನು ಕೇಳಿದರೆ 'ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು' ಎಂಬ ಗಾದೆ ಜ್ಞಾಪಕಕ್ಕೆ ಬರುತ್ತದೆ.

□□

೬. ವೀರಶೈವ ಪಂಚ ಪೀಠಗಳು

-ಡಾ|| ರಾಜಶೇಖರಸ್ವಾಮಿ ಗೋರಟಾ

ಶಿವಾಗಮಗಳ[1] ಪ್ರಕಾರ, ವೀರಶೈವ ಧರ್ಮ ಸಂಸ್ಥಾಪಕರೆಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಅವತರಿಸಿದ ನಂತರ ಕೈಗೊಂಡ ಕಾರ್ಯವೆಂದರೆ ತಾವು ಪ್ರಚುರ ಪಡೆಸಿದ ಧರ್ಮದ ಸಂರಕ್ಷಣೆ ಮತ್ತು ನಿರಂತರ ಪ್ರಸಾರ-ಪ್ರಚಾರಕ್ಕಾಗಿ ಧರ್ಮಪೀಠಗಳನ್ನು ಸ್ಥಾಪಿಸಿರುವುದು.

ಶ್ರೀ ಜಗದ್ಗುರು ರೇಣುಕಾಚಾರ್ಯರು ಕೊಲ್ಲಿಪಾಕಿಯ ಶ್ರೀ ಸೋಮೇಶ್ವರ ಲಿಂಗದಿಂದ ಅವತರಿಸಿ ಅಗಸ್ತ್ಯ ಮಹಾಮುನಿಗೆ ವೀರಶೈವ ಸಿದ್ಧಾಂತವನ್ನು ಬೋಧಿಸುವ ಮೂಲಕ ವೀರಶೈವ ಧರ್ಮವನ್ನು ಸ್ಥಾಪಿಸಿ ಅದರ ಪ್ರಚುರಕ್ಕಾಗಿ ಮಲಯಾಚಲದ ರಂಭಾಪುರಿಯಲ್ಲಿ ವೀರಪೀಠವನ್ನು ಸ್ಥಾಪಿಸಿದರು. ಶ್ರೀ ಜಗದ್ಗುರು ದಾರುಕಾಚಾರ್ಯರು ಉಜ್ಜೈನಿಯ ವಟಕ್ಷೇತ್ರ ಶ್ರೀ ಸಿದ್ಧೇಶ್ವರ ಲಿಂಗದಲ್ಲಿ ಅವತರಿಸಿ ದಧೀಚಿ ಮಹರ್ಷಿಗೆ ಶಿವತತ್ತ್ವ ಬೋಧಿಸಿ, ಅಲ್ಲಿಯೇ ಸದ್ಧರ್ಮಪೀಠವನ್ನು ಸ್ಥಾಪಿಸಿದರು. ಕಾಲಾಂತರದಲ್ಲಿ ಅಂದರೆ ಕ್ರಿ.ಶ. ೧೦-೧೧ ನೇ ಶತಮಾನದ ಮಧ್ಯಭಾಗದಲ್ಲಿ ಶ್ರೀ ಜಗದ್ಗುರು ಮರುಳಸಿದ್ಧ ಭಗವತ್ಪಾದರಿಂದ ಅಲ್ಲಿಂದ ಸ್ಥಳಾಂತರಿಸಲ್ಪಟ್ಟ ಸದ್ಧರ್ಮಪೀಠ ಬಳ್ಳಾರಿ ಜಿಲ್ಲೆಯ ಉಜ್ಜಯಿನಿಯಲ್ಲಿ ಸ್ಥಾಪಿಸಲ್ಪಟ್ಟಿತು. ಇದಕ್ಕೆ ಪ್ರತಿ ಉಜ್ಜಯಿನಿ ಎಂತಲೂ ಕರೆಯುತ್ತಾರೆ. ಶ್ರೀ ಜಗದ್ಗುರು ಘಂಟಾಕರ್ಣ ಶಿವಾಚಾರ್ಯ ಭಗವತ್ಪಾದರು ಆಂಧ್ರ ಪ್ರದೇಶದ ದ್ರಾಕ್ಷಾರಾಮ ಕ್ಷೇತ್ರದ ಶ್ರೀ ಭೀಮನಾಥ ಲಿಂಗದಿಂದ ಅವತರಿಸಿ ವ್ಯಾಸಮಹರ್ಷಿಗೆ ಶಿವಸಿದ್ಧಾಂತ ಬೋಧಿಸಿ ಶ್ರೀ ಕೇದಾರನಾಥ (ಊಖಿಮಠ)ದಲ್ಲಿ ವೈರಾಗ್ಯಪೀಠವನ್ನು ಸ್ಥಾಪಿಸಿದರು. ಶ್ರೀ ಜಗದ್ಗುರು ಧೇನುಕರ್ಣ ಶಿವಾಚಾರ್ಯ ಭಗವತ್ಪಾದರು ಆಂಧ್ರಪ್ರದೇಶದ ಶ್ರೀಶೈಲ ಮಲ್ಲಿಕಾರ್ಜುನ ಜ್ಯೋತಿರ್ಲಿಂಗದಿಂದ ಅವತರಿಸಿ ಸಾನಂದ ಮಹರ್ಷಿಗಳಿಗೆ ವೀರಶೈವ ಸಿದ್ಧಾಂತವನ್ನು ಬೋಧಿಸಿ, ಶ್ರೀ ಶೈಲದಲ್ಲಿಯೇ ಸೂರ್ಯ ಸಿಂಹಾಸನ ಪೀಠವನ್ನು ಸ್ಥಾಪಿಸಿದರು. ಮತ್ತು ಶ್ರೀ ಜಗದ್ಗುರು ವಿಶ್ವಕರ್ಣ ಶಿವಾಚಾರ್ಯ ಭಗವತ್ಪಾದರು ಕಾಶಿಯ ಶ್ರೀ ವಿಶ್ವನಾಥ ಜ್ಯೋತಿರ್ಲಿಂಗದಲ್ಲಿ ಅವತರಿಸಿ ದುರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸಿ ನಂತರ ಕಾಶಿಯಲ್ಲಿಯೇ ಜ್ಞಾನಪೀಠವನ್ನು ಸಂಸ್ಥಾಪಿಸಿದರೆಂದು[2] ತಿಳಿದುಬರುತ್ತದೆ. ಈ

---

೧. ಸುಪ್ರಭೇದಾಗಮ: ೧-೫೪; ಸ್ವಾಯಂಭುವಾಗಮ: ೬-೧೨.

೨. ಅದೇ.

ಐವರು ಆಚಾರ್ಯರು ಪ್ರತಿಯೊಂದು ಯುಗಗಳಲ್ಲಿ ಬೇರೆ ಬೇರೆ ಹೆಸರುಗಳನ್ನಿಟ್ಟುಕೊಂಡು ಅವತರಿಸಿದರೆಂದು ಶಿವಾಗಮಗಳು[೩] ಉಕ್ತಗೊಳಿಸುತ್ತವೆ.

ಶ್ರೀ ಜಗದ್ಗುರು ರೇವಣಸಿದ್ಧರು, ಶ್ರೀ ಜಗದ್ಗುರು ಮರಳಸಿದ್ಧರು, ಶ್ರೀ ಜಗದ್ಗುರು ಏಕೋರಾಮಾರಾಧ್ಯರು, ಶ್ರೀ ಜಗದ್ಗುರು ಪಂಡಿತಾರಾಧ್ಯರು ಮತ್ತು ಶ್ರೀ ಜಗದ್ಗುರು ವಿಶ್ವಾರಾಧ್ಯರು ಈ ಐವರು ಆಚಾರ್ಯರು ಕಲಿಯುಗದ[೪] ಆಚಾರ್ಯರಾಗಿ ಪ್ರಸಿದ್ಧರಾಗಿರುವರು.

ಶಿವಾಗಮಗಳು ಮತ್ತು ಶ್ರೀ ಜಗದ್ಗುರು ಪಂಚಾಚಾರ್ಯರು.

ಇಪ್ಪತ್ತೆಂಟು ಶಿವಾಗಮಗಳಲ್ಲಿ ಸುಪ್ರಭೇದಾಗಮ, ಸ್ವಾಯಂಭುವಾಗಮ, ವೀರಾಗಮ, ಪಾಶುಪತಾಗಮ[೫] ಈ ಮುಂತಾದ ಆಗಮಗಳಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಉಲ್ಲೇಖಗಳು ಕಂಡು ಬರುತ್ತವೆ. ಇನ್ನುಳಿದ ಆಗಮಗಳಲ್ಲಿ ಆಚಾರ್ಯರು ಪ್ರಚುರ ಪಡಿಸಿದ ವೀರಶೈವ ಧರ್ಮ-ಸಿದ್ಧಾಂತಗಳ ವಿವೇಚನೆ ತುಂಬಿಕೊಂಡಿದೆ. ಹೀಗಾಗಿ ಈ ಶೈವಾಗಮಗಳು ಪಂಚಾಚಾರ್ಯರ ನಾಮೋಲ್ಲೇಖ ಹೊಂದಿರುವ ಅತ್ಯಂತ ಪುರಾತನ ಲಿಖಿತ ಅವಶೇಷಗಳೆಂದು ಹೇಳಬಹುದು.

ಶೈವಾಗಮಗಳ ನೆಲೆ-ಬೆಲೆ, ಕಾಲ ಮತ್ತು ವ್ಯಾಪಕತೆಯ ಬಗ್ಗೆ ಈಗಾಗಲೇ ಬಹಳಷ್ಟು ವಿಚಾರಗಳನ್ನು ಸ್ಪಷ್ಟವಾಗಿ ತಿಳಿದು ಬಂದಿರುವುದು ಸರ್ವ ವೇದ್ಯ. ಆ ಕುರಿತು ಹೇಳುವುದು ಏನೂ ಬಾಕಿ ಉಳಿದಿಲ್ಲವೆನ್ನುವುದು ನನ್ನ ಗಮನದಲ್ಲಿದೆ.

ಶೈವಾಗಮಗಳು ಅತ್ಯಂತ ಪ್ರಾಚೀನ ಕಾಲದವುಗಳೆಂದು ಹೇಳಲು ಸಾಧ್ಯವಿದೆ. ಪ್ರೊ. ಎಸ್.ಕೆ. ರಾಮಚಂದ್ರರಾವ್[೬] ಅವರು "ಯಜ್ಞಯಾಗಾದಿಗಳಿಗೆ ವೇದಮಂತ್ರಗಳನ್ನು ಅನ್ವಯ ಮಾಡಿಕೊಂಡು ಸಿದ್ಧವಾದವು ಬ್ರಾಹ್ಮಣಗಳೆಂಬ ಭಾಗಗಳು. ಈ ಬ್ರಾಹ್ಮಣಗಳ ಕಾಲಾನುಕ್ರಮ ಪರಿವರ್ತನೆಯೇ ಆಗಮಗಳೆಂದು ತೋರುತ್ತದೆ" ಎಂದು ಅಭಿಪ್ರಾಯಪಟ್ಟಿದ್ದಾರೆ. ಡಾ॥ ಎಸ್.ಸಿ. ನಂದಿಮಠರು[೭] "ಪಾಂಚರಾತ್ರಾಗಮಗಳಲ್ಲಿ ಶೈವಾಗಮಗಳ ಉಲ್ಲೇಖಗಳಿರುವುದರಿಂದ ಶೈವಾಗಮಗಳು ವೈಷ್ಣವಾಗಾಮಗಳಿಗಿಂತ ಹಿಂದಿನವು" ಎಂದು ಹೇಳಿದ್ದಾರೆ. ಮಲ್ಲಾದಿ ಸೂರ್ಯನಾರಾಯಣ ಶಾಸ್ತ್ರಿಗಳ[೮] ಪ್ರಕಾರ ಆಗಮಗಳಲ್ಲಿ ಉಕ್ತವಾಗಿರುವ ಆಚಾರ-ವಿಚಾರಗಳನ್ನು ಪರಿಶೀಲಿಸಿದಲ್ಲಿ ಅವುಗಳ ರಚನೆಯು ಈಚಿನದೆನಿಸಿದರೂ ಆಗಮಿಕ ಸಂಸ್ಕೃತಿ ಮಾತ್ರ ಅತೀ ಪ್ರಾಚೀನವಾದುದು.

ಕ್ರಿ.ಶ. ೧೬ನೇ ಶತಮಾನದ ಅಪ್ಪಯ್ಯ ದೀಕ್ಷಿತರು ಕ್ರಿ.ಶ. ೧೪ನೇ ಶತಮಾನದ ಸಾಯಣಾಚಾರ್ಯರು[೯] ತಮ್ಮ ಕೃತಿಗಳಲ್ಲಿ ಶೈವಾಗಮಗಳನ್ನು ಉಕ್ತಗೊಳಿಸಿದ್ದಾರೆ.

---

೩. ಅದೇ.
೪. ಸ್ವಾಯಂಭುವಾಗಮ: ೨-೭.
೫. ಶಿವಾಗಮ ಸೌರಭ: ಸಂ. ಎಂ.ಜಿ. ನಂಜುಂಡಾರಾಧ್ಯರು
೬. ಶಿವಾಗಮ ಸೌರಭ, ಮುನ್ನುಡಿ, ಪು. ೩೦೬.
೭. ಶಿವಾನುಭವ: ೧-೧-೧, ಏಪ್ರಿಲ್-೧೯೩೧.
೮. ಸಂಸ್ಕೃತವಾಙ್ಮಯ ಚರಿತ್ರೆ: ಪು.೭೧.
೯. ಮಹಾಯಾತ್ರೆ : ಡಾ॥ ಆರ್.ಸಿ. ಹಿರೇಮಠ, ಪು. ೬೬.

ಕ್ರಿ.ಶ.೧೨ನೇ ಶತಮಾನದಲ್ಲಿಯ ಶಿವಶರಣರ ನೂರಾರು ವಚನಗಳಲ್ಲಿ[10] ಶೈವಾಗಮಗಳ ಶ್ಲೋಕಗಳು ಪ್ರಮಾಣ್ಯ ರೂಪದಲ್ಲಿ ಉಕ್ತವಾಗಿವೆ. ಬಸವಣ್ಣನವರ[11] ಒಂದು ವಚನದಲ್ಲಿ ವೀರಾಗಮದ ಶ್ಲೋಕ ಬಂದಿದೆ. ಅದು ಹೀಗಿದೆ:

ಈರೇಳು ಭುವನವನು ಒಡಲೊಳಗಿಟ್ಟು
ಕೊಂಡು ಲಿಂಗ ರೂಪಾಗಿ ಭಕ್ತನ ಕರಸ್ಥಲಕ್ಕೆ ಬಂದು
ಕಿಂ ಮಾಂಸಂ ಕಾ ಶಿವೇ ಭಕ್ತಃ ಕಿಂ ಮಧ್ಯಂ
ಕಃ ಶಿವಾರ್ಕ........................
.......................ಕೂಡಲಸಂಗಮದೇವಾ.

ಕ್ರಿ.ಶ. ೧೦-೧೧ನೇ ಶತಮಾನದ ಈಶಾನ ಶಿವಗುರು[12] ಮತ್ತು ಕ್ರಿ.ಶ.೮-೧೦ನೇ ಶತಮಾನದ ಶಿವಯೋಗಿ ಶಿವಾಚಾರ್ಯರ[13] ವೀರಶೈವ ಸಿದ್ಧಾಂತ ಗ್ರಂಥ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ, ಕ್ರಿ.ಶ. ೭ನೇ ಶತಮಾನದ ಭಾರವಿ ಕವಿಯ[14] ಕಿರಾತಾರ್ಜುನೀಯದಲ್ಲಿ, ಶೈವಾಗಮಗಳ ಉಲ್ಲೇಖಗಳಿವೆ.

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಬೋಧಿಸಿದ ವೀರಶೈವ ಧರ್ಮ ದರ್ಶನ, ಸಿದ್ಧಾಂತ ಮತ್ತು ತತ್ವಾಚರಣೆಗಳನ್ನು ತುಂಬಿಕೊಂಡಿರುವ ಶೈವಾಗಮಗಳು ಅವರ ಬೋಧನೆಗಳೊಂದಿಗೆ ಅಲ್ಲಲ್ಲಿ ಅವರ ಉಲ್ಲೇಖಗಳೊಂದಿಗೆ ಅವರ ಅಪ್ರಾಕೃತ ವ್ಯಕ್ತಿತ್ವದ ದರ್ಶನವನ್ನು ಮಾಡಿಸುತ್ತವೆ. ಈ ದೃಷ್ಟಿಯಿಂದ ಈ ಶೈವಾಗಮಗಳು ಪಂಚಾಚಾರ್ಯರ ಉಲ್ಲೇಖವನ್ನೊಳಗೊಂಡಿರುವ ಅತ್ಯಂತ ಪುರಾತನ ಲಿಖಿತ ಸಾಹಿತ್ಯಾವಶೇಷಗಳೆಂದು ಗುರುತಿಸಬಹುದು. ಈ ಮುಂಚಿನ ಯಾವುದೇ ಸಾಹಿತ್ಯಾವಶೇಷಗಳಲ್ಲಿ ಆಚಾರ್ಯರ ಉಲ್ಲೇಖಗಳು ಕಂಡುಬಂದಿಲ್ಲವಾದ್ದರಿಂದ ಶೈವಾಗಮಗಳೇ ಆ ನಿಟ್ಟಿನಲ್ಲಿ ಪ್ರಾಚೀನ ಸಾಹಿತ್ಯದ ದಾಖಲೆಗಳೆಂದು ಸದ್ಯದ ಮಟ್ಟಿಗೆ ಇಟ್ಟುಕೊಳ್ಳಬಹುದು.

ದೊರೆತಿರುವ ಇಪ್ಪತ್ತೆಂಟು ಶೈವಾಗಮಗಳಲ್ಲಿ ಸುಪ್ರಭೇದಾಗಮ, ಸ್ವಾಯಂಭುವಾಗಮ, ವೀರಾಗಮ ಮತ್ತು ಪಾಶುಪತಾಗಮಗಳಿಗೆ ಒಂದು ವಿಶೇಷವಾದ ಮನ್ನಣೆ ಇದೆ. ಕಾರಣ ಅವುಗಳಲ್ಲಿ ಪಂಚ ಆಚಾರ್ಯರ ಸ್ಪಷ್ಟವಾದ ನಿರ್ದೇಶನಗಳಿವೆ. ಅಲ್ಲದೆ ಪಂಚಪೀಠಗಳ ಉಪಾಚಾರ್ಯರು, ಪಂಚಮರು, ಅವರ ಆಚಾರ ವಿಚಾರಗಳ ಬಗ್ಗೆಯೂ ವಿಸ್ತೃತವಾದ ವಿವರಣೆಯೂ ಸಹ ಅಲ್ಲಿ[15] ಉಕ್ತವಾಗಿದೆ.

ಸುಪ್ರಭೇದಾಗಮದ[16] ಪ್ರಥಮ ಪ್ರಕರಣದಲ್ಲಿ ಪಂಚ ಆಚಾರ್ಯರನ್ನು ಹೀಗೆ ಉಕ್ತಗೊಳಿಸಲಾಗಿದೆ.

---

೧೦. ಅದೇ, ಪು ೬೬
೧೧. ವಚನ; ೫೩೦.
೧೨. ಮಹಾಯಾತ್ರೆ: ಪು. ೬೭.
೧೩. ಶ್ರೀ ಸಿದ್ಧಾಂತ ಶಿಖಾಮಣಿ: ೯.೧೧.
೧೪. ಭಾರವಿಯ 'ಕಿರಾತುರ್ಜನೀಯ': ೫-೧೮, ೨೨.
೧೫. ಶಿವಾಗಮ ಸೌರಭ: ಸಂ. ವಿದ್ವಾನ್, ಎಂ.ಜಿ. ನಂಜುಡಾರಾಧ್ಯ, ಪು. ೪೭.
೧೬. ಅದೇ.

ಪರಶಿವನ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಎಂಬ ಪಂಚಮುಖಗಳಿಂದ ಉದ್ಭವರಾದ-ಏಕಾಕ್ಷರ ಶಿವಾಚಾರ್ಯರು, ದ್ವ್ಯಕ್ಷರ ಶಿವಾಚಾರ್ಯರು, ತ್ರ್ಯಕ್ಷರ ಶಿವಾಚಾರ್ಯರು, ಚತುರಕ್ಷರ ಶಿವಾಚಾರ್ಯರು ಮತ್ತು ಪಂಚಾಕ್ಷರ ಶಿವಾಚಾರ್ಯರೆಂಬ ಐವರು ಆಚಾರ್ಯರು ಕೃತಯುಗದ ಆದಿಯಲ್ಲಿ[೧೬] ಅವತರಿಸಿದರು.

ತ್ರೇತಾಯುಗದ ಆದಿಯಲ್ಲಿ ಏಕವಕ್ತ್ರ ಶಿವಾಚಾರ್ಯರು, ದ್ವಿವಕ್ತ್ರ ಶಿವಾಚಾರ್ಯರು, ತ್ರಿವಕ್ತ್ರ ಶಿವಾಚಾರ್ಯರು, ಚತುರ್ವಕ್ತ್ರ ಶಿವಾಚಾರ್ಯರು ಮತ್ತು ಪಂಚವಕ್ತ್ರ ಶಿವಾಚಾರ್ಯರೆಂಬ ಐವರು ಆಚಾರ್ಯರು[೧೭] ಅವತರಿಸಿದರು.

ಇವರೇ ಮುಂದೆ ದ್ವಾಪರಯುಗದಲ್ಲಿ ರೇಣುಕಾಚಾರ್ಯರು, ದಾರುಕಾಚಾರ್ಯರೇ, ಘಂಟಾಕರ್ಣಾಚಾರ್ಯರು, ಧೇನುಕರ್ಣಾಚಾರ್ಯರು ಮತ್ತು ವಿಶ್ವಕರ್ಣಾಚಾರ್ಯರೆಂಬ ಹೆಸರುಗಳಿಂದ[೧೮] ಅವತರಿಸಿದರು.

ಮುಂದೆ ಕಲಿಯುಗದಲ್ಲಿ ಇವರೇ ಆಚಾರ್ಯರು ರೇವಣಸಿದ್ಧ, ಮರುಳಸಿದ್ಧ, ಏಕೋರಾಮಾರಾಧ್ಯ, ಪಂಡಿತಾರಾಧ್ಯ ಮತ್ತು ವಿಶ್ವರಾಧ್ಯ ಎನ್ನುವ ಪಂಚನಾಮಗಳಿಂದ[೧೯] ಅವತರಿಸಿರುವರು.

ಶಿವಾಗಮೋಕ್ತ ವೀರಶೈವ ಧರ್ಮವನ್ನು ಸಂಸ್ಥಾಪಿಸಿ ಮಠಾಚಾರ್ಯರೆನಿಸಿಕೊಂಡು ಪ್ರಸಿದ್ಧರಾದ ಈ ಐವರು ಆಚಾರ್ಯರ ನಾಮ, ಗೋತ್ರ, ಸೂತ್ರ, ದಂಡ, ಕಮಂಡಲು, ಮಂತ್ರ ಬೀಜ, ಪ್ರವರ, ಶಾಖೆ, ಕಂಥಾ ಮತ್ತು ವಿಭಿನ್ನವಾದ ವರ್ಣಗಳ ವಿವರಣೆಯೂ ಸಹ ಸುಪ್ರಭೇದಾಗಮದಲ್ಲಿ[೨೦] ತುಂಬಿ ನಿಂತಿದೆ.

"ಸದ್ಯೋಜಾತ ಮುಖೋದ್ಭವರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು (ರೇವಣಸಿದ್ಧ ಶಿವಾಚಾರ್ಯರು) ವೀರಗೋತ್ರ, ಪಡಿವಿಡಿಸೂತ್ರ, ಅತಿವರ್ಣ, ಏಕಾಕ್ಷರಪ್ರವರ, ಅಶ್ವತ್ಥದಂಡ, ಹಸಿರುಬಣ್ಣದ ಧ್ವಜ, ಕಮಂಡಲು, 'ನ'ಕಾರ ಮಂತ್ರಬೀಜ, ರೇಣುಕಶಾಖೆ, ಹರಿದ್ವರ್ಣ ಕಂಥೆ ಮುಂತಾದವು ವೀರ ಪೀಠದ ಗೋತ್ರ ಪ್ರವರಗಳು"[೨೧]

ವಾಮದೇವ ಮುಖದಿಂದ ಅವತರಿಸಿದ ಶ್ರೀ ಜಗದ್ಗುರು ದಾರುಕಾಚಾರ್ಯ (ಮರುಳಸಿದ್ಧಶಿವಾಚಾರ್ಯರು)-ನಂದಿಗೋತ್ರ, ವೃಷ್ಟಿ ಸೂತ್ರ, ಅತಿವರ್ಣ, ದ್ವ್ಯಕ್ಷರ ಪ್ರವರ, ಪಲಾಶ (ಮುತ್ತುಗ) ದಂಡ, ತಾಮ್ರದ ಕಮಂಡಲು, 'ಮ'ಕಾರ ಬೀಜಾಕ್ಷರ, ದಾರುಕಶಾಖೆ, ಕೆಂಪು ಕಂಥೆ[೨೨] ಮುಂತಾದವು ಸದ್ಧರ್ಮ ಸಿಂಹಾಸನದ ಗೋತ್ರ-ಸೂತ್ರಗಳು.

---

೧೬. ಅದೇ.
೧೭. ಅದೇ.
೧೮. ಅದೇ.
೧೯. ಅದೇ.
೨೦. ಅದೇ.
೨೧. ಅದೇ.
೨೨. ಅದೇ.

ಅಘೋರಮುಖ ಸಮುತ್ಪನ್ನರಾದ ಶ್ರೀ ಜಗದ್ಗುರು ಘಂಟಾಕರ್ಣ ಶಿವಾಚಾರ್ಯರು (ಏಕೋರಾಮಾರಾಧ್ಯರು) - ಭೃಂಗಿಗೋತ್ರ, ಲಂಬನಸೂತ್ರ, ತ್ರ್ಯಕ್ಷರ ಪ್ರವರ, ಅತಿವರ್ಣ, ಆಲದದಂಡ, ಲೋಹ ಕಮಂಡಲ, 'ಶಿ' ಕಾರ ಮಂತ್ರ ಬೀಜ, ಶಂಕುಕರ್ಣಶಾಖೆ, ಬೂದುಬಣ್ಣದ ಕಂಥೆ, ಲೋಹದ ಕಲಶ[೨೩] ಮುಂತಾದವು ವೈರಾಗ್ಯ ಸಿಂಹಾಸನದ ಗೋತ್ರ-ಪ್ರವರಗಳು.

ತತ್ಪುರುಷ ಮುಖದಿಂದ ಅವತರಿಸಿದ ಶ್ರೀ ಜಗದ್ಗುರು ಧೇನುಕರ್ಣ ಶಿವಾಚಾರ್ಯರು (ಪಂಡಿತಾರಾಧ್ಯರು)-ವೃಷಭಗೋತ್ರ, ಮುಕ್ತಾಗುಚ್ಛಸೂತ್ರ, ಅತಿವರ್ಣ, ಚತುರಕ್ಷರ ಪ್ರವರ, ಬಿದಿರುದಂಡ, ಕಂಚಿನ ಕಮಂಡಲು, 'ವಾ' ಕಾರ ಮಂತ್ರಬೀಜ, ಧೇನುಕರ್ಣಶಾಖೆ, ಬಿಳಿಯ ಕಂಥೆ[೨೪] ಮುಂತಾದವುಗಳು ಸೂರ್ಯಸಿಂಹಾಸನದ ಗೋತ್ರ ಸೂತ್ರ ಪ್ರವರಗಳು.

ಈಶಾನಮುಖ ಸಂಭೂತರಾದ ಶ್ರೀ ಜಗದ್ಗುರು ವಿಶ್ವಕರ್ಣ ಶಿವಾಚಾರ್ಯರು (ವಿಶ್ವಾರಾಧ್ಯರು) ಸ್ಕಂದಗೋತ್ರ, ಪಂಚವರ್ಣ ಸೂತ್ರ, ಪಂಚಾಕ್ಷರ ಪ್ರವರ, ಅತಿವರ್ಣ, ಬಿಲ್ವದಂಡ, ಚಿನ್ನದ ಕಮಂಡಲು, 'ಯ'ಕಾರ ಬೀಜಾಕ್ಷರ, ವಿಶ್ವಕರ್ಣಶಾಖೆ, ಸುವರ್ಣಕಂಥೆ[೨೫] ಮುಂತಾದವುಗಳು ಜ್ಞಾನಸಿಂಹಾಸನದ ಗೋತ್ರ ಸೂತ್ರ ಪ್ರವರಗಳು. ಮತ್ತು ಪಂಚಕಲಶಸ್ಥಾಪನೆ ಮುಂತಾದ ವಿಚಾರಗಳು ಸುಪ್ರಭೇದಾಗಮದಲ್ಲಿ ಉಲ್ಲೇಖಿಸಲ್ಪಟ್ಟಿವೆ. ಸ್ವಾಯಂಭುವಾಗಮದ[೨೬] ನವಮ ಪಟಲ ಆಚಾರ್ಯರ ಉಲ್ಲೇಖಗಳಿಗಾಗಿಯೇ ಮೀಸಲಾಗಿರುವುದು ಕಂಡುಬರುತ್ತದೆ. ಅಲ್ಲಿ ಬರುವ "ಪಂಚಾರಾಧ್ಯೋತ್ಪತ್ತಿ ಕಥನಂ" ಎನ್ನುವ ಪ್ರಕರಣದಲ್ಲಿ[೨೭] ಪಂಚಾಚಾರ್ಯರ ಕುರಿತು ವಿಸ್ತಾರವಾದ ವಿವರಣೆ ಇದೆ.

ಆಚಾರ್ಯರ ಅವತಾರದ ಉದ್ದೇಶ, ನೆಲೆ, ಹಿನ್ನೆಲೆ, ಲಿಂಗಾವತಾರ, ಧರ್ಮ ಸಂಸ್ಥಾಪನೆ, ಸಿದ್ಧಾಂತ ದರ್ಶನಗಳ ಬೋಧನೆ, ಪ್ರಚಾರ, ಪೀಠ ಸ್ಥಾಪನೆ, ಯುಗಭೇದಗಳ ಪವಿತ್ರನಾಮಗಳು, ಗೋತ್ರ-ಸೂತ್ರ-ಪ್ರವರ ಮುಂತಾದ ವಿಷಯಗಳು ವಿವರಿಸಲ್ಪಟ್ಟಿರುವುದು ಈ 'ಕಥನಂ'ದಲ್ಲಿ ನೋಡಬಹುದಾಗಿದೆ. ಅಲ್ಲಿನ ಕೆಲವೊಂದು ವಿವರಣೆಗಳು ಹೀಗಿವೆ:

> ಅತ ಏವ ಯುಗಭೇದೇನ ಪ್ರತಿನಾಮಾನ್ಯುಪಾಗತಾಃ।
> ಏಕಾಕ್ಷರೋ ದ್ವ್ಯಕ್ಷರಶ್ಚ ತ್ರ್ಯಕ್ಷರಶ್ಚತುರಕ್ಷರಃ॥[೨೮]
>
> ಪಂಚಾಕ್ಷರೇತಿ ವಿಖ್ಯಾತಾಸ್ತ್ರೇತಾಯಾಂ ಮೇನಕಾತ್ಮಜೇ।
> ದ್ವಾಪರೇತ್ವೇಕವಕ್ತ್ರಶ್ಚ ದ್ವಿಮುಖಸ್ತ್ರಿಮುಖಸ್ತಥಾ॥

---

೨೩. ಅದೇ.

೨೪. ಅದೇ.

೨೫. ಅದೇ.

೨೬. ಸ್ವಾಯಂಭುವಾಗಮ: ಪಟಲ-೯; ಶಿವಾಗಮ ಸೌರಭ: ಪು. ೪೮.

೨೭. ಅದೇ.

೨೮. ಸ್ವಾಯಂಭುವಾಗಮ: ೯.೪.

ಚತುರ್ಮುಖಃ ಪಂಚಮುಖಶ್ಚೇತಿ ತೇ ವಿಶ್ರುತಾ ಗಣಾಃ।
ಏಕೋರಾಮಃ ಪಂಡಿತಾರ್ಯಸ್ತಥಾ ರೇವಣಸಿದ್ಧರಾಟ್।

ಕಲೌ ಮರುಳಸಿದ್ಧೇಶೋ ವಿಶ್ವಾರಾಧ್ಯ ಇತಿ ಕ್ರಮಾತ್।
ಭವಿತಾರಃ ಪ್ರವಕ್ಷ್ಯಾಮಿ ಶೃಣು ತಜ್ಜನನಕ್ರಮಂ॥[೨೯]

ಆಚಾರ್ಯರ ಯುಗಭೇದದ ಹೆಸರುಗಳನ್ನು ಪ್ರಸ್ತಾಪಿಸಿದ ಸ್ವಾಯಂಭುವಾಗಮವು ಆಚಾರ್ಯರ ಲಿಂಗಾವತಾರ ಸ್ಥಳಗಳನ್ನು ಹೀಗೆ ಉಕ್ತಗೊಳಿಸಿದೆ:

ದ್ರಾಕ್ಷಾರಾಮೇ ರಾಮನಾಥಲಿಂಗೇ ಯುಗಚತುಷ್ಟಯೇ।
ಏಕೋರಾಮಸ್ಯ ಜನನಮಾವಾಸಸ್ತು ಹಿಮಾಲಯೇ॥

ಸುಧಾಕುಂಡಾಖ್ಯಸುಕ್ಷೇತ್ರೇ ಲಿಂಗೇ ಶ್ರೀ ಮಲ್ಲಿಕಾರ್ಜುನೇ।
ಜನನಂ ಪಂಡಿತಾರ್ಯಸ್ಯ ನಿವಾಸಃ ಶ್ರೀಗಿರೌ ಶಿವೇ॥

ತಥಾ ರೇವಣಸಿದ್ಧಸ್ಯ ಕೊಲ್ಲಿಪಾಕಿ ಮನೋಹರೇ।
ಸೋಮೇಶಲಿಂಗೇ ಜನನಮಾವಾಸಃ ಕದಲೀಪುರೇ॥

ತದ್ವನ್ಮರುಳಸಿದ್ಧಸ್ಯ ವಟಕ್ಷೇತ್ರೇ ಮಹತ್ತರೇ।
ಸಿದ್ಧಲಿಂಗೇ ಜನನಸ್ಥಾನಮುಜ್ಜಯಿನೀ ಪುರೇ॥

ಕಾಶ್ಯಾಂ ವಿಶ್ವೇಶ್ವರೇ ಲಿಂಗೇ ವಿಶ್ವಾರಾಧ್ಯಸ್ಯ ಸಂಭವಃ।
ಸ್ಥಾನಂ ಶ್ರೀ ಕೊಲ್ಲಿಪಾಕೇ? (ಕಾಶ್ಯಾಂ) ಚ ಶೃಣು ಪಾರ್ವತಿ ಸಾದರಂ

ಕೃತಾದ್ಯುಗಚತುಷ್ಕೇತೇ ಪಂಚಾರಾಧ್ಯಾ ಯಥಾವಿಧಿ।
ಮಮ ಪಂಚಮುಖೋದ್ಭೂತಾನ್ಸಂಸ್ಥಾಪ್ಯ ಕಲಶಾನ್ಭುವಿ॥[೩೦]

ಶೈವಾಗಮಗಳಲ್ಲಿ ಹದಿನೈದನೆಯದಾದ ವೀರಾಗಮದಲ್ಲಿ ಆಚಾರ್ಯ ರೇಣುಕರ ಸಾಮಾಜೋ-ಧಾರ್ಮಿಕ ಲೋಕಕಲ್ಯಾಣ ಕಾರ್ಯವು ವಸ್ತುನಿಷ್ಠವಾಗಿ ವಿವರಿಸಲ್ಪಟ್ಟಿದೆ. ಸುಮಾರು ಹದಿನೇಳು[೩೧] ಕಡೆಗಳಲ್ಲಿ ಭಗವತ್ಪಾದ ರೇಣುಕರನ್ನು ಉಕ್ತಗೊಳಿಸಿರುವುದು ಕಂಡುಬರುತ್ತದೆ. ಒಂದು ದೃಷ್ಟಿಯಿಂದ ನೋಡುವುದಾದರೆ ವೀರಾಗಮವು ರೇಣುಕ ಭಗವತ್ಪಾದರ ಚರಿತ್ರೆಗೆ ಮೀಸಲಾಗಿರುವ ಕೃತಿ ಎನಿಸುತ್ತದೆ. ಶ್ರೀ ಸಿದ್ಧಾಂತ ಶಿಖಾಮಣಿಯು ಆಚಾರ್ಯರು ಬೋಧಿಸಿದ ತಾತ್ವಿಕ ಸಿದ್ಧಾಂತ ಗ್ರಂಥವಾಗಿದೆ. ವೀರಾಗಮವು ಅವರ ಚರಿತ್ರೆಗೆ ಮೀಸಲಾಗಿರುವ ಚಾರಿತ್ರಿಕ ಗ್ರಂಥವೆಂದು ಹೇಳಬಹುದು.

ಮಾಹಿಷ್ಮತೀ ಪುರಾಧಿಪ ಶತಾನಂದ ಆಚಾರ್ಯ ರೇಣುಕರನ್ನು ಸಂದರ್ಶಿಸಿದ್ದು (೪೨೪), ಶತಾನಂದ ಕೃತ ರೇಣುಕಾತಿಥ್ಯ (೪೨೮), ಶತಾನಂದ ರೇಣುಕ ಸಂವಾದ (೪೩೩), ದೀಕ್ಷಾಪಟಲದ-ಪಂಚಾರಾಧ್ಯರು (೭೫), ಆಚಾರ್ಯ ರೇಣುಕರ ವರ್ಣನೆ

---

೨೯. ಅದೇ: ೯.೫-೭.

೩೦. ಅದೇ: ೯.೮-೧೩.

೩೧. ಶಿವಾಗಮ ಸೌರಭ: ಪು. ೧೦೩-೧೦೪-೧೦೫-೧೦೬.

(೯೮), ಶಿಂಶುಮಾರ-ರೇಣುಕ ಪ್ರಮಥನ ಪ್ರಶಂಸೆ (೨೬೦), ಮಾತಂಗನಿಗೆ- ರೇಣುಕರಿಂದ ಶಿವದೀಕ್ಷೆ (೪೨೭), ಸತ್ಯೇಂದ್ರ ಸುಶೀಲೆಯರ ಪುತ್ರ ಶಿವಶರ್ಮನಿಗೆ ಆಚಾರ್ಯ ರೇಣುಕರಿಂದ ಶಿವದೀಕ್ಷೆ (೫೪೩) ಮತ್ತು ತತ್ವ ಸ್ವರೂಪ ಪಟಲದ-ಆಚಾರ್ಯ ರೇಣುಕರ ಪ್ರಶಂಸೆ (೧-೧೦), ರೇಣುಕಾದ್ಯಾಃ ಪುರಾತನಾಃ (೬೨), ರೇಣುಕೋ ಮುನಿಪುಂಗವಃ (೧೫೦-೧೭೦), ರೇಣುಕರು-ಮಣಿಭದ್ರ (೧೭೭), ವೀರಮಾಹೇಶ್ವರ ಸ್ವರೂಪ ಪಟಲದ-ಆಚಾರ್ಯ ರೇಣುಕ ಕೃತ ಭೂರುದ್ರ ಪ್ರಶಂಸೆ (೧-೧೫), ಮಣಿಭದ್ರನಿಗೆ ರೇಣುಕರಿಂದ ಶಿವದೀಕ್ಷೆ (೧೮೨), ರೇಣುಕರ ಪ್ರಶಂಸೆ (೧೯೫) ಮುಂತಾದ ರೇಣುಕರಿಗೆ ಸಂಬಂಧಿಸಿದ ಪ್ರಕರಣಗಳು ವೀರಾಗಮದಲ್ಲಿ[೨೨] ಉಲ್ಲೇಖಗೊಂಡಿವೆ.

ವೀರಾಗಮದ ಕೆಲವು ಉಲ್ಲೇಖಗಳನ್ನು ಹೀಗೆ ನೋಡಬಹುದು.

ವದಂತಿ ಪ್ರಮಥಾ ಗೌರೀ ಗುರವೋ ರೇಣುಕಾದಯಃ।
ಪಂಚಪೂಜಾಕ್ರಿಯಾಯುಕ್ತಂ ಮಾನವಾನಾಂ ಮಹೀತಲೇ॥

ಅಶೇಷಪ್ರಮಥಾ ಲೋಕೇ ರೇಣುಕಾದ್ಯಾಃ ಪುರಾತನಾಃ।
ತಂತ್ರಶ್ಶೈವಂ ತ್ಯಜಂತ್ಯೇವ ಸುರಾಬಿಂದುಂ ಯಥಾ ಪ್ರಿಯೇ॥[೩೩]

ಜಗದೊಳಗೆ ಮೊದಲಿಗರಾದ ರೇಣುಕ, ದಾರುಕ, ಗಜಕರ್ಣ, ಘಂಟಾಕರ್ಣ ಮುಂತಾದ ಪ್ರಮುಖರಾದ ಗಣರು ಶಿವಮತವನ್ನು ಪ್ರಚುರ ಪಡಿಸಿರುವರು.

ನಿರಾಸಯಂತಿ ಮೇ ಪ್ರೀತ್ಯಾ ರೇಣುಕಾದ್ಯಾಃ ಪುರಾತನಾಃ।
ತೇಷಾಂ ವಿವರ್ಜಿತಂ ಕರ್ಮ ಗುಣಶ್ಶೈವನರಾಧಮಾಃ॥[೩೪]

ತದ್ಬಿಂಬಮಿತಿ ಹೇ ಗೌರಿ ರೇಣುಕಾದ್ಯಾ ವದಂತಿ ಹಿ।
ಬಿಂಬಶ್ಶೈವೇನ ತತ್ಸರ್ವಂ ಜಗತಾಂ ವೇಷ್ಟಿತಂ ಕೃತಂ।
ವೀರಮಾಹೇಶ್ವರಾಚಾರಂ ರೇಣುಕೇನ ಪ್ರಪೂರಿತಂ।
ಪಾಂಥಾತಿಥ್ಯಂ ಚ ಗುರುಣಾಶ್ರಮಂ ಭೇದಕರಂ ಪರಂ॥[೩೫]

ವೀರಶೈವಾಚಾರವು ಆಚಾರ್ಯ ರೇಣುಕಾದಿ ಪಂಚಾಚಾರ್ಯದಿಂದ ವಿಸ್ತರಿಸಲ್ಪಟ್ಟಿದೆ ಎಂದುಕ್ತಗೊಳಿಸುವ ವೀರಾಗಮವು ಆಚಾರ್ಯರು ಮತ್ತು ಮಠಗಳ ಬಗ್ಗೆ ಹೀಗೆ ಉಕ್ತಗೊಳಿಸುತ್ತದೆ:

ಮಠಶ್ಶೈವೇನ ಜಗತಾಂ ಮಧ್ಯಮಾಧವ ಸೇವಿತಾಃ।
ಭೂರುದ್ರಾ ಜಂಗಮಾಸ್ಸರ್ವೇ ರೇಜಿರೇ ರೇಣುಕಾದಯಃ॥

---

೩೨. ಅದೇ:

೩೩. ವೀರಾಗಮ : ಪು. ಡಾ॥ ಜ.ಚ.ನಿ. ಪು. ೧೦: (೧-೪೬,೭೯).

೩೪. ಅದೇ: ೧.೧೧೩.

೩೫. ವೀರಾಗಮ: ೧-೧೭೭.

ತದ್ಭಸ್ಮಂ ಕಲ್ಪಮಿತ್ಯಾಹುಃ ರೇಣುಕಾದ್ಯಾಃ ಪುರಾತನಾಃ।
ಕಲ್ಪಭಸ್ಮಂ ಸಮಾದಾಯ ಪ್ರಾಣಲಿಂಗಸ್ಯ ಸಂನಿಧೌ।।[೬೬]

ಭಗವತ್ಪಾದ ರೇಣುಕರ ವರ್ಣನೆ ಹೀಗೆ ಉಕ್ತವಾಗಿದೆ:

ದದರ್ಶ ರೇಣುಕಂ ಶ್ರೀಮಾನ್ ಅವ್ಯಾಹತತಪೋಬಲಃ।
ತುತೋಷ ಮನಸಾ ಧೀಮಾನ್ ವಚಸಾ ಕರ್ಮಣಾ ಪ್ರಿಯೇ।।
ರೇಣುಕಂ ಪಿಂಗಜಟಿಲಂ ಪ್ರಾಣಲಿಂಗಂ ಪ್ರತಿಷ್ಠಿತಂ।
ದೇಶೀಕೇಂದ್ರಂ ಸುರಾಧೀಶಂ ಶುಚಿದಂ ಮೋಕ್ಷದಾಯಕಂ।।
ಅಂಶುಮಾನಿವ ತತ್ತೀಕ್ಷರೋಚಿಗಾತ್ರಕಲಾನ್ವಿತಃ।
ರರಾಜ ರೇಣುಕಂ ದೃಷ್ಟ್ವಾ ಪೀಠಮಧ್ಯೇ ಪ್ರತಿಷ್ಠಿತಂ।।[೬೭]

ಮುಂದುವರೆದ ವೀರಾಗಮವು ಆಚಾರ್ಯ ರೇಣುಕರು ಶಿವಾದ್ವೈತ ಸಿದ್ಧಾಂತ ಸ್ಥಾಪಕರೆಂದು ಹೇಳುತ್ತದೆ:

ಪುರಾ ತ್ರೇತಾಯುಗೇ ಗೌರೀ ರೇಣುಕೋ ಮುನಿಪುಂಗವಃ।
ಸರ್ವಾಗಮಸಮೋಪೇತಃ ಸರ್ವಶಾಸ್ತ್ರಸಮನ್ವಿತಃ।।
ಕಲಾಭಿಜ್ಞೋ ಮಂತ್ರವೇತ್ತಾ ಮಂತ್ರಲಕ್ಷಣಲಕ್ಷಿತಃ।
ದೇಶಿಕೇಂದ್ರಸತ್ವನಿಧಿಃ ಷಟ್‌ಸ್ಥಲಬ್ರಹ್ಮಪೂಜಿತಃ।।[೬೮]

ಮದದ್ವೈತಪರಂ ಶಾಸ್ತ್ರಂ ವೇದವೇದಾಂತಸಮ್ಮತಂ।
ಸ್ಥಾಪಯಿಷ್ಯಸಿ ಭೂಲೋಕೇ ಸರ್ವೇಷಾಂ ಹಿತಕಾರಕಂ।।

ಯ ಇದಂ ಶಿವಸಿದ್ಧಾಂತಂ ವೀರಶೈವಮತಾತ್ಮಕಂ।
ಶೃಣೋತಿ ಶುದ್ಧಮನಸಾ ಸ ಯಾತಿ ಪರಮಾಂಗತಿಂ।।

ಗುರುಣಾ ಯೋಗಿರಾಜೇನ ರೇಣುಕೇನ ಮಹಾತ್ಮನಾ।
ಸದಾ ಕಾರ್ಯಾಣಿ ಕರ್ಮಾಣಿ ಏಕೋತ್ತರಶತಾನ್ಯಪಿ।।

ತ್ರಿಷಷ್ಠಿ ಶೀಲಯುಕ್ತಾನಿ ಷಟಸ್ಥಲಾನಿ ದಿನೇ ದಿನೇ।
ವಿಡಂಬಕೋ ಗಣಾಧ್ಯಕ್ಷಃ ಪ್ರಸಾದಂ ಮಂತ್ರಗರ್ಭಿತಂ।।

ಬುಧೋತ್ತಮಾ ಮಹೇಂದ್ರಾದ್ಯಾಃ ಶೈವದೀಕ್ಷಾ ಸಮನ್ವಿತಾಃ।
ಏಕೋತ್ತರಶತಸ್ಥಾನ ನಿಪುಣಾಸ್ತತ್ರ ನ ಪಾರಗಾಃ।।[೬೯]

ಆಕಾಶೇ ರೇಣುಕಂ ದೇವರಾಧ್ಯಂ ತತ್ತ್ವಪಾರಗಂ।

೬೬. ಅದೇ: ೧-೧೮೪, ೧೨೪.

೬೭. ಅದೇ: ೧-೪೨೪, ೪೨೫, ೪೩೨.

೬೮. ಅದೇ: ಪು.೮೨ (ಪ್ರಸ್ತಾವನೆ).

೬೯. ಅದೇ: ಪು. ೧೦೮.

ಯೋಗಿಗಳ ಪ್ರಭುವೂ, ಮಹಾತ್ಮನೂ ಆದ ರೇಣುಕ ಗುರುದೇವನಿಂದಾದರೂ ಸಹ ಏಕೋತ್ತರ ಶತ ಅಂದರೆ ನೂರೆಂದು ಕ್ರಿಯೆಗಳು, ಕಾಯಕಗಳು ಯಾವಾಗಲೂ ಮಾಡಲ್ಪಡತಕ್ಕವುಗಳು. ಅತಿ ಶೀಲಗಳಿಂದ ಕೂಡಿ ಷಟ್‌ಸ್ಥಲಗಳು ಪ್ರತಿದಿನದ ಕರ್ತವ್ಯಗಳು ಮೊದಲ ಮೂರು ಸಾಲುಗಳಲ್ಲಿ ರೇಣುಕರ ಕ್ರಿಯಾಶೀಲ ವ್ಯಕ್ತಿತ್ವ ವಿಶಿಷ್ಟವಾಗಿದೆ. ೬೩ ಶೀಲಗಳೊಡನೆ ೧೦೧ ಕ್ರಿಯಾಶೀಲ ಕಾಯಕಗಳಲ್ಲಿ ಸ್ವತಃ ಸತತ ನಿರತರಾಗಿರುತ್ತಿದ್ದರು. ಪ್ರತಿನಿತ್ಯ ಷಟ್‌ಸ್ಥಲಾನುಷ್ಠಾನದಲ್ಲಿ ನಿರತರಾಗಿರುತ್ತಿದ್ದರು.[೪೦] ಇದರಿಂದ ಅವರ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವ ದರ್ಶಿಸುತ್ತದೆ.

ಆಚಾರ್ಯ ರೇಣುಕರು ಕಾಯಕಯೋಗಿರಾಜರವರು, ನೂರೊಂದು ಕಾಯಕಗಳ ನಾಯಕರು. ಸತ್ಯಶೀಲ ಕಾಯಕವಂತರಲ್ಲಿ ಸರ್ವೋತ್ತಮರು, ಸಾರ್ವಭೌಮ ಕಾರಣಿಕ ಪುರುಷರು ಎಂದು ಆಚಾರ್ಯ ರೇಣುಕರನ್ನು ವೀರಾಗಮ[೪೧]ವು ಮುಂತಾದ ರೀತಿಯಲ್ಲಿ ವರ್ಣಿಸುತ್ತದೆ.

ಪಾಶುಪತಾಗಮವು[೪೨] ಸಹ ಸ್ವಾಯಂಭುವಾಗಮದ ತರಹ ಪಂಚ ಆಚಾರ್ಯರು, ಅವರ ಲಿಂಗಾವತಾರದ ಉದ್ದೇಶ, ಹಿನ್ನೆಲೆ ಮತ್ತು ಪಂಚಕಲಶ, ಪೂಜಾ ಪದ್ಧತಿ, ಶಿವದೀಕ್ಷೆ ಮುಂತಾದ ಧರ್ಮ ಪ್ರಸಾರದ ವಿಷಯಗಳನ್ನು ಉಲ್ಲೇಖಿಸುತ್ತದೆ.

ರೇಣುಕಾದಿ ಪಂಚಾಚಾರ್ಯರು ವೀರಶೈವ ಧರ್ಮ ಸಂಸ್ಥಾಪನೆಯೊಂದಿಗೆ[೪೩] ಲೋಕ ಕಲ್ಯಾಣ ಮಾಡಿರುವ ಸಂಗತಿಯನ್ನು ಹೀಗೆ ಉಕ್ತಗೊಳಿಸುತ್ತದೆ:

ಆಗಮೋಕ್ತಪ್ರಕಾರೇಣ ಪರಂಜ್ಯೋತಿಃಸ್ವರೂಪಿಣಾಂ।
ಸ್ವಮುಖೋದ್ಭೂತಪಂಚಾನಾಂ ಮತಸಂಸ್ಥಾಪನಾಯ ಚ॥

ಇಷ್ಟಲಿಂಗಂ ಚ ತೇ ದೃತ್ವಾ ಮೋಕ್ಷಮಾರ್ಗ ಪ್ರವರ್ತಕಾಃ।
ಏಕಾಕ್ಷರಸ್ತು ತ್ರೇತಾಯಾಮೇಕವಕ್ತ್ರೋ ಗಣೇಶ್ವರಃ॥

ದ್ವ್ಯಕ್ಷರೋ ದ್ವಿಮುಖಾಶ್ಚಾಸೀತ್ ತ್ರ್ಯಕ್ಷರಸ್ತ್ರಿಮುಖಶ್ಚ ಸಃ।
ಚತುರಕ್ಷರಶ್ಚತುರ್ವಕ್ತ್ರಸ್ತಥಾ ಪಂಚಾಕ್ಷರಶ್ಚ ಸಃ॥

..........ಏತ್ಯೈಃ ಪಂಚಭಿರಾಚಾರ್ಯೈಃ ದ್ವಾಪರೇ ರಾಜಸತ್ತಮಾಃ।
ಹರಿಶ್ಚಂದ್ರೋನಳಶ್ಚೈವ ಪುರುಕುತ್ಸಪುರರಾವಾಃ॥

ಸಗರಃ ಕಾರ್ತವೀರ್ಯಶ್ಚ ಅಂಬರೀಷಸ್ತಥೈವ ಚ॥
..........ಕೃತೇ ತ್ರೇತಾಯುಗೇ ಚೈವ ಸುರಾಶ್ಚ ಮುನಯಸ್ತಥಾ।
ನೀಲರತ್ನಮಯಂ ಲಿಂಗಂ ದೃತವಂತ ಇತಿ ಶ್ರುತಾಃ॥

---

೪೦. ಅದೇ, ಪು. ೧೧೯.
೪೧. ಅದೇ.
೪೨. ಶಿವಾಗಮ ಸೌರಭ: ಪು. ೩ (ಅನುಬಂಧ).
೪೩. ಅದೇ.

.........ಆದೀಧರನ್ ವಜ್ರಮಯಂ ಲಿಂಗಂ ಶಾಸ್ತ್ರೋಕ್ತಮಾರ್ಗತಃ||
ಕಲಾಯುಗೇ ದಾರುಕೋಸೌ ಮರುಳಾರಾಧ್ಯನಾಮವಾನ್।
ಶಂಕುಕರ್ಣಾರಾಧ್ಯ ಏವ ಏಕೋರಾಮೇತಿ ವಿಶ್ರುತಃ||

ರೇಣುಕರ್ಣಸ್ತಥೈವಾಸೌ ರೇವಣಾರಾಧ್ಯನಾಮವಾನ್।
ಧೇನುಕರ್ಣಾಚಾರ್ಯ ಏವ ಪಂಡಿತಾರಾಧ್ಯನಾಮವಾನ್||

ವಿಶ್ವಕರ್ಣಾಚಾರ್ಯ ಏವ ವಿಶ್ವರಾಧ್ಯಾ ಇತಿ ಸ್ಮೃತಃ।[೪೪]

ಕಲಾಯುಗೇ ಮನುಷ್ಯಾಣಾಂ ಬ್ರಹ್ಮಕ್ಷವಿಶಾಮಪಿ||
ಶೂದ್ರಾದೀನಾಮಷ್ಟಾದಶಜಾತೀನಾಂ ಚ ತಥೈವ ಚ।
ತಥಾ ಶತೈಕಕುಲಜಮನುಷ್ಯಾಣಾಂ ತಥೈವ ಚ||
ಏತೇ ಜಗದ್ಧಿತಾರ್ಥಾಯ ಸಂಚಾರಂ ಚಕ್ರುರಂಜಸಾ।

ರೇಣುಕಾದಿ ಪಂಚಾಚಾರ್ಯರು ಯುಗಗಳಲ್ಲಿ ವಿಭಿನ್ನ ನಾಮಗಳಿಂದ ಅವತರಿಸಿ ಆ ಕಾಲದಲ್ಲಿ ಮುನಿ, ಗಣ, ರಾಜ-ಮಹಾರಾಜ, ಜನಸಾಮಾನ್ಯರಿಗೆ ಲಿಂಗದೀಕ್ಷೆಯನ್ನು ನೀಡಿ ಅವರ ಜನ್ಮ ಪಾವನ ಮಾಡಿರುವ ವಿಷಯ ಪಾಶುಪತಾಗಮದಲ್ಲಿ ಅಳವಟ್ಟಿದೆ. ಹೀಗೆ- ಪಾಶುಪತಾಗಮದ ದ್ವಿತಿಯ ಪಟಲ ಐವರು ಆಚಾರ್ಯರಿಗಾಗಿಯೇ ಮೀಸಲಾಗಿರುವುದನ್ನು ನೋಡಬಹುದಾಗಿದೆ.

ವಚನ ವಾಙ್ಮಯ ಮತ್ತು ಆಚಾರ್ಯರು:

ಹನ್ನೆರಡನೆಯ ಶತಮಾನದ ವಚನ-ವಾಙ್ಮಯದಲ್ಲಿ ಅನೇಕ ಶರಣರು ತಮ್ಮ ವಚನಗಳಲ್ಲಿ ಆಚಾರ್ಯರನ್ನು ಸ್ಮರಿಸಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಬಸವಪೂರ್ವ, ಬಸವ ಹಿರಿಯ ಸಮಕಾಲೀನ ಮತ್ತು ಬಸವಕಾಲೀನ ಶರಣರು ಇವರಲ್ಲಿ ಸೇರಿರುವುದು ಕಾಣಬಹುದಾಗಿದೆ.

ಸಕಲೇಶ ಮಾದರಸ, ಆದಯ್ಯ, ಅಕ್ಕಮಹಾದೇವಿ, ಬಾಲಬೊಮ್ಮಣಯ್ಯ, ಅಕ್ಕನಾಗಲಾಂಬಿಕೆ, ಮೆರೆಮಿಂಡ ದೇವಯ್ಯ, ಸಿದ್ಧರಾಮ, ಚನ್ನಬಸವಣ್ಣ, ಹಾವಿನಹಾಳ ಕಲ್ಲಯ್ಯ ಮುಂತಾದ ಶರಣರನ್ನ ಇಲ್ಲಿ ಉಲ್ಲೇಖಿಸಬಹುದು. ರೇವಣಸಿದ್ಧ, ಮರುಳಸಿದ್ಧ, ಪಂಡಿತಾರಾಧ್ಯ ಮುಂತಾದ ಆಚಾರ್ಯರೂ ಸಹ ವಚನಗಳನ್ನು ರಚಿಸಿರುವುದು ತಿಳಿದು ಬರುತ್ತದೆ.

ಬಸವಣ್ಣನವರಿಗಿಂತ ಅರ್ಧಶತಮಾನದಷ್ಟು ಹಿಂದಿನವರೆಂದು ಗುರುತಿಸಲಾಗಿರುವ ಆದಯ್ಯ (ಕ್ರಿ.ಶ. ೧೧೮೫)[೪೫]ನು ತನ್ನ ಎರಡು ವಚನಗಳಲ್ಲಿ ಆಚಾರ್ಯರನ್ನ ನೆನೆದಿರುವುದು ಹೀಗೆ ನೋಡಬಹುದು.

---

೪೪. ಪಾಶುಪತಾಗಮ: ೨.೬೬-೮೨.

೪೫. ವೀರಶೈವ: ಸಂ. ಡಾ|| ಆರ್.ಸಿ. ಹಿರೇಮಠ ಮತ್ತು ಪ್ರಾ: ಅ.ಸಿ. ಹಿರೇಮಠ ನೋಡಿ, ಡಾ|| ಸಂಗಮೇಶ ಸವದತ್ತಿಮಠರ "ಆದಯ್ಯ ಬಸವಣ್ಣ ಮತ್ತು ವೀರಶೈವ ಪ್ರಾಚೀನತೆ" ಲೇಖನ ಪು. ೨೫೫.

ರೇವಣಸಿದ್ಧಯ್ಯ ದೇವರ ನಿಷ್ಠೆ
ಮರುಳಸಿದ್ಧಯ್ಯ ದೇವರ ದೃಷ್ಟಿ
ಏಕೋರಾಮಯ್ಯಗಳ ಆಚಾರನಿಷ್ಠೆ
ಪಂಡಿತಾರಾಧ್ಯರ ಪ್ರಸಾದ ನಿಷ್ಠೆ
....
ಸೌರಾಷ್ಟ್ರ ಸೋಮೇಶ್ವರ[೪೬]

ಎಂದು ಕೊಂಡಾಡಿದ್ದಾನೆ. ಆತನ ಇನ್ನೊಂದು ವಚನ ಹೀಗಿದೆ:

ರೇವಣಸಿದ್ಧಯ್ಯ ದೇವರೆನ್ನ ನೇತ್ರದ ದೃಕ್ಕು
ಮರುಳಸಿದ್ಧಯ್ಯ ದೇವರೆನ್ನ ಶ್ರೋತ್ರ
ಪಂಡಿತಾರಾಧ್ಯ ದೇವರೆನ್ನ ಜಿಹ್ವೆ
ಏಕೋರಾಮಯ್ಯಗಳೆನ್ನ ನಾಸಿಕ
....
ಸೌರಾಷ್ಟ್ರ ಸೋಮೇಶ್ವರ ಆ ನಿಮ್ಮ ಶರಣರ
ಪಡಿದೊತ್ತಯ್ಯ[೪೭]

ಮೆರೆಮಿಂಡದೇವಯ್ಯ[೪೮] ತನ್ನ ಒಂದು ವಚನದಲ್ಲಿ:

ಎನ್ನ ಘ್ರಾಣ ಶುದ್ಧವಾಯಿತಯ್ಯ
ಏಕೋರಾಮಿ ತಂದೆಗಳ ಧರ್ಮದಿಂದ
ಎನ್ನ ಜಿಹ್ವೆ ಶುದ್ಧವಾಯಿತಯ್ಯ
ಪಂಡಿತಾರಾಧ್ಯರ ಧರ್ಮದಿಂದ
ಎನ್ನ ನೇತ್ರ ಶುದ್ಧವಾಯಿತಯ್ಯ
ರೇವಣಸಿದ್ಧಯ್ಯ ದೇವರ ಧರ್ಮದಿಂದ
ಎನ್ನ ಶ್ರೋತ್ರ ಶುದ್ಧವಾಯಿತಯ್ಯ
ಮರುಳಸಿದ್ಧೇಶ್ವರ ದೇವರ ಧರ್ಮದಿಂದ
....
ಐಘಟದೂರು ರಾಮೇಶ್ವರ ನಿಮ್ಮ ಶರಣರ
ಧರ್ಮದಿಂದ ನಾನು ಶುದ್ಧನಾದೆನಯ್ಯ

ಎಂದು ಆಚಾರ್ಯರನ್ನು ಸ್ಮರಿಸಿ ಮುಂದೆ ಸಕಲೇಶ ಮಾದರಸ, ತೆಲುಗು ಬೊಮ್ಮಯ್ಯ, ಕೇಶಿರಾಜಯ್ಯ, ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ, ಮಡಿವಾಳಯ್ಯ ಇತ್ಯಾದಿ ಶರಣರನ್ನು ಜೊತೆಯಲ್ಲಿ ನೆನೆದಿರುವುದು ಗೋಚರಿಸುತ್ತದೆ.

ಬಾಲಬೊಮ್ಮಣ್ಣನು ಶರಣರೊಂದಿಗೆ ಆಚಾರ್ಯರನ್ನು ವಚನದಲ್ಲಿ ಹೀಗೆ ಸ್ಮರಿಸಿದ್ದಾನೆ.

---

೪೬. ಸಂಕೀರ್ಣ ವಚನ ಸಂಪುಟ: ೧ ವಚನ ೨೭೫.

೪೭. ಅದೇ; ವಚನ-೩೭೬.

೪೮. ವಚನ ಸಂ-೩ ವಚನ-೨೭.

ಗುರುವಾಗಿ ಬಂದರಯ್ಯ ರೇವಣಸಿದ್ಧೇಶ್ವರ ದೇವರು
ಲಿಂಗದಲ್ಲಿ ನಿಬ್ಬೆರಗಾದರಯ್ಯ ಅನಿಮಿಷದೇವರು
ಜಂಗಮವಾಗಿ ಸುಳಿದರಯ್ಯ ಪ್ರಭುದೇವರು
....
ಇಂತಿವರ ಒಕ್ಕು ಮಿಕ್ಕು ಬಯಲ ಪ್ರಸಾದವ
ಕೊಂಡು ಬದುಕಿದೆನಯ್ಯ ವೀರಶೂರ
ರಾಮೇಶ್ವರ"[೪೯]

ವಚನದಲ್ಲಿ ಆಚಾರ್ಯ ರೇವಣಸಿದ್ಧರನ್ನು 'ಗುರು' ವೆಂದು ಸಂಬೋಧಿಸಿರುವುದು ತುಂಬಾ ಗಮನಾರ್ಹವಾದುದು.

ಶ್ರೀ ಗಿರಿಯಲ್ಲಿ ಮಲ್ಲಿಕಾರ್ಜುನನ ವರಕೃಪೆಯಿಂದ ಸೊನ್ನಲಿಗೆಯನ್ನು ಅಭಿನವ ಶ್ರೀಶೈಲವನ್ನಾಗಿಸಿದ ಕಾಯಕಯೋಗಿ, ಅಷ್ಟಾಂಗಯೋಗಸಿದ್ಧ ಶಿವಯೋಗಿ ಸಿದ್ಧರಾಮೇಶ್ವರರು ತಮ್ಮ ಒಂದು ವಚನದಲ್ಲಿ:[೫೦]

ಬಲ್ಲಿದ ಬಾಣನ ಬಾಗಿಲ ಕಾಯ್ವರವರು
ಭೂತಗಳೇನಯ್ಯ
ಅಪ್ಪ ರೇವಣಸಿದ್ಧರು ನೀರ ಹೊತ್ತನೆಂಬರು
ನಮ್ಮ ನೀರ ಹೊರುವರವರು
ಕೂಲಿಕಾರರೇನಯ್ಯ
ಸರ್ವೇಷಾ ಹೃದುಸ್ಥಿತಿಶ್ಚಂದ್ರ ಮೌಳಿ
ಎಂಬ ಶ್ರುತಿವಾಕ್ಯವ ನಂಬು ನಂಬು
ಕಪಿಲ ಸಿದ್ಧಮಲ್ಲಿಕಾರ್ಜುನನ ಮುಂದೆ ಎಲೆ ಮನವೆ

ಎಂದು ಆಚಾರ್ಯ ರೇವಣಸಿದ್ಧರನ್ನು ಮನದುಂಬಿ ನೆನೆದಿದ್ದಾರೆ. ಇಲ್ಲಿ ರೇವಣಸಿದ್ಧರನ್ನು 'ಅಪ್ಪ' ಎಂದು ಕರುಳ ಬಳ್ಳಿಯ ಪದವನ್ನು ಸಂಬೋಧಿಸಿರುವುದು ಗಮನ ಸೆಳೆಯುತ್ತದೆ. ಸಿದ್ಧರಾಮೇಶ್ವರರು ರೇವಣಸಿದ್ಧರ 'ದೃಷ್ಟಿಗರ್ಭ-ಸಂಭೂತ'[೫೧]ರೆಂದು ಅಥವಾ ಅವರ ವರಪ್ರಸಾದದಿಂದ ಜನಿಸಿದವರೆನ್ನುವ ಚಾರಿತ್ರಿಕ ಸಂಗತಿ ಸ್ಪಷ್ಟವಾಗಿರುವುದರಿಂದ ಅವರ ಈ ವಚನ ಮಹತ್ವದ ವಚನವಾಗಿ ಗಮನ ಸೆಳೆಯುತ್ತದೆ.

ಸಿದ್ಧರಾಮೇಶ್ವರರ ಇನ್ನೊಂದು ವಚನದಲ್ಲಿ "ಮರುಳಸಿದ್ಧರ ವಚನ ಅರುವತ್ತೆಂಟು ಸಾಸಿರ" ಎಂದು ಉಕ್ತವಾಗಿದೆ.

ಅಕ್ಕನಾಗಮ್ಮನವರ ವಚನವೊಂದರಲ್ಲಿ ಆಚಾರ್ಯ ರೇವಣಸಿದ್ಧರು 'ಲಿಂಗದಿಂದುದಯ'ವಾದವರೆಂದಿರುವುದನ್ನು ಕಾಣಬಹುದಾಗಿದೆ.

---

೪೯. ಅದೇ; ವಚನ-೬.

೫೦. ಸಿದ್ಧರಾಮೇಶ್ವರ ವಚನಗಳು: ವಚನ-೩೬೭.

೫೧. ವೀರಶೈವ ದರ್ಶನ: ಪು. ೨.

ಅಂಗದಿಂದುದಯವಾದಾತ ಮಡಿವಾಳಯ್ಯ
ಲಿಂಗದಿಂದುದಯವಾದಾತ ರೇವಣಸಿದ್ಧಯ್ಯ
ಭಸ್ಮದಿಂದುದಯವಾದಾತ ಸಿದ್ಧರಾಮಯ್ಯ
ಪಾದೋದಕದಿಂದ ಉದಯವಾದವಳು
ಅಕ್ಕಮಹಾದೇವಿ
ಮಂತ್ರದಿಂದುದಯವಾದತ ನಿಮ್ಮ ಸೋದರ
ಮಾವ ಬಸವಯ್ಯ
ಪ್ರಸಾದಿಂದುಯವಾದಾತ ನೀನಲ್ಲವೇ ಚೆನ್ನಬಸವಯ್ಯ
ಬಸವಣ್ಣ ಪ್ರಿಯ ಚೆನ್ನಸಂಗಯ್ಯ[೫೨]

ರೇವಣಸಿದ್ಧರ ಕರಕಮಲ ಸಂಜಾತ ಆಚಾರ್ಯ ಘನಲಿಂಗ ರುದ್ರಮುನೀಶ್ವರ ಶಿವಾಚಾರ್ಯರ ಶಿಷ್ಯನಾದ ಹಾವಿನಹಾಳ ಕಲ್ಲಯ್ಯನು ತನ್ನ ವಚನದಲ್ಲಿ ಶಂಕರದಾಸಿಮಯ್ಯ, ಉರಿಲಿಂಗಪೆದ್ದಿ, ಘಟ್ಟಿವಾಳಯ್ಯ ಅಜಗಣ್ಣ, ನಿಜಗುಣ, ಅನಿಮಿಷರನ್ನು ನೆನೆದು ನಂತರ:

ಎನ್ನ ಘ್ರಾಣದಲ್ಲಿ ಸ್ವಾಯತವಾದನಯ್ಯ
ಏಕೋರಾಮಿ ತಂದೆಗಳು
ಎನ್ನ ಜಿಹ್ವೆಯಲ್ಲಿ ಸ್ವಾಯತವಾದನಯ್ಯ
ಪಂಡಿತಾರಾಧ್ಯರು
ಎನ್ನ ನೇತ್ರದಲ್ಲಿ ಸ್ವಾಯತವಾದನಯ್ಯ
ರೇವಣಸಿದ್ಧೇಶ್ವರ ದೇವರು
ಎನ್ನತ್ವಕ್ಕಿನಲ್ಲಿ ಸ್ವಾಯತಕವಾದನಯ್ಯ
ಸಿದ್ಧರಾಮೇಶ್ವರ ದೇವರು
ಎನ್ನ ಶ್ರೋತ್ರದಲ್ಲಿ ಸ್ವಾಯತವಾದನಯ್ಯ
ಮರುಳ ಸಿದ್ಧೇಶ್ವರ ದೇವರು

ಎಂದು ಸ್ಮರಿಸಿ, ನಂತರ ಪ್ರಭುದೇವ, ಚೆನ್ನಬಸವಣ್ಣ, ಸಂಗನಬಸವಣ್ಣ, ಮಾಚಯ್ಯ, ಸೊಡ್ಡಳ ಬಾಚರಸ, ಹಡಪದ ಅಪ್ಪಣ್ಣ, ಕಿನ್ನರಿ ಬ್ರಹ್ಮಯ್ಯ ಮೊದಲಾದವರನ್ನು ನೆನೆದು ಅಂತ್ಯದಲ್ಲಿ... ಎನ್ನ ಸರ್ವಾಂಗದಲ್ಲಿ ಸ್ವಾಯತವಾದರಯ್ಯ ಗಣಂಗಳು ಮಹಾಲಿಂಗ ಕಲ್ಲೇಶ್ವರಾ ನಿಮ್ಮ ಶರಣರ ಶ್ರೀ ಪಾದಕ್ಕೆ ನಮೋ ನಮೋ ಎನುತಿರ್ದೆನು[೫೩] ಎಂದು ತನ್ನ ಭಕ್ತಿಗೌರವವನ್ನು ವ್ಯಕ್ತಪಡಿಸಿದ್ದಾನೆ.

ಮಹಾದೇವಿಯಕ್ಕ[೫೪] ತನ್ನವೊಂದು ವಚನದಲ್ಲಿ ಆಚಾರ್ಯರು 'ಲಿಂಗೋದ್ಭವ'-ರೆಂದಿರುವುದು ಗಮನಿಸಬೇಕು. ಆ ವಚನ ಹೀಗಿದೆ:

---

೫೨. ಶಿವಶರಣೆಯರ ವಚನ ಸಂಪುಟ: ವಚನ-೨೩೦.

೫೩. ಏಳುಮಲೆಯ ಗುರುಸಂತ ದೇವರ ವಚನ ಸಂಕಲನಗಳು; ಸಂ. ವೀರಣ್ಣ ರಾಜೂರ ಪು. ೧೩೫.

೫೪. ಅಕ್ಕಮಹಾದೇವಿಯ ವಚನಗಳು ವಚನ-೯೩.

ಲಿಂಗದಿಂದುದಯಿಸಿ ಅಂಗವಿಡಿದ ಪುರಾತನರ
ಇಂಗಿತವೇನೆಂದು ಬೆಸೆಗೊಂಬೆನಯ್ಯ?
ಅವರ ನಡೆಯೆ ಆಗಮ ಅವರ ನುಡಿಯೇ ವೇದ
ಅವರ ಲೋಕದ ಮಾನವರೆಂದೆನ್ನಬಹುದೇ?
ಅದೆಂತೆಂದೊಡೆ

ವೃಕ್ಷಾದ್ಭವಂತಿ ಬೀಜಾನಿ ತದ್ವೃಕ್ಷೇ ಲೀಯತೇ ಪುನಃ।
ರುದ್ರಲೋಕಂ ಪರಿತ್ಯಜ್ಯ ಶಿವಲೋಕೇ ಭವಿಷ್ಯತಿ॥

ಎಂಬುದಾಗಿ ಅಂಕೋಲೆಯ ಬೀಜದಿಂದಾಯಿತು ವೃಕ್ಷವು
ಆ ವೃಕ್ಷವು ಮರಳಿ ಬೀಜದೊಳಗಿತ್ತು
ಆ ಪ್ರಕಾರದಿಂ ಲಿಂಗದಿಂದುದಯಿಸಿದ
ಆ ಪುರಾತನರು ಆ ಲಿಂಗದೊಳಗೆ
ಬೆರೆಸಿದರು ನೋಡಿರಯ್ಯ
ಇಂತಪ್ಪ ಪುರಾತನರಿಗೆ ನಾನು ಶರಣೆಂದು
ಹುಟ್ಟು ಗೆಟ್ಟೆನಯ್ಯ ಚನ್ನಮಲ್ಲಿಕಾರ್ಜುನ

ಎಂದು ನುಡಿದ ಅಕ್ಕ 'ಪುರಾತನ'ರಾದ ಐವರು ಆಚಾರ್ಯರು 'ಲಿಂಗೋದ್ಭವ'ರಾಗಿರುವ ಸಂಗತಿಯನ್ನು ಅಂಕೋಲೆಯ 'ಬೀಜ ವೃಕ್ಷನ್ಯಾಯ'ದ ಸೋದಾಹರಣೆಯೊಂದಿಗೆ ವಿವರಿಸಿರುವುದು ನೋಡಬಹುದಾಗಿದೆ. ಬೀಜದಿಂದ ವೃಕ್ಷವು ಪಲ್ಲವಿಸಿ ಹೆಮ್ಮರವಾಗಿ ಪುನಃ ಆ ವೃಕ್ಷವು ಬೀಜದಲ್ಲಿಯೇ ಅಡಗುವ ಸೃಷ್ಠಿಯ ಕ್ರಿಯೆಯಂತೆ ರೇಣುಕಾದಿ ಪಂಚಾಚಾರ್ಯರು ಪರಮಾತ್ಮನ ಸಂಕೇತವಾದ ಲಿಂಗದಿಂದ ಅವತರಿಸಿ ಪುನಃ ಆ ಲಿಂಗದೊಳಗೆ ಅಡಗಿರುವರೆನ್ನುವ 'ಪರಿ'ಯನ್ನು ತಿಳಿಸಿ, ಅಂತಹ ಮಹಿಮಾನ್ವಿತರು ನಡೆದಿರುವುದೇ ಆಗಮ, ನುಡಿದಿರುವುದೇ ವೇದ ಎಂದು ಅವರ ಘನಮಹಿಮೆಯನ್ನು ಕೊಂಡಾಡಿ, ಅಂತಹ ಆಚಾರ್ಯರಿಗೆ ಶರಣೆಂದು ತನ್ನ ಜೀವನ ಸಾಫಲ್ಯತೆ ಹೊಂದಿರುವುದನ್ನು ಮಹಾದೇವಿಯಕ್ಕ ಹೇಳಿಕೊಂಡಿದ್ದಾಳೆ.

ಇದೇ ರೀತಿಯಲ್ಲಿ ಚೆನ್ನಬಸವಣ್ಣನವರು[೫೫] ತಮ್ಮ ವಚನ ಒಂದರಲ್ಲಿ ಆಚಾರ್ಯರು ಲಿಂಗೋದ್ಭವರೆನ್ನುವ ವಿಚಾರ ಪರೋಕ್ಷವಾಗಿ ಪ್ರತಿಪಾದಿಸಿರುವುದು ಈ ಕೆಳಗಿನ ವಚನ ಶೃತಪಡಿಸುತ್ತದೆ.

ಲಿಂಗದಿಂದುದಯಿಸಿ ಅಂಗವಿಡಿದವರ ಇಂಗಿತವನೇನೆಂಬೆನಯ್ಯ
ಅವರ ನಡೆಯೇ ಆಗಮ ಅವರ ನುಡಿಯೇ ಪರಮಾಮೃತ
ಅವರ ಲೋಕದ ಮಾನವರೆನ್ನಬಹುದೇ ಅಯ್ಯಾ

ವೃಕ್ಷಾದ್ಭವತಿ ಬೀಜಂ ಹಿ ತದ್ ವೃಕ್ಷೇ ಲೀಯತೇ ಪುನಃ।
ರುದ್ರಲೋಕೇ ಪರಿತ್ಯಜ್ಯ ಶಿವಲೋಕೇ ಪ್ರವಿಶ್ಯತಿ
ಅಂಕೋಲೆಯ ಬೀಜ ತರುವನಪ್ಪುವಂತೆ
ಅಪ್ಪುವರಯ್ಯ ಕೂಡಲ ಚನ್ನಸಂಗಾ ನಿಮ್ಮ ಶರಣರು

—

೫೫. ಚೆನ್ನಬಸವಣ್ಣನವರ ವಚನಗಳು; ವಚನ -೭೭೨.

ಈ ವಚನವು ಅಕ್ಕಮಹಾದೇವಿಯ ವಚನವನ್ನು ಪುಷ್ಟೀಕರಿಸುವಂತಿದೆ.

ಅದೇ ಚೆನ್ನಬಸವಣ್ಣನವರ[೫೬] "ಕಕ್ಷೆಯಲ್ಲಿ ಲಿಂಗಧರಿಸಿದಾತ ಬ್ರಹ್ಮ" ಎಂದು ಆರಂಭವಾಗುವ ಇನ್ನೊಂದು ವಚನದಲ್ಲಿ "ಪ್ರಭು ದೇವರು ವೀರಶೈವದ ಲಿಂಗಜಂಗಮದ ಷಟ್‌ಸ್ಥಲ"ದ ವಿಚಾರ ಸಂದರ್ಭದಲ್ಲಿ ಆಚಾರ್ಯ ರೇವಣಸಿದ್ಧರ ಅಭಿದಾನ 'ಪ್ರಮಾಣ್ಯ'ವಾಗಿ ಉಕ್ತಗೊಳಿಸುವುದು ಕುತೂಹಲಕಾರಿಯಾದ ಸಂಗತಿ.

ಕಕ್ಷೆಯಲ್ಲಿ ಲಿಂಗಧರಿಸಿಕೊಂಡಾತ ಬ್ರಹ್ಮ
....
ರೇವಣಸಿದ್ಧಯ್ಯ ದೇವರ ಸಾಕ್ಷಿಯಾಗಿ
ಪ್ರಭುದೇವರ ವೀರಶೈವದ ಲಿಂಗ ಜಂಗಮದ
ಷಡುಸ್ಥಳದ ಸುಳುಹು
ಆ ಭೇದವ ಕೂಡಲ ಚೆನ್ನಸಂಗಯ್ಯನಲ್ಲಿ
ಕಾಣಾ ಸಿದ್ಧರಾಮ.

ಮಡಿವಾಳ ಮಾಚಿದೇವನ[೫೭] "ಇಂದ್ರಲೋಕದವರೆಲ್ಲರೂ ಸೂತಕರಾ" ಎಂದು ಪ್ರಾರಂಭವಾಗುವ ವಚನದಲ್ಲಿ "ಲಂಬೋದರ, ಕುಂಬೋದರರೊಂದಿಗೆ" ಆಚಾರ್ಯರಾದ ರೇಣುಕ, ದಾರುಕರನ್ನು ನೆನೆದಿರುವುದು ಕಾಣಬರುತ್ತದೆ.

ಪ್ರಸಾದಿ ಭೋಗಣ್ಣನು[೫೭(ಎ)] ತನ್ನ ಒಂದು ವಚನದಲ್ಲಿ:

ಶ್ರೀಪತಿ ಶಿವಲೆಂಕ ಪಂಡಿತಾರಾಧ್ಯ
ಏಕಾಂತದ ರಾಮ
ಇಂತೀ ಪ್ರಮಥದ ಆಚಾರ್ಯರು
ಇಷ್ಟಮತಂಗಳಿಂದ
ಗುರುಸ್ಥಲ ಲಿಂಗಸ್ಥಲ ಉಭಯಮಾರ್ಗ
ಆಚಾರ್ಯ ಸ್ಥಲ
ಷಡಸ್ಥಲ ಒಳಗಾದ ನಾನಾ ಸ್ಥಲಂಗಳಲ್ಲಿ
....
ಸಂಚಿತ ಪ್ರಾರಬ್ಧ ಆಗಾಮಿಗಳಲ್ಲಿ ಉಪಚಕ್ಷು
ನೀನಾಗಿ ಸಲುಹಿದೆಯಲ್ಲಾ
ಚನ್ನಬಸವಣ್ಣ ಪ್ರಿಯ ಭೋಗ ಮಲ್ಲಿಕಾರ್ಜುನ ಲಿಂಗದಲ್ಲಿ

ಎಂದು ಶರಣರ ಹಿರಿಯ ಸಮಕಾಲೀನರಾದ ಶ್ರೀಪತಿ ಪಂಡಿತಾರಾಧ್ಯ, ಮಂಚಣ್ಣ ಪಂಡಿತಾರಾಧ್ಯ ಮತ್ತು ಮಲ್ಲಿಕಾರ್ಜುನ ಪಂಡಿತಾರಾಧ್ಯ -ಈ 'ಪಂಡಿತ್ರಯ'ರನ್ನು 'ಪ್ರಥಮದ' -ಆಚಾರ್ಯರೆಂದು ಗುರುತಿಸಿರುವುದು ಗಮನಾರ್ಹವಾದುದು. ಪ್ರಥಮದ

---

೫೬. ಅದೇ: ವಚನ-೧೦೪೯.

೫೭. ಸಂಕೀರ್ಣ ವಚನ ಸಂ-೩: ಪು ೧೯೬.

೫೭(ಎ) ಅದೇ, ಪು. ೪೨.

ಆಚಾರ್ಯರೆಂದರೆ 'ಆದ್ಯರು' ಎಂದು ಶರಣರ ಕಾಲದಲ್ಲಿಯೇ 'ಪಂಡಿತತ್ರಯ'ರನ್ನು ಪ್ರಥಮದ ಆಚಾರ್ಯರೆಂದು ಗೌರವಿಸಿರುವುದಕ್ಕೆ ಈ ವಚನ ಸಾಕ್ಷಿಯಾಗಿದೆ. ಮತ್ತು ಈ ಆಚಾರ್ಯರು 'ಆದ್ಯ'ರಾಗಿಯೂ ಗಮನ ಸೆಳೆದಿದ್ದರೆಂದು ತಿಳಿಯುತ್ತದೆ. ಇಲ್ಲಿ ಬಂದಿರುವ "ಪ್ರಮಥದ ಆಚಾರ್ಯರು ಇಟ್ಟ ಮತಂಗಳಿಂದ" ಎನ್ನುವುದು ವೀರಶೈವ ಧರ್ಮ ವಚನಕಾರರ ಪೂರ್ವದಲ್ಲಿಯೇ ಒಂದು ವ್ಯವಸ್ಥಿತವಾದ ರೀತಿಯಲ್ಲಿ ವ್ಯಾಪಕವಾಗಿ ನೆಲೆಗೊಂಡಿತ್ತೆನ್ನುವುದು ಸುಸ್ಪಷ್ಟವಾಗುತ್ತದೆ. ಮತ್ತು ಆಚಾರ್ಯರು ವಚನಕಾರರಿಗಿಂತಲೂ ಹಿಂದಿನವರೆಂಬುದು ಧೃಡವಾಗುತ್ತದೆ. ಪ್ರಮಥದ ಆಚಾರ್ಯರಾಗಿ ವಚನಕಾರರ ಸ್ತುತಿಗೆ ಪಾತ್ರರಾಗಿರುವ 'ಪಂಡಿತತ್ರಯ'ರು ರೇವಣಸಿದ್ಧಾದಿ ಆಚಾರ್ಯರನ್ನು ಸ್ಮರಿಸಿದ್ದಾರೆ. ಇದರಿಂದ ರೇವಣಸಿದ್ಧಾದಿ ಆಚಾರ್ಯರು ಹಿಂದಿನವರೆಂಬುದು ಖಚಿತವಾಗುತ್ತದೆ.

ಈ ಆಂತರಿಕ ಸಾಕ್ಷ್ಯಾಧಾರದಿಂದ ರೇಣುಕಾದಿ ಪಂಚಾಚಾರ್ಯರ ಪರಂಪರೆಯಲ್ಲಿ ಬಂದಿರುವ ರೇವಣಸಿದ್ಧಾದಿ ಆಚಾರ್ಯರು ಬಸವಾದಿಗಳಿಗಿಂತ ಪೂರ್ವದವರೆನ್ನುವುದು ಸಿದ್ಧವಾಗುತ್ತದೆ.

ಬಸವಣ್ಣನವರ ಹಿರಿಯ ಸಮಕಾಲೀನರಾದ ಸಕಲೇಶ ಮಾದರಸರ[೫೮] "ಪುರುಷ ಮೃಗ ಬಂದು ನಿಂದಲ್ಲಿ" ಎಂದು ಆರಂಭವಾಗುವ ವಚನದಲ್ಲಿ ಆಚಾರ್ಯ ರೇವಣ ಸಿದ್ಧರು ಭಿಕ್ಷಾಟನೆ ಲೀಲೆಯ ಮೂಲಕ ಮಾಡಿ ತೋರಿಸಿದ ಬಿಜ್ಜಳನ ಗರ್ವಹರಣ ಪ್ರಸಂಗ ಉಕ್ತವಾಗಿರುವುದು ತುಂಬಾ ಗಮನಾರ್ಹ. ಆ ವಚನ ಹೀಗಿದೆ:

ಧರೆಯನಾಳುವ ಬಿಜ್ಜಳವಾದಿ ಸೇ
ಗೃಹಗಳ ಸುಟ್ಟು ಆ ರಾಯ ಸುಟ್ಟೆಹೆನೆಂದಡೆ
ಅಂಜದೆ
ಶರಣವೊಗಲು ಬಂದು ನಿಂದಲ್ಲಿ
ಹೋ ಹೋ ಅಂಜದಿರೆಂದರೆ ಮಹಾಪ್ರಸಾದ
ಮೊದಲಿದ್ದಂತೆ ಆಗಬೇಕೆಂದು
ಬೇಡಿಕೊಂಡಡೆ
ಕೋಪಾಟೋಪಮಂ ಬಿಟ್ಟು ಮೊದಲಿದ್ದಂತೆ
ಮಾಡಿ ರಕ್ಷಿಸನೆ
ಶಿವನೊಲಿದ ಸಿದ್ಧರೇವಣ್ಣನು.

'ಬಿಜ್ಜಳನ ಗರ್ವಹರಣ' ಪ್ರಸಂಗ ರೇವಣಸಿದ್ಧರ ಪ್ರಮುಖ ಲೀಲೆಗಳಲ್ಲೊಂದಾಗಿದೆ. ರೇವಣಸಿದ್ಧರು ಮಂಗಳವೇಡೆಯ ಅರಸ ಬಿಜ್ಜಳನಲ್ಲಿಗೆ ಭಿಕ್ಷೆಗೆಂದು ಹೋದಾಗ ದುರಹಂಕಾರಿಯಾಗಿದ್ದ ಬಿಜ್ಜಳ ಅವರಿಗೆ ಅವಮಾನಿಸುವ ನಿಟ್ಟಿನಲ್ಲಿ "ಕುದಿವ ಬಗರ"ನ್ನ ಭಿಕ್ಷೆಯೆಂದು ನೀಡಿಸುತ್ತಾನೆ.

ಆಚಾರ್ಯರು ಸುಡುವ ಅಂಬಲಿಯೊಂದಿಗೆ ಕೈಯನ್ನು ಅರಮನೆಯ ಕಂಬಗಳಿಗೆ ಒರೆಸಿದಾಗ ಅರಮನೆಗೆ ಭುಗಿಲ್ ಎಂದು ಬೆಂಕಿ ಹತ್ತಿಕೊಳ್ಳುತ್ತದೆ. ಇದರಿಂದ ಬೆದರಿದ ಬಿಜ್ಜಳ ತನ್ನ ತಪ್ಪಿನ ಅರಿವಾಗಿ ಆಚಾರ್ಯರಿಗೆ ಶರಣಾಗುತ್ತಾನೆ. ಕ್ಷಮಾಶೀಲರಾದ ರೇವಣಸಿದ್ಧರು ಆತನ ತಪ್ಪನ್ನು ಮನ್ನಿಸಿ ಹರಸುತ್ತಾರೆ. ಆ ಪ್ರಸಂಗವನ್ನು ಸಕಲೇಶ

---

೫೮. ಹಲಗೆಯಾರ್ಯನ ಶೂನ್ಯಸಂಪಾದನೆ; ಸಂ: ಡಾ॥ ಎಸ್. ವಿದ್ಯಾಶಂಕರ, ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ, ನೋಡಿ, ಸಕಲೇಶ ಮಾದರಸರ ವಚನಭಾಗ: ವಚನ-೮೨೬, ಪು-೩೮೬.

ಮಾದರಸರು ತಮ್ಮ ವಚನದಲ್ಲಿ ತುಂಬಾ ಔಚಿತ್ಯ ಪೂರ್ಣವಾಗಿ ಉಲ್ಲೇಖಿಸಿದ್ದಾರೆ. ಈ ವಚನ ಆಚಾರ್ಯರ ಐತಿಹಾಸಿಕತೆಗೆ ಮತ್ತು ವಾಸ್ತವಿಕತೆಗೆ ಪುಷ್ಟಿಯೊದಗಿಸುತ್ತದೆ.

ಬಸವಣ್ಣನವರು[೫೯] ತಮ್ಮ ಒಂದು ವಚನದಲ್ಲಿ ಪಂಚ ಪೀಠಗಳನ್ನು ಪರೋಕ್ಷವಾಗಿ ಸ್ಮರಿಸಿರುವುದು ಪ್ರವ್ಯಕ್ತವಾಗುತ್ತದೆ. ಆ ವಚನ ಹೀಗಿದೆ:

ಕೃತಯುಗದಲ್ಲಿ ಕೇದಾರವೆಂಬ ಮೂಲಸ್ಥಾನ
ತ್ರೇತಾಯುಗದಲ್ಲಿ ವಾರಣಾಸಿ ಎಂಬ ಮೂಲಸ್ಥಾನ
ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ
ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ
ನಾನಾ ಸ್ಥಾನಗಳಂ ಮುಟ್ಟದೆ ಜಂಗಮವೆ
ಲಿಂಗವೆಂದು ನಂಬಿದೆ ಕೂಡಲ ಸಂಗಮದೇವಾ

ಈ ವಚನ ಪ್ರತ್ಯಕ್ಷವಾಗಿ ಆಚಾರ್ಯರನ್ನು ಹೆಸರಿಸದಿದ್ದರೂ ಅದು ಉಕ್ತಗೊಳಿಸಿರುವ ಕ್ಷೇತ್ರಗಳಲ್ಲಿ ಆಚಾರ್ಯರು ಸ್ಥಾಪಿಸಿರುವ ಪೀಠಗಳು ಅಸ್ತಿತ್ವದಲ್ಲಿರುವುದು ವಾಸ್ತವ ಸಂಗತಿಯಾಗಿದೆ. ಈ ಕಾರಣದಿಂದ ಬಸವಣ್ಣನವರು ಪರೋಕ್ಷವಾಗಿ ಆಚಾರ್ಯರನ್ನು ಅವರ ಪೀಠಗಳನ್ನು ನೆನೆದಿರುವ ಸಾಧ್ಯತೆ ಕಂಡು ಬರುತ್ತದೆ. ಎಂ.ಜಿ. ನಾಗರಾಜ್[೬೦] ಅವರು "ಇಲ್ಲಿ ಬಸವಣ್ಣ ಅನ್ಯ ನಾನಾ ಕ್ಷೇತ್ರಗಳಿದ್ದರೂ ಈ ಮೇಲಿನ ನಾಲ್ಕು ಜಂಗಮ ಕ್ಷೇತ್ರವನ್ನು ಗುರುತಿಸುತ್ತೇನೆ ಅರ್ಥಾತ್ ಈ ನಾಲ್ಕು ಜಂಗಮ ಕ್ಷೇತ್ರವನ್ನು ನಂಬುತ್ತೇನೆ ಎಂದಿರುವ ಅಂಶವಿದೆ. ಅಂದರೆ ಬಸವಪೂರ್ವ ಯುಗದಲ್ಲಿಯೇ ವೀರಶೈವ ಪೀಠಗಳ ಅಸ್ತಿತ್ವಕ್ಕೆ ಬಸವಣ್ಣ ಸಾಕ್ಷಿ ನುಡಿದಂತಾಗಿದೆ. ಇಲ್ಲಿ ಬಂದಿರುವ ಯುಗಮಾನಗಳ ರೂಪಕವು, ಪೀಠಗಳು ಪ್ರಾಚೀನ ಎಂಬುದಕ್ಕೆ ಸಂಕೇತವೇ ವಿನಃ ಪೌರಾಣಿಕ ವ್ಯಾಖ್ಯಾರ್ಥವಲ್ಲ"ವೆಂದು ಹೇಳಿರುವುದು ಯೋಚನಾರ್ಹವಾಗಿದೆ.

ತೋಂಟದ ಸಿದ್ಧಲಿಂಗ ಶಿವಯೋಗಿಗಳು ರೇಣುಕಾದಿ ಪಂಚಾಚಾರ್ಯರನ್ನು ಮತ್ತು ರೇವಣಸಿದ್ಧರನ್ನು ಪೂಜ್ಯಭಾವದಿಂದ ಹೀಗೆ ಸ್ಮರಿಸಿದ್ದಾರೆ:

ನಂದೀಶ್ವರ, ಬೃಂಗೀಶ್ವರ ವೀರಭದ್ರ ದಾರುಕ
ರೇಣುಕ ಶಂಕುಕರ್ಣ ಗೋಕರ್ಣ
ಏಕಾಕ್ಷರ ತ್ರಯಾಕ್ಷರ ಪಂಚಾಕ್ಷರ ಷಡಾಕ್ಷರ
ಸದಾಶಿವ ಈಶ್ವರ ಮಹೇಶ್ವರ
ರುದ್ರ ಘಂಟಾಕರ್ಣ ಗಜಕರ್ಣ ಏಕಮುಖ
ದ್ವಿಮುಖ ತ್ರಿಮುಖ ಪಂಚಮುಖ...........
ಮೊದಲಾದ ಗಣಾಧೀಶ್ವರರು
ಇವರು ನಿತ್ಯ ಪರಿಪೂರ್ಣವಂಥಾ
ಪರಶಿವ ತತ್ವದಲ್ಲಿ ಜ್ಯೋತಿಯಿಂದ
ಜ್ಯೋತಿ ಉದಯಿಸಿದಂತೆ ಉದಯಿಸಿದ
ಶುದ್ಧ ಚಿದ್ರೂಪರಪ್ಪ ಪ್ರಥಮರು;

---

೫೯. ಬಸವಣ್ಣನವರ ವಚನಗಳು, ಸಂ. ಡಾ|| ಆರ್.ಸಿ. ಹಿರೇಮಠ, ವ.ಸಂ. ೩೯೪.
೬೦. ಸಾಂಸ್ಕೃತಿಕ ವೀರಭದ್ರಸ್ವಾಮಿ, ಬಾಳೇಹೊನ್ನೂರು, ೧೯೯೯, ಪು. ೪.

ಅನಾದಿಮುಕ್ತರಲ್ಲ ಅವಾಂತರ ಮುಕ್ತರೆಂಬ
ನಾಯ ನಾಲಗೆಯ
ಹದಿನೆಂಟು ಜಾತಿಯ ಕೆರಹಿನಟ್ಟೆಗೆ ಸರಿಯೆಂಬ
ಆ ಶ್ವಾನಜ್ಞಾನಿಗಳಪ್ಪವರ
ಶೈವ ಪಶುಪತಮತವಂತಿರಲಿ ಅವರಾಗಮ
ವಂತಿರಲಿ ನಿಮ್ಮ ಶರಣರಿಗೆ
ನಿಮಗೆ ಬೇರೆ ಮಾಡಿ ಸಂಕಲ್ಪಿಸಿ ಅಜ್ಞಾನಿ
ಹೊಲೆಯರ ಎನಗೊಮ್ಮೆ
ತೋರದಿರಯ್ಯ ಮಹಾಲಿಂಗ ಗುರು
ಶಿವಸಿದ್ಧೇಶ್ವರ ಪ್ರಭುವೆ[೧]

ಅವರ ಇನ್ನೊಂದು ವಚನ ಹೀಗಿದೆ:

ಆದಿಯಲ್ಲಿ ಶಿವತತ್ವದಲ್ಲಿ ರೇಣುಕನುದಯ
ವಾಗದಿದ್ದಲ್ಲಿ
ಇಲ್ಲಿ ಶಿವಲಿಂಗದಲ್ಲಿ ಉದಯವಾದ ಪರಿಯಂತೋ?
ಆ ಶಿವನಲ್ಲಿಯೇ ಹುಟ್ಟಿ ಶಿವನಲ್ಲಿಯೇ ಲಯವಾದ
ರೇವಣಸಿದ್ಧೇಶ್ವರನು ಅನಾದಿ ಮುಕ್ತನಲ್ಲ
ಅವಾಂತರ ಮುಕ್ತನೆಂಬ ಅಜ್ಞಾನಿಗಳಿಗೆ
ನಾಯಕ ನರಕ ತಪ್ಪದು............
ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೆ[೨]

ಮೇಲಿನ ಮೊದಲನೇ ವಚನದಲ್ಲಿ ನಾಮ ನಿರ್ದೇಶಿತರಾದ ಗೋತ್ರ ಪುರುಷರು ಮತ್ತು ಆಚಾರ್ಯರು ನಿತ್ಯ ಪರಿಪೂರ್ಣರು. ಪರಶಿವತತ್ವದಲ್ಲಿ ಜ್ಯೋತಿಯಿಂದ ಜ್ಯೋತಿ ಉದಯಿಸಿದಂತೆ ಉದಯಿಸಿದ ಆ ಪ್ರಮಥರು ಶುದ್ಧಾತ್ಮರೆಂದು ತೋಂಟದ ಯತಿಗಳು ಹೇಳಿರುವುದು ಸ್ಪಷ್ಟವಾಗುತ್ತದೆ. ಮತ್ತು ಎರಡನೇ ವಚನದಲ್ಲಿ ರೇಣುಕ ಮತ್ತು ರೇವಣಸಿದ್ಧ ವಚನದಲ್ಲಿ ರೇಣುಕ ಮತ್ತು ರೇವಣಸಿದ್ಧ ಆಚಾರ್ಯರು ಲಿಂಗದಲ್ಲಿಯೇ ಹುಟ್ಟಿ ಲಿಂಗದಲ್ಲಿಯೇ ಐಕ್ಯರಾದರೆಂದು ಉಕ್ತಗೊಳಿಸಿರುವ ಯತಿಗಳು, ನಿತ್ಯಪರಿಪೂರ್ಣರಾದ ಆಚಾರ್ಯರನ್ನು ನಿಂದಿಸುವುದು ತರವಲ್ಲವೆಂದೂ ಪರೋಕ್ಷವಾಗಿ ಎಚ್ಚರಿಸಿರುವುದು ಇಲ್ಲಿ ಕಂಡು ಬರುತ್ತದೆ. ರೇಣುಕರ ಪರಂಪರೆಯಲ್ಲಿ ರೇವಣಸಿದ್ಧರು ಬಾಳಿ ಬೆಳಗಿದರೆನ್ನುವುದೂ ಅವರು ಹೇಳಿರುವುದು ಸಮಂಜಸವಾಗಿಯೇ ಇದೆ. ಆಚಾರ್ಯರು ಮುನ್ನಡೆದಿದ್ದಾರೆಂದೂ ಆಚಾರ್ಯರಿಗೂ ಶರಣರಿಗೂ ಮಧ್ಯದಲ್ಲಿ ಭೇದವೆಣಿಸ ಕೂಡದೆಂಬುದು ಶಿವಯೋಗಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಭೇದವಣಿಸುವ ಜನಗಳಿಗೆ ಕಷ್ಟ ನಷ್ಟಗಳು ತಪ್ಪಿದ್ದಲ್ಲವೆನ್ನುವ ಎಚ್ಚರಿಕೆಯನ್ನು ಅವರು ನೀಡಲು ಹಿಂಜರಿದಿಲ್ಲವೆನ್ನುವುದು ಶ್ರುತವಾಗುತ್ತದೆ.

ಹೀಗೆ ಸಕಲೇಶ ಮಾದರಸರಿಂದ ತೋಂಟದ ಸಿದ್ಧಲಿಂಗ ಯತಿಗಳವರೆಗಿನ ಅನೇಕ ಶರಣರು ತಮ್ಮ ವಚನಗಳಲ್ಲಿ ಐವರು ಆಚಾರ್ಯರನ್ನು ಸ್ಮರಿಸುವುದು, ಸ್ತುತಿಸಿರುವುದು ಹೃದ್ಗೋಚರವಾಗುತ್ತದೆ.

□□

---

೬೧. ಸಂಕೀರ್ಣ ವಚನ ಸಂಪುಟ-೬, ವ.ಸಂ. ೫೫.
೬೨. ಅದೇ, ವ.ಸಂ. ೬೧.

೭. ವೀರಶೈವರ ಧಾರ್ಮಿಕ ಸಂಸ್ಕಾರಗಳು

-ಡಾ।। ವ್ಹಿ.ಜಿ. ಪೂಜಾರ

ವ್ಯಕ್ತಿಯು ಸಾಂಪ್ರದಾಯಿಕವಾಗಿಯೂ ಕಡ್ಡಾಯವಾಗಿಯೂ ಅನುಸರಿಸಿಕೊಂಡು ಬಂದ ನಿಗದಿತವಾದ ಹಾಗೂ ವಿಸ್ತೃತವಾದ ಧಾರ್ಮಿಕ ವಿಧಿವಿಧಾನಗಳಿಗೆ ಸಾಮಾನ್ಯವಾಗಿ ಸಂಸ್ಕಾರಗಳೆಂದು ಕರೆಯಲಾಗುವುದು. ಜನತೆಯ ಮನಸ್ಸನ್ನು ಶುಚಿಗೊಳಿಸಿ ಅವರನ್ನು ಸನ್ಮಾರ್ಗದಲ್ಲಿ ಮುನ್ನಡೆಸುವ ಆಚರಣೆಗಳೇ ಸಂಸ್ಕಾರಗಳು. ಧಾರ್ಮಿಕ ಸಂಸ್ಕಾರಗಳು ವ್ಯಕ್ತಿಯ ಅಂತರಂಗ ಮತ್ತು ಬಹಿರಂಗಗಳೆರಡನ್ನೂ ಶುದ್ಧೀಕರಿಸಿ ವ್ಯಕ್ತಿತ್ವದ ಬೆಳವಣಿಗೆಗೆ ಹಾಗೂ ಸಮಾಜದ ಏಳ್ಗೆಗೆ ಕಾರಣವಾಗುವವು. ಇವು ಒಂದೆಡೆ ವ್ಯಕ್ತಿಯ ಮಾನಸಿಕ ಮತ್ತೊಂದಡೆ ಆತನ ಸಂಸ್ಕೃತಿಯ ಮೇಲೆ ಬೆಳಕು ಬೀರಲು ಸಹಾಯಕವಾಗುವವು.

ಜೀವನಕ್ಕೆ ಅಗತ್ಯವಾದ ಧಾರ್ಮಿಕ ಕ್ರಿಯೆಯೇ ಸಂಸ್ಕಾರ. ಶರೀರ, ಮನಸ್ಸು ಮತ್ತು ಬುದ್ಧಿಯನ್ನು ಪವಿತ್ರಗೊಳಿಸುವ ಮೂಲಕ ಆತನನ್ನು ಸಮಾಜದಲ್ಲಿ ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡುವ ಧಾರ್ಮಿಕ ಕ್ರಿಯೆಗೆ ಸಂಸ್ಕಾರವೆಂದು ಕರೆಯಲಾಗುವುದು. ಸಂಸ್ಕಾರಕ್ಕೆ ಸಂಸ್ಕೃತ ಸಾಹಿತ್ಯದಲ್ಲಿ ಶಿಕ್ಷಣ, ನಯ ನಾಜೂಕಿನ ನಡತೆ, ತರಬೇತಿ, ಪರಿಪಕ್ವತೆ, ವ್ಯಾಕರಣ ಶುದ್ಧತೆ, ಮೆರಗು ನೀಡುವಿಕೆ, ಆಭರಣ ಮತ್ತು ಅಲಂಕಾರ, ಅಂದಗೊಳಿಸುವಿಕೆ, ಆಕಾರಕೊಡು, ರೂಪಕೊಡು, ಪ್ರಭಾವೀಗೊಳಿಸುವುದು, ಮನಸ್ಸಿನ ಮೇಲೆ ನಾಟುವುದು, ಪವಿತ್ರವಾದ ಧಾರ್ಮಿಕ ವಿಧಿ, ಪರಿಶುದ್ಧಗೊಳಿಸುವ ಆಚರಣಾ ವಿಧಿ, ಪವಿತ್ರಕಾರ್ಯಕ್ಕಾಗಿ ಮೀಸಲಿಡು, ಧರ್ಮ ಸಮ್ಮತವಾಗಿಸು ಇತ್ಯಾದಿ ಅರ್ಥಗಳುಂಟು. ಒಟ್ಟಾರೆಯಾಗಿ ಸಂಸ್ಕಾರವೆಂದರೆ ಮನಸ್ಸಿನ ಶುದ್ಧೀಕರಣವೇ ಆಗಿದೆ.

ಧಾರ್ಮಿಕ ಕ್ರಿಯೆಗಳಿಂದ ಕೂಡಿದ ವಿಧಿಕ್ರಿಯೆಗಳಿಗೆ ಸಂಸ್ಕಾರಗಳೆಂದು ಕರೆದರೆ, ಇವುಗಳಿಗೆ ವ್ಯತಿರಿಕ್ತವಾದ ಲೌಕಿಕ ಚಟುವಟಿಕೆಗಳನ್ನು ಕಾರ್ಯ ಕಾರಣ ರೂಢಿ ನಿಯಮಗಳೆಂದು ಕರೆಯುವುದುಂಟು. ಧಾರ್ಮಿಕ ಸಂಸ್ಕಾರಗಳು ಎಲ್ಲ ಧರ್ಮಗಳಲ್ಲಿ ಉಂಟು. ಸಂಸ್ಕಾರಗಳಿಲ್ಲದೇ ಧರ್ಮಗಳೇ ಇಲ್ಲ; ವ್ಯಕ್ತಿಯ ಜನನದಿಂದ ಮರಣದವರೆಗೂ ಅನೇಕ ಸಂಸ್ಕಾರಗಳು ಆತನಿಗೆ ಅಂಟಿಕೊಂಡು ಆಚರಣೆಗೊಳ್ಳುವುದುಂಟು. ಇವನ್ನು ಧಾರ್ಮಿಕ ಆಚರಣೆಗಳೆಂದೂ ಕರೆಯುವುದುಂಟು. ವೀರಶೈವ ಧರ್ಮದಲ್ಲಿ ಲಿಂಗಧಾರಣ, ನಾಮಕರಣ, ಜಾವಳ, ಅಯ್ಯಾಚಾರ, ಮದುವೆ, ಮರಣ ಮುಂತಾದ ಸಂಸ್ಕಾರಗಳು ಆಚರಣೆಯಲ್ಲುಂಟು. ವೀರಶೈವ ಧರ್ಮ-ಸಮಾಜ ವರ್ಣ-ವರ್ಗ ರಹಿತವಾದುದು. ಬ್ರಾಹ್ಮಣ, ವೈಶ್ಯ, ಕ್ಷತ್ರಿಯ, ಶೂದ್ರರೆಂಬ ವಿಂಗಡಣೆಗಳಾವುವೂ ಇಲ್ಲಿಲ್ಲ.

ಎಲ್ಲರನ್ನೂ ಸಮಾನತೆಯ ದೃಷ್ಟಿಯಿಂದ ಕಾಣುವುದು ವೀರಶೈವ ಧರ್ಮದ ವೈಶಿಷ್ಟ್ಯವಾಗಿದೆ. ಶಿವಾಗಮಗಳು ಈ ಧರ್ಮಕ್ಕೆ ಆಧಾರವಾಗಿರುವುದರಿಂದ ವೇದದ ಕರ್ಮಕಾಂಡವನ್ನು ಈ ಧರ್ಮದವರು ಒಪ್ಪುವುದಿಲ್ಲ. ವೈದಿಕ ಸಂಸ್ಕಾರಗಳಿಗಿಂತಲೂ ವೀರಶೈವ ಸಂಸ್ಕಾರಗಳು ಭಿನ್ನವಾದುವಾಗಿವೆ. ವೇದ ಪ್ರಾಮಾಣ್ಯ, ಬ್ರಾಹ್ಮಣ್ಯದ ಹಿರಿಮೆ, ಪುನರ್‌ಜನ್ಮ, ದೇವತೆಗಳಲ್ಲಿ ನಂಬಿಕೆ, ಜಾತಿಪದ್ಧತಿ, ಪಿತೃಪೂಜೆ, ತಿಥಿ ಕರ್ಮ ಇತ್ಯಾದಿ ಸಂಸ್ಕಾರಗಳನ್ನು ವೈದಿಕ ಧರ್ಮದಲ್ಲಿ ಕಾಣುವೆವು. ಇಲ್ಲಿ ಬ್ರಾಹ್ಮಣ, ವೈಶ್ಯ, ಕ್ಷತ್ರಿಯ, ಶೂದ್ರಗಳೆಂಬ ವಿಂಗಡಣೆ ಇಲ್ಲ. ಈ ಧರ್ಮ ವರ್ಣಾಶ್ರಮದ ವಿರುದ್ಧ ಸೆಡ್ಡು ಹೊಡೆದು ಬೆಳೆದು ಬಂದುದಾಗಿದೆ. ಈ ಧರ್ಮದ ಸಂಸ್ಕಾರಗಳು ಅತ್ಯಂತ ಸರಳವಾದುವಾಗಿವೆ. ಶಿವವ್ರತವನ್ನು ಆಚರಿಸುವ ವೀರಶೈವನು ಬ್ರಹ್ಮಚಾರಿಯೇ ಇರಲಿ, ಸಂಸಾರಸ್ಥನೇ ಆಗಿರಲಿ, ಸನ್ಯಾಸಿಯೇ ಆಗಿರಲಿ, ಆತ ಸತ್ತಾಗ ಆತನ ಶರೀರವನ್ನು ಸುಡಕೂಡದು ಹುಗಿಯಬೇಕು.

ವೀರಶೈವಧರ್ಮದಲ್ಲಿ ಮುಖ್ಯವಾಗಿ ಆಚರಣೆಯಲ್ಲಿರುವ ಸಂಸ್ಕಾರಗಳು ಹತ್ತು-ಗರ್ಭಾಧಾಗ, ಪುಂಸವನ, ಸೀಮಂತ, ಜಾತಕರ್ಮ (ಲಿಂಗಧಾರಣೆ), ಅನ್ನಪ್ರಾಶನ, ಚೌಲಕರ್ಮ (ಜಾವುಳ), ಅಕ್ಷರಾಭ್ಯಾಸ, ದೀಕ್ಷೆ, ವಿವಾಹ, ಹಾಗೂ ಅಂತ್ಯ ಸಂಸ್ಕಾರ. ಗರ್ಭಾದಾನ ಸಂಸ್ಕಾರದಲ್ಲಿ ವಿಭೂತಿಧಾರಣೆ, ಲಿಂಗಮಜ್ಜನ, ಇಷ್ಟಲಿಂಗ ನಿರೀಕ್ಷಣೆ, ಇಷ್ಟಲಿಂಗಧಾರಣೆ, ಭಾವೋದ್ರೇಕ ಸಿದ್ಧತೆ ಮತ್ತು ಸ್ವೀಕಾರ ಮುಂತಾದವುಗಳನ್ನು ಉಲ್ಲೇಖಿಸುವುದು. ತಾಯಿಯ ಉದರದಲ್ಲಿರುವ ಮಗುವಿಗೆ ಎಂಟನೇ ತಿಂಗಳಲ್ಲಿ ಸಂಸ್ಕಾರ ನೀಡಲಾಗುವುದು. ತಾಯಿಯ ಉದರದಲ್ಲಿರುವ ಮಗು ಎಂಟು ತಿಂಗಳಿಗೆ ಪರಿಪೂರ್ಣ ಸ್ಥಿತಿಯನ್ನು ಹೊಂದುತ್ತದೆ. ತಾಯಿ ಸ್ವೀಕರಿಸುವ ಆಹಾರವನ್ನಷ್ಟೇ ಮಗು ಪಡೆದು ಬೆಳೆಯದೆ, ಆಕೆ ಆಲೋಚಿಸುವ ಆಲೋಚನೆ, ಭಾವನ, ವರ್ತನೆಗಳನ್ನು ಮಗು ಸ್ವೀಕರಿಸುತ್ತದೆ. ಎಂಟನೇ ತಿಂಗಳಲ್ಲಿ ತಾಯಿಗೆ ಲಿಂಗಧಾರಣೆ ಮಾಡುವುದರ ಮೂಲಕ ಹೊಟ್ಟೆಯಲ್ಲಿರುವ ಮಗುವಿಗೂ ಸಂಸ್ಕಾರ ನೀಡಲಾಗುವುದು. ತಾಯಿ ತನ್ನ ಇಷ್ಟಲಿಂಗದ ಜೊತೆಗೆ ಮಗುವಿನ ಲಿಂಗವನ್ನು ಧರಿಸಿಕೊಂಡು ಪೂಜಿಸಬೇಕು. ಮಗು ಹುಟ್ಟಿದ ನಂತರ ಆ ಲಿಂಗವನ್ನು ತೊಟ್ಟಿಲಿಗೆ ಕಟ್ಟುತ್ತಾರೆ. ಅನಂತರ ಮಗು ಬೆಳೆದು ಅಂಬೆಗಾಲಿಕ್ಕಲು ತೊಡಗಿದಾಗ ಅದರ ಕೊರಳಿಗೆ ಕಟ್ಟುತ್ತಾರೆ. ಹೀಗೆ ತಾಯಿ ಮಡಿಲಲ್ಲೇ ಮಗುವಿಗೆ ಸಂಸ್ಕಾರ ಸಿಗುವುದು. ವೀರಶೈವರಲ್ಲಿ ಪ್ರಮುಖವಾಗಿ ಆಚರಿಸಲ್ಪಡುವ ಸಂಸ್ಕಾರಗಳೆಂದರೆ ದೀಕ್ಷೆ, ವಿವಾಹ ಮತ್ತು ಶವಸಂಸ್ಕಾರಗಳು. ಇನ್ನಿತರ ಸಂಸ್ಕಾರಗಳು ಆಚರಣೆಯಲ್ಲಿದ್ದರೂ ಅವುಗಳ ಮೇಲೆ ವೈದಿಕ ಸಂಸ್ಕಾರಗಳ ಪ್ರಭಾವವಾದುದನ್ನು ಗುರುತಿಸುವೆವು. ವೈದಿಕರು ಭಾವಿಸಿರುವ ಜಾತಿ, ಪ್ರಸೂತಿ, ಉಚ್ಛಿಷ್ಟ, ರಜ ಮತ್ತು ಮರಣ ಪಂಚಸೂತಕಗಳು ವೀರಶೈವರಿಗೆ ಇಲ್ಲವೆಂದು ರೂಢಿ ಹೇಳುತ್ತಿದ್ದರೂ ಮೇಲಿನ ಸಂದರ್ಭಗಳಲ್ಲಿ ಆದ ಮೈಲಿಗೆಯನ್ನು ಅವರು ಪರಿಗಣಿಸುತ್ತಾರೆ. ಇದೇ ರೀತಿ ಕೂಸು ಹುಟ್ಟಿದ ಮೈನೆರೆದ ಕನ್ಯಾನ್ವೇಷಣೆ, ಮದುವೆ, ಮರಣಗಳ ಘಳಿಗೆ, ಶುಭ ಅನುಭವಗಳನ್ನು ತಿಳಿಯಲು ಪಂಚಾಂಗದ ಮೊರೆ ಹೋಗುವುದುಂಟು. ಅಶುಭವೆಂದು ಪಂಚಾಂಗ ತಿಳಿಸಿದಲ್ಲಿ ಆ ಕರಮಂತ್ರ ಕಳೆಯಲು ಜಂಗಮರನ್ನು ಪೂಜಿಸಿ ಕಾಣಿಕೆ ಕೊಡುವ ಆಚರಣೆಯುಂಟು. ಇದು ವೈದಿಕ ಸಂಸ್ಕಾರಗಳ ಪ್ರಭಾವದಿಂದಲೇ ಬಂದಂಥದು.

ವೀರಶೈವರಿಗೆ ಆಗಮಗಳು, ವೈದಿಕರಿಗೆ ವೇದಗಳು ಪ್ರಮಾಣ ಗ್ರಂಥಗಳಾಗಿವೆ. ವೈದಿಕರು ವಿವಾಹದಲ್ಲಿ ಅಗ್ನಿ ಸಾಕ್ಷಿಯಾಗಿ ವಿವಾಹ ನೆರವೇರಿಸಿದರೆ ವೀರಶೈವರು ಪಂಚಾಚಾರ್ಯರ ಪ್ರತೀಕವಾಗಿ ಪಂಚ ಕಲಶಗಳನ್ನು ಸ್ಥಾಪಿಸಿ ಅವುಗಳ ಸಾಕ್ಷಿಯಾಗಿ ಮದುವೆ ಮಾಡುತ್ತಾರೆ. ವೈದಿಕರು ಉಪನಯನವನ್ನು ಅಗ್ನಿಸಾಕ್ಷಿಯಾಗಿ ಮಾಡಿಕೊಂಡರೆ, ವೀರಶೈವರು ದೀಕ್ಷೆಯನ್ನು ಗುರುಮುಖೇನ ಪಡೆಯುವರು. ಅಂತ್ಯ ಸಂಸ್ಕಾರ ವೈದಿಕರಿಗೆ ಅಗ್ನಿ ಸಂಸ್ಕಾರವಾದರೆ, ವೀರಶೈವರಿಗೆ ಶಿವಮೇಧ ವಿಧಿಯಾಗುವುದು.

ದಕ್ಷತೆಯಿಂದ ಸತ್ಕಾರ್ಯವನ್ನು ನಿರ್ವಹಣೆ ಮಾಡಲು ಕಂಕಣಬದ್ಧರಾಗಿ ಇರುವಿಕೆಯೇ 'ದೀಕ್ಷೆ' ಎನ್ನುವರು. ದೀಕ್ಷೆ ಎಂದರೆ ಗುರುಕಾರುಣ್ಯ. ವೀರಶೈವರು ಈ ದೀಕ್ಷಾ ವಿಧಿಗೆ ಅಯ್ಯಾಚಾರ ಎಂದೂ ಕರೆಯುವುದುಂಟು. ದೀಕ್ಷಾ ವಿಧಿ ಜೀವನವನ್ನು ಭಕ್ತಿತ್ವಕ್ಕೆ ಏರಿಸುವ ಒಂದು ವಿಶೇಷ ಸಂಸ್ಕಾರವಾಗಿದೆ. ಮಾಂಸಪಿಂಡವನ್ನು ಸಂಸ್ಕರಿಸಿ ಮಂತ್ರಪಿಂಡವಾಗಿ ಮಾಡುವ ವಿಧಾನವೇ ದೀಕ್ಷೆ ಎನ್ನಿಸಿಕೊಳ್ಳುವುದು. ಜೀವಾತ್ಮನಿಗೆ ಗುರುವು ಶಿವಾತ್ಮಭಾವ ವಿದ್ಯೆಯನ್ನು ಆತನಿಗೆ ಅನುಗ್ರಹಿಸುವ ವಿಧಾನವೇ ದೀಕ್ಷೆಯಾಗಿದೆ. ಶೈವಾಗಮಗಳಲ್ಲಿ ಈ ದೀಕ್ಷಾ ವಿಧಿಯನ್ನು ಕುರಿತಂತೆ ಹೀಗೆ ಪ್ರಸ್ತಾಪಿಸಲಾಗಿದೆ:

"ದೀಯತೇ ಜ್ಞಾನಸಂಬಂಧಃ ಕ್ಷೀಯತೇ ಚ ಮಲತ್ರಯಮ್।
ದೀಯತೇ ಕ್ಷೀಯತೇ ಯಸ್ಮಾತ್ ಸಾ ದೀಕ್ಷೇತಿ ನಿಗದ್ಯತೇ॥"[೧]

ವೀರಶೈವರಲ್ಲಿ ಪುರುಷ ಮತ್ತು ಸ್ತ್ರೀ ಈರ್ವರಿಗೂ ದೀಕ್ಷೆ ನೀಡಲಾಗುವುದು. ಇದೊಂದು ಬಗೆಯ ವಿಶೇಷವೇ ಆಗಿದೆ. ಯಾವ ಧರ್ಮದಲ್ಲೂ ಹೀಗಿಲ್ಲ. ಸ್ತ್ರೀಯರಿಗೆ ಪ್ರಪಂಚದ ಬಹುತೇಕ ಧರ್ಮಗಳಲ್ಲಿ ಅಂತಹ ಸ್ಥಾನ ಮಾನಗಳನ್ನು ನೀಡಲಾಗಿಲ್ಲ. ಸ್ತ್ರೀ ಮುಕ್ತಿಗೆ ಅನರ್ಹಗಳೆಂದು ಜೈನ, ಮುಸ್ಲಿಂ, ಸಿಖ್, ಕ್ರೈಸ್ತ ಮುಂತಾದ ಧರ್ಮಗಳಲ್ಲಿ ಹೇಳಲಾಗಿದೆ. ಅದರಂತೆ ಸ್ತ್ರೀಯನ್ನು ಕಾಣುತ್ತ ಬರಲಾಗಿದೆ. ವೀರಶೈವರು ಮಾತ್ರ ಸ್ತ್ರೀಯಳೂ ಪುರುಷ ಸಮಾನಳು. ಧಾರ್ಮಿಕ ಸ್ವಾತಂತ್ರ್ಯ ಅವಳಿಗೂ ಇದೆ ಎಂದು ಸಾರಿದೆ. ಮುಕ್ತಿ ಪಡೆಯಲು ಅವಳಿಗೂ ಹಕ್ಕಿದೆ ಎಂದು ವೀರಶೈವ ಧರ್ಮ ಹೇಳುವುದರ ಮೂಲಕ ಲಿಂಗ ಸಮಾನತೆಯನ್ನು ಸಾರಿದ ಮಹತ್ವದ ಧರ್ಮ ಇದಾಗಿದೆ. ಇಂದಿಗೂ ಕೆಲ ದೇವಾಲಯಗಳ ಗರ್ಭಗುಡಿಗಳಲ್ಲಿ ಸ್ತ್ರೀ ಪ್ರವೇಶವನ್ನು ನಿಷೇಧಿಸಿರುವುದನ್ನು ಕಾಣುವೆವು. ಇಂಥದರಲ್ಲಿ ವೀರಶೈವ ಧರ್ಮ ಸಮಾನತೆಯನ್ನು ಎತ್ತಿ ಹಿಡಿದುದು ಅದು ಒಳಗೊಂಡ ಪ್ರಗತಿಪರ ವಿಚಾರಗಳಿಗೆ ಜ್ವಲಂತ ನಿದರ್ಶನವಾಗಿದೆ. ಅದರ ಸಂಸ್ಕಾರಗಳು ಸರಳವೂ, ಜನಪರವೂ, ಜಾತ್ಯತೀತ ಭಾವನೆಯಿಂದ ಆದುವಾಗಿವೆ. ಶಿವಾಗಮಗಳಿಂದ, ಉಪನಿಷತ್ತುಗಳು ಉತ್ತಮೋತ್ತಮವಾದಂಥ ವಿಚಾರಧಾರೆಯನ್ನು ಈ ಧರ್ಮ ಸ್ವೀಕರಿಸಿದೆ. ಈ ಧರ್ಮದ ಸಂಸ್ಕಾರಗಳ ಬೇರುಗಳಿರುವುದನ್ನು ನಾವಿಂದು ಶಿವಾಗಮಗಳಲ್ಲೇ ಕಾಣುವೆವು. ವಚನಗಳಲ್ಲಿ ವೀರಶೈವ ಸಂಸ್ಕಾರಗಳ ಪ್ರಸ್ತಾಪ, ಉಲ್ಲೇಖ ಕಾಣಸಿಗದು. ಮೂಲತಃ ಬಸವಾದಿ ಶರಣರು ಪ್ರಗತಿಪರರು, ವಿಚಾರವಾದಿಗಳು. ಅವರಿಗೆ ಧರ್ಮಾಚರಣೆಗಳು ಅಷ್ಟಾಗಿ ಪ್ರಮುಖವೆನ್ನಿಸಲಿಲ್ಲ. ಅವರು ಸಮಾಜ ಸುಧಾರಕರು. ಸಮಾಜದಲ್ಲಿರುವ ಅನಿಷ್ಟ ಹಾಗೂ ಅಂಥ ಸಂಪ್ರದಾಯಗಳನ್ನು ಕಿತ್ತೊಗೆಯಲು ಶ್ರಮಿಸಿದರು. ಧಾರ್ಮಿಕ ಸಂಸ್ಕಾರಗಳನ್ನು

---

೧. ಕಾರಣಾಗಮ, ಕ್ರಿ.ಪಾ., ೧.೧೨.

ಅವರು ತಮ್ಮ ವಚನಗಳಲ್ಲಿ ಉಲ್ಲೇಖಿಸುವ ವಿವರಿಸುವ ಗೋಜಿಗೆ ಹೋಗಲಿಲ್ಲ. ಏಕೆಂದರೆ ಅವರಿಗೆ ಅಂದಿನ ಸಮಾಜದಲ್ಲಿ ಸಮಾನತೆಯನ್ನು ನೆಲೆಗೊಳಿಸುವುದು ಅತ್ಯಂತ ಅವಶ್ಯವೆನ್ನಿಸಿತ್ತು. ಆದ್ದರಿಂದ ಅವರ ವಚನಗಳು ಸಮಾಜೋ ಧಾರ್ಮಿಕ ಆಂದೋಳನದ ಮುಖವಾಣಿಯಾಗಿ ಪುಂಖಾನುಪುಂಖವಾಗಿ ಹುಟ್ಟಿಕೊಂಡವು.

ಗುರುವು ಶಿಷ್ಯನಲ್ಲಿ ಹುದುಗಿರುವ ಆಣವ, ಕಾರ್ಮಿಕ ಹಾಗೂ ಮಾಯಾ ಮಲಗಳನ್ನು ನಿಷ್ಕ್ರಿಯಗೊಳಿಸಿ ಆತನಲ್ಲಿ ಶಿವಭಾವವನ್ನುಂಟು ಮಾಡುವುದೇ ದೀಕ್ಷೆಯಾಗಿದೆ. ದೀಕ್ಷೆಗಳಲ್ಲಿ ಮೂರು ವಿಧಗಳಿವೆ:

ಸಾ ದೀಕ್ಷಾ ಪರಮಾ ಶೈವೀ ತ್ರಿಧಾ ಭವತಿ ನಿರ್ಮಲಾ।
ಏಕಾ ವೇಧಾತ್ಮಿಕಾ ಸಾಕ್ಷಾದನ್ಯಾ ಮಂತ್ರಾತ್ಮಿಕಾ ಮತಾ॥
ಕ್ರಿಯಾತ್ಮಿಕಾ ಪರಾ ಕಾಚಿದೇವಮೇವ ತ್ರಿಧಾ ಭವೇತ್॥[೨]

ವೇಧಾ, ಮಂತ್ರ, ಕ್ರಿಯಾ ಎಂದು ದೀಕ್ಷೆ ಮೂರು ತೆರನಾಗಿದೆ. ವೇಧಾ ದೀಕ್ಷೆಯಿಂದ ಕಾರಣತನುವನ್ನು, ಮಂತ್ರದೀಕ್ಷೆಯಿಂದ ಸೂಕ್ಷ್ಮತನುವನ್ನು ಮತ್ತು ಕ್ರಿಯಾದೀಕ್ಷೆಯಿಂದ ಸ್ಥೂಲತನುವನ್ನು ಶುದ್ಧಗೊಳಿಸುತ್ತದೆ. ಆಣವ, ಮಾಯಾ, ಕಾರ್ಮಿಕ ಮಲತ್ರಯಗಳನ್ನು ಶ್ರೀ ಗುರುವು ಶಿವ ಸಂಸ್ಕಾರಗಳಿಂದ ಕಳೆದು ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗಗಳನ್ನು ಅನುಗ್ರಹಿಸುತ್ತಾನೆ:

'ಇಷ್ಟಂ ಸ್ಥೂಲತನೋಃ ಪ್ರೋಕ್ತಂ ಪ್ರಾಣಂ ಸೂಕ್ಷ್ಮತನೋಃ ಸ್ಮೃತಮ್।
ಭಾವಾಖ್ಯಂ ಕಾರಣಸ್ಯೈವಂ ತನುತ್ರಯಗತಂ ತ್ರಯಮ್॥'[೩]

ಶ್ರೀ ಗುರು ಶಿಷ್ಯನಲ್ಲಿ ಹಸ್ತಮಸ್ತಕ ಹಾಗೂ ದೃಷ್ಟಿಯೋಗಗಳಿಂದ ಶಿವತತ್ವವನ್ನು ಸಮಾವೇಶಗೊಳಿಸುವುದೇ ವೇಧಾದೀಕ್ಷೆಯಾಗಿದೆ. ಇಲ್ಲಿ ಆಣವ ಮಲ ನಿವೃತ್ತಿಯಾಗುವುದು. ಶ್ರೀ ಗುರು ಶಿಷ್ಯನಿಗೆ ಮಂತ್ರೋಪದೇಶ ಮಾಡುವುದೇ ಮಂತ್ರ ದೀಕ್ಷೆಯಾಗಿದೆ. ಮಂತ್ರಬೋಧೆಯಿಂದ ಶಿಷ್ಯನಿಗೆ ಜ್ಞಾನೋದಯವಾಗುವುದು. ಶಿಷ್ಯನ ಹಸ್ತದಲ್ಲಿ ಇಷ್ಟಲಿಂಗವನ್ನು ಗುರು ಅನುಗ್ರಹ ಮಾಡುವುದೇ ಕ್ರಿಯಾ ದೀಕ್ಷೆಯಾಗಿದೆ.

'ಹಸ್ತಮಸ್ತಕಸಂಯೋಗಾತ್ ದೃಷ್ಟೇರ್ವೇಧೇತಿ ಕೀರ್ತ್ಯತೇ।
ಗುರುಣೋದೀರಿತಾ ಕರ್ಣೇ ಸಾ ಹಿ ಮಂತ್ರಾತ್ಮಿಕಾ ಭವೇತ್।
ಶಿಷ್ಯಪಾಣಿತಲೇ ದತ್ತಾ ಯಾ ದೀಕ್ಷಾ ಸಾ ಕ್ರಿಯಾ ಭವೇತ್॥'[೪]

ಶುಭದಿನದಂದು ಮಂಟಪ ರಚಿಸಿ ಗುರುವನ್ನು ಕರೆಸಿ ಪಂಚಕಲಶಗಳನ್ನು ಹೂಡುತ್ತಾರೆ. ಶ್ರೀ ಗುರು ಶಿಷ್ಯನನ್ನು ಮಂಟಪದಲ್ಲಿ ಪೂರ್ವಕ್ಕೆ ಮುಖಮಾಡಿ ಕೂಡ್ರಿಸಿ ಬಲಗೈಗೆ ಕಂಕಣ ಕಟ್ಟಿ ಇಷ್ಟಲಿಂಗವನ್ನು ಆತನಿಗೆ ನೀಡುವನು. ಶಿಷ್ಯನು ಆ ಇಷ್ಟಲಿಂಗವನ್ನು ಪೂಜಿಸಿ ದೇಹದ ಮೇಲೆ ಧರಿಸುವನು. ಆಗ ಆತನು ಶಿವಸ್ವರೂಪನಾಗುವನು. ಇದೇ ಕ್ರಿಯಾದೀಕ್ಷೆ. ಶ್ರೀ ಗುರು ಶಿಷ್ಯನಿಗೆ ದೀಕ್ಷಾ ಸಂಸ್ಕಾರ ನೀಡಿದ ಮೇಲೆ ಆ ಶಿಷ್ಯ ಮುಂದೆ

---

೨. ಕಾರಣಾಗಮ, ೧. ೧೩.

೩. ಚಂದ್ರಜ್ಞಾನಾಗಮ ೧.೪೫.

೪. ಕಾರಣಾಗಮ, ಕ್ರಿಯಾಪಾದ ೧-೧೪.

ಗುರುವೇ ಆಗುವನು, ಶಿಕ್ಷಿತ ಶಿವನ ಅಂಶವೇ ಆಗುವನು. ಬೀಜದಿಂದ ಮರವಾಗುವ ಹಾಗೆ ಮನುಷ್ಯನೇ ಮಹಾಂತನಾಗುವನು.

'ಮದುವೆ'ಯಲ್ಲಿ ವೈದಿಕ ಧರ್ಮಸಂಸ್ಕಾರಗಳ ಪ್ರಕಾರ 'ಅಗ್ನಿ'ಗೆ ಪ್ರಾಧಾನ್ಯತೆ ಇದ್ದರೆ, ವೀರಶೈವರಲ್ಲಿ ಪಂಚ ಕಲಶಗಳಿಗೆ ಮಹತ್ವವಿದೆ. ಮದುವೆಗಾಗಿ ವೀರಶೈವರು ಒಂದು ತಾತ್ಕಾಲಿಕ ಮಂಟಪ-ಹಂದರವನ್ನು ಮನೆಯ ಮುಂದುಗಡೆ ಹಾಕುತ್ತಾರೆ. ದೀಕ್ಷಾ ಸಂಸ್ಕಾರದಂತೆಯೆ ಇಲ್ಲಿಯೂ ಕೆಲವು ವಿಧಿ ವಿಧಾನಗಳನ್ನು ನಡೆಸುವರು. ಬಿಳಿಯ ವಸ್ತ್ರಗಳಿಂದ ಕಲಶಗಳನ್ನು ಮುಚ್ಚುವರು. ಆಮೇಲೆ ಐದು ಜನ ಮುತ್ತೈದೆಯರು, ಮದುಮಕ್ಕಳು ಕೂಡ್ರಬೇಕಾದ ಆಸನಗಳನ್ನು ಅಕ್ಕಿಯ ಸೇಸೆಯನಿರಿಸಿ ಸಿಂಗರಿಸುತ್ತಾರೆ. ಇತ್ತ ಈ ಕೆಲಸ ನಡೆದಾಗ ಅತ್ತ ವಧುವರರು ಸ್ನಾನಮಾಡಿ ಅಲಂಕರಿಸಿಕೊಳ್ಳುವರು. ವಧುವಿನ ತಲೆಗೆ ದಂಡೆ ವರನ ತಲೆಗೆ ಬಾಸಿಂಗ ಕಟ್ಟುವರು. ಆಮೇಲೆ ವಧುವರರನ್ನು ಮಂಗಲವಾದ್ಯಗಳ ಮೊಳಗಿನೊಂದಿಗೆ ಮಂಟಪಕ್ಕೆ ಕರೆ ತರುವರು. ವರನಿಗೆ ವಧುವಿನ ತಾಯಿ-ತಂದೆಗಳು ತಮ್ಮ ಮಗಳನ್ನು ಜೀವನ ಸಂಗಾತಿಯಾಗಿ ಸ್ವೀಕರಿಸಲು ಕೇಳಿಕೊಂಡು ಆತನಿಗೆ ವಸ್ತ್ರಾಭರಣಗಳನ್ನು ಕೊಡುವರು. ಆಮೇಲೆ ವಧುವರರನ್ನು ಮಂಟಪಕ್ಕೆ ಕರೆದೊಯ್ದು ಕೂಡ್ರಿಸುವರು. ವರನ ಬಲಭಾಗಕ್ಕೆ ವಧುವನ್ನು ಕೂಡ್ರಿಸುವರು. ವಿವಾಹ ನೇತೃತ್ವ ವಹಿಸಿದ ಜಂಗಮನು ಕಲಶಗಳಿಗೆ ಹೊಚ್ಚಿದ ಬಟ್ಟೆಯನ್ನು ತೆಗೆದು ಮದುಮಕ್ಕಳಿಗೆ ಧಾರ ಕೊಡುವರು. ಧಾರ ಹಿಡಿದ ವಧುವಿನ ಕೈಯನ್ನು ವರನ ಕೈಯಲ್ಲಿರಿಸುತ್ತಾನೆ. ಆ ಸಂದರ್ಭದಲ್ಲಿ ಮಂತ್ರ ಪಠಣ ನಡೆಯುವುದು. ಈ ಸಂದರ್ಭದಲ್ಲಿ ವಧುವಿನ ಕೊರಳಲ್ಲಿ ಮಂಗಳ ಸೂತ್ರವನ್ನು ವರನಿಂದ ಕಟ್ಟಿಸುವರು. ವಧುವಿನ ಕಾಲಲ್ಲಿ ಬೆಳ್ಳಿಯ ಕಾಲುಂಗರ ತೊಡಿಸಲಾಗುವುದು. ಆಮೇಲೆ ವಧು-ವರರು ತಮ್ಮ ಆಸನಗಳನ್ನು ಅದಲು ಬದಲು ಮಾಡುವರು. ವಧು ಎಡಗಡೆಯ ಆಸನಕ್ಕೂ ವರ ಬಲಗಡೆಯ ಆಸನಕ್ಕೂ ಬರುವರು. ಜಂಗಮನು ಪರಮಾತ್ಮನ ಆಶೀರ್ವಾದ ವರ-ವಧುವಿನ ಮೇಲಿರಲಿ ಎಂದು ಪ್ರಾರ್ಥಿಸುವನು ಕೂಡಿದ ಅಂದರೆ ಈ ರೀತಿ ಮಂತ್ರ ಹೇಳುವನು; "ತದೇವ ಲಗ್ನಂ ಸುದಿನಂ ತದೇವ। ತಾರಾಬಲಂ ಚಂದ್ರಬಲಂ ತದೇವ ವಿದ್ಯಾಬಲಂ ದೈವ ಬಲಂ ತದೇವ। ಗೌರಿಪತೇ ತೇಂಘ್ರಿಯುಗಂ ಸ್ಮರಾಮಿ।। ಶುಭ ಮುಹೂರ್ತೇ ಸಾವಧಾನಂ। ಸುಲಗ್ನೇ ಸಾವಧಾನಂ। ಪಾರ್ವತಿ ಪರಮೇಶ್ವರ ಧ್ಯಾನೋತ್ಸವ ಸ್ಸಾವಧಾನಂ।।"[೫] ಮಂತ್ರ ಕೊನೆಗೊಳ್ಳುತ್ತಿದ್ದಂತೆ ಕೂಡಿದ ಜನರೆಲ್ಲ ವಧುವರರಿಗೆ ಅಕ್ಕಿ ಕಾಳು ಹಾಕುವರು. ವೀರಶೈವರಲ್ಲಿ ಬಾಲ್ಯ ವಿವಾಹವಿಲ್ಲ. ವೀರಶೈವ ವಿವಾಹದ ಇನ್ನೊಂದು ವೈಶಿಷ್ಟ್ಯವೆಂದರೆ ಅಗ್ನಿ ಪೂಜೆ, ಸಪ್ತಪದಿ, ಹೋಮ-ಹವನ ಇವಾವ ಸಂಪ್ರದಾಯಗಳೂ ಇಲ್ಲಿ ಇಲ್ಲ. ಬ್ರಾಹ್ಮಣರು ಇವನ್ನು ತಪ್ಪದೇ ಆಚರಿಸುವರು. ವೀರಶೈವರು ಇವಾವನ್ನು ಆಚರಿಸುವುದಿಲ್ಲ. ಒಂದು ದೃಷ್ಟಿಯಲ್ಲಿ ವೀರಶೈವರ ವಿವಾಹ ಅತ್ಯಂತ ಸರಳವಾದುದು. ಕೆಲವು ವೀರಶೈವರಲ್ಲಿ ವಿಧವಾ ವಿವಾಹವಿದೆ. ಇದಕ್ಕೆ ಉಡಿಕೆ ವಿವಾಹ ಎಂದೂ ಕರೆಯುವರು. ಮದುವೆಯಾಗ ಬಯಸುವ ವಿಧವೆ ಹೊಸ ಬಟ್ಟೆ ತೊಟ್ಟುಕೊಳ್ಳುವಳು ವರನೂ ತೊಟ್ಟುಕೊಳ್ಳುವನು. ಇವರೀರ್ವರೂ ಹತ್ತಾರು ಜನರೆದುರು ಗುರುವಿನ ಆಶೀರ್ವಾದ ಪಡೆದುಕೊಂಡು ಬಿಟ್ಟರೆ 'ಉಡಿಕೆ ವಿವಾಹ' ಸಂಸ್ಕಾರ ಮುಗಿದಂತೆಯೇ. ಉಡಿಕೆ ವಿವಾಹ ಮಾಡಿಕೊಂಡ ಹೆಣ್ಣಿಗೆ ಉಳಿದ ಹೆಣ್ಣು ಮಕ್ಕಳಿಗಿಂತ ಕಡಿಮೆ ಸ್ಥಾನಮಾನಗಳು ಸಿಗುವವು. ಆದರೆ ಸಾಮಾಜಿಕವಾಗಿ

---

೫. ಗುಬ್ಬಣ್ಣವರ ಶಿವಾನಂದ, 'ಲಿಂಗಾಯತ ಸಂಸ್ಕಾರಗಳು', ಪುಟ-೧೦೪.

ಮತ್ತು ನಿತ್ಯದ ಬದುಕಿನಲ್ಲಿ ಅವಳ ಸ್ಥಾನಮಾನಗಳು ಆ ಸಮಾಜದ ಇನ್ನುಳಿದ ಸ್ತ್ರೀಯರಿಗಿರುವಂತೆಯೇ ಇರುತ್ತವೆ. ಗೃಹಸ್ಥನಾದ ವೀರಶೈವನು ಜೈನ ಹಾಗೂ ಬೌದ್ಧಧರ್ಮಗಳ ಗೃಹಸ್ಥರಂತೆ ಕೊನೆಗೆ ಸನ್ಯಾಸವನ್ನು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸುವುದಿಲ್ಲ. ವೀರಶೈವ ಗೃಹಸ್ಥ, ಗೃಹಸ್ಥನಾಗಿದ್ದುಕೊಂಡೇ ಮುಕ್ತಿ ಪಡೆಯಬಲ್ಲವನಾಗಿರುವನು. ವೀರಶೈವ ಗೃಹಸ್ಥನು ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ, ವಿಭೂತಿ, ರುದ್ರಾಕ್ಷಿ, ಮಂತ್ರ ಈ ಅಷ್ಟಾವರಣಗಳ ಜೊತೆಗೆ ಲಿಂಗಾಚಾರ, ಶಿವಾಚಾರ, ಭಕ್ತಾಚಾರ, ಸದಾಚಾರ, ಗಣಾಚಾರಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರಬೇಕಾಗುವುದು. ಲಿಂಗವಂತನಾದವನು ಇಷ್ಟಲಿಂಗೋಪಾಸನೆ ಮಾಡುತ್ತ, ನೀತಿವಿದನಾಗಿ ಬದುಕುವನು. ಶಿವನ ಬಗೆಗೆ ಗೌರವ ಆದರ ಇರಿಸಿಕೊಂಡು ಎಲ್ಲರೊಂದಿಗೆ ಸೌಹಾರ್ದತೆಯಿಂದ ಬಾಳುವನು. ಶಿವನಿಷ್ಠೆ ಹೊಂದಿ ಬದುಕುವನು.

ವೀರಶೈವರು ಶವವನ್ನು ಹೂಳುವರು, ಸುಡುವುದಿಲ್ಲ. ವೀರಶೈವನು ಮಡಿದೊಡನೆ-ಶಿವೈಕ್ಯನಾದೊಡನೆ ಆತನ ಲಿಂಗ ದೇಹವನ್ನು ಸಂಸ್ಕಾರ ಮಾಡುವ ಕ್ರಮವನ್ನು 'ಶಿವಮೇಧ' ಇಲ್ಲವೆ ಅಂತ್ಯ ಸಂಸ್ಕಾರ ಎಂದು ಕರೆಯುವರು:

ಶಾಂಭವವ್ರತನಿಷ್ಠಾನಾಮಿಷ್ಟಲಿಂಗೈಕ್ಯಸೇವಿನಾಮ್।
ದೇಹಾವಸಾನೇ ಕರ್ತವ್ಯಃ ಶಿವಮೇಧವಿಧಿರ್ಮಹಾನ್॥
ಶಿವೇ ಪರೇ ಪ್ರವಿಷ್ಟಾನಾಂ ವೇಧ ಆರಾಧನಾತ್ಮಕಃ।
ಶಿವಮೇಧ ಇತಿ ಖ್ಯಾತಃ ಕರಣೀಯೋ ಮುಮುಕ್ಷಭಿಃ॥[೬]

ವೀರಶೈವರು ಅಂತ್ಯ ಸಂಸ್ಕಾರವನ್ನು ಆಗಮೋಕ್ತ ರೀತಿಯಲ್ಲಿ ನಡೆಸುವರು. ಅಂತ್ಯಸಂಸ್ಕಾರಗಳು ಖನನ, ದಹನ, ತ್ಯಾಗ ಎಂದು ಮೂರು ಬಗೆಯಾಗಿದೆ.

ಲಿಂಗಾಂಗಸಂಗಿನಾಂ ವತ್ಸ ನಾನಾವೃತ್ತಿಯುಜಾಂ ಸತಾಮ್।
ಸಮಾಧ್ಯುತಸ್ಮೃತಃ ಪ್ರೋಕ್ತೋ ಹ್ಯವಸಾನವಿಧಿಃ ಪರಃ॥[೭]

ಕ್ರಿಯಾಸಮಾಧಿ, ಗೋಮುಖಸಮಾಧಿ, ಗೋಳಕಸಮಾಧಿ, ಬಯಲುಸಮಾಧಿ, ಧೂಳುಸಮಾಧಿ, ಜಲಸಮಾಧಿ, ಅಗ್ನಿಸಮಾಧಿ ಎಂಬ ಸಮಾಧಿಯ ಅನೇಕ ಬಗೆಗಳಿದ್ದರೂ ಬಹುತೇಕ ವೀರಶೈವರು ಕ್ರಿಯಾಸಮಾಧಿ ಮತ್ತು ಧೂಳು ಸಮಾಧಿಗಳನ್ನು ಆಚರಣೆಯಲ್ಲಿ ತಂದುದುಂಟು.

ವೀರಶೈವನಿಗೆ ಮರಣಕಾಲ ಸನ್ನಿಹಿತವಾದಾಗ ಗುರು ಅಥವಾ ಜಂಗಮರನ್ನು ಮನೆಗೆ ಆಹ್ವಾನಿಸಿ ಅವರ ಅನುಮತಿ ಪಡೆದು ಮರಣಾವಸ್ಥೆಗೆ ಬಂದವನನ್ನು ಸ್ನಾನಮಾಡಿಸಿ ಮಡಿ ಬಟ್ಟೆ ತೊಡಿಸಿ ಭಸ್ಮ ರುದ್ರಾಕ್ಷಿಮಾಲೆ ಹಾಕಿ ಕೂಡಿಸುವರು. ಆತನ ಇಷ್ಟಲಿಂಗ ಪೂಜಿಸಿ ಆತನ ಎಡ ಬಾಹುವಿಗೆ ಕಟ್ಟುವರು. ನಂತರ ಗುರುವಿನ ಪಾದಪೂಜೆ ಮಾಡಿ ತೀರ್ಥ ಪ್ರಸಾದವನ್ನು ಹಂಚುವರು. ಎಲ್ಲರೂ ತೀರ್ಥ ಪ್ರಸಾದ ಸ್ವೀಕರಿಸಿ ಭೋಜನ ಮಾಡುವರು. ಎಲ್ಲರಲ್ಲೂ ಮರಣವೇ ಮಹಾನವಮಿ ಎಂಬ ಭಾವ ಬರುವುದು. ಮರಣ

೬. ಚಂದ್ರಜ್ಞಾನಾಗಮ, ಚ.ಪಾ. ೧, ೬-೭.

೭. ಮಕುಟಾಗಮ; ಚ.ಪಾ., ೧.೧೮.

ಹೊಂದಿದ ವೀರಶೈವನಿಗಾಗಿ ಯಾರೂ ದುಃಖಿಸಬಾರದೆನ್ನುವರು. ಆನಂತರ ಮುಂದಿನ ಎಲ್ಲ ಕರ್ತವ್ಯಗಳನ್ನು ಗುರುಮುಖೇನ ನಡೆಸುವರು. ಮರಣ ಹೊಂದಿದ ವೀರಶೈವನ ಬಲ ತೊಡೆಯ ಮೇಲೆ ಗುರುವಿನ ಪಾದವಿಡಿಸಿ ಪೂಜಿಸಿ, ಎಲ್ಲರೂ ವಿಭೂತಿ ಮತ್ತು ಬಿಲ್ವಪತ್ರಗಳನ್ನು ಬೊಗಸೆಯಲ್ಲಿ ಹಿಡಿದುಕೊಂಡು ಮಂತ್ರಪೂರ್ವಕ ಮೃತನ ಮೇಲೆ ಹಾಕುವರು. ಅನಂತರ ಗುರುವಿಗೆ ದಕ್ಷಿಣೆಕೊಟ್ಟು ನಮಸ್ಕರಿಸುವರು. ಲಿಂಗದೇಹವನ್ನು ಹೊತ್ತೊಯ್ಯುವವರೆಗೂ ಮನೆಯಲ್ಲಿ ಶಿವಭಜನೆ, ಶಿವಸ್ತೋತ್ರ ಪಠಿಸುವರು. ಅನಂತರ ಮೃತ ದೇಹವನ್ನು ಚಟ್ಟಿನ ಪಲ್ಲಕ್ಕಿ (ಕೈಲಾಸಮಂಟಪ)ಯಲ್ಲಿ ಕೂಡ್ರಿಸಿ ರುದ್ರಭೂಮಿಗೆ ವಾದ್ಯಸಮೇತ ಸಾಗಿಸುವರು. ವೀರಶೈವರಿಗೆ ಪುನರ್ಜನ್ಮವಿಲ್ಲ. ಅವರಿಗೆ ಒಂದೇ ಜನ್ಮದಲ್ಲಿ ಮುಕ್ತಿ ಲಭಿಸುವುದೆಂದು ಭಾವಿಸುವರು. "ಏಕೇನ ಜನ್ಮನಾ ಮುಕ್ತಿಃ ವೀರಾಣಾಂ ತು ಮಹೇಶ್ವರಿ" ಎಂದು ಆಗಮ ವಾಕ್ಯ ಸಾರುತ್ತದೆ. ಪಂಚಭೂತಗಳಿಂದಾದ ಈ ದೇಹ ಅಂತ್ಯಕಾಲದಲ್ಲಿ ಪಂಚಭೂತಗಳಲ್ಲಿ ಲೀನವಾಗುವುದು. ಆದ್ದರಿಂದಲೇ ವೀರಶೈವರು ಮೃತ ದೇಹವನ್ನು ಹೂಳುವರು:

> ಶರೀರಂ ಪಂಚತತ್ವಾಖ್ಯಂ ತತ್ತ್ವಂ ತತ್ತ್ವೇನ ಯೋಜಯೇತ್।
> ತತ್ರಾಪಿ ಪೃಥಿವೀತತ್ತ್ವೇ ಯೋಜನಂ ಮೋಕ್ಷಸಾಧನಮ್॥[೮]

ಭೂನಿಕ್ಷೇಪವನ್ನು ಕುರಿತು ಶ್ರೀಸೂಕ್ತ ಹೀಗೆ ವಿವರಿಸಿದೆ 'ಕರ್ಧಮೇನ ಪ್ರಜಾಭೂತಾಮಯಿ ಸಂಭವ ಕರ್ದಮ' ಎಲೈ ಪೃಥಿವಿ ಕಾಲಪರಿಪಾಕದಿಂದ ಮರಣ ಹೊಂದಿದ ನನ್ನ ದೇಹವನ್ನು ನಿನ್ನ ಗರ್ಭದಲ್ಲಿ ಅಡಗಿಸಿಕೊಂಡು ನನ್ನ ಪಾಪವನ್ನು ಕಳೆದು ಸದ್ಗತಿಯನ್ನು ಕೊಡು. ಆದ್ದರಿಂದ ಭೂನಿಕ್ಷೇಪವೇ ಲಿಂಗಧಾರಿಗಳಾದ ವೀರಶೈವರಿಗೆ ಸೂಕ್ತವಾದ ಸಂಸ್ಕಾರವಾಗಿದೆ. ಲಿಂಗಧಾರಿಗಳಾದ ವೀರಶೈವರಿಗೆ ಅಗ್ನಿ ಸಂಸ್ಕಾರ ಮಾಡುವುದನ್ನು ಆಗಮಗಳು ನಿಷೇಧಿಸಿವೆ.

> ಬ್ರಹ್ಮಚಾರೀ ಗೃಹಸ್ಥೋ ವಾ ವಾನಪ್ರಸ್ಥೋ ಯತಿಸ್ತು ವಾ।
> ಜೀರ್ಣವ್ರತೋ ಯದಿ ಮೃತಸ್ತಸ್ಯ ದೇಹಂ ನ ದಾಹಯೇತ್॥[೯]

ಶಿವವ್ರತಧಾರಿಯಾದ ವೀರಶೈವನು ಬ್ರಹ್ಮಚಾರಿಯಾಗಿರಲಿ, ಗೃಹಸ್ಥನಾಗಿರಲಿ ಇಲ್ಲವೆ ಸನ್ಯಾಸಿಯಾಗಿರಲಿ, ಆತ ಸತ್ತಾಗ ಆತನ ಶವವನ್ನು ಸುಡಕೂಡದೆಂದು ಮಕುಟಾಗಮ ಸಾರುತ್ತದೆ. ಆದರೆ ಇಂದಿನ ಕಾಲದಲ್ಲಿ ಕೆಲವರು ತಿಳಿದೊ ತಿಳಿಯದೆಯೋ ವೀರಶೈವನ ಮೃತದೇಹವನ್ನು ಅಗ್ನಿಗೆ ಅರ್ಪಿಸುವುದೂ ಉಂಟು. ಇದು ಶಾಸ್ತ್ರವಿರುದ್ಧ.

ವೀರಶೈವನು ಲಿಂಗೈಕ್ಯನಾದಾಗ ಕ್ರಿಯಾಸಮಾಧಿ ಅಥವಾ ಧೂಳುಸಮಾಧಿ ಮಾಡುವ ವಿಧಾನ ಮಕುಟಾಗಮದಲ್ಲಿ ಈ ರೀತಿ ಹೇಳಲಾಗಿದೆ:

> ಶಿವಾಲಯಸಮೀಪೇ ವಾ ಶಿವಾರಾಮಸ್ಯವಾಽಂತಿಕೇ।
> ಶಿವತೀರ್ಥಸಮೀಪೇ ವಾ ಬಿಲ್ವಮೂಲೇ ನದೀ ತಟೇ।
> ಸಮಾಧಿಂ ಕಾರಯೇತ್ ಪ್ರಾಜ್ಞೋ ವಕ್ಷ್ಯೇ ತಲ್ಲಕ್ಷಣಂ ಶೃಣು॥[೧೦]

---

೮. ಲಿಂಗಧಾರಣ ಚಂದ್ರಿಕೆ, ಜಂಗಮವಾಡಿಮಠ, ೧೯೯೮ ಪು-೨೪೪.
೯. ಮಕುಟಾಗಮ, ಚ.ಪಾ., ೧.೧೯.
೧೦. ಮಕುಟಾಗಮ, ಚ.ಪಾ., ೪.೨.

ಶಿವಾಲಯದ ಹತ್ತಿರದಲ್ಲಿ, ಶಿವಾಲಯದ ಉದ್ಯಾನದಲ್ಲಿ, ಪುಣ್ಯಕ್ಷೇತ್ರದಲ್ಲಿ, ಬಿಲ್ವ ಮರದ ಕೆಳಗೆ ಅಥವಾ ನದಿ ದಂಡೆಯ ಮೇಲೆ ಸಮಾಧಿ ಮಾಡಬೇಕೆಂದು ಆಗಮದಲ್ಲಿ ಹೇಳಲಾಗಿದೆ.

ಸಮಾಧಿಯ ಬಳಿ ಶವನನ್ನು ತಂದು ಅದಕ್ಕೆ ಪತ್ರೆ ಪುಷ್ಪಗಳನ್ನು ಹಾಕುವರು. ಆನಂತರ ಶವನನ್ನು ಗುಹೆಯಾಕಾರದ ಸಮಾಧಿಯಲ್ಲಿ ಕುಳಿತ ಭಂಗಿಯಲ್ಲಿ ಅಂದರೆ ಲಿಂಗಪೂಜಾನಿರತನಾಗಿರುವ ಪದ್ಮಾಸನದ ಭಂಗಿಯಲ್ಲಿ ಕೂಡ್ರಿಸುವರು. ಶವದ ಕೈಯಲ್ಲಿ ಲಿಂಗವಿರಿಸಿ ಸಮಾಧಿಯಲ್ಲಿ ವಿಭೂತಿ ಪತ್ರೆ ಪುಷ್ಪ ಹಾಗೂ ಉಪ್ಪು ಸುರಿದು ಮಣ್ಣಿನಿಂದ ಮುಚ್ಚುವರು. ಸಮಾಧಿ ಮೇಲೆ ಗುರುವಿನ ಪಾದ ಪೂಜಿಸುವರು. ವೀರಶೈವರಲ್ಲಿ ಮರಣ ಸೂತಕವಾಗಲೀ, ಮೈಲಿಗೆಯಾಗಲೀ ಇಲ್ಲ. ವೀರಶೈವರಲ್ಲಿ ಶ್ರಾದ್ಧ ಮಾಡುವ ಪದ್ಧತಿಯೂ ಇಲ್ಲ. 'ಸಮಾಧಿ' ಎಂದರೆ ವೀರಶೈವನು ಆತ್ಮಸಾಕ್ಷಾತ್ಕಾರ ಸ್ಥಿತಿಯನ್ನು ಹೊಂದಿದ ಸ್ಥಳವೇ ಆಗಿದೆ. ವೀರಶೈವರು 'ಸಾವು' ಶಬ್ದ ಬಳಸರು. ಲಿಂಗೈಕ್ಯನಾದ ಎನ್ನುವರು.

ಲಿಂಗೈಕ್ಯರಾದ ವೀರಶೈವರನ್ನು ಸಾಮಾನ್ಯವಾಗಿ ಮಠಗಳ ಆವರಣದಲ್ಲಿ ಸಮಾಧಿ ಮಾಡುವುದುಂಟು. ಮಠಗಳ ಆವರಣದ ನಾಲ್ಕು ಕಡೆಗಳಲ್ಲಿ ಲಿಂಗ ಮುದ್ರೆಕಲ್ಲುಗಳಾದುದರಿಂದ ಇವರಿಗೆ ಜನನಾದಿ ಮರಣ ಪಂಚಸೂತಕಗಳಿಲ್ಲವೆಂದು ಗ್ರಂಥದಲ್ಲಿ ಹೇಳಿದ್ದರೂ ಕೆಲವರು ವೈದಿಕ ಸಂಪ್ರದಾಯದ ಪ್ರಭಾವದಿಂದಾಗಿ ಸೂತಕವನ್ನಾಚರಿಸುವರು. ಮರಣ ಹೊಂದಿದವರ ಮನೆಗೆ ಹೋಗಿ ಬಂದ ಮೇಲೆ ಅವರಿಗೆ ನೀರು ಸಂಪಡಿಸುವುದುಂಟು. ವೈಜ್ಞಾನಿಕವಾಗಿ ಆರೋಗ್ಯದ ದೃಷ್ಟಿಯಿಂದ ಇದು ಸರಿಯಾದ ಕ್ರಮವೇ ಆಗಿದೆ.

ವೀರಶೈವರು ಧಾರ್ಮಿಕ ಸಂಸ್ಕಾರಗಳನ್ನು ಇಂದು ಎಲ್ಲ ಕಡೆಗೂ ಒಂದೇ ರೀತಿ ಆಚರಿಸುತ್ತಿಲ್ಲ. ಆಧುನಿಕ ವಿದ್ಯಮಾನಗಳಿಗೆ, ಪರಿಸರಕ್ಕೆ ತಕ್ಕಂತೆ ಸಂಸ್ಕಾರಗಳನ್ನು ಆಚರಿಸುವುದುಂಟು. ವೈದಿಕ ಸಂಪ್ರದಾಯ ಬಲವತ್ತರವಾದುದು. ವೈದಿಕ ಸಂಸ್ಕಾರಗಳ ಪ್ರಭಾವ ವೀರಶೈವರ ಮೇಲೆ ವ್ಯಾಪಕವಾಗಿ ಆದುದನ್ನು ನಾವಿಂದು ಕಾಣುತ್ತೇವೆ. ವಿಶೇಷವಾಗಿ ಹಳ್ಳಿಗಾಡಿನಲ್ಲಿ ವೀರಶೈವರ ಸಂಸ್ಕಾರಗಳ ಮೇಲೆ ವೈದಿಕ ಸಂಸ್ಕಾರಗಳ ಪ್ರಭಾವ ಹೆಚ್ಚಾಗಿ ಆದುದನ್ನು ಕಾಣುವೆವು. ತಿಥಿ, ವಾರ, ನಕ್ಷತ್ರ ನೋಡುವುದು ರಾಹುಕಾಲ, ಗುಳಿಕಕಾಲ ಗುಣಿಸುವುದು ಲಿಂಗೈಕ್ಯರಾದ ಮೇಲೆ ದಿನಕಾರ್ಯ ಮಾಡುವುದು ಇಂದು ಸಾಮಾನ್ಯವಾಗಿದೆ. ಒಟ್ಟಿನಲ್ಲಿ ವೀರಶೈವರ ಧಾರ್ಮಿಕ ಸಂಸ್ಕಾರಗಳು ಸರಳವೂ, ಎಲ್ಲರಿಗೂ ಸರಳವಾಗಿ ಆಚರಿಸಲು ಬರುವಂಥವೂ ಆಗಿವೆ. ಆದರೆ ಇಂದು ಆಧುನಿಕತೆಯ ಹಾಗೂ ವಿಜ್ಞಾನದ ಪ್ರಭಾವ-ಪರಿಣಾಮಗಳಿಂದಾಗಿ ಇಂಥ ಸಂಸ್ಕಾರಗಳು ದಿನೇ ದಿನೇ ಕಡಿಮೆಯಾಗುತ್ತ ನಡೆದಿವೆ. ಆಚರಣೆಯಲ್ಲಿ ಕೆಲವರು ತಂದರೂ ಅವನ್ನು ಮಾಂತ್ರಿಕವಾಗಿ ಮಾಡಿ ಮುಗಿಸುವುದುಂಟು. ಒಟ್ಟಿನಲ್ಲಿ ಮಾನವನಿಗೆ ಇಂಥ ಸಂಸ್ಕಾರಗಳು ಬೇಕು. ಇವು ವ್ಯಕ್ತಿಯ ಮನಸ್ಸು, ಬುದ್ಧಿ ಹಾಗೂ ಆರೋಗ್ಯಗಳ ರಕ್ಷಣೆಗಾಗಿಯೇ ಇರುವಂಥವು. ಈ ವಿಚಾರವನ್ನು ತಿಳಿದವರು ಇಂದಿಗೂ ಇಂಥ ಧಾರ್ಮಿಕ ಸಂಸ್ಕಾರಗಳನ್ನು ತಮ್ಮ ನಿತ್ಯದ ಬದುಕಿನಲ್ಲಿ ಆಚರಣೆಯಲ್ಲಿ ತರುವುದನ್ನು ಕಾಣುವೆವು.

□□

೮. ವೀರಶೈವ ಗೋತ್ರ-ಸೂತ್ರಗಳ ಪರಿಕಲ್ಪನೆ

-ಶ್ರೀ ಷಣ್ಮುಖಯ್ಯ ಅಕ್ಕೂರಮಠ

ಭಾರತೀಯ ಸಂಸ್ಕೃತಿ ಪರಂಪರೆಯಲ್ಲಿ ದೀಕ್ಷೆಯ ನಂತರ ಹಿರಿಯರಿಗೆ ನಮಸ್ಕಾರ ಮಾಡುವಾಗ ತನ್ನ ಸೂತ್ರ-ಗೋತ್ರಗಳನ್ನು ಹೇಳಿಕೊಂಡು ನಮಸ್ಕರಿಸುವುದು ಸಂಪ್ರದಾಯ. ಇದನ್ನು "ಗೋತ್ರಾಭಿವಾದನ" ಎಂದು ಕರೆಯುತ್ತಾರೆ. ನಮ್ಮ ದೈವ, ಗುರುಪರಂಪರೆ, ಮತ-ಧರ್ಮ, ಇಂತದ್ದು ಎಂದು ಸೂಚಿಸಲು ಗೋತ್ರ ಪದ್ಧತಿ ಇದೆ. ಅಷ್ಟೇ ಅಲ್ಲದೆ; ನಾವು ದೈವಸಂಭೂತರು, ನಮ್ಮ ವಂಶ ಸನಾತನ, ನಮ್ಮ ಪರಂಪರೆ ಪ್ರಾಚೀನ ಎನ್ನುವ ಭಾವನೆಯೂ ಇದೆ.

ಗೋತ್ರದ ಕಲ್ಪನೆ ಕುಲದೈವಗಳ ಹೆಸರಿನಲ್ಲೊ, ವಿಶಿಷ್ಟ ವ್ಯಕ್ತಿಗಳ ಹೆಸರಿನಲ್ಲೊ, ಋಷಿ ಮುನಿಗಳ ಹಾಗೂ ಗುರುಗಳ ಹೆಸರಿನಲ್ಲೊ, ಕುಲ ಕಸುಬುಗಳು ಹೆಸರಿನಲ್ಲೊ ಮೂಡಿಬಂದಿವೆ. ಈ ಕಲ್ಪನೆ ಸಾಮಾನ್ಯವಾಗಿ ಎಲ್ಲ ಮತ-ಧರ್ಮಗಳ ಜನಾಂಗಗಳಲ್ಲೂ, ಹಿಂದುಳಿದ ಬುಡಕಟ್ಟು ಜನಾಂಗದಲ್ಲೂ ಇರುವುದು ಕಂಡು ಬರುತ್ತದೆ. ಹಿಂದುಳಿದ ಬುಡಕಟ್ಟು ಜನಾಂಗಗಳಲ್ಲಿ ಗೋತ್ರ-ಸೂತ್ರಗಳ ಕಟ್ಟು ಪಾಡುಗಳನ್ನು ಕಟ್ಟು ನಿಟ್ಟಾಗಿ ಪಾಲಿಸದಿದ್ದರೆ ಕ್ರೂರ ದೇವತೆಗಳಿಗೆ ಬಲಿಯಾಗುತ್ತೇವೆ ಎನ್ನುವ ನಂಬಿಕೆಯೂ ಇದೆ. ಹೀಗಾಗಿ ಈ ಕಲ್ಪನೆ ಬುಡಕಟ್ಟು ಜನಾಂಗದಲ್ಲೂ ಅನೂಚಾನವಾಗಿ ಉಳಿದುಕೊಂಡು ಬಂದಿದೆ ಎಂದು ಸಮಾಜಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ.

ಧರ್ಮಶಾಸ್ತ್ರದ ಇತಿಹಾಸದಲ್ಲಿ ಈ ಗೋತ್ರ-ಸೂತ್ರದ ಕಲ್ಪನೆಗೆ ಮೂಲ ವೈದಿಕ ಧರ್ಮವೆಂದೇ ಕಾಣುತ್ತದೆ. ಶತಪಥ ಬ್ರಾಹ್ಮಣದಲ್ಲಿ ಏಳು ಋಷಿಗಳ ಪಟ್ಟಿ ಇದೆ. ಮುಂದೆ ಅಗಸ್ತ್ಯರ ಹೆಸರನ್ನು ಸೇರಿಸಲಾಯಿತೆಂದು ಹೇಳುತ್ತಾರೆ. ಅವರ ಪ್ರಕಾರ ಗೌತಮ, ಭಾರದ್ವಾಜ, ಜಮದಗ್ನಿ, ವಸಿಷ್ಠ, ವಿಶ್ವಾಮಿತ್ರ, ಅತ್ರಿ, ಕಶ್ಯಪ ಮತ್ತು ಅಗಸ್ತ್ಯ ಇವರುಗಳು ಮಾತ್ರ ಮೂಲ ಗೋತ್ರಕಾರರು. ಈ ಮೂಲ ಎಂಟು ಗೋತ್ರಗಳಿಂದ ೪೯ ಕುಟುಂಬಗಳು ಸ್ಥಾಪಿತವಾಯಿತೆಂದು ಹೇಳುತ್ತಾರೆ. (ಧರ್ಮಶಾಸ್ತ್ರದ ಇತಿಹಾಸ ಸಂಪುಟ ೧ ಭಾಗ ೧, ಪಾಂಡುರಂಗ ವಾಮನ ಕಾಣೆ, ಅನುವಾದ ಎಸ್.ಕೆ. ರಾಮಚಂದ್ರರಾವ್, ೧೯೮೦) ಶಾಸ್ತ್ರದ ಪರಿಚಯವಾಗುತ್ತದೆ. ಗೋತ್ರವೆಂದರೆ "ಅಪತ್ಯಂ ಪೌತ್ರ ಪ್ರಭೃತಿ ಗೋತ್ರಮ್" (ಪಾ.ಸೂ.) ಸಂತತಿ, ಪೀಳಿಗೆ, ಪುತ್ರಪರಂಪರೆ ಎನ್ನುವ ಅರ್ಥಗಳೂ ಉಂಟು.

"ಗೋತ್ರಜ" ಎಂದರೆ ಒಂದೇ ಗೋತ್ರದಲ್ಲಿ ಹುಟ್ಟಿದವನು. ಬಂಧು, ಜ್ಞಾತಿ ಎನ್ನುವ ಅರ್ಥಗಳು ಇವೆ. ವಂಶ ಗೋತ್ರಪಟ್ಟಿಯೆಂದರೆ ಚರಿತ್ರೆಯನ್ನು ತಿಳಿಸುವ ಪಟ, ವಂಶಾವಳಿ ಎನ್ನುವ ಅರ್ಥಗಳು ಇವೆ. (ಶಬ್ದಾರ್ಥ ಕೌಸ್ತುಭ, ಸಂಸ್ಕೃತ-ಕನ್ನಡ ಶಬ್ದಕೋಶ, ಪುಟ ೬೭೧)

ಸೂತ್ರವೆಂದರೆ 'ತಂತು' ಸಂಬಂಧವೆಂದು ಅರ್ಥ ತಂತು ದಾರ (ತಂತು ಸಂತಾನೇ) (ಶ.ಕೌ.ಸಂ.ಕ.ಶ.ಕೋ)

ವೀರಶೈವ ಧರ್ಮದ ಸೂತ್ರ-ಗೋತ್ರಗಳ ವಿಪುಲ ಮಾಹಿತಿಯನ್ನು ಸ್ವಾಯಂಭುವ, ಸುಪ್ರಭೇದ, ಪಾಶುಪತ ಮೊದಲಾದ ಆಗಮಗಳಲ್ಲೂ, ವೀರಶೈವ ಪ್ರಕಾಶಿಕೆ, ಕ್ರಿಯಾಸಾರ, ಸದಾಚಾರ ಸಂಗ್ರಹ, ಸ್ಕಂದ ಪುರಾಣಗಳಿಂದ ತಿಳಿಯಬಹುದಾಗಿದೆ. ಶಿವಾಗಮಗಳ ಸಾರಸಂಗ್ರಹವಾದ ವೀರಶೈವ ಸದಾಚಾರ ಸಂಗ್ರಹದಲ್ಲಿ ವೀರಶೈವ ಧರ್ಮದ ಪ್ರಾಚೀನತೆ, ಗುರುಪರಂಪರೆ, ಗೋತ್ರ-ಸೂತ್ರಗಳ ವಿವರಗಳನ್ನು ತಿಳಿಯಬಹುದಾಗಿದೆ. "ಸದಾಚಾರ ಸಂಗ್ರಹ" ಒಂದು ಮೌಲಿಕ ಕೃತಿ. ಸಂಸ್ಕೃತ ಶಿವಾಗಮಗಳ ಹಾಗೂ ಸಿದ್ಧಾಂತ ಗ್ರಂಥಗಳ ಆಧಾರದ ಮೇಲೆ ರಚಿಸಿದ ಕೃತಿ. ಈ ಗ್ರಂಥದ ಕರ್ತೃ 'ನಾಗನಾಥ'. ಈತನು ವೀರಶೈವ ಸಿದ್ಧಾಂತವನ್ನು ಸಮಗ್ರವಾಗಿ ಅಧ್ಯಯನ ಮಾಡಿದ ವಿದ್ವಾಂಸ ಹಾಗೂ ವೀರಶೈವ ಧರ್ಮಶಾಸ್ತ್ರಜ್ಞ. ಈತನ ಕಾಲ ಹದಿನಾರನೇ ಶತಮಾನ ಎಂದು ಹೇಳುತ್ತಾರೆ. ವೀರಶೈವ ಸದಾಚಾರ ಸಂಗ್ರಹ ಇದು ವೀರಶೈವ ಧರ್ಮಶಾಸ್ತ್ರ ಅಷ್ಟೇ ಅಲ್ಲ: ವೀರಶೈವ ಧರ್ಮದ ಸಂವಿಧಾನ(Constitution)ವೂ, ಹೌದು.

ವೀರಶೈವರು ಈಗಲೂ ಮಠದ ಸಂಪ್ರದಾಯ, ಅಧಿಕಾರ ಹಾಗೂ ಧರ್ಮಕ್ಕೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಉಚ್ಚ ನ್ಯಾಯಾಲಯದವರೆಗೂ ಈ ಗ್ರಂಥವನ್ನು ಆಧಾರವಾಗಿ ಬಳಸುತ್ತಿರುವುದು ಈ ಗ್ರಂಥದ ವೈಶಿಷ್ಟ್ಯತೆಗೆ ಸಾಕ್ಷಿಯಾಗಿದೆ. ವೀರಶೈವ ಧರ್ಮದ ಸಮಗ್ರ ಸ್ವರೂಪವನ್ನು ಅರಿಯಲು ಇದು ಪ್ರಮಾಣ ಗ್ರಂಥವಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಲ್ಲ.

ವೀರಶೈವ ಧರ್ಮ ಸಾವಿರಾರು ವರ್ಷಗಳ ಸುಧೀರ್ಘ ಪರಂಪರೆಯನ್ನು ಇತಿಹಾಸವನ್ನು ಹೊಂದಿದೆ. ಜಗತ್ತಿನಲ್ಲಿ ಅತಿ ಪ್ರಾಚೀನವಾದ ಶೈವಧರ್ಮದ ಒಂದು ಶಾಖೆಯಾಗಿ ಶೈವದಷ್ಟೇ ಪ್ರಾಚೀನವಾಗಿದೆ. ಈ ಧರ್ಮದ ಆದಿದೈವ 'ಶಿವನು'. ಶಿವನ ಪ್ರಥಮ ಗಣಂಗಳೇ ಈ ಧರ್ಮದ ಮೂಲಪುರುಷರು ಹಾಗೂ ಗೋತ್ರಪುರುಷರು. ಸಾಮಾನ್ಯವಾಗಿ ವೀರಶೈವರ ಧಾರ್ಮಿಕ ಕಾರ್ಯಗಳಲ್ಲಿ ಅಂದರೆ, ನಾಂದಿ, ಸಮಾರಾಧನೆ, ವಿವಾಹ, ದೀಕ್ಷೆ, ಜಾತಕರ್ಮ, ಪಟ್ಟಾಧಿಕಾರ ಇತ್ಯಾದಿ ಕಾರ್ಯಗಳಲ್ಲಿ ೨೫ ಜನ ಪ್ರಮಥ ಗಣರನ್ನು ಸ್ಮರಿಸುವ ಪರಿಪಾಠವಿದೆ. ಅವರ ಹೆಸರುಗಳು ಹೀಗಿವೆ:

ಶ್ರೀ ನಂದಿ, ಭೃಂಗಿ, ರಿಟಿ, ವೀರಕ, ವೀರಭದ್ರ, ಪುಷ್ಪದಂತ, ಅಂಡಾಭರಣ, ದಂಡಪಾಣಿ, ಚಂಡೇಶ್ವರ, ಧಾರುಕ, ರೇಣುಕ, ವಿಕರಣ, ವಿಜಯಕರಣ, ಘಂಟಾಕರ್ಣ, ಗೋಕರ್ಣ, ರೇವಣಸಿದ್ಧ, ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯ, ಸುಖೇತು, ರುರು, ಉಪಮನ್ಯು, ಭೃಗು, ದಧಿಚಿ, ಗೌತಮ ಎಂದು (ವೀರಶೈವ ಪೂರ್ವಪ್ರಯೋಗ ರತ್ನಂ, ಪು. ೨೩).

ಈ ಶಿವಾಗಮೋಕ್ತ ಗಣಾಧೀಶ್ವರರ ಹೆಸರುಗಳನ್ನು ತೋಂಟದ ಸಿದ್ಧಲಿಂಗೇಶ್ವರ ಶಿವಯೋಗಿಗಳು ತಮ್ಮ ಷಟ್‌ಸ್ಥಲಜ್ಞಾನಸಾರಾಮೃತದ ಒಂದು ವಚನದಲ್ಲಿ ಉಲ್ಲೇಖಿಸಿದ್ದಾರೆ. ಈ ಎಲ್ಲ ಗಣಾಧೀಶ್ವರರು ಮಾನವರಂತೆ ದೇಹಧಾರಿಗಳು, ಶಿವಾಂಶ ಸಂಭೂತರು. ಭಾರತೀಯರು ಧರ್ಮಾಚರಣೆಗಳನ್ನು ಆಚರಿಸುವಾಗ ತಮ್ಮತಮ್ಮ ಸೂತ್ರ-ಗೋತ್ರಗಳನ್ನು ಹೇಳಿಕೊಳ್ಳುವುದು ಒಂದು ಸತ್ಸಂಪ್ರದಾಯವಾಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೂ ತಮ್ಮ ತಮ್ಮ ಶಾಖೆಯ ಋಷಿಗಳ ಗೋತ್ರಗಳನ್ನು ಹೇಳುತ್ತಾರೆ.

ಹಾಗೆಯೇ ವೀರಶೈವರೂ ವಿವಾಹ, ದೀಕ್ಷೆ, ಪಟ್ಟಾಧಿಕಾರ, ಜಾತಕರ್ಮ, ಅಂತ್ಯ ಸಂಸ್ಕಾರ ಹೀಗೆ ಎಲ್ಲ ಧಾರ್ಮಿಕ ಆಚರಣೆಗಳಲ್ಲೂ ಈ ಶಿವಗಣರ ಗೋತ್ರಗಳನ್ನು ಹೇಳುವುದು ಸತ್ಸಂಪ್ರದಾಯವಾಗಿದೆ. ವೈದಿಕರು ಋಷಿಮುನಿಗಳ ಗೋತ್ರ-ಸೂತ್ರಗಳನ್ನು ಹೇಳಿದರೆ ವೀರಶೈವರು ಶಿವಗಣರ ಗೋತ್ರ-ಸೂತ್ರಗಳನ್ನು ಹೇಳಿಕೊಳ್ಳುತ್ತಾರೆ.

ಈ ಪ್ರಬಂಧದಲ್ಲಿ "ವೀರಶೈವ ಸದಾಚಾರ ಸಂಗ್ರಹ" ಕೃತಿಯನ್ನು ಆಧರಿಸಿ ವೀರಶೈವ ಧರ್ಮದ ಸೂತ್ರ-ಗೋತ್ರಗಳ ಪರಿಕಲ್ಪನೆಯನ್ನು ಪ್ರಸ್ತಾಪಿಸುತ್ತೇನೆ. ಅಲ್ಲಿ ಬರುವ ವಿಷಯ ನಿರೂಪಣೆ ಹೀಗಿದೆ:

ಶಿವನಿಗೆ ಪಂಚಮುಖಗಳು ೧) ಸದ್ಯೋಜಾತ, ೨) ವಾಮದೇವ, ೩) ಅಘೋರ, ೪) ತತ್ಪುರುಷ ಮತ್ತು ೫) ಈಶಾನ. ಈ ಮುಖಗಳಿಂದ ಉದಯಿಸಿದವರು ಶಿವಸ್ವರೂಪಿಗಳಾದ ವೀರ, ನಂದಿ, ಭೃಂಗಿ, ವೃಷಭ, ಸ್ಕಂದ. ಈ ಐವರು ಪಂಚಗೋತ್ರಗಳಿಗೆ ಮೂಲಪುರುಷರು.

ರೇಣುಕ, ಧಾರುಕ, ಶಂಖಕರ್ಣ, ಧೇನುಕರ್ಣ, ವಿಶ್ವಕರ್ಣ ಎಂಬ ಈ ಐವರು ಪರಮಾಚಾರ್ಯರು ಪಂಚಗೋತ್ರಗಳ ರಕ್ಷಣೆಗಾಗಿ ಅವತರಿಸುತ್ತಾರೆ.

ಈ ಆಚಾರ್ಯರಿಗೆ ಯುಗಯುಗಗಳಲ್ಲಿ ಬೇರೆ ಬೇರೆ ಹೆಸರುಗಳು ಇರುತ್ತವೆ. ಕೃತಯುಗದಲ್ಲಿ-ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಚತುರಕ್ಷರ, ಪಂಚಾಕ್ಷರ ಎಂದು. ತ್ರೇತಾಯುಗದಲ್ಲಿ- ಏಕವಕ್ತ್ರ, ದ್ವಿವಕ್ತ್ರ, ತ್ರಿವಕ್ತ್ರ, ಚತುರ್‌ವಕ್ತ್ರ, ಪಂಚವಕ್ತ್ರವೆಂದು. ದ್ವಾಪರಯುಗದಲ್ಲಿ- ರೇಣುಕ, ಧಾರುಕ, ಶಂಖಕರ್ಣ, ಧೇನುಕರ್ಣ, ವಿಶ್ವಕರ್ಣ ಎಂದು. ಕಲಿಯುಗದಲ್ಲಿ- ರೇಣುಕಾರಾಧ್ಯ, ಮರುಳಾರಾಧ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯ ಹಾಗೂ ವಿಶ್ವಾರಾಧ್ಯರೆಂದು ಪ್ರಸಿದ್ಧರಾಗಿದ್ದಾರೆ.

ಈ ಐವರು ಆಚಾರ್ಯರಲ್ಲಿ ಶ್ರೀ ರೇಣುಕರು ಶಿವನ ಸದ್ಯೋಜಾತ ಮುಖದಿಂದ ಉದಯಿಸಿದರು. ಇವರಿಗೆ ರೇವಣಾರಾಧ್ಯ ಎಂದು ಹೆಸರು ಇದೆ. "ಪಡಿವಿಡಿ" ಎಂಬುದು ಇವರ ಸೂತ್ರ. ವೀರಗೋತ್ರಕ್ಕೆ ಇವರು ಮೂಲಪುರುಷರು. ಶಿವನ ವಾಮದೇವ ಮುಖದಿಂದ ಉದಯಿಸಿದವರು ಶ್ರೀ ದಾರುಕರು ಇವರಿಗೆ ಮರುಳರಾಧ್ಯರೆಂಬ ಹೆಸರು ಇದೆ. "ವೃಷ್ಟಿ" ಇವರ ಸೂತ್ರ. ಇವರು ನಂದಿಗೋತ್ರದ ಮೂಲಪುರುಷರು. ಶಿವನ ಅಘೋರಮುಖದಿಂದ ಉದಯಿಸಿದವರು ಶ್ರೀ ಶಂಖಕರ್ಣರು. ಏಕೋರಾಮಾರಾಧ್ಯ ಎಂಬುದು ಇವರ ಮತ್ತೊಂದು ಹೆಸರು. "ಲಂಬನ"ವು ಇವರ ಸೂತ್ರ. ಭೃಂಗಿ ಗೋತ್ರಕ್ಕೆ ಇವರೇ ಮೂಲಪುರುಷರು. ಶಿವನ ತತ್ಪುರುಷಮುಖದಿಂದ ಶ್ರೀ ಧೇನುಕರ್ಣರು ಉದಯಿಸಿದರು. ಪಂಡಿತಾಧ್ಯರೆಂಬುದು ಇವರ ಮತ್ತೊಂದು ಹೆಸರು. "ಮುಕ್ತಾಗುಚ್ಛ" ಇವರ ಸೂತ್ರ. ವೃಷಭ ಗೋತ್ರಕ್ಕೆ ಇವರು ಮೂಲಪುರುಷರು. ಶಿವನ ಈಶಾನಮುಖದಿಂದ ಉದಯಿಸಿದವರು ಆಚಾರ್ಯ ವಿಶ್ವಕರ್ಣರು. ಇವರಿಗೆ ವಿಶ್ವಾರಾಧ್ಯರೆಂಬ ಹೆಸರು ಇದೆ. "ಪಂಚವರ್ಣ" ಇವರ ಸೂತ್ರ. ಸ್ಕಂದಗೋತ್ರಕ್ಕೆ ಇವರು ಅಧಿಪತಿಗಳು. ಹೀಗೆ ಈ ಐವರು ಆಚಾರ್ಯರ ಉಗಮ ಶಿವನ ಪಂಚಮುಖಗಳಿಂದ ಎನ್ನುವ ಕಲ್ಪನೆ ಇದೆ.

"ವೀರಶೈವ ಸದಾಚಾರ ಸಂಗ್ರಹ"ದಲ್ಲಿ ಪಂಚಾಚಾರ್ಯರ ಮೂಲಸ್ಥಾನದ ಪರಿಚಯವೂ ಇದೆ. ದ್ರಾಕ್ಷಾರಾಮದ ರಾಮನಾಥ ಜ್ಯೋತಿರ್ಲಿಂಗದಿಂದ ಏಕೋರಾಮಾರಾಧ್ಯರ ಉದಯ. ಇವರ ವಾಸಸ್ಥಾನ ಹಿಮಾಲಯ. ಪಂಡಿತಾರಾಧ್ಯರು

ಸುಧಾಕುಂಡವೆಂದು ಕರೆಯುವ ಶ್ರೀ ಶೈಲದ ಮಲ್ಲಿಕಾರ್ಜುನ ಲಿಂಗದಿಂದ ಉದಯಿಸಿದರು. ಶ್ರೀ ಶೈಲವೇ ಅವರ ವಾಸಸ್ಥಾನ.

ರೇವಣಸಿದ್ಧಾಚಾರ್ಯರು ಕೊಲನುಪಾಕದ ಸೋಮೇಶ್ವರಲಿಂಗದಲ್ಲಿ ಉದಯಿಸಿದರು. ಕದಲೀಪುರ (ಬಾಳೇಹಳ್ಳಿ)ವೇ ಅವರ ವಾಸಸ್ಥಾನ. ಮರುಳ ಸಿದ್ಧಾರಾಧ್ಯರು ಮಹಾಕ್ಷೇತ್ರವೆನಿಸಿದ ವಟಕ್ಷೇತ್ರದ ಸಿದ್ಧೇಶ್ವರಲಿಂಗದಲ್ಲಿ ಉದಯಿಸಿದರು. ಉಜ್ಜಯನಿಯೇ ಅವರ ವಾಸಸ್ಥಾನ.

ಕಾಶೀಯ ವಿಶ್ವೇಶ್ವರಲಿಂಗದಲ್ಲಿ ವಿಶ್ವಾರಾಧ್ಯರು ಉದಯಿಸಿದರು. ಕಾಶೀ ಕ್ಷೇತ್ರವೇ ಅವರ ವಾಸಸ್ಥಾನ. ಪಂಚಾಚಾರ್ಯರ ಅವತಾರ ಸೂತ್ರ-ಗೋತ್ರಗಳ ವಿಸ್ತಾರವಾದ ವಿವರವನ್ನು ಸ್ವಯಂಭುವಾಗಮದಲ್ಲಿ ನೋಡಬಹುದು.

ವೀರಶೈವರ ಸೂತ್ರ-ಗೋತ್ರಗಳ ವಿಚಾರವನ್ನು ಪಾಶ್ಚಿಮಾತ್ಯ ಸಮಾಜಶಾಸ್ತ್ರಜ್ಞ "ಥರ್ಸ್ಟನ್" ತನ್ನ Caste and Tribes of South India ದಲ್ಲಿ ಹೀಗೆ ಉಲ್ಲೇಖ ಮಾಡಿದ್ದಾನೆ:

"The origion of the lingayats base their opinion on a Sanskrit work. The Param Rahasya give the following account. When god Shiva wished to people the earth he created from his mouth, five acharyas namely Marularadhyacharya, Ekoramaradhyacharya, Revanaradhyacharya, Panditaradhyacharya and Vishwaradhyacharya.

These five Acharyas propagatied the Lingayat portion of mankind. Each of them founded a Gothra namely- Bhringi, Veera, Vrishabha, Skanda and Nandi and their five Seats are- Srishaila, Kollipaki, Ujjaini, Kashi and Balehalli".

ವೀರಶೈವರ ಗೋತ್ರ ಪುರುಷರನ್ನು ಕುರಿತು ಪಾಶುಪತಾಗಮ "ನಂದೀ-ಭೃಂಗೀ ತಥಾ ವೀರೋ ವೃಷಭಾ ಸ್ಕಂದ ಏವ ಚ" ಎಂದು ನಾಮ ನಿರ್ದೇಶನ ಮಾಡಿ, ಅವರ ಗುಣವರ್ಣನೆಯನ್ನು ಮಾಡುತ್ತದೆ:

ಮತ್‌ಜ್ಞಾನಮೇವ ನಂದಿಸ್ಯಾತ್ ಸದ್ಧರ್ಮೋ ವೃಷಭಃ ಸ್ಮೃತಃ।
ಪ್ರತಾಪೋ ವೀರಭದ್ರಸ್ಸ್ಯಾತ್, ಸದ್ಧರ್ಮೋ ವೃಷಭಃ ಸ್ಮೃತಃ।
ಕೀರ್ತಿಃ ಸ್ಕಂದ ಇತಿ ಪ್ರೋಕ್ತಃ ಪಂಚೈತೇ ಮತ್‌ಸ್ವರೂಪಿಣಃ॥

ಅಂದರೆ, ನಂದಿಯು ಶಿವಜ್ಞಾನ ಸಂಪನ್ನ, ಭೃಂಗಿಯು ವೈರಾಗ್ಯ ಪುರುಷ, ವೀರಭದ್ರ ಪರಾಕ್ರಮಶಾಲಿ, ವೃಷಭನು ಸದ್ಧರ್ಮಿ, ಸ್ಕಂದನು ಕೀರ್ತಿಶಾಲಿ ಎಂದು ಬಣ್ಣಿಸುತ್ತದೆ.

ವೀರಶೈವರ ಗೋತ್ರ ಪುರುಷರು ವೈದಿಕ ಗೋತ್ರ ಪುರುಷರಾದ ಋಷಿಗಳಂತೆ ಗೃಹಸ್ಥರು, ಸಪತ್ನೀಕರು. ಇವರು ಶಿವಗಣರು, ಜನನ-ಮರಣ ರಹಿತರು. ಮಾನವ ಜನಾಂಗದ ವಂಶ ಮುಂದುವರೆಯಲು, ತಂದೆ-ತಾಯಿಗಳು ಕಾರಣರಾಗುವಂತೆ ವೀರಶೈವ ಸಂತತಿ (ವಂಶ) ಮುಂದುವರೆಯಲು ಇವರು ಕಾರಣರಾಗುತ್ತಾರೆ.

ನಂದೀಶ್ವರನಿಗೆ ಕುಂಡಲಿನಿ; ಭೃಂಗೀಶ್ವರನಿಗೆ ಆಹ್ಲಾದಿನಿ; ವೃಷಭನಿಗೆ ಭದ್ರಾ; ಸ್ಕಂದನಿಗೆ ದೇವಯಾನಿ; ವೀರೇಶನಿಗೆ ಭದ್ರಕಾಳಿ ಎನ್ನುವ ಪತ್ನಿಯರಿದ್ದರು ಎನ್ನುವ ವಿಷಯ ಶ್ರೀ ನೀಲಕಂಠ ಶಿವಾಚಾರ್ಯರ ಕ್ರಿಯಾಸಾರದ ಹದಿನಾಲ್ಕನೇ ಉಪದೇಶದಲ್ಲಿ (ಕ್ರಿಯಾಸಾರ, ಭಾಗ-೨, ಪು. ೨೭೮-೨೭೯, ಪ್ರಾಚ್ಯ ಸಂಶೋಧನಾ ಸಂಸ್ಥೆ, ಮೈಸೂರು) ಉಕ್ತವಾಗಿದೆ. ಅಲ್ಲಿ ಉಕ್ತವಾದ ವಿಷಯ ಹೀಗಿದೆ:

ಕುಂಡಲಿನೀ ಸಹಿತಾಯ ನಂದೀಕೇಶ್ವರಾಯ ನಮಃ, ಆಹ್ಲಾದಿನಿ ಸಹಿತಾಯ ಭೃಂಗಿಣೇ ನಮಃ, ಭದ್ರಾ ಸಹಿತಾಯ ವೃಷಭಾಯ ನಮಃ, ದೇವಯಾನಿ ಸಹಿತಾಯ ಸ್ಕಂದಾಯ ನಮಃ ಎಂದು ಲಿಂಗಪುರಾಣದಲ್ಲಿ-

ವೀರಭದ್ರೋ ಮಹಾತೇಜಾ ಹಿಮಕುಂದೇಂದು ಸನ್ನಿಭಃ।
ಭದ್ರಕಾಳೀ ಪ್ರಿಯೋ ನಿತ್ಯಂ ಮಾತೃಣಾಮಭಿರಕ್ಷಕಃ॥

ಎಂದು ವೀರಭದ್ರನೆಂಬ ಗಣನಿಗೆ, ಭದ್ರಕಾಳಿ ಎಂಬ ಪತ್ನಿ ಇರುವಳೆಂದು ತಿಳಿದು ಬರುತ್ತದೆ.

"ಅಥ ಯದಿ ಸ್ತ್ರೀಲೋಕಕಾಮೋ ಭವತಿ" ಎಂಬ ಶ್ರುತಿ ಪ್ರಮಾಣದಂತೆ ಈ ಐವರು ಗೋತ್ರ ಪುರುಷರು ಹಾಗೂ ಶಿವಗಣರು, ಸರ್ವತಂತ್ರ ಸ್ವತಂತ್ರರು. ಜಗತ್ತಿನ ಲೀಲಾ ವಿನೋದಕ್ಕಾಗಿ ಇವರು ಗೃಹಸ್ಥರಾಗಿದ್ದಾರೆ. ರಾಗದ್ವೇಷರಹಿತರಾದ ಇವರಿಗೆ ಸಂಸಾರದ ಬಂಧನವಿಲ್ಲ. ಈ ಶಿವಗಣರ ಸಂತಾನವೇ ವೀರ ಮಾಹೇಶ್ವರರು ಅಥವಾ ಜಂಗಮರು. ಶಿವಗಣರ ಸಂತಾನವಾದ ಕಾರಣ, ಜಂಗಮರಿಗೆ ಗಣಂಗಳು ಎನ್ನುವ ರೂಢ ನಾಮವು ಇದೆ.

ಪಂಚಾಚಾರ್ಯರು ಸಮಸ್ತ ವೀರಶೈವರ ಧಾರ್ಮಿಕ ಸಂಸ್ಕಾರಗಳಿಗೆ ಅಧಿಕಾರಿಗಳೂ ಹಾಗೂ ಮಾರ್ಗದರ್ಶಕರಾಗಿದ್ದಾರೆ. ವೀರಶೈವ ಮಠಾಧೀಶ್ವರರು ಈ ಪಂಚಪೀಠಗಳಿಗೆ ಸಂಬಂಧಿಸಿದವರಾಗಿರುತ್ತಾರೆ. ಲಿಂಗಧಾರಿಗಳೆಲ್ಲಾ ಈ ಐದು ಪೀಠಗಳಲ್ಲಿ ಒಂದಲ್ಲ ಒಂದು ಪೀಠಕ್ಕೆ ಶಿಷ್ಯರಾಗಿರುತ್ತಾರೆ. ಪಂಚಾಚಾರ್ಯರ ಗುರುಪೀಠಗಳು ಭರತಖಂಡದ ಐದು ಭಾಗಗಳಲ್ಲಿ ಇವೆ. ಈ ಐದು ಜನ ಆಚಾರ್ಯರು ಎಲ್ಲ ಕಡೆಗೂ ಸಂಚರಿಸಲು ಸಾಧ್ಯವಾಗುವುದಿಲ್ಲ. ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಸಾವಿರಾರು ಮಠಗಳನ್ನು ಸ್ಥಾಪಿಸಿ, ಆ ಮಠಗಳಿಗೆ ಉಪಾಚಾರ್ಯರನ್ನು ನೇಮಿಸಿ ಅವರ ಮೂಲಕ ಧಾರ್ಮಿಕ ಸಂಸ್ಕಾರಗಳನ್ನು ನೆರವೇರಿಸುತ್ತಾರೆ. ಗುರುವರ್ಗದ ಉಪಾಚಾರ್ಯರು ಪಂಚಪೀಠಾಧೀಶ್ವರರ ಪ್ರತಿನಿಧಿಗಳಾಗಿ ಧಾರ್ಮಿಕ ಕಾರ್ಯಗಳನ್ನು ನೆರವೇರಿಸುತ್ತಾರೆ ಹಾಗೂ ಪೀಠಗಳ ಶಾಖಾಮಠಗಳಿಗೆ ಅಧಿಪತಿಗಳಾಗಿರುತ್ತಾರೆ. ಆಡಳಿತ ದೃಷ್ಟಿಯಿಂದ ಶಾಖಾಮಠಗಳು ಸ್ವತಂತ್ರವಾಗಿರುತ್ತವೆ. ಪೀಠಾಚಾರ್ಯರ ಗೋತ್ರ-ಸೂತ್ರಾನುವರ್ತಿಗಳಾದ ಪ್ರತಿಗ್ರಾಮಕ್ಕೊಬ್ಬ ಹಿರಿಯ ಮಠದ ಜಂಗಮರಿರುತ್ತಾರೆ. ಅವರು ಗ್ರಾಮದ ಹವ್ಯ-ಕವ್ಯಗಳನ್ನು ನೆರವೇರಿಸುತ್ತಾರೆ. ಹೀಗೆ ಪಟ್ಟಾಧಿಕಾರಿಗಳೂ, ಚರಪಟ್ಟಾಧಿಕಾರಿಗಳೂ, ಪುತ್ರವರ್ಗದ ಮಠದವರು ಹಾಗೂ ಹಿರಿಯ ಮಠದವರು ಪೀಠಾಧೀಶ್ವರರ ಆದೇಶದಂತೆ, ತಮ್ಮ ತಮ್ಮ ಭಾಗಗಳಲ್ಲಿ ಶಿಷ್ಯರ ಉದ್ಧಾರಕ್ಕಾಗಿ ಧಾರ್ಮಿಕ ವಿಧಿ-ವಿಧಾನಗಳನ್ನು ನೆರವೇರಿಸುತ್ತಾರೆ.

ವೀರಶೈವ ಧಾರ್ಮಿಕ ವಿಧಿಗಳಲ್ಲಿ ಅಂದರೆ ದೀಕ್ಷೆ, ವಿವಾಹ, ಪಟ್ಟಾಧಿಕಾರ, ಮುಂತಾದ ಮಂಗಳ ಕಾರ್ಯಗಳಲ್ಲಿ ಪಂಚಾಚಾರ್ಯರ ಸಂಕೇತವಾಗಿ ಪಂಚಕಳಸಗಳನ್ನು ಸ್ಥಾಪಿಸಿ ಆಚಾರ್ಯರ ಸಾಕ್ಷಿಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುವ ಪದ್ಧತಿ ಇಂದಿಗೂ ಪ್ರಚಲಿತವಾಗಿದೆ. ಇದು ವೀರಶೈವ ಧರ್ಮದ ಒಂದು ಸಂವಿಧಾನ.

ಈ ಹಿಂದೆ ತಿಳಿಸಿದ ಒಂದೊಂದು ಮಹಾಸೂತ್ರಕ್ಕೂ ೧೨ ಉಪಸೂತ್ರಗಳು ಇವೆ. ವೀರಶೈವ ಸದಾಚಾರ ಸಂಗ್ರಹದಲ್ಲಿ ಉಲ್ಲೇಖಿಸಿರುವಂತೆ ಉಪಸೂತ್ರಗಳು ಹೀಗಿವೆ:

೧. ಪಡ್ವಿಡಿ ಸೂತ್ರ:

೧. ಪುರಾಣ ೨. ಪಚ್ಛಕಂತ ೩. ಷಡಂಗಿ ೪. ಸುರಗಿ ೫. ಮಹಿಷಿ ೬. ಮಾರಟ ೭. ವೇಣೀ ೮. ಭಿತ್ತಿ ೯. ದಿಗಂಬರ ೧೦. ನಾಟ ೧೧. ಶೌರಿ ೧೨. ಸುತ್ತೂರು (ಮುಸಡಿ)

೨. ವೃಷ್ಠಿ ಸೂತ್ರದಲ್ಲಿ:

೧. ಲೋಹಕಂಥ ೨. ಜ್ವಲತ್ಕಂಥ ೩. ಶೃಂಗೀ ೪. ಮಸಣೀ ೫. ಕುಠಾರ ೬. ಭೈತ್ರಿ ೭. ಕಠಾರ (ಉದಾರ) ೮. ಚಾಮರ ೯. ಕಪಾಟ ೧೦. ಕುಕ್ಷೀಕಂಥ ೧೧. ಸ್ವರ್ಣಕಂಥ ೧೨. ಸಿಂಹೀ.

೩. ಲಂಬನ ಸೂತ್ರ:

೧. ತ್ರಿಪುಟ ೨. ರಜ್ಜುಕಂಥ ೩. ಭಸ್ಮಿ ೪. ಶಿಖರೀ ೫. ರೌಪ್ಯಕ ೬. ಚಂದ್ರಕುಂಡ ೭. ಮೃತ್ಕಂಥ ೮. ಕೌಷ್ಠಕ ೯. ಮುಂಡೀ ೧೦. ಖಡ್ಗೀ ೧೧. ರಾಮಗಿರಿ ೧೨. ಪವನ

೪. ಮುಕ್ತಾಗುಚ್ಛ:

೧. ಗೋಣೀಕಂಥ ೨. ದಂತೀ ೩. ಜಠರ(ಜಟಿಲ) ೪. ತ್ರಿಗುಣ ೫. ಕೇಶಕಂಥ ೬. ಲಲಾಟ ೭. ವ್ಯಾಘ್ರಕಂಥ ೮. ಲೋಚನ ೯. ಭಗಿನಿ ೧೦. ಜಾಲಕಂಥ ೧೧. ನಟನ ೧೨. ಬದಡಿ.

೫. ಪಂಚವರ್ಣಸೂತ್ರ:

೧. ಪಾಶುಪತ ೨. ಕಂಬಲ ೩. ದಶಮುಖ ೪. ಗೋಚರ ೫. ವೃಷಭ ೬. ಜರತ್ಕಂಥ ೭. ಗುಹಾಗ್ರ ೮. ಗಗನ ೯. ಪಂಚಮುಖ ೧೦. ಮುಸುಲೀ ೧೧. ಲಗುಡಿ ೧೨. ಶಿಥಿಲಿ

ಪಂಚಾಚಾರ್ಯರ ಮಹಾಸೂತ್ರಗಳ ಗುರುಪರಂಪರೆಯಲ್ಲಿ ಶಿವಾಗಮಗಳು ಎರಡು ರೀತಿಯ ಗುರುಗಳನ್ನು ಉಲ್ಲೇಖಿಸುತ್ತವೆ. ಪ್ರಧಾನಗುರು ಅಂದರೆ ೧. ಮಹಾಚಾರ್ಯ "ಜಗದ್ಗುರು". ೨. ಆಚಾರ್ಯ (ಪಟ್ಟಾಧ್ಯಕ್ಷ, ಚರಾಧ್ಯಕ್ಷರು) ಎಂದು ಸುಪ್ರಭೇದಾಗಮದ ಆಧಾರದಂತೆ ವೀರಶೈವ ಧರ್ಮಕ್ಕೆ ಮಹಾಚಾರ್ಯರು ಐದು ಜನರು. ಇವರಿಗೆ ಮತ್ತೆ ಐದು ಜನ ಉಪಾಚಾರ್ಯರು-

೧. ಕೌಮಾರ್ಯ (ಮಠಪತಿ) ೨. ಸ್ಥಾವರಾರ್ಯ (ಸ್ಥಾವರದವರು) ೩. ಮಠಾರ್ಯ (ಮಠಾಧಿಕಾರಿ) ೪. ಗಣಾರ್ಯ (ಗಣಾಚಾರಿ) ೫. ಮಾಲಾರ್ಯ (ಗಣಾರಿ) ಎಂದು ಇವರು ಮಹಾಚಾರ್ಯರ ಸೇವಕರಾಗಿರುತ್ತಾರೆ.

ಪಂಚಾಚಾರ್ಯರ ಶಿಷ್ಯರಾದ (ಭಕ್ತರು) ಪಂಚಮರ ವಿಚಾರವು ಸದಾಚಾರ ಸಂಗ್ರಹದಲ್ಲಿ ವಿಸ್ತಾರವಾಗಿ ಬರುತ್ತದೆ. ಶಿವನ ಈಶಾನಮುಖದಿಂದ ಪಂಚವಕ್ತ್ರ ಗಣೇಶ್ವರನೆಂಬುವನು ಜನಿಸಿದ. ಆವನ ಐದು ಮುಖಗಳಿಂದ ಇವರು ಜನಿಸಿದರು ಎನ್ನುವ ಕಲ್ಪನೆ ಇದೆ. ಇವರೇ ಪಂಚಾಚಾರ್ಯರ ಪ್ರಥಮ ಶಿಷ್ಯರು ಹಾಗೂ ಆದಿಭಕ್ತರು. ಅವರಲ್ಲಿ ಐದು ವಿಧಗಳಿವೆ- ೧. ಮಖಾರಿ ೨. ಕಾಲಾರಿ ೩. ಪುರಾರಿ ೪. ಸ್ಮರಾರಿ ೫. ವೇದಾರಿ.

ಈ ಪಂಚಮರ (ಶಿಷ್ಯರ) ಸಮೂಹಕ್ಕೆಲ್ಲಾ ರೇಣುಕಾದಿ ಪಂಚಾಚಾರ್ಯರೇ ಮೂಲಗುರುಗಳು. ಈ ಶಿಷ್ಯರಿಗೆ ಯಾವ ಗುರುಗಳಿಂದ ಉಪದೇಶವಾಗುತ್ತದೆಯೋ ಆ ಗುರುಗಳ ಗೋತ್ರ-ಸೂತ್ರಗಳೇ ಇವರಿಗೂ ಅನ್ವಯವಾಗುತ್ತದೆ.

ವೀರಶೈವ ಸದಾಚಾರ ಸಂಗ್ರಹದಲ್ಲಿ ಉಕ್ತವಾಗಿರುವಂತೆ ವೀರಶೈವರಲ್ಲಿ ಗಣವಂಶ ಅಂದರೆ ಗಣಂಗಳು (ಜಂಗಮರು) ಮತ್ತು ಪಂಚಮರು (ಭಕ್ತರು) ಈ ಎರಡೇ ವಂಶಗಳು ಇರುತ್ತವೆ. ಗುರುವಂಶ ಮತ್ತು ಭಕ್ತವಂಶ ಎಂಬುದಾಗಿ. ಕಾಲಕ್ರಮೇಣ ಈ ಪಂಚಮವಂಶದ ಭಕ್ತರಲ್ಲಿಯೇ ಬೇರೆ ಬೇರೆ ಉದ್ಯೋಗಗಳ ಮೂಲಕ ಅನೇಕ ಜಾತಿ-ಉಪಜಾತಿಗಳು ಬೆಳೆದು ಬಂದಂತೆ ತೋರುತ್ತದೆ.

ಪಂಚಾಚಾರ್ಯರಿಗೆ ಸೇರಿದ ಸಮಸ್ತ ಭಕ್ತರು ಎಲ್ಲ ವೀರಶೈವರು. ಇವರು ಮಾಡುವ ಯಾವುದೇ ಧಾರ್ಮಿಕ ಕಾರ್ಯಕ್ರಮದಲ್ಲಿ ಸಂಕಲ್ಪ ಪೂರ್ವಕ ವಂಶಪರಂಪರೆಯ ಗುರುಗಳ ಗೋತ್ರ-ಸೂತ್ರಗಳನ್ನು ಹೇಳಿ, ಮಾಡುವ ಪದ್ಧತಿ ಇಂದಿಗೂ ಇದೆ.

ಸಾಮಾನ್ಯವಾಗಿ ಜಗತ್ತಿನ ಎಲ್ಲಾ ಮತಧರ್ಮಗಳಲ್ಲೂ ಅಂದರೆ ವೈದಿಕ, ಬೌದ್ಧ, ಜೈನ, ಇಸ್ಲಾಂ ಹಾಗೂ ಕ್ರೈಸ್ತ ಮತಧರ್ಮಗಳಲ್ಲೂ, ತೀರಾ ಹಿಂದುಳಿದ ಬುಡಕಟ್ಟು ಜನಾಂಗದಲ್ಲೂ ಗೋತ್ರ-ಸೂತ್ರ ಪದ್ಧತಿ ಇದ್ದೇ ಇದೆ. ಪ್ರತಿಯೊಬ್ಬ ವ್ಯಕ್ತಿಗೂ ಗೋತ್ರ-ಸೂತ್ರ ಪದ್ಧತಿ ಇದೆ. ಜನನ ಆಕಸ್ಮಿಕ. ವ್ಯಕ್ತಿ ತಾನು ಹುಟ್ಟಿ ಬಂದ ಮತದ ಹಾಗೂ ಗುರುಪರಂಪರೆಯ ಹೆಸರನ್ನು ಹೇಳಲೇ ಬೇಕಾಗುತ್ತದೆ. ಆದ್ದರಿಂದ ಇದು ವ್ಯಕ್ತಿಯ ಜೀವನಚರಿತ್ರೆಯ ಅನಿವಾರ್ಯ ಅಂಗ. ಇದರಲ್ಲಿ ವಂಶಚರಿತ್ರೆ ಇದೆ. ವಂಶದ ಮೂಲದೈವ ಅಥವಾ ಕುಲದೈವ ಗುರುಪರಂಪರೆಯನ್ನು ಹೇಳಿಕೊಂಡು ಆ ಮೂಲಕ ಸ್ಮರಿಸುವ ಕೃತಜ್ಞತಾಭಾವವಿದೆ. ದೈವ ಮೂಲವಲ್ಲದ, ಗುರುಮೂಲವಿಲ್ಲದ ಯಾವ ಮತ-ಧರ್ಮಗಳೂ ಜನಾಂಗವೂ ಜಗತ್ತಿನಲ್ಲಿ ಇಲ್ಲ. ಗೋತ್ರ-ಸೂತ್ರಗಳ ಮೂಲಕವೇ ವ್ಯಕ್ತಿಯ ಹಾಗೂ ಜನಾಂಗದ ಇತಿಹಾಸ, ಸಮಾಜಶಾಸ್ತ್ರ ಹಾಗೂ ಮಾನವಿಕ ಶಾಸ್ತ್ರಗಳ ಪರಿಚಯವನ್ನು ಪಡೆಯಲು ಸಾಧ್ಯವಾಗುತ್ತದೆ.

ಆಧುನಿಕ ಜೀವವಿಜ್ಞಾನ, ಸಂತತಿ ವಿಜ್ಞಾನದ ಸಂಶೋಧನಾ ಅಧ್ಯಯನಗಳು ಲಭ್ಯವಾಗಿರುವ ಇಂದು, ನಮ್ಮ ಪ್ರಾಚೀನ ಗೋತ್ರ-ಸೂತ್ರ ಪದ್ಧತಿಯನ್ನು ವಿಮರ್ಶಿಸಿದಾಗ ನಮ್ಮ ಹಿಂದಿನವರು ಬೆಳೆಸಿಕೊಂಡು ಬಂದ ಉಳಿಸಿಕೊಂಡು ಬಂದ ಬಾಂಧವ್ಯದ ರೀತಿ-ನೀತಿಗಳು ಜಾತಿ-ಮತಗಳ ಕಟ್ಟುಪಾಡುಗಳು, ವಂಶ ಪರಿಶುದ್ಧತೆ, ವಂಶಾಭಿವೃದ್ಧಿಯ ದೂರದೃಷ್ಟಿಯ ಜಾಣ್ಮೆಯನ್ನು ಕಾಣಬಹುದಾಗಿದೆ.

ಗೋತ್ರ-ಸೂತ್ರ ಪದ್ಧತಿ ಧಾರ್ಮಿಕ ವ್ಯವಸ್ಥೆಯನ್ನು ಸೂಚಿಸುತ್ತದೆ. ನಮ್ಮ ಭಾರತೀಯ ಸಂಸ್ಕೃತಿ ಪರಂಪರೆಯಲ್ಲಿ ಸಾಮಾಜಿಕ ಪದ್ಧತಿಯಲ್ಲಿ ಸ್ವಗೋತ್ರದಲ್ಲಿ ಪರಸ್ಪರ ವಿವಾಹ ಸಂಬಂಧ ಮಾಡಬಾರದು ("ಸ್ವಗೋತ್ರೈಃ ಸಹ ಸಂಬಂಧೋ ನೈವ ಕಾರ್ಯಃ") ಒಂದು ವೇಳೆ ಮಾಡಿದರೆ ಅದು ದೋಷವಾಗುತ್ತದೆ (ಸ ದೋಷಭಾಕ್) ಎನ್ನುವ ಎಚ್ಚರಿಕೆಯ ಮಾತು (ಸದಾಚಾರ ಸಂಗ್ರಹ, ೫, ಶ್ಲೋ. ೧೦) ಅಲ್ಲಿ ಉಕ್ತವಾಗಿದೆ.

ಒಂದೇ ಗೋತ್ರಕ್ಕೆ ಸಂಬಂಧಪಟ್ಟವರು ಭಾವನಾತ್ಮಕವಾಗಿ ಸಹೋದರ-ಸಹೋದರಿಯರಾಗುತ್ತಾರೆ ಎನ್ನುವ ಕಾರಣದಿಂದ ವಿವಾಹ ಸಂಬಂಧ ನಡೆಯುವುದಿಲ್ಲ; ನಡೆಯಬಾರದು ಎನ್ನುವ ನಿಯಮವಿದೆ.

ವೀರಶೈವ ಧರ್ಮದ ಮಹಾಚಾರ್ಯ ಗುರುಪರಂಪರೆಯ ಸಮಸ್ತ ವೀರಶೈವರಿಗೆ ಗೋತ್ರ-ಸೂತ್ರಗಳುಂಟು. ವಿರಕ್ತರಿಗೆ ಮಾತ್ರ ಗೋತ್ರ-ಸೂತ್ರಗಳ ನಿಯಮವಿಲ್ಲ. ಅವರು ಗೋತ್ರ-ಸೂತ್ರ ಪ್ರವರಗಳನ್ನು ಬಿಡಬೇಕೆಂದು ಶಾಸ್ತ್ರ ನಿಯಮವಿದೆ.

"ತೃಣೀಕೃತ್ಯ ಜಗಜ್ಜೀವೋ ಲೌಕಿಕಾಚಾರವರ್ಜಿತಃ।"

ವೀರಶೈವರಲ್ಲಿ ವಿಶೇಷವಾಗಿ ಗಂಡು-ಹೆಣ್ಣಿನ ವಿವಾಹಕ್ಕೆ ಸಂಬಂಧಪಟ್ಟಂತೆ- ಇಂದಿನ ವಿಜ್ಞಾನ ಯುಗದಲ್ಲಿ ಈ ಗೋತ್ರ ಪದ್ಧತಿಯನ್ನು ಬಿಟ್ಟು ಗಂಡು ಹೆಣ್ಣುಗಳ ರಕ್ತ ಪರೀಕ್ಷೆಯನ್ನು ಮಾಡಿ ಸಂಬಂಧ ಮಾಡಿಕೊಳ್ಳಬೇಕೆನ್ನುವ ವಿಚಾರ (Blood Group System) ನ ಆಧಾರದ ಮೇಲೆ ವಿಶೇಷವಾಗಿ ಪ್ರಚಾರದಲ್ಲಿದೆ. ವಂಶದ ವಿಚಾರವನ್ನು ಕುರಿತು ಹೊಸ ಹೊಸ ವಿಜ್ಞಾನದ ಸಂಶೋಧನೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ವೈಜ್ಞಾನಿಕವಾಗಿ ಈ ವಿಚಾರವೂ ಸೂಕ್ತವೆನಿಸುತ್ತದೆ. ಇಂದು ಗಂಡು-ಹೆಣ್ಣುಗಳ ವಿವಾಹ ಸಮಸ್ಯೆ ಜಟಿಲವಾಗಿದೆ. ಅನೇಕ ಕಾರಣಗಳಿಂದಾಗಿ ಸಮಾಜದಲ್ಲಿ ಸೂತ್ರ-ಗೋತ್ರಗಳ ನಿರ್ಬಂಧನೆಗಳನ್ನು ನಿರ್ಲಕ್ಷಿಸಿ ಹೊಸ ಸಂಬಂಧಗಳನ್ನು ಬೆಳೆಸಿಕೊಳ್ಳಬೇಕೆಂಬ ಹಂಬಲ ಕಂಡು ಬರುತ್ತಿದೆ. ಈ ಸನ್ನಿವೇಶದಲ್ಲಿ ಗೋತ್ರ-ಸೂತ್ರಗಳ ನಿಯಮಗಳನ್ನು ಸುಧಾರಣೆಗೆ ತಂದು ಕೊಳ್ಳುವುದು ಅಗತ್ಯವಾಗಿದೆ ಎನಿಸುತ್ತದೆ. ನಮ್ಮ ಪರಂಪರೆ, ಸಂಸ್ಕೃತಿ ಗೋತ್ರಗಳನ್ನು ಉಳಿಸಿಕೊಳ್ಳಬೇಕೆನ್ನುವ ಅಪೇಕ್ಷೆಗಿಂತ ಬದುಕಿನ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು ಅಗತ್ಯವಾದ ಕರ್ತವ್ಯ ಎನಿಸುತ್ತದೆ. ಸುಧಾರಣೆ ಆಗಬೇಕು, ಅಸಾಧ್ಯವೇನೂ ಅಲ್ಲ; ಇದಕ್ಕೆ ಚರಿತ್ರೆಯೇ ಸಾಕ್ಷಿ. ವೀರಶೈವರ ಗೋತ್ರ-ಸೂತ್ರಗಳು ಭಾವನಾತ್ಮಕ ಸಂಬಂಧಗಳೇ ಹೊರತು; ವೈಜ್ಞಾನಿಕವಲ್ಲ ಎನಿಸುತ್ತದೆ. ಆದರೂ ಗಂಡು-ಹೆಣ್ಣಿನ ವೈವಾಹಿಕ ಸಂಬಂಧವನ್ನು ಹೊರತು ಪಡಿಸಿ, ಉಳಿದ ಎಲ್ಲ ಧಾರ್ಮಿಕ ಕಾರ್ಯಗಳಲ್ಲೂ ಸೂತ್ರ-ಗೋತ್ರಗಳ ಮೂಲಕ ನಮ್ಮ ವಂಶ ಗುರುಪರಂಪರೆಯನ್ನು ಸ್ಮರಿಸಿಕೊಳ್ಳುವುದು ಔಚಿತ್ಯವೆನಿಸುತ್ತದೆ ಹಾಗೂ ಇದು ನಮ್ಮ ಧಾರ್ಮಿಕ ಸಂವಿಧಾನಕ್ಕೆ ಸಮ್ಮತವಾಗಿದೆ.

ಆಧಾರ ಗ್ರಂಥ

"ವೀರಶೈವ ಸದಾಚಾರ ಸಂಗ್ರಹ" (ಕನ್ನಡ ಅನುವಾದ) ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು, ೧೯೬೩.

□□

ವಿ.ಸೂ. : ವೀರಶೈವರ ಗೋತ್ರ-ಸೂತ್ರಾದಿ ವಿವರಣೆಗೆ ಮುಂದಿನ ಪುಟಗಳಲ್ಲಿನ "ವೀರಶೈವ ಧರ್ಮದರ್ಶಿಕೆ"ಯನ್ನು ನೋಡಿ.

ವೀರಶೈವರ ಧರ್ಮದರ್ಶಿಕೆ
(ವೀರಶೈವರ ಗೋತ್ರ-ಸೂತ್ರಾದಿ ವಿವರಣೆ)

		ಶ್ರೀರಂಭಾಪುರಿ	ಶ್ರೀ ಉಜ್ಜಯಿನಿ	ಶ್ರೀ ಕೇದಾರ	ಶ್ರೀ ಶ್ರೀಶೈಲ	ಶ್ರೀಕಾಶಿ
೧.	ಪರಶಿವನ ಪಂಚಮುಖಗಳು	ಸದ್ಯೋಜಾತ	ವಾಮದೇವ	ಅಘೋರ	ತತ್ಪುರುಷ	ಈಶಾನ
೨.	ಪಂಚಾಚಾರ್ಯರು ಅವರ ಅವತಾರಕ್ಷೇತ್ರ ಮತ್ತು ಲಿಂಗ	ರೇವಣಾರಾಧ್ಯ ಕೊಲ್ಲಿಪಾಕಿ ಸೋಮೇಶ್ವರ	ಮರುಳಾರಾಧ್ಯ ವಟಕ್ಷೇತ್ರ ಸಿದ್ಧೇಶ್ವರ	ಏಕೋರಾಮಾರಾಧ್ಯ ದ್ರಾಕ್ಷಾರಾಮಕ್ಷೇತ್ರ ರಾಮನಾಥ	ಪಂಡಿತಾರಾಧ್ಯ ಶ್ರೀಶೈಲಕ್ಷೇತ್ರ ಮಲ್ಲಿಕಾರ್ಜುನ	ವಿಶ್ವಾರಾಧ್ಯ ಕಾಶೀಕ್ಷೇತ್ರ ವಿಶ್ವನಾಥ
೩.	ಸಿಂಹಾಸನದ ಹೆಸರು	ವೀರ	ಸದ್ಧರ್ಮ	ವೈರಾಗ್ಯ	ಸೂರ್ಯ	ಜ್ಞಾನ
೪.	ಸಿಂಹಾಸನದ ಸ್ಥಾನ	ಬಾಳೇಹೊನ್ನೂರು	ಉಜ್ಜಯನಿ	ಕೇದಾರ	ಶ್ರೀಶೈಲ	ಕಾಶೀ
೫.	ಗೋತ್ರ ಪುರುಷರು	ವೀರ	ನಂದಿ	ಭೃಂಗಿ	ವೃಷಭ	ಸ್ಕಂದ
೬.	ಗೋತ್ರ ಪುರುಷರು	ಭದ್ರಕಾಳಿ	ಕುಂಡಲಿನೀ	ಹ್ಲಾದಿನೀ	ಭದ್ರಾ	ದೇವಯಾನೀ
೭.	ಮಹಾಸೂತ್ರಗಳು	ಪಡ್ವಿಡಿ	ವೃಷ್ಟಿ	ಲಂಬನ	ಮುಕ್ತಾಗುಚ್ಛ	ಪಂಚವರ್ಣ
೮.	ಶಾಖೆಗಳು	ರೇಣುಕ	ದಾರುಕ	ಘಂಟಾಕರ್ಣ	ಧೇನುಕರ್ಣ	ವಿಶ್ವಕರ್ಣ
೯.	ಪ್ರವರಗಳು	ಏಕಾಕ್ಷರ	ದ್ವ್ಯಕ್ಷರ	ತ್ರ್ಯಕ್ಷರ	ಚತುರಕ್ಷರ	ಪಂಚಾಕ್ಷರ
೧೦.	ವೇದಗಳು	ಋಗ್ವೇದ	ಯಜುರ್ವೇದ	ಸಾಮದೇವ	ಅಥರ್ವಣ	ಅಜಪವೇದ (ಶೈವಾಗಮ)

		ಶ್ರೀರಂಭಾಪುರಿ	ಶ್ರೀ ಉಜ್ಜಯಿನಿ	ಶ್ರೀ ಕೇದಾರ	ಶ್ರೀ ಶ್ರೀಶೈಲ	ಶ್ರೀಕಾಶಿ
೧೧.	ದಂಡಗಳು (ಪತ್ರಿದಂಡ)	ಅಶ್ವತ್ಥ	ಪಲಾಶ	ವೇಣು	ನ್ಯಗ್ರೋಧ	ಬಿಲ್ವ
೧೨.	ಕಮಂಡಲ ಧಾತುಗಳು	ಸುವರ್ಣ	ರಜತ	ತಾಮ್ರ	ಕಬ್ಬಿಣ	ಸೀಸ
೧೩.	ಕಂಥಾ ವರ್ಣ (ಧ್ವಜವರ್ಣಗಳು)	ಹಸಿರು	ಕೆಂಪು	ನೀಲಿ	ಬಿಳಿ	ಹಳದಿ
೧೪.	ತತ್ವಗಳು	ಪೃಥ್ವೀ	ಜಲ	ತೇಜಸ್	ವಾಯು	ಆಕಾಶ
೧೫.	ಬೀಜಮಂತ್ರಗಳು	ನಕಾರ	ಮಕಾರ	ಶಿಕಾರ	ವಾಕಾರ	ಯಕಾರ
೧೬.	ಪಂಚಾಕ್ಷರಗಳು	ಪ್ರಸಾದ	ಮಾಯಾ	ಸೂಕ್ಷ್ಮ	ಸ್ಥೂಲ	ಮೂಲ
೧೭.	ಉಪಸೂತ್ರಗಳು	ಪುರಾಣ	ಲೋಪಕಂಥಾ	ಗೋಣೀಕಂಥಾ	ತ್ರಿಪುಟೀ	ಪಂಚವರ್ಣ
		ಪಟ್ಟಕಂಥಾ	ಸ್ವರ್ಣಕಂಥಾ	ದಂತೀ	ರಜ್ಜು	ಕಂಬಾಲ
		ಷಡಂಗ	ಶೃಂಗೀ	ಜತರ	ಕಂಥಾ	ವೃಷಭ
		ಸುರಗೀ	ಮಸಣೀ	ತ್ರಿಗುಣ	ಭಸ್ಮೀ	ದಶವಕ್ತ್ರ
		ಮಹಿಷೀ	ಕುಠಾರ	ಕೇಶಕಂಥಾ	ಶಿಖರೀ	ಜರತ್ಕಂಥಾ
		ದಿಗಂಬರ	ಛೈತ್ರೀ	ಲಲಾಟ	ರೌಪ್ಯಕ	ಪಂಚಮುಖ

ವೀರಶೈವ ಧರ್ಮದರ್ಶಿಕೆ

ಶ್ರೀರಂಭಾಪುರಿ	ಶ್ರೀ ಉಜ್ಜಯನಿ	ಶ್ರೀ ಕೇದಾರ	ಶ್ರೀಶೈಲ	ಶ್ರೀಕಾಶಿ
ವೇಣೀ	ಕಠಾರ	ವ್ಯಾಘ್ರಕಂಥಾ	ಗೋಚರ	
ಭಿತ್ತಿ	ಚಾಮರೀ	ಲೋಚನ	ಮೃತ್ಕಂಥಾ	ಗೋಚರ
ಮೋರಟ	ಕವಾಟ	ಭಗಿನೀ	ಕಾಷ್ಟಕಂ	ಗೋಚರ
ನಾಟೀ	ಕುಕ್ಷಕಂಥಾ	ಜಾಲಕಂಥಾ	ಪವನ	ಮುಸಲೀ
ಶೌರೀ	ಜ್ವಲತ್ಕಂಥಾ	ನಟನ	ರಾಮಗಿರಿ	ಲಗುಡ
ಮುಸಡೀ	ಸಿಂಹೀ	ಬದಡೀ	ಖಡ್ಗೀ	ಶಿಥಿಲೀ

ಈ ರೀತಿಯಾಗಿ ವೀರಶೈವರ ಗೋತ್ರ-ಸೂತ್ರಗಳ ವಿವರಣೆಯನ್ನು ವೀರಶೈವ ಸದಾಚಾರ ಸಂಗ್ರಹ ಮತ್ತು ಪಂಚಾಚಾರ್ಯ ಪಂಚಮೋತ್ಪತ್ತಿ ಪ್ರಕರಣ (ಸೋಲಾಪುರ ವಾರದ ಪ್ರಕಾಶನ ೧೯೦೫) ಈ ಗ್ರಂಥಗಳ ಆಧಾರ ಹಾಗೂ ಕಾಶೀಪೀಠದಿಂದ ಪ್ರಕಾಶಿತವಾದ ಗೋತ್ರಸೂತ್ರ ಪಟದ ಆಧಾರದಿಂದ ರಚಿಸಲಾಗಿದೆ. ಈ ಪಟದಲ್ಲಿ ಪ್ರಕಟಿಸಲ್ಪಟ್ಟ ವೀರ ಸಂದ್ಯಾದಿ ಶಿವಗಣರ ಶಕ್ತಿಯರ ಹೆಸರುಗಳನ್ನು ಕ್ರಿಯಾಸಾರ ಭಾಗ-೨, ಪುಟ ೨೭೮-೨೭೯ (ಮೈಸೂರು, D.R.I. ಪ್ರಕಾಶನ ೧೯೫೭) ಆಧಾರದಿಂದ ತೆಗೆದುಕೊಳ್ಳಲಾಗಿದೆ.

□□

ಸದಾಶಯ ಪ್ರದಾಯಕರ-ಪ್ರಬಂಧಕಾರರ ವಿಳಾಸಗಳು

ಸದಾಶಯ ಪ್ರದಾಯಕರು

೧. ಶ್ರೀಮತ್ ಜ್ಞಾನಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಡಾ।। ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು
ಜಂಗಮವಾಡಿಮಠ, ವಾರಾಣಸಿ (ಉ.ಪ್ರ.)

೨. ಶ್ರೀ ಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು,
ಸದ್ಧರ್ಮ ಸಿಂಹಾಸನ ಪೀಠ, ಉಜ್ಜಿನಿ, ಜಿಲ್ಲಾ: ಬಳ್ಳಾರಿ (ಕರ್ನಾಟಕ)

೩. ಶ್ರೀಮದ್ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು
ಸೂರ್ಯಸಿಂಹಾಸನ ಪೀಠ, ಶ್ರೀ ಶೈಲ, ಜಿಲ್ಲಾ ಚಿತ್ತೂರು (ಆಂಧ್ರ ಪ್ರದೇಶ)

೪. ಶ್ರೀ ಮ.ನಿ.ಪ್ರ.ಸ್ವ. ಹೇಮಕೂಟ ಸಿಂಹಾಸನಾಧೀಶ್ವರ ಸಂಗನ ಬಸವ ಮಹಾಸ್ವಾಮಿಗಳು
ಕೊಟ್ಟೂರು ಸಂಸ್ಥಾನ ಮಠ, ಹೊಸಪೇಟೆ, ಜಿ।। ಬಳ್ಳಾರಿ (ಕರ್ನಾಟಕ)

೫. ಶ್ರೀ ವಿ.ಎಸ್. ಮಳಿಮಠ್
ಕರ್ನಾಟಕ, ಕೇರಳರಾಜ್ಯ ಹೈಕೋರ್ಟ್ ಮಾಜಿ ಮುಖ್ಯನ್ಯಾಯಾಧೀಶರು
"ಶಾಂತಿನಿಕೇತನ", ಪ್ಯಾಲೇಸ್ ಲೂಪ್ ರಸ್ತೆ, ವಸಂತನಗರ, ಬೆಂಗಳೂರು-೫೬೦೦೫೨

೬. ಪ್ರೊ।। ಎನ್. ಬಸವಾರಾಧ್ಯ
೭೪೩, ೨ನೇ ಬ್ಲಾಕ್ (ಹಳೆ ಪೋಲೀಸ್ ಸ್ಟೇಷನ್ ಹತ್ತಿರ), ರಾಜಾಜಿನಗರ, ಬೆಂಗಳೂರು-೫೬೦೦೧೦

೭. ಡಾ।। ಮಲ್ಲಿಕಾರ್ಜುನ ಪರಡ್ಡಿ
"ಶಿವಲೀಲಾ" ಜಯನಗರ ಧಾರವಾಡ-೫೮೦೦೦೩

೮. ಡಾ।। ಎಸ್. ವಿದ್ಯಾಶಂಕರ
೧೫೮, ೭ನೇ "ಸಿ" ಮುಖ್ಯರಸ್ತೆ ಹಂಪಿನಗರ, ಬೆಂಗಳೂರು-೫೬೦೦೪೦

ಪ್ರಬಂಧಕಾರರು

೧. ವಿದ್ವಾನ್ ಕೋ.ರಂ.ಬಸವರಾಜು
ಸಿದ್ಧಗಂಗಾ, ಜಿಲ್ಲಾ ತುಮಕೂರು (ಕರ್ನಾಟಕ)

೨. ಡಾ।। ಬಸವಲಿಂಗ ಸೊಪ್ಪಿಮಠ
೯-೨-೨೦/೨೨, ಮಾಣಿಕಪ್ರಭು ಲೇಔಟ್, ರಾಯಚೂರು-೫೮೪ ೧೦೩

೩. ಶ್ರೀ ಗೌ.ಮ. ಉಮಾಪತಿಶಾಸ್ತ್ರಿ
ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಸಂಸ್ಥಾನ್, ಧರ್ಮಸ್ಥಳ-೫೭೪೨೧೬

೪. ಡಾ।। ಡಿ.ವಿ. ಪರಮಶಿವಮೂರ್ತಿ
ಹಂಪಿ ಕನ್ನಡ ವಿಶ್ವವಿದ್ಯಾಲಯ ಹಂಪಿ (ಕರ್ನಾಟಕ)

೫. ಡಾ।। ಸಿ. ಶಿವಕುಮಾರ ಸ್ವಾಮಿ
೬, ಪಿ.ಎಫ್. ಲೇಔಟ್, ಮಾರೇನಹಳ್ಳಿ ವಿಜಯನಗರ, ಬೆಂಗಳೂರು-೪೦

೬. ಡಾ।। ರಾಜಶೇಖರ ಸ್ವಾಮಿ ಗೋರಟಾ
ಬಸವ ಕಲ್ಯಾಣ, ಜಿಲ್ಲಾ : ಬೀದರ್

೭. ಡಾ।। ವ್ಹಿಜಿ. ಪೂಜಾರ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೮. ಶ್ರೀ ಷಣ್ಮುಖಯ್ಯ ಅಕ್ಕೂರಮಠ
೬೭, "ದೇವಗಂಗೋತ್ರಿ" ಶಂಕರಮಠ ರಸ್ತೆ, ಶಂಕರಪುರ ಬೆಂಗಳೂರು-೫೬೦೦೦೪

ವೀರಶೈವ ಅನುಸಂಧಾನ ಸಂಸ್ಥಾನದ ಪ್ರಕಟಣೆಗಳು

೧೯೯೮	ಮಕುಟಾಗಮ*	ಅನು: ಡಾ. ಸಿ. ಶಿವಕುಮಾರಸ್ವಾಮಿ
೧೯೯೮	ಸಿದ್ಧಾಂತ ಶಿಖಾಮಣಿ ವಿಚಾರ ದೀಪ್ತಿ	ಸಂ: ಡಾ. ಎಂ. ಶಿವಕುಮಾರಸ್ವಾಮಿ
೧೯೯೯	ಕಾರಣಾಗಮ*	ಅನು: ಡಾ. ಮಲ್ಲಿಕಾರ್ಜುನ ಪರಡ್ಡಿ
೧೯೯೯	ಶೈವಾಗಮಗಳಲ್ಲಿ ವೀರಶೈವ*	ಸಂ: ಡಾ. ಎಂ. ಶಿವಕುಮಾರಸ್ವಾಮಿ
೨೦೦೦	ಪಾರಮೇಶ್ವರಾಗಮ	ಅನು: ಡಾ. ಎಂ. ಶಿವಕುಮಾರಸ್ವಾಮಿ
೨೦೦೧	ಸೂಕ್ಷ್ಮಾಗಮ*	ಅನು: ಡಾ. ಷಣ್ಮುಖಯ್ಯ ಅಕ್ಕೂರಮಠ
೨೦೦೧	ಚಂದ್ರಜ್ಞಾನಾಗಮ ವಿಚಾರರಶ್ಮಿ	ಸಂ: ಡಾ. ಎಂ. ಶಿವಕುಮಾರಸ್ವಾಮಿ
೨೦೦೨	ಸೂಕ್ಷ್ಮಾಗಮ ವಿಚಾರಪ್ರಭೆ	ಸಂ: ಡಾ. ಎಂ. ಶಿವಕುಮಾರಸ್ವಾಮಿ
೨೦೦೩	ಚಂದ್ರಜ್ಞಾನಾಗಮ	ಅನು: ಡಾ. ಎಂ. ಶಿವಕುಮಾರಸ್ವಾಮಿ
೨೦೦೩	ವೇದಾಗಮಗಳು-ಶಿವಶರಣರು-೧	ಸಂ: ಡಾ. ಎಂ. ಶಿವಕುಮಾರಸ್ವಾಮಿ
೨೦೦೪	ವೇದಾಗಮಗಳು-ಶಿವಶರಣರು-೨	ಸಂ: ಡಾ. ಎಂ. ಶಿವಕುಮಾರಸ್ವಾಮಿ
೨೦೦೪	ಅನುಭವಸೂತ್ರಮ್	ಅನು: ಡಾ. ಸಿ. ಶಿವಕುಮಾರಸ್ವಾಮಿ
೨೦೦೫	ಶಿವಪಂಚವಿಂಶತಿ ಲೀಲಾ ಶತಮ್	ಅನು: ಶ್ರೀ ಕೋ.ರಂ. ಬಸವರಾಜು

೨೦೦೫ ವಿದ್ವದ್ವಿಭೂತಿ : ಶ್ರೀ ವೀರಭದ್ರ ಜಗಜಗದ್ಗುರುಗಳು

ಸಂ: ಷ|| ಡಾ|| ಶಿವಾನಂದ ಶಿವಾಚಾರ್ಯರು

೨೦೦೬ ವೀರಶೈವಧರ್ಮ : ಒಂದು ಪುನರವಲೋಕನ

ಸಂ: ಡಾ. ಎಂ. ಶಿವಕುಮಾರಸ್ವಾಮಿ

* ಪ್ರತಿಗಳು ಮುಗಿದಿವೆ

ಶೈವಭಾರತಿ ಶೋಧ ಪ್ರತಿಷ್ಠಾನ ಪ್ರಕಟಿಸಿರುವ
ಮೊದಲ ಕನ್ನಡ ಸಂಶೋಧನಾ ಗ್ರಂಥ

೨೦೦೪ ಶಿವತತ್ತ್ವ ಚಿಂತಾಮಣಿ -ಒಂದು ಅಧ್ಯಯನ

ಡಾ|| ಸಿ.ಯು. ಉಮಾದೇವಿ ಉಮಾಶಂಕರ್